ಶುಕ್ರವಾರ, ಮಾರ್ಚ್ 25, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾಯಾಬೇಟೆ

ಮೈಸೂರಿನ ನಿರಂತರ ಫೌಂಡೇಶನ್ ಆಯೋಜಿಸಿರುವ 'ನಿರಂತರ' ರಂಗ ಉತ್ಸವದಲ್ಲಿ ಗುರುವಾರ, ಬೆಂಗಳೂರಿನ ದೃಶ್ಯಕಾವ್ಯ ತಂಡದ ಕಲಾವಿದರು 'ಮಾಯಾ ಬೇಟೆ' ನಾಟಕ ಪ್ರದರ್ಶಿಸಿದರು



ರಸ್ತೆ ಗುಣಮಟ್ಟ ಕಳಪೆ: ವಿಧಾನಪರಿಷತ್‌ನಲ್ಲಿ ಎಸ್‌. ರವಿ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ

ವೈಟ್ ಟಾಪಿಂಗ್ ರದ್ದು: ಬೊಮ್ಮಾಯಿ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರಿ ವೆಚ್ಚ ತಗಲುವುದರಿಂದ ನಗರದ ರಸ್ತೆಗಳ ವೈಟ್ ಟಾಪಿಂಗ್ ಬಗ್ಗೆ ಮರು ಚಿಂತನೆ ನಡೆಸಲಾಗುತ್ತಿದೆ. ಅಲ್ಲದೆ, ರಸ್ತೆಗಳ ಸಮಗ್ರ ನಿರ್ವಹಣೆಗೆ ವಿಶೇಷ ಕೋಡ್ ವ್ಯವಸ್ಥೆ ಜಾರಿಗೆ ತರಲು ಉದ್ದೇಶಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಳಪೆ ಗುಣಮಟ್ಟದ ರಸ್ತೆಯ ಬಗ್ಗೆ ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ಎಸ್. ರವಿ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, 'ಬೆಂಗಳೂರಿನಲ್ಲಿ 12 ಅತಿ ದಟ್ಟಣೆಯ ರಸ್ತೆಗಳ ಕಾಮಗಾರಿಯ ಟೆಂಡರ್ ರದ್ದುಪಡಿಸಲಾಗಿದೆ. ಪರಿಷ್ಕೃತ ದರದಲ್ಲಿ ಶೀಘ್ರದಲ್ಲಿ ಮರು ಟೆಂಡರ್ ಆಹ್ವಾನಿಸಲಾಗುವುದು' ಎಂದರು.

'ಅತಿ ದಟ್ಟಣೆಯ ರಸ್ತೆಗಳಿಗೆ ₹ 800 ಕೋಟಿ ವೆಚ್ಚ ನಿಗದಿ ಮಾಡಲಾಗಿತ್ತು. ಈ ಯೋಜನೆಯಲ್ಲಿ ರಸ್ತೆ ಮಾಡಲು ₹ 300 ಕೋಟಿ, ಐದು ವರ್ಷದ ರಸ್ತೆ ನಿರ್ವಹಣೆಗೆ ₹ 500 ಕೋಟಿ ವೆಚ್ಚ ನಿಗದಿಪಡಿಸಲಾಗಿತ್ತು. ಬಿಬಿಎಂಪಿ ಕಾಯ್ದೆ ಪ್ರಕಾರ ರಸ್ತೆ ನಿರ್ಮಿಸಿದವರೇ ಎರಡು ವರ್ಷ ರಸ್ತೆ ನಿರ್ವಹಣೆಯನ್ನೂ ಮಾಡಬೇಕಿದೆ. ಆ ವೆಚ್ಚವನ್ನು ಟೆಂಡರ್‌ನಲ್ಲಿ ಸೇರಿಸಲಾಗಿತ್ತು. ಹೀಗಾಗಿ, ಈ ಟೆಂಡರ್ ರದ್ದುಪಡಿಸಲಾಗಿದೆ' ಎಂದರು.

'ಒಂದು ಕಿ.ಮೀ ಉದ್ದದ ರಸ್ತೆ ಡಾಂಬರೀಕರಣಕ್ಕೆ ₹ 75 ಲಕ್ಷದಿಂದ ₹ 1 ಕೋಟಿ ವೆಚ್ಚ ತಗಲಲಿದೆ. ಪ್ರತಿ ಕಿ.ಮೀ ವೈಟ್ ಟಾಪಿಂಗ್‌ಗೆ ಸುಮಾರು ₹ 9 ಕೋಟಿಯಿಂದ ₹ 10 ಕೋಟಿ ವೆಚ್ಚ ತಗಲುತ್ತಿದೆ. ವೈಟ್ ಟಾಪಿಂಗ್ ರಸ್ತೆಗಳ ನಿರ್ವಹಣೆ ವೆಚ್ಚ ಕಡಿಮೆ ಇದ್ದರೂ, ಸಾಮಾನ್ಯ ಡಾಂಬರೀಕರಣ ಮಾಡಿದರೆ ಕಡಿಮೆ ವೆಚ್ಚವಾಗಲಿದೆ. ವೈಟ್ ಟಾಪಿಂಗ್ ಮಾಡಿದರೆ ವೆಚ್ಚ 10 ಪಟ್ಟು ಹೆಚ್ಚಾಗುತ್ತಿದೆ' ಎಂದರು.

'ಬೆಂಗಳೂರಿನ ರಸ್ತೆ ಗುಂಡಿಗಳಲ್ಲಿ 11 ಜನ ಮೃತಪಟ್ಟಿದ್ದಾರೆ. ರಸ್ತೆ ಗುಂಡಿಯಲ್ಲಿ ಗಾಯಗೊಂಡವರಿಗೆ ಯಾವ ರೀತಿ ಪರಿಹಾರ ನೀಡಲಾಗಿದೆ. ರಸ್ತೆ ಗುಂಡಿ ಮುಚ್ಚಲು ಅಗತ್ಯವಾದ ಪೈಥಾನ್ ಯಂತ್ರ ಖರೀದಿಸಲು ಸರ್ಕಾರಕ್ಕೆ ಏನು ತೊಂದರೆ' ಎಂದು ರವಿ ಖಾರವಾಗಿ ಪ್ರಶ್ನಿಸಿದರು.

'ಖಾಸಗಿಯವರಿಂದ ಪೈಥಾನ್ ಯಂತ್ರ ಬಾಡಿಗೆ ಪಡೆದು 182 ಕಿಲೋ ಮೀಟರ್ ರಸ್ತೆಯಲ್ಲಿ ಗುಂಡಿ ಮುಚ್ಚಿಸಲಾಗುತ್ತಿದೆ. 442 ಕಿಲೋ ಮೀಟರ್ ರಸ್ತೆಯಲ್ಲೂ ಗುಂಡಿ ಮುಚ್ಚಲು ಸೂಚಿಸಲಾಗಿದೆ' ಎಂದೂ ಮುಖ್ಯಮಂತ್ರಿ ತಿಳಿಸಿದರು.

'ಬಿಬಿಎಂಪಿಯ ಕೆಲಸಗಳನ್ನು ಕೆಆರ್‌ಐಡಿಎಲ್‌ಗೆ ಯಾರ ಕಾಲದಲ್ಲಿ ಗುತ್ತಿಗೆ ನೀಡಲಾಗಿತ್ತು. ಅಧಿಕಾರಿಗಳು ಸರ್ಕಾರದ ಮೇಲೆ ಯಾವ ರೀತಿಯಲ್ಲಿ ಪ್ರಭಾವ ಬೀರಿದರು ಎಂಬುದೆಲ್ಲವನ್ನೂ ಲೋಕಾಯುಕ್ತ ವರದಿ ಆಧರಿಸಿ ತನಿಖೆ ನಡೆಸಲಾಗುವುದು. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

'ಕೆಆರ್‌ಐಡಿಎಲ್ ನೀಡಿದ್ದ ಕಾಮಗಾರಿ ರದ್ದು'

ಬೆಂಗಳೂರು: 'ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಕಾಮಗಾರಿ ನೀಡುವುದನ್ನು ನಾವು ಅಧಿಕಾರಕ್ಕೆ ಬಂದ ಬಳಿಕ ನಿಲ್ಲಿಸಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಕೆ. ಗೋವಿಂದರಾಜು ಅವರು ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ನೀಡುತ್ತಿರುವುದರಿಂದ ಗುಣಮಟ್ಟ ಹದಗೆಡುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

ಅದಕ್ಕೆ ಮುಖ್ಯಮಂತ್ರಿ, 'ವಿರೋಧ ಪಕ್ಷದಲ್ಲಿದ್ದಾಗ ಆ ಸಂಸ್ಥೆಗೆ ಕೆಲಸ ನೀಡಬಾರದು ಎನ್ನುವುದು, ಅಧಿಕಾರಕ್ಕೆ ಬಂದ ಬಳಿಕ ಅದೇ ಸಂಸ್ಥೆಗೆ ಕೆಲಸ ನೀಡಿ ತಮಗೆ ಬೇಕಾದಂತೆ ಬಳಕೆ ಮಾಡಿಕೊಳ್ಳುವುದನ್ನು ಸರಿಯಲ್ಲ. ಪ್ರಗತಿ ಪರಿಶೀಲನೆ ನಡೆಸಿದಾಗ ಈ ಸಂಸ್ಥೆಯ ಕೆಲಸದ ಗುಣಮಟ್ಟ ಸರಿ ಇಲ್ಲ ಎನ್ನುವುದು ಮನವರಿಕೆಯಾಗಿದೆ. ಹೀಗಾಗಿ, ಕೆಲವು ಟೆಂಡರ್ ರದ್ದುಗೊಳಿಸಲಾಗಿದೆ' ಎಂದರು.

'ಪ್ರಗತಿಯಲ್ಲಿರುವ, ಬಾಕಿ ಇರುವ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಹಾಗೂ ಗುಣಮಟ್ಟ ಸುಧಾರಿಸಲು ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ಬಿಬಿಎಂಪಿಯಿಂದಲೇ ಕೆಲಸ ಮಾಡಿಸಲಾಗುವುದು' ಎಂದು ಭರವಸೆ ನೀಡಿದರು.

'ಬೆಂಗಳೂರಿನಲ್ಲಿ 7011 ಕಿಲೋ ಮೀಟರ್ ರಸ್ತೆಯನ್ನು ₹ 6,767 ಕೋಟಿ ಖರ್ಚು ಮಾಡಿ ಅಭಿವೃದ್ಧಿಪಡಿಸಲಾಗುತ್ತಿದೆ. 4,761 ಕೆಲಸಗಳು ಪ್ರಗತಿಯಲ್ಲಿವೆ. ಕಾವೇರಿ ನೀರು ಪೂರೈಸುವ ಕೊಳವೆ ಮಾರ್ಗದಲ್ಲಿ ರಸ್ತೆ ಕುಸಿದಿರುವುದನ್ನು ದುರಸ್ತಿ ಮಾಡಲು ಹೆಚ್ಚಿನ ಅನುದಾನ ನೀಡಲಾಗುವುದು' ಎಂದೂ ಮುಖ್ಯಮಂತ್ರಿ ತಿಳಿಸಿದರು.

ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಗೆ ಅಂಗೀಕಾರ

ಬೆಂಗಳೂರು: ಶಿಕ್ಷೆಗೊಳಗಾದ ಮತ್ತು ಶಿಸ್ತು ಕ್ರಮಕ್ಕೆ ಒಳಗಾದ ಸರ್ಕಾರಿ ನೌಕರರು, ಸಹಕಾರಿ ಸಂಸ್ಥೆಗಳ ನೌಕರರುಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸುವ ಪ್ರಸ್ತಾವವುಳ್ಳ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ– 2022ಕ್ಕೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಜನಸಂಖ್ಯೆಯ ಮಿತಿ ನಿಗದಿಪಡಿಸುವ, ಜಿಲ್ಲಾ ಯೋಜನಾ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸುವುದಕ್ಕೆ ಸಂಬಂಧಿಸಿದ ಅಂಶಗಳೂ ಮಸೂದೆಯಲ್ಲಿವೆ.

'ನೈಸ್: ರೈತರ ಹಿತಾಸಕ್ತಿಗೆ ಬದ್ಧ'

ಬೆಂಗಳೂರು: 'ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್' (ನೈಸ್) ಸಂಸ್ಥೆಯ ಬೆಂಗಳೂರು– ಮೈಸೂರು ಹೆದ್ದಾರಿ ಯೋಜನೆ (ಬಿಎಂಐಸಿಎಲ್) ವಿಷಯದಲ್ಲಿ ರೈತರ ಹಿತಾಸಕ್ತಿ ಕಾಪಾಡಲು ಸರ್ಕಾರ ಬದ್ಧವಾಗಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಈ ಬಗ್ಗೆ ನಡೆದ ಚರ್ಚೆಗೆ ಉತ್ತರಿಸಿದ ಅವರು, 'ಈ ಯೋಜನೆಗೆ ಸಂಬಂಧಿಸಿದಂತೆ ನೈಸ್ ಮತ್ತು ಸರ್ಕಾರದ ವತಿಯಿಂದ ಇದುವರೆಗೆ 400 ಎಫ್‌ಐಆರ್‌ಗಳು ದಾಖಲಾಗಿದ್ದವು. ಇವುಗಳಲ್ಲಿ 300 ಪ್ರಕರಣಗಳು ಇತ್ಯರ್ಥಗೊಂಡಿವೆ. ಉಳಿದ 100 ಪ್ರಕರಣಗಳು ನ್ಯಾಯಾಲಯದಲ್ಲಿವೆ' ಎಂದು ವಿವರಿಸಿದರು.

'1994–95ರಲ್ಲಿ ಎಚ್‌.ಡಿ. ದೇವೇಗೌಡ ಅವರು ಒಳ್ಳೆಯ ಉದ್ದೇಶದಿಂದ ಈ ಯೋಜನೆಗೆ ಚಾಲನೆ ನೀಡಿದ್ದರು. ನಂತರ, 11 ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಈ ಯೋಜನೆಯಿಂದಾಗಿ ವಿವಾದಗಳೇ ಹೆಚ್ಚು ಎನ್ನುವ ಸಂದೇಶ ಹೂಡಿಕೆದಾರರಿಗೆ ತಲುಪಿದೆ. ಹೀಗಾಗಿ, 27 ವರ್ಷಗಳಿಂದ ಇತ್ಯರ್ಥವಾಗದಿರುವ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆಹರಿಸಲು ಪ್ರಯತ್ನಿಸಲಾಗುವುದು' ಎಂದು ತಿಳಿಸಿದರು.

'ಈ ಯೋಜನೆಗೆ 13,237 ಎಕರೆ ಖಾಸಗಿ ಜಮೀನು ಮತ್ತು 6,956 ಎಕರೆ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 20,193 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. 1997ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರ ಈಗಾಗಲೇ ಸಂಪುಟ ಉಪಸಮಿತಿ ರಚಿಸಿದ್ದು, ವಿವಾದಗಳು ಇತ್ಯರ್ಥವಾದರೆ ರೈತರಿಗೂ ಉತ್ತಮ ಪರಿಹಾರ ದೊರೆಯುತ್ತದೆ. ಹೀಗಾಗಿ, ನ್ಯೂನ್ಯತೆಗಳನ್ನು ಸರಿಪಡಿಸುವ ಕುರಿತು ಆದ್ಯತೆ ನೀಡಲಾಗುವುದು' ಎಂದರು. ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, 'ನೈಸ್ ರಸ್ತೆಯನ್ನು ಎನ್‌ಎಚ್‌ಎಐಗೆ ವಹಿಸಲು ವಿಶೇಷ ಕಾಯ್ದೆ ರೂಪಿಸಿ. ಇದುವರೆಗೆ ನೈಸ್ ಸಂಸ್ಥೆ ಹಣ ಕೊಳ್ಳೆ ಹೊಡೆದಿದ್ದು ಸಾಕು. ನಾಡಿನ 1.25 ಲಕ್ಷ ರೈತರ ಹಿತಾಸಕ್ತಿಯನ್ನು ಸರ್ಕಾರ ಕಾಪಾಡಬೇಕು' ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಬೆಮಲ್ ಕಾರ್ಖಾನೆ ಮುಚ್ಚುವುದಿಲ್ಲ- ನಿರಾಣಿ ಸ್ಪಷ್ಟನೆ

ಬೆಂಗಳೂರು: 'ಕೋಲಾರ ಜಿಲ್ಲೆಯ ಬೆಮಲ್ ಕಾರ್ಖಾನೆಯನ್ನು ಮುಚ್ಚುವುದಿಲ್ಲ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಗುರುವಾರ ಭರವಸೆ ನೀಡಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಉತ್ತರ ನೀಡಿದ ಅವರು, 'ಬೆಮಲ್ ಕಾರ್ಖಾನೆ ಉತ್ಪಾದನೆ ಮತ್ತು ಅಲ್ಲಿರುವ ಕಾರ್ಮಿಕರಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕೆಜಿಎಫ್ ನಲ್ಲಿ ಚಿನ್ನ ಸಿಗುವುದಿಲ್ಲ ಎಂಬ ಕಾರಣಕ್ಕೆ ಅದನ್ನು ಮುಚ್ಚಲಾಗಿದೆ. ಅಲ್ಲಿ ಒಟ್ಟಾರೆ 12 ಸಾವಿರ ಎಕರೆಗೂ ಹೆಚ್ಚಿನ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸಲು ಕೇಂದ್ರ ಸರ್ಕಾರ ಸಿದ್ಧವಿದೆ. ಆದರೆ

ಭೂಮಿಯ ಮೌಲ್ಯಕ್ಕಿಂತ ಕಾರ್ಖಾನೆಯ ಹೊಣೆಗಾರಿಕೆಯೇ ಹೆಚ್ಚಾಗಿದೆ. ಅದನ್ನು ರಾಜ್ಯ ಸರ್ಕಾರ ತನ್ನ ಮೇಲೆ ಎಳೆದುಕೊಳ್ಳಲು ಸಿದ್ಧವಿಲ್ಲ' ಎಂದರು.

'ಕೇಂದ್ರ ಸರ್ಕಾರ ನೀತಿ ಆಯೋಗದ ಶಿಫಾರಸಿನ ಪ್ರಕಾರ ಕೇಂದ್ರ ಸರ್ಕಾರದ ಅಧೀನ ಕೈಗಾರಿಕೆ, ಉದ್ದಿಮೆಗಳಲ್ಲಿದ್ದ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು ಕೊಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅದರ ಪ್ರಕಾರ ಕೆಜಿಎಫ್‌ನ ಭೂಮಿಯನ್ನು ಎರಡು ಹಂತದಲ್ಲಿ ವಶಕ್ಕೆ ಪಡೆಯಲಾಗುವುದು. ಅಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಮೊದಲ ಹಂತದಲ್ಲಿ 3,500 ಎಕರೆಯನ್ನು ಕಂದಾಯ ಇಲಾಖೆಗೆ ವಾಪಾಸ್ ಪಡೆದುಕೊಂಡು ಅಲ್ಲಿಂದ ಕೆಐಎಡಿಬಿಗೆ ಹಸ್ತಾಂತರಿಸಲಾಗುವುದು' ಎಂದರು.

ಅದೇ ರೀತಿ ಸ್ಥಗಿತಗೊಂಡಿರುವ ಕಲಬುರಗಿಯ ಸಿಮೆಂಟ್ ಕಾರ್ಖಾನೆ, ಶಿವಮೊಗ್ಗದ ವಿಶ್ವೇಶ್ವರಯ್ಯ ಸ್ಟೀಲ್ ಮತ್ತು ಉಕ್ಕು ಕಾರ್ಖಾನೆಯ ಭೂಮಿಯನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಹಸ್ತಾಂತರಿಸಲು ನಿರ್ಧರಿಸಿದೆ ಎಂದರು.

ಚಿತ್ರ ನಗರಿಗೆ 110 ಎಕರೆ ಜಮೀನು ಕಂದಾಯ ಇಲಾಖೆಗೆ ಪ್ರಸ್ತಾವ

ಬೆಂಗಳೂರು: ಚಿತ್ರ ನಗರಿ ಸ್ಥಾಪಿಸಲು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಇಮ್ಮಾವು ಗ್ರಾಮದಲ್ಲಿನ 110 ಎಕರೆ ಜಮೀನು ಪಡೆಯುವ ಸಂಬಂಧ ಕಂದಾಯ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಈ ಜಮೀನು ಮಂಜೂರಾಗಿದೆ. ಹೀಗಾಗಿ, ಈ ಜಮೀನನ್ನು ಉಚಿತವಾಗಿ ನೀಡುವಂತೆ ಕೋರಲಾಗಿದೆ ಎಂದು ತಿಳಿಸಿದ್ದಾರೆ. ವಿಧಾನ ಪರಿಷತ್‌ನಲ್ಲಿ ಸಿ.ಎನ್. ಮಂಜೇಗೌಡ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿರುವ ಅವರು, ರಾಜ್ಯದಲ್ಲಿ ಜಾಗತಿಕ ಮಟ್ಟದ ಚಿತ್ರನಗರಿಯನ್ನು ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಸರ್ಕಾರ ತನ್ನ ಪಾಲಿನ ಜಮೀನು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಿದೆ ಎಂದು ವಿವರಿಸಿದ್ದಾರೆ.

ಕೋವಿಡ್ ಹಾಗೂ ಇತರೆ ಕಾರಣಗಳಿಂದ ಚಿತ್ರನಗರಿ ನಿರ್ಮಾಣ ವಿಳಂಬವಾಗಿದೆ. ಪ್ರಸ್ತುತ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕಂದಾಯ ಇಲಾಖೆಯಿಂದ ಮಂಜೂರಾಗಿರುವ ಜಮೀನನ್ನು ಉಚಿತವಾಗಿ ಹಸ್ತಾಂತರಿಸುವ ಹಾಗೂ ಇತರ ಆಡಳಿತಾತ್ಮಕ ಕ್ರಮಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದ್ದಾರೆ.

'ವಸತಿ ರಹಿತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪೌರ ಕಾರ್ಮಿಕರಿಗೆ 1,110 ನಿವೇಶನ ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಇದನ್ನು ತಪ್ಪಿಸಲು ವಸತಿ ಸಚಿವ ವಿ. ಸೋಮಣ್ಣ ಹಾಗೂ ಬಿಜೆಪಿ ಶಾಸಕ ಎಸ್‌.ಆರ್‌. ವಿಶ್ವನಾಥ್ ಪಿತೂರಿ ನಡೆಸುತ್ತಿದ್ದಾರೆ' ಎಂದು ಆರೋಪಿಸಿ ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

'ಆರೋಗ್ಯ ಕವಚ' ಇನ್ನಷ್ಟು ಸುಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆರೋಗ್ಯ ಕವಚ (108) ಸೇವೆಯನ್ನು ಅಂತರರಾಷ್ಟ್ರೀಯ ಮಟ್ಟದ ತುರ್ತು ಸೇವೆಯನ್ನಾಗಿ ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ಹೊಸ ಸೇವಾದಾರರನ್ನು ಹೊಂದಲು ಸದ್ಯವೇ ಟೆಂಡರ್ ಕರೆಯಲಾಗುವುದು ಎಂದು ಆರೋಗ್ಯ ಸಚಿವ ಕೆ.ಸುಧಾಕರ್ ತಿಳಿಸಿದರು.

ಈಗಿರುವ ಸೇವೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲಾಗುವುದು ಎಂದು ಅವರು ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಅವರ ಪ್ರಶ್ನೆಗೆ ಉತ್ತರಿಸಿದರು.

ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡದಂತೆ ಶ್ರೇಷ್ಠ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಆರೋಗ್ಯ ಕವಚ ಕರೆ ಕೇಂದ್ರವನ್ನು ಸಂಪೂರ್ಣವಾಗಿ ಆಧುನೀಕರಣಗೊಳಿಸಲಾಗುತ್ತಿದೆ. ಈಗಿರುವ 54 ಆಸನಗಳ ಕರೆ ಕೇಂದ್ರವನ್ನು 75 ಆಸನಗಳ ಕರೆ ಕೇಂದ್ರವನ್ನಾಗಿ ಪರಿವರ್ತಿಸಲಾಗುತ್ತಿದೆ. ಅಗತ್ಯಕ್ಕೆ ಅನುಗುಣವಾಗಿ ಸದರಿ ಆಸನ ವ್ಯವಸ್ಥೆಯನ್ನು 120 ಆಸನಗಳವರೆಗೆ ವಿಸ್ತರಿಸಲು ಹಾಗೂ ಸುಧಾರಣೆಗಾಗಿ ಅವಶ್ಯವಿರುವ ಇತರ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಆರೋಗ್ಯ ಕ್ಷೇತ್ರದಲ್ಲಿ ಆಂಬುಲೆನ್ಸ್ ಸೇವೆ ತುರ್ತು ಸೇವೆಯಾಗಿದೆ. ಆದರೆ ತುರ್ತು ಸೇವೆ ಒದಗಿಸುವಲ್ಲಿ ತಡವಾಗುತ್ತಿರುವ ವಿಚಾರ ಗಮನಕ್ಕೆ ಬಂದಿದೆ. 2007–08 ರ ಸಾಲಿನಲ್ಲಿ ಜಿವಿಕೆ ಸಂಸ್ಥೆಗೆ 10 ವರ್ಷಕ್ಕೆ ಗುತ್ತಿಗೆ ನೀಡಲಾಗಿತ್ತು. ಆದರೆ, ಗುಣ ಮಟ್ಟದ ಸೇವೆ ಸಿಗದ ಕಾರಣ 2017 ರಲ್ಲಿ ಒಪ್ಪಂದವನ್ನು ರದ್ದುಪಡಿಸಲಾಯಿತು. ಸಮರ್ಪಕವಾಗಿ ಕಾರ್ಯ ನಿರ್ವಹಿಸದ ಸಂಸ್ಥೆ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಹಿಂದೆ ನಡೆದ ಟೆಂಡರ್ ಪ್ರಕ್ರಿಯೆಯಲ್ಲಿನ ಒಪ್ಪಂದವೇ ಸಮಸ್ಯೆಯಾಗಿದೆ ಎಂದು ಹೇಳಿದರು.

ಜೈನ್ ಸರ್ಕಿಟ್‌ಗೆ ಮೂಡಬಿದ್ರೆ: ಕೇಂದ್ರಕ್ಕೆ ಪಸ್ತಾವನೆ

ಮೂಡಬಿದ್ರೆ ಮತ್ತು ಕಾರ್ಕಳವನ್ನು 'ಜೈನ್ ಸರ್ಕಿಟ್' ಪ್ರವಾಸೋದ್ಯಮ ಯೋಜನೆಗೆ ಸೇರಿಸಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ಹೇಳಿದರು.

ಬಿಜೆಪಿಯ ಉಮಾನಾಥ ಕೋಟ್ಯಾನ್ ಅವರ ಪ್ರಶ್ನೆಗೆ ಪ್ರವಾಸೋದ್ಯಮ ಸಚಿವರ ಪರವಾಗಿ ಉತ್ತರಿಸಿದ ಅವರು, ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಿದರೆ, ಕೇಂದ್ರದಿಂದಲೇ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬರಲಿದೆ ಎಂದು ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಸಸಿಹಿತ್ಲು ಕಡಲ ತೀರದಲ್ಲಿ ಸರ್ಫಿಂಗ್ ಸ್ಕೂಲ್, ಶೌಚಾಲಯ, ಪಾರ್ಕಿಂಗ್, ಸ್ವಾಗತ ಕಮಾನು, ಪರಗೋಲಾದೊಂದಿಗೆ ವಾಕಿಂಗ್ ಟ್ರ್ಯಾಕ್, ಕಿಯಾಸ್ಕ್‌ಗಳು, ರಸ್ತೆ, ಚರಂಡಿ ಮತ್ತು ಕಾಲುಪಥ ಅಭಿವೃದ್ಧಿ ಮುಂತಾದ ಪ್ರವಾಸಿ ಸೌಲಭ್ಯಗಳನ್ನು ₹100 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ ಎಂದರು.

ಉಚಿತ ವಸತಿ ಶಾಲೆ: ಪ್ರವೇಶ ಪರೀಕ್ಷೆ ಏ.7ಕ್ಕೆ

ಬೆಂಗಳೂರು: ಇಲ್ಲಿನ ವಿಭೂತಿಪುರ ವೀರಸಿಂಹಾಸನ ಸಂಸ್ಥಾನಮಠವು 6ರಿಂದ 8ನೇ ತರಗತಿ ವರೆಗಿನ ಉಚಿತ ವಸತಿ ಶಾಲೆ ಪ್ರವೇಶಕ್ಕೆ ಏ.7ರಂದು ಬೆಳಿಗ್ಗೆ 9 ಗಂಟೆಗೆ ಮಠದಲ್ಲಿ ಪ್ರವೇಶ ಪರೀಕ್ಷೆ ಹಮ್ಮಿಕೊಂಡಿದೆ.

ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಲಿಚ್ಛಿಸುವ ಗ್ರಾಮೀಣ ಪ್ರದೇಶದ ಎಲ್ಲ ವರ್ಗದ ಬಡ ಪ್ರತಿಭಾನ್ವಿತ ಬಾಲಕರು ಪ್ರವೇಶ ಪಡೆಯಬಹುದು. ವಿದ್ಯಾರ್ಥಿಗಳು ತಮ್ಮ ಇತ್ತೀಚಿನ ಎರಡು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ನೊಂದಿಗೆ ನೇರವಾಗಿ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಬಹುದು ಎಂದು ಮಠದ ಕಾರ್ಯದರ್ಶಿ ಸಿ. ಬಸವರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9738245665 ಅಥವಾ 9448670372

ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಅವ್ಯವಹಾರ

₹2,317 ಕೋಟಿ ದುರುಪಯೋಗ ಪತ್ತೆ

ಬೆಂಗಳೂರು: 'ನಗರದ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರದ ಕುರಿತು ಮರು ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿದ್ದು, ಇದುವರೆಗೆ ₹2,317 ಕೋಟಿ ದುರ್ಬಳಕೆಯಾಗಿರುವುದು ಪತ್ತೆಯಾಗಿದೆ' ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, '2014–15ರಲ್ಲಿ ₹807 ಕೋಟಿ, 2015–16ರಲ್ಲಿ ₹483 ಕೋಟಿ, 2016–17ರಲ್ಲಿ ₹333.16 ಕೋಟಿ, 2017–18ನೇ ಸಾಲಿನಲ್ಲಿ ₹380.72 ಕೋಟಿ ದುರುಪಯೋಗವಾಗಿದೆ. 2018–19ನೇ ಸಾಲಿನ ಲೆಕ್ಕಪರಿಶೋಧನೆ ಬಾಕಿ ಉಳಿದಿದೆ' ಎಂದು ವಿವರಿಸಿದರು.

'ಇದೇ 29ರಂದು ಬ್ಯಾಂಕ್‌ನ ಸರ್ವ ಸದಸ್ಯರ ಸಾಮಾನ್ಯ ಸಭೆ ಕರೆಯಲಾಗಿದೆ. ಸಭೆಯಲ್ಲಿ ಸದಸ್ಯರಿಗೆ ಇದುವರೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. ಬ್ಯಾಂಕ್‌ನಿಂದ ದುರುಪಯೋಗಪಡಿಸಿಕೊಂಡಿರುವ ₹2317 ಕೋಟಿ ಮೊತ್ತವನ್ನು ಸಂಬಂಧಪಟ್ಟ ಆರೋಪಿಗಳಿಂದ ವಸೂಲಿ ಮಾಡಲು ಕಠಿಣ ಕ್ರಮ ಕೈಗೊಳ್ಳಲಾಗಿದ್ದು, ವಂಚಕರ ಆಸ್ತಿಗಳನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು' ಎಂದು ತಿಳಿಸಿದರು.

'ಲೆಕ್ಕ ಪರಿಶೋಧನೆಯು ಸಂಪೂರ್ಣ ಮುಕ್ತಾಯವಾದ ನಂತರ ಸುಸ್ತಿದಾರರ ವಿವರ ಸೇರಿದಂತೆ ಸಮಗ್ರ ವಿಷಯಗಳು ಗೊತ್ತಾಗಲಿವೆ. ಬ್ಯಾಂಕ್ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪಿಗಳಿಗೆ ಜಾಮೀನು ದೊರೆಯದಂತೆ ಕಾನೂನು ಕ್ರಮಕೈಗೊಳ್ಳುವಂತೆ ಅಡ್ವೊಕೇಟ್ ಜನರಲ್ ಅವರ ಜತೆಯೂ ಚರ್ಚಿಸಲಾಗುವುದು. ಜತೆಗೆ, 64 ಲೆಕ್ಕ ಪರಿಶೋಧಕರನ್ನು ಲೆಕ್ಕ ಪರಿಶೀಲನಾ ಸಮಿತಿಯಿಂದ ಕೈಬಿಡಲಾಗಿದೆ. ಇವರ ವಿರುದ್ಧ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಸಂಸ್ಥೆಗಳಿಗೂ ಪತ್ರ ಬರೆಯಲಾಗಿದೆ. ಇದರಿಂದ, ಅವರು ಮುಂದಿನ ದಿನಗಳಲ್ಲಿ ಲೆಕ್ಕಪರಿಶೋಧನೆ ನಡೆಸಲು ಅನರ್ಹರಾಗುತ್ತಾರೆ' ಎಂದರು.

'ಹೈಕೋರ್ಟ್ ನಿರ್ದೇಶನದ ಅನುಸಾರ ಅಶೋಕನ್ ಎನ್ನುವವರನ್ನು ಆಡಳಿತಾಧಿಕಾರಿಯನ್ನಾಗಿ ಭಾರತೀಯ ರಿಸರ್ವ್ ಬ್ಯಾಂಕ್ ನೇಮಿಸಿದೆ' ಎಂದು ತಿಳಿಸಿದರು.

ಯು.ಬಿ. ವೆಂಕಟೇಶ್ ಮಾತನಾಡಿ, 'ಗ್ರಾಹಕರೊಬ್ಬರು ಬ್ಯಾಂಕ್‌ನಲ್ಲಿ ₹9 ಕೋಟಿ ಠೇವಣಿ ಇರಿಸಿದ್ದರು. ಇದರಿಂದ ದೊರೆತ ಬಡ್ಡಿ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆಗಳನ್ನು ಪಾವತಿಸಿದ್ದರು. ಎರಡು ವರ್ಷದ ಬಳಿಕ ಕೇಳಿದರೆ ನಕಲಿ ಠೇವಣಿ ಎಂದು ತಿಳಿಸಿದ ಬ್ಯಾಂಕ್, ಬಡ್ಡಿ ವಾಪಸ್ ನೀಡಲು ಸೂಚಿಸಿತು. ಇಂತಹ ಹಲವಾರು ವಿಭಿನ್ನ ಪ್ರಕರಣಗಳಿದ್ದು, ಗ್ರಾಹಕರಿಗೆ ತ್ವರಿತಗತಿಯಲ್ಲಿ ನ್ಯಾಯ ದೊರಕಿಸಿಕೊಡಬೇಕು. ವಶಿಷ್ಠ ಸೌಹಾರ್ದ ಸಹಕಾರ ಬ್ಯಾಂಕ್ ಅವ್ಯವಹಾರದ ಬಗ್ಗೆಯೂ ಸಮಗ್ರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

ವಿರೋಧ ಪಕ್ಷದ ನಾಯಕ ಹರಿಪ್ರಸಾದ್, 'ನಗರದ ಮಾಜಿ ಮೇಯರ್ ಒಬ್ಬರ ಪುತ್ರ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ₹5ಕೋಟಿ ಠೇವಣಿ ಇರಿಸಿದ್ದರು. ಆದರೆ, ಅಕ್ರಮಗಳಿಂದ ಅವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ, ತ್ವರಿತಗತಿಯಲ್ಲಿ ತನಿಖೆ ಕೈಗೊಳ್ಳಿ' ಎಂದರು.

ಮಾನ್ಯತೆ ನವೀಕರಣ: ಎಂಟು ಶಾಲೆಗಳ ರಿಟ್ ಅರ್ಜಿಗಳ ವಿಚಾರಣೆ

ಪ್ರವೇಶ ಪತ್ರ ವಿತರಿಸಲು ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನ್ಯತೆ ಪಡೆದಿಲ್ಲ ಎಂದು ಕಾರಣಕ್ಕೆ 2022ರ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ನಿರಾಕರಿಸಿದ್ದ ಎಂಟು ಶಾಲೆಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಹಾಲ್ ಟಿಕೆಟ್ ವಿತರಿಸಿ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಎಂಟು ಶಾಲೆಗಳ ವತಿಯಿಂದ ಸಲ್ಲಿಸಲಾಗಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ

ನಡೆಸಿ, 'ಇದೇ 28ರಿಂದ ಆರಂಭವಾಗಲಿರುವ 2022ರ ಶೈಕ್ಷಣಿಕ ಸಾಲಿನ ಪರೀಕ್ಷೆ ಬರೆಯಲು ಅನುವಾಗುವಂತೆ ಹಾಗೂ ವಿದ್ಯಾರ್ಥಿಗಳ ಹಾಲ್ ಟಿಕೆಟ್ ಡೌನ್‌ಲೋಡ್ ಮಾಡಿಕೊಳ್ಳಲು ಕೂಡಲೇ ಅವಕಾಶ ಕಲ್ಪಿಸಬೇಕು' ಎಂದು ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ಅರ್ಜಿದಾರ ಎಂಟು ಶಾಲೆಗಳು ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 30, 31 ಮತ್ತು 38ರ ಅನುಸಾರ ನೋಂದಾಯಿತ ಶಾಲೆಗಳಾಗಿವೆ. ಆದರೆ, ಇವುಗಳಿಗೆ ಮೌಖಿಕವಾಗಿ ಮಾನ್ಯತೆ ನವೀಕರಣಕ್ಕೆ ಸೂಚಿಸಲಾಗಿದೆ. ಮಾನ್ಯತೆ ನವೀಕರಣವಾಗದ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಸುತ್ತೋಲೆ ವಿದ್ಯಾರ್ಥಿಗಳ ಸ್ವಾಭಾವಿಕ ನ್ಯಾಯಕ್ಕೆ ಚ್ಯುತಿ ಉಂಟು ಮಾಡಿದೆ' ಎಂದರು.

'ಅರ್ಜಿದಾರ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಹಾಲ್ ಟಿಕೆಟ್ ಡೌನ್‌ಲೋಡ್ ಮಾಡಿಕೊಳ್ಳಲು ನಿರಾಕರಿಸಿರುವ ಕಾರಣ ವಿದ್ಯಾರ್ಥಿಗಳು ಮಾನಸಿಕ ತುಮುಲ ಎದುರಿಸುತ್ತಿದ್ದಾರೆ. ಕೂಡಲೇ ಅವರಿಗೆ ಪರೀಕ್ಷೆ ಬರೆಯಲು ಅನುವಾಗುವಂತೆ ಹಾಲ್ ಟಿಕೆಟ್ ವಿತರಿಸಲು ಪ್ರತಿವಾದಿಗಳಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿದಾರ ಶಾಲೆಗಳಾದ ವಿವೇಕನಗರದ ಶಾಂತಿ ನಿಕೇತನ ಪ್ರೌಢಶಾಲೆ, ನೀಲಸಂದ್ರದ ಶಾಂತಿನಿಕೇತನ ಪ್ರೌಢಶಾಲೆ, ಈಜಿಪುರದ ಮಾಡರ್ನ್ ಎಜುಕೇಷನ್ ಸೊಸೈಟಿ, ಎಚ್‌ಎಸ್‌ಆರ್ ಲೇ ಔಟ್‌ನ ಬ್ರಿಲಿಯಂಟ್ ಪ್ರೌಢಶಾಲೆ, ಬೊಮ್ಮನಹಳ್ಳಿಯ ಮಂಗಮ್ಮನಪಾಳ್ಯದ ಜಾನ್ಸನ್ ಪ್ರೈಮರಿ ಮತ್ತು ಹೈಸ್ಕೂಲ್, ಹಳೆ ಮಡಿವಾಳ ರಸ್ತೆಯ ನ್ಯೂ ಕ್ರೈಸ್ಟ್ ಕಾನ್ವೆಂಟ್, ಬನ್ನೇರುಘಟ್ಟ ರಸ್ತೆಯ ಮದರ್‌ಲ್ಯಾಂಡ್ ಇಂಗ್ಲಿಷ್ ಹೈಸ್ಕೂಲ್ ಮತ್ತು ರಿಚ್ಮಂಡ್ ಟೌನ್‌ನ ಎಸ್.ಎನ್. ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಪ್ರವೇಶ ಪತ್ರ ನೀಡುವಂತೆ ಪ್ರತಿವಾದಿ ಆಯುಕ್ತರು ಮತ್ತು ನಿರ್ದೇಶಕರಿಗೆ ಸೂಚಿಸಿದೆ.

ಕ್ಷಯ ನಿಯಂತ್ರಣ: 14 ಜಿಲ್ಲೆಗಳು ಉತ್ತಮ ಸಾಧನೆ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ ರಾಜ್ಯದ 14 ಜಿಲ್ಲೆಗಳು ಕ್ಷಯ ರೋಗ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿದ್ದು, ಕೇಂದ್ರ ಸರ್ಕಾರದ ಪುರಸ್ಕಾರಕ್ಕೆ ಆಯ್ಕೆಯಾಗಿವೆ.

ಬೆಳಗಾವಿ, ಉಡುಪಿ, ಉತ್ತರಕನ್ನಡ, ಬೆಂಗಳೂರು ನಗರ, ಯಾದಗಿರಿ ಜಿಲ್ಲೆಯಲ್ಲಿ ಕ್ಷಯ ರೋಗವು 2015ಕ್ಕೆ ಹೋಲಿಸಿದರೆ ಶೇ 40 ರಷ್ಟು ಇಳಿಕೆಯಾಗಿದೆ.ಬೆಂಗಳೂರುಗ್ರಾಮಾಂತರ,ವಿಜಯಪುರ, ಚಾಮರಾಜನಗರ, ದಾವಣಗೆರೆ, ಧಾರವಾಡ, ಕೋಲಾರ, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಶೇ 20 ರಷ್ಟು ಇಳಿಕೆಯಾಗಿದೆ.

ಶೇ 40 ರಷ್ಟು ಇಳಿಕೆಯಾದ ಜಿಲ್ಲೆಗಳಿಗೆ ಬೆಳ್ಳಿ ಪದಕ ಹಾಗೂ ಶೇ 20 ರಷ್ಟು ಇಳಿಕೆಯಾದ ಜಿಲ್ಲೆಗಳಿಗೆ ಕಂಚಿನ ಪದಕವನ್ನು ಕೇಂದ್ರ ಸರ್ಕಾರ ನೀಡಲಿದೆ.

ಸಂಕ್ಷಿಪ್ತ ಸುದ್ದಿ

ಸಾರಿಗೆ ನೌಕರರಿಂದ 28ಕ್ಕೆ ಉಪವಾಸ

ಬೆಂಗಳೂರು: 'ಸಾರಿಗೆ ನೌಕರರ ಬೇಡಿಕೆಗಳನ್ನು ಈಡೇರಿಸುವುದಾಗಿ ನೀಡಿದ್ದ ಭರವಸೆಯನ್ನು ಸರ್ಕಾರ ಮರೆತಿದೆ. ಇದನ್ನು ಖಂಡಿಸಿ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರ ಬಳ್ಳಾರಿ ನಿವಾಸದ ಬಳಿ ಮಾರ್ಚ್ 28ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು' ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2020ರಲ್ಲಿ ನಡೆದ ಸಾರಿಗೆ ಮುಷ್ಕರದ ಸಮಯದಲ್ಲಿ ಸರ್ಕಾರ ನೀಡಿದ್ದ ಒಂಬತ್ತು ಲಿಖಿತ ಭರವಸೆಗಳನ್ನು ಈಡೇರಿಸಲಿಲ್ಲ. ಮುಖ್ಯವಾಗಿ ಸಾರಿಗೆ ನೌಕರರಿಗೂ ಸರ್ಕಾರಿ ನೌಕರರಂತೆ ಆರನೇ ವೇತನ ಆಯೋಗದ ವೇತನ ನಿಗದಿ ಮಾಡಲು ಮೂರು ತಿಂಗಳ ಕಾಲಾವಕಾಶ ಕೇಳಿತ್ತು. ಗಡುವು ಮೀರಿದರೂ ಬೇಡಿಕೆ ಈಡೇರಿಲ್ಲ' ಎಂದು ದೂರಿದರು.

'ಮುಷ್ಕರವನ್ನೇ ನೆಪವಾಗಿಸಿಕೊಂಡು ನಿಗಮಗಳಲ್ಲಿನ ಸಾವಿರಾರು ನೌಕರರನ್ನು ವಜಾ ಮಾಡಿ, ಅನೇಕರನ್ನು ವರ್ಗಾವಣೆ ಮಾಡಲಾಯಿತು. ಕೆಲವರನ್ನು ಅಮಾನತು ಮಾಡಿ, ಸುಳ್ಳು ಪ್ರಕರಣಗಳನ್ನು ದಾಖಲಿಸಿ ತೊಂದರೆ ನೀಡಲಾಗಿದೆ. ಇವುಗಳ ಬಗ್ಗೆ ಸಾರಿಗೆ ಸಚಿವರ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಮಾಧ್ಯಮಗಳ ಮುಂದೆ ಎಲ್ಲ ಸಮಸ್ಯೆ ಬಗೆಹರಿಸಿರುವುದಾಗಿ ಹೇಳಿಕೆ ನೀಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಅಮಾನತುಗೊಂಡಿರುವ ನೌಕರರನ್ನು ಮತ್ತೆ ಸೇವೆಗೆ ಕರೆಸಿಕೊಳ್ಳಬೇಕು. ಸಾರಿಗೆ ನೌಕರರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ರದ್ದು ಮಾಡಬೇಕು. ಆರನೇ ವೇತನ ಆಯೋಗಕ್ಕೆ ಪರಿಗಣಿಸಿ, ಸಂಬಳವನ್ನು ಸರಿಯಾದ ಸಮಯಕ್ಕೆ ನೀಡಬೇಕು' ಎಂದು ಆಗ್ರಹಿಸಿದರು.

'ಮಾರ್ಚ್ 27ರೊಳಗೆ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, 28ರಿಂದ ಸಚಿವರ ನಿವಾಸದ ಎದುರು ಸಾವಿರಾರು ನೌಕರರು ಉಪವಾಸ ಕೂರಲಿದ್ದೇವೆ' ಎಂದೂ ಎಚ್ಚರಿಸಿದರು.

ವಿಕ್ಟೋರಿಯಾ: ಸ್ಟೆಪ್ ಡೌನ್ ಐಸಿಯು ನಿರ್ಮಾಣ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಟ್ರಾಮಾ ಕೇರ್ ಕೇಂದ್ರದಲ್ಲಿ 144 ಸಾಮಾನ್ಯ ಹಾಸಿಗೆಗಳನ್ನು ಸ್ಟೆಪ್ ಡೌನ್ ಐಸಿಯು ಹಾಸಿಗೆಗಳನ್ನಾಗಿ ಮೇಲ್ದರ್ಜೆಗೆ ಏರಿಕೆ ಮಾಡಲಾಗಿದೆ. ಗಂಭೀರವಾಗಿ ಅಸ್ವಸ್ಥಗೊಂಡವರ ಆರೈಕೆಗೆ ಈ ಹಾಸಿಗೆಗಳು ಸಹಕಾರಿಯಾಗಲಿವೆ.

ಡೋಜಿ ನವೋದ್ಯಮದ ಸಹಯೋಗದಲ್ಲಿ ಆಸ್ಪತ್ರೆಯಲ್ಲಿ ಸ್ಟೆಪ್ ಡೌನ್ ಐಸಿಯು ಹಾಸಿಗೆಗಳನ್ನು ಅಳವಡಿಕೆ ಮಾಡಲಾಗಿದೆ. ಆಸ್ಪತ್ರೆಯಲ್ಲಿ 24x7 ಕೇಂದ್ರೀಕೃತ ಮೇಲ್ವಿಚಾರಣಾ ಘಟಕವನ್ನೂ ಸ್ಥಾಪಿಸಲಾಗಿದ್ದು, ಇದು ರೋಗಿಗಳ ಚಲನವಲನದ ಮೇಲೆ ನಿಗಾ ಇಡಲಿದೆ.

ಟ್ರಾಮಾ ಕೇರ್ ಕೇಂದ್ರದ ತುರ್ತು ಚಿಕಿತ್ಸೆ ಕೇಂದ್ರದ ವಿಶೇಷ ಅಧಿಕಾರಿ ಡಾ. ದೀಪಕ್ ಎಸ್., 'ಕೋವಿಡ್ ಕಾಣಿಸಿಕೊಂಡ ಬಳಿಕ ಆಸ್ಪತ್ರೆಯಲ್ಲಿ ತಂತ್ರಜ್ಞಾನ ಆಧಾರಿತ ನಿರಂತರ ನಿಗಾ ವ್ಯವಸ್ಥೆ ಅಳವಡಿಸಲಾಗಿತ್ತು. ಇದರಿಂದ ಕೊರೊನಾ ಸೋಂಕಿತರಿಗೆ ಸುಲಭವಾಗಿ ಚಿಕಿತ್ಸೆ ಒದಗಿಸಲು ಸಾಧ್ಯವಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ದಾಖಲಾದರೂ ಇರುವ ವೈದ್ಯಕೀಯ ಸಿಬ್ಬಂದಿಯ ನೆರವಿನಿಂದ ನಿರ್ವಹಣೆ ಮಾಡಲಾಯಿತು. ಕೋವಿಡೇತರ ರೋಗಿಗಳ ಚಿಕಿತ್ಸೆಗೂ ಈ ವ್ಯವಸ್ಥೆ ಅಳವಡಿಕೆ ಮಾಡಿಕೊಳ್ಳಲಾಗಿದೆ. ರೋಗಿಯ ಹೃದಯ ಬಡಿತ ಸೇರಿದಂತೆ ವಿವಿಧ ಮಾಹಿತಿ ನಿಯಮಿತವಾಗಿ ದಾಖಲಾಗಲಿದೆ' ಎಂದು ತಿಳಿಸಿದರು.

ಕೇಂದ್ರದ ನೋಡಲ್ ಅಧಿಕಾರಿ ರಮೇಶ್ ರೇವಣ್ಣ, 'ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಅವಧಿಯಲ್ಲಿ 12 ಸಾವಿರ ಸೋಂಕಿತರಿಗೆ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ. ಈಗ ಕೋವಿಡೇತರ ರೋಗಿಗಳ ಸಂಖ್ಯೆ ಆಸ್ಪತ್ರೆಯಲ್ಲಿ ಹೆಚ್ಚಳವಾಗಿದೆ. ಡೋಜಿ ಸಂಪರ್ಕ ರಹಿತ ನಿರ್ವಹಣಾ ವ್ಯವಸ್ಥೆಯಿಂದ ರೋಗಿಯ ದೈನಂದಿನ ಮಾಹಿತಿ ಡಿಜಿಟಲ್ ರೂಪದಲ್ಲಿ ದಾಖಲಾಗಲಿದೆ. ಗಂಭೀರವಾಗಿ ಅಸ್ವಸ್ಥಗೊಂಡವರಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲು ಸ್ಟೆಪ್ ಡೌನ್ ಐಸಿಯು ಸಹಕಾರಿ' ಎಂದು ಹೇಳಿದರು.

ಕೋವಿಡ್ ಗುಣಮುಖರಲ್ಲಿ ಕ್ಷಯ ಪತ್ತೆ

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಕೆಲವರು ಕ್ಷಯ ರೋಗಕ್ಕೆ ಒಳಪಡುತ್ತಿದ್ದಾರೆ. ಈವರೆಗೆ ಪರೀಕ್ಷೆಗೊಳಪಟ್ಟ 25 ಲಕ್ಷ ಜನರಲ್ಲಿ 144 ಮಂದಿಯಲ್ಲಿ ಕ್ಷಯ ರೋಗ ದೃಢಪಟ್ಟಿದೆ.

ವಿಶ್ವ ಕ್ಷಯರೋಗ ದಿನದ ಪ್ರಯುಕ್ತ ಆರೋಗ್ಯ ಇಲಾಖೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಡಾ.ಕೆ. ಸುಧಾಕರ್, 'ಕೋವಿಡ್‌ನಿಂದ ಗುಣಮುಖರಾದವರಿಗೆ ಸರ್ಕಾರದಿಂದಲೇ ಕ್ಷಯ ರೋಗ ಪತ್ತೆ ಪರೀಕ್ಷೆ ಮಾಡಲಾಗಿದೆ. ಕೆಲವರಲ್ಲಿ ರೋಗ ದೃಢಪಟ್ಟಿದೆ. ಈ ಕುರಿತು ವಿಸ್ತೃತವಾದ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೊರೊನಾ ಸೋಂಕಿನಂತೆಯೇ ಕ್ಷಯವೂ ಸಾಂಕ್ರಾಮಿಕ ರೋಗವಾಗಿದೆ' ಎಂದು ತಿಳಿಸಿದರು.

'ಗ್ರಾಮೀಣ ಭಾಗಗಳಲ್ಲಿ ಜನರು ಕಾಯಿಲೆ ಇದ್ದರೂ ಆಸ್ಪತ್ರೆಗಳಿಗೆ ಹೋಗಿ, ಪರೀಕ್ಷೆ ಮಾಡಿಸಿಕೊಳ್ಳುವುದಿಲ್ಲ. ಒಬ್ಬ ಕ್ಷಯ ರೋಗಿಯಿಂದ ಕನಿಷ್ಠ 10 ಜನರಿಗೆ ರೋಗ ಹರಡಬಹುದು. ಒಬ್ಬರ ತಪ್ಪಿನಿಂದ ಎಲ್ಲರಿಗೂ ಸಮಸ್ಯೆ ಉಂಟಾಗುತ್ತದೆ. ಆದ್ದರಿಂದ ಈ ಕುರಿತು ಹೆಚ್ಚು ಜಾಗೃತಿ ಮೂಡಿಸಬೇಕು. ರಾಜ್ಯ ಸರ್ಕಾರ ರೋಗಗಳ ಬಗ್ಗೆ ಅರಿವು ಮೂಡಿಸಲು ವರ್ಷಕ್ಕೆ ₹ 5 ಕೋಟಿಗೂ ಅಧಿಕ ಹಣ ಖರ್ಚು ಮಾಡುತ್ತಿದೆ' ಎಂದು ಹೇಳಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ ನಿರ್ದೇಶಕ ಡಾ.ಸಿ. ನಾಗರಾಜ್, ಸಂಜಯ್ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ನಿರ್ದೇಶಕ ಡಾ.ಎಚ್.ಎಸ್. ಚಂದ್ರಶೇಖರ್, ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ಡಾ. ರಮೇಶ್ ರೆಡ್ಡಿ ಇದ್ದರು.

ಗೃಹ ಕಾರ್ಮಿಕರ ರಾಷ್ಟ್ರೀಯ ವೇದಿಕೆ ಹಾಗೂ ಕರ್ನಾಟಕ ಗೃಹ ಕಾರ್ಮಿಕರ ಸಂಘದ ಸದಸ್ಯರು ಗೃಹ ಕಾರ್ಮಿಕರ ಹಕ್ಕುಗಳ ದಿನದ ಅಂಗವಾಗಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬಾಡಿಗೆ ಮನೆಯಲ್ಲಿ ವೇಶ್ಯಾವಾಟಿಕೆ: ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಡಿಗೆ ಮನೆಯಲ್ಲಿ ನಡೆಯುವ ವೇಶ್ಯಾವಾಟಿಕೆ ಆ ಮನೆಯ ಮಾಲೀಕನ ಅರಿವಿಗೆ ಬಂದಿಲ್ಲ ಎಂದಾದರೆ ಆತನ ವಿರುದ್ಧ ಮಾನವ ಕಳ್ಳಸಾಗಣೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲು ಅವಕಾಶವಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

'ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಚಂದ್ರಲೇಔಟ್ ಠಾಣೆ ಪೊಲೀಸರು ನನ್ನ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ನಾಗರಬಾವಿ ನಿವಾಸಿ ಪ್ರಭುರಾಜ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಅಂತೆಯೇ, ಅರ್ಜಿದಾರರ ವಿರುದ್ಧದ ಎಫ್‌ಐಆರ್ ರದ್ದುಪಡಿಸಿ ಆದೇಶಿಸಿದೆ.

'ಮಾನವ ಕಳ್ಳಸಾಗಣೆ ತಡೆ ಕಾಯ್ದೆಯ ಕಲಂ 3(2)(ಬಿ) ಪ್ರಕಾರ ಯಾವುದೇ ಜಾಗದಲ್ಲಿ ಏನು ನಡೆಯುತ್ತಿದೆ ಎಂಬುದು ಅದರ ಮಾಲೀಕನಿಗೆ ಅರಿವಿಗೆ ಇದ್ದಾಗ ಮಾತ್ರ ಆತನ ವಿರುದ್ಧ ಪ್ರಕರಣ ದಾಖಲಿಸಬಹುದಾಗಿದೆ' ಎಂದು ನ್ಯಾಯಪೀಠ ಹೇಳಿದೆ.

ಶುಕ್ರವಾರ, ಮಾರ್ಚ್ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 84 | ಪುಟ 16 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಯಶಸ್ಸಿನ ಬೆನ್ನುಹತ್ತಿ ಓಡುವಾಗ ಬದುಕಿನ ಖುಷಿ ಕಳೆದುಕೊಳ್ಳದಿರಿ ಅನ್ನುತ್ತಾರೆ ಪೃಥ್ವಿ ಅಂಬಾರ್



ಆಳ-ಅಗಲ
ತಲ್ಲಣಿಸದಿರು ಕಂಡ್ಯಾ ತಾಳು ಮನವೇ . . .

ತೈಲ ಕಂಪನಿಗಳಿಗೆ ವರಮಾನ ನಷ್ಟ 14

'ಸಜೀವ ದಹನಕ್ಕೂ ಮುನ್ನ ತೀವ್ರ ಥಳಿತ' 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,595 ▼	17,222 ▼	₹53,570 (ಬೆಂಗಳೂರು) ▲	₹70,300 (ಬೆಂಗಳೂರು) ▲	76.33 ▲

ಮೇಕೆದಾಟು: ಅನುಮತಿಗೆ ಆಗ್ರಹಿಸಿ ನಿರ್ಣಯ

ಬೆಂಗಳೂರು: ತಮಿಳುನಾಡಿಗೆ ಹಾನಿಯಾಗದ ಮೇಕೆದಾಟು ಯೋಜನೆಗೆ ಅಗತ್ಯವಿರುವ ಎಲ್ಲ ಅನುಮತಿಗಳನ್ನು ತಕ್ಷಣವೇ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ವಿಧಾನಸಭೆಯಲ್ಲಿ ಗುರುವಾರ ಒಮ್ಮತದ ನಿರ್ಣಯ ಅಂಗೀಕರಿಸಲಾಯಿತು. 8

ಪೆಟ್ರೋಲ್, ಡೀಸೆಲ್ ದರ ಮತ್ತೆ ಏರಿಕೆ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ದರ ಶುಕ್ರವಾರದಿಂದ ಅನ್ವಯ ವಾಗುವಂತೆ ಕ್ರಮವಾಗಿ ಲೀಟರ್‌ಗೆ 85 ಮತ್ತು 79 ಪೈಸೆ ಏರಿಕೆಯಾಗಿದೆ.

ಅದರಂತೆ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 103.11 ಮತ್ತು ಡೀಸೆಲ್ ದರ ಲೀಟರಿಗೆ ₹ 87.37 ಆಗಿದೆ. ಕಳೆದ ನಾಲ್ಕು ದಿನಗಳಲ್ಲಿ ಮೂರನೇ ಬಾರಿಗೆ ದರ ಏರಿಕೆಯಾಗಿದೆ. ಈ ಹಿಂದೆ ಮಂಗಳವಾರ, ಬುಧವಾರ ದರ ಏರಿಸಲಾಗಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಳಗಲಿ ಸಮರಸ ಭಾವ

ಶಾಂತಿ–ಸೌಹಾರ್ದದ ತವರಾದ ಕನ್ನಡ ನಾಡಿನಲ್ಲಿ ಮುಸ್ಲಿಂ ವರ್ತಕರಿಗೆ 'ಬಹಿಷ್ಕಾರ' ಹಾಕುವ ಹೊಸ ಚಾಳಿ ಶುರುವಾಗಿದೆ. ಒಂದು ಕಡೆ ಶುರುವಾದ ಈ ಚಟುವಟಿಕೆ ನಾನಾ ದಿಕ್ಕುಗಳಿಗೆ ಹರಡಿದೆ. ಈ ಹೊತ್ತಿನಲ್ಲಿ ಸಾಮರಸ್ಯ ಕಾಪಾಡಿ, ಸರ್ವಜನಾಂಗದ ಶಾಂತಿಯ ತೋಟವಾಗಿ ಕರ್ನಾಟಕವನ್ನು ಉಳಿಸಿಕೊಳ್ಳುವ ಆಲೋಚನೆಗಳನ್ನು ಬಿತ್ತಬೇಕಿದೆ. ವಿವಿಧ ಸಮುದಾಯಗಳ ಗುರುಗಳು ಆಡಿದ ತಿಳಿಮಾತು ಅರಿವನ್ನು ವಿಸ್ತರಿಸುವ, ಸಹಬಾಳ್ವೆಗೆ ಪ್ರೇರೇಪಿಸುವ ಜೊತೆಗೆ ಉರಿಯನ್ನು ಆರಿಸಲಿ...

'ಬಹುತ್ವ ಭಾರತ ಉಳಿಯಲಿ'



ಶ್ರೇಷ್ಠತೆಯ ವ್ಯಸನ ಏನೆಲ್ಲ ಅನರ್ಥ, ಅನಾಹುತಗಳಿಗೆ ಕಾರಣವಾಗುತ್ತದೆ. ಎಲ್ಲ ಧರ್ಮಗಳು ಸಾರುವುದು ಸತ್ಯ, ಅಹಿಂಸೆ, ಪ್ರೇಮ, ಸಹೋದರತ್ವ, ದಯೆ ಮುಂತಾದ ಮೌಲ್ಯಗಳನ್ನು. ಯಾವ ಧರ್ಮವೂ ತನ್ನಷ್ಟಕ್ಕೆ ತಾನು ಶ್ರೇಷ್ಠ ಅಥವಾ ಕನಿಷ್ಠ ಆಗುವುದಿಲ್ಲ. ಆಯಾ ಧರ್ಮದ ಅನುಯಾಯಿಗಳು ತಮ್ಮ ನಡವಳಿಕೆಯಿಂದ ಧರ್ಮಕ್ಕೆ ಗೌರವ ಇಲ್ಲವೇ ಅಗೌರವ ತರುವರು. ಭಾರತ ಬಹುತ್ವದಲ್ಲಿ ಏಕತೆ ಕಾಯ್ದುಕೊಂಡು ಬಂದಿದೆ. ಹಾಗಾಗಿ ಪರಸ್ಪರ ಸೌಹಾರ್ದದಿಂದ ಬಾಳಬೇಕು. ಎಲ್ಲ ಧರ್ಮಗಳು, ಸಂತರು, ಶರಣರು ಇದನ್ನೇ ಪ್ರತಿಪಾದಿಸಿದ್ದಾರೆ. ಅದನ್ನು ನಾವು ಕಾಯ್ದುಕೊಳ್ಳಬೇಕು.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ

'ವಿಶ್ವ ಮಾನವರಾಗೋಣ'

ಮಂದಿರ, ಮಸೀದಿ, ಚರ್ಚುಗಳ ಮುಂದೆ ವ್ಯಾಪಾರ ಮಾಡುವ ವಿವಿಧ ಧರ್ಮಗಳ ಜನರು ಈ ನಾಡಿನ ಬಹು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಾರೆ. ದ್ವೇಷ, ಮತ್ಸರ ಇಲ್ಲದೆ ಭಾವೈಕ್ಯತೆಯಿಂದ ಬಾಳುತ್ತಿದ್ದಾರೆ. ಆದರೆ, ಈಗ ಅವರನ್ನು ಬೇರ್ಪಡಿಸುವ ಪ್ರಯತ್ನ ಅತ್ಯಂತ ಆಘಾತಕಾರಿ. ಎಲ್ಲ ಧರ್ಮಗಳ ಪವಿತ್ರ ಸ್ಥಳಗಳೂ ಎಲ್ಲರನ್ನೂ ಒಗ್ಗೂಡಿಸುವ ಕೇಂದ್ರಗಳಾಗಬೇಕು. ಜನರಲ್ಲಿ ಪ್ರೀತಿ, ಒಗ್ಗಟ್ಟು ಹಾಗೂ ಸಮಾನತೆಯನ್ನು ಸಾರುವ ತಾಣಗಳಾಗಬೇಕು. ಇಂತಹ ಆಧ್ಯಾತ್ಮಿಕ ಸ್ಥಳಗಳ ಹೊಸ್ತಿಲಲ್ಲಿ ಇಂತಹ ಬೇಧ ತಾರತಮ್ಯದ ನಡೆಗಳು ಅಪಾಯಕಾರಿ. ಇಂತಹ ಘಟನೆಗಳು ಮರುಕಳಿಸದಂತೆ ಜವಾಬ್ದಾರಿ ವಹಿಸಬೇಕಿದೆ.

ಪೀಟರ್ ಮಚಾದೊ, ಬೆಂಗಳೂರಿನ ಆರ್ಚ್ ಬಿಷಪ್

'ದ್ವೇಷ ಬಿಟ್ಟು ಶಾಂತಿ ಸ್ಥಾಪಿಸೋಣ'

ಕರ್ನಾಟಕ ಸೌಹಾರ್ದತೆಯ ನಾಡು, ಅದಕ್ಕೆ ನೋವುಂಟಾಗುವ ಯಾವುದೇ ಕಾರ್ಯಗಳು ಆಗದಿರಲಿ. ಎಲ್ಲ ಧರ್ಮದಲ್ಲಿಯೂ ಸದ್ಗುಣಿಗಳು ಹಾಗೂ ದುರ್ಗುಣಿಗಳು ಇದ್ದೇ ಇರುತ್ತಾರೆ. ದುರ್ಗುಣ ಹೊಂದಿರುವ ವ್ಯಕ್ತಿ ತಪ್ಪು ಮಾಡಿದರೆ ಆ ವ್ಯಕ್ತಿಗೆ ಶಿಕ್ಷೆ ಕೊಡಬೇಕು. ಸಮುದಾಯಕ್ಕೆ ಶಿಕ್ಷೆ ಆಗಬಾರದು. ಶಾಂತಿ, ಸೌಹಾರ್ದತೆಯಿಂದ ಕೂಡಿ ಬದುಕುವ ಮೂಲಕ ಬಸವಾದಿ ಶರಣರು, ದಾಸರು, ಸಂತರು ಕಟ್ಟಿದ ಈ ನಾಡಿನಲ್ಲಿ ದ್ವೇಷವನ್ನು ಬಿಟ್ಟು ಪ್ರೀತಿ ಮತ್ತು ಶಾಂತಿಯನ್ನು ಸ್ಥಾಪಿಸೋಣ.

ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಪಂಚಮಸಾಲಿ ಪೀಠ.

'ಧಾರ್ಮಿಕ ಸಾಂಕ್ರಾಮಿಕ ಹೆಚ್ಚಬಾರದು'

ಧರ್ಮದ ಆಧಾರದಲ್ಲಿ ವ್ಯಾಪಾರಕ್ಕೆ ತಡೆ ಒಡ್ಡುವುದು ಅನ್ನದ ಮಾರ್ಗಗಳನ್ನು ಕಸಿಯುವ ಕೆಲಸ. ಮುಂದಿನ ದಿನಗಳಲ್ಲಿ ತಮ್ಮ ಜಾತಿಯವರ ಅಂಗಡಿಗಳಿಗಷ್ಟೇ ಹೋಗಬೇಕಾದ ಸ್ಥಿತಿ ಬರಬಹುದು. ಈ ರೀತಿಯ ಅಪಸವ್ಯಗಳು ನಡೆಯಬಾರದು. ಧಾರ್ಮಿಕ ಸಾಂಕ್ರಾಮಿಕಕ್ಕೆ ಔಷಧಿ ಇಲ್ಲ. ಈ ನಾಡಿನ ಧಾರ್ಮಿಕ, ಸೌಹಾರ್ದ ಮತ್ತು ಸಾಮರಸ್ಯದ ಪರಂಪರೆಗೆ ಧಕ್ಕೆ ತರುವ ಚಟುವಟಿಕೆಗಳನ್ನು ಹೊಸಕಿ ಹಾಕಬೇಕು. ಎಷ್ಟೋ ದೇವಸ್ಥಾನಗಳಿಗೆ ಮುಸಲ್ಮಾನರೂ ಕಾಣಿಕೆ ನೀಡುತ್ತಾರೆ. ಪಡೆಯಬಾರದು ಎನ್ನಲು ಸಾಧ್ಯವೇ? ವಿಷಕಾರುವುದನ್ನು ಬಿಟ್ಟು ವಿಶಾಲವಾಗಿ ಯೋಚಿಸಬೇಕಿದೆ.

ಷಡಕ್ಷರಿ ಮುನಿ ದೇಶೀಕೇಂದ್ರ ಸ್ವಾಮೀಜಿ, ಆದಿಜಾಂಬವ ಮಠ

'ಸಾಮರಸ್ಯವೇ ಕರ್ನಾಟಕದ ಸೌಂದರ್ಯ'

ಕರ್ನಾಟಕ ಸೌಹಾರ್ದದ ನಾಡು. ಬಸವಣ್ಣ, ಕುವೆಂಪು, ಟಿಪ್ಪು ಸುಲ್ತಾನ್ ಸೌಹಾರ್ದದ ಪಾಠ ಹೇಳಿ ಕೊಟ್ಟಿದ್ದಾರೆ. ಸಾಮರಸ್ಯವೇ ನಾಡಿನ ಸೌಂದರ್ಯ. ಧಾರ್ಮಿಕ ಸಹಿಷ್ಣುತೆಗೆ ಭಂಗ ತರುವ ಕೆಲಸವನ್ನು ಯಾರೂ ಮಾಡಬಾರದು. ಹಿಜಾಬ್ ವಿಷಯ ಹಿಂದೂ–ಮುಸ್ಲಿಮರ ನಡುವಿನ ಸಮಸ್ಯೆ ಅಲ್ಲ. ಅದು ಇಸ್ಲಾಮಿಕ್ ಷರಿಯತ್ ಮತ್ತು ಕಾನೂನಿನ ನಡುವಣ ಸಾಂವಿಧಾನಿಕ ವಿಚಾರ. ಕರ್ನಾಟಕದ ಆರೂವರೆ ಕೋಟಿ ಜನರಲ್ಲಿ ಬಹುಸಂಖ್ಯಾತರು ಶಾಂತಿಪ್ರಿಯರು. ಸೌಹಾರ್ದತೆಗೆ ಧಕ್ಕೆ ತರುವ ಜನ ಎಲ್ಲಾ ಸಮುದಾಯಗಳಲ್ಲೂ ಇರುತ್ತಾರೆ. ಅಂಥವರು ಯಾವುದೇ ಧರ್ಮದವರಾಗಿದ್ದರೂ ಲೆಕ್ಕಕ್ಕೆ ತೆಗೆದುಕೊಳ್ಳಬಾರದು.

ಮೌಲಾನಾ ಎನ್.ಕೆ. ಷಾಫಿ ಸಾ– ಆದಿ, ಕರ್ನಾಟಕ ವಕ್ಫ್ ಮಂಡಳಿ ಅಧ್ಯಕ್ಷ

ಹಿಜಾಬ್: ತುರ್ತು ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಹಿಜಾಬ್‌ಗೆ ಸಂಬಂಧಿಸಿದ ಕರ್ನಾಟಕ ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿದ್ದ ಮೇಲ್ಮನವಿಯ ವಿಚಾರಣೆಗೆ ನಿಖರ ದಿನಾಂಕವನ್ನು ತಿಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ತುರ್ತು ವಿಚಾರಣೆ ನಡೆಸಬೇಕು ಎಂಬ ಅರ್ಜಿದಾರರ ಪರ ವಕೀಲ ದೇವದತ್ತ ಕಾಮತ್ ಅವರ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ಗುರುವಾರ ತಳ್ಳಿಹಾಕಿತು.

ಮಾ. 28ರಿಂದ ಪರೀಕ್ಷೆ ಆರಂಭವಾಗಲಿದೆ. ಹಿಜಾಬ್ ಧರಿಸಿದ್ದಕ್ಕೆ ಪರೀಕ್ಷೆಗೆ ಅವಕಾಶ ನಿರಾಕರಿಸಿದರೆ ವಿದ್ಯಾರ್ಥಿನಿಯರಿಗೆ ಒಂದು ಶೈಕ್ಷಣಿಕ ವರ್ಷ ನಷ್ಟವಾಗಲಿದೆ ಎಂದು ವಕೀಲರು ಆತಂಕ ವ್ಯಕ್ತಪಡಿಸಿದ್ದರು.

ಹರ್ಷ ಕೊಲೆ: ಎನ್‌ಐಎ ತನಿಖೆ

ನವದೆಹಲಿ: ಫೆಬ್ರುವರಿ 20ರಂದು ಶಿವಮೊಗ್ಗದಲ್ಲಿ ನಡೆದಿದ್ದ ಬಜರಂಗದಳ ಕಾರ್ಯಕರ್ತ ಹರ್ಷ ಅವರ ಕೊಲೆ ಪ್ರಕರಣದ ತನಿಖೆಯನ್ನು ಕರ್ನಾಟಕ ಸರ್ಕಾರವು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ಹಸ್ತಾಂತರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ನವದೆಹಲಿಯ ನ್ಯಾಯಾಲಯದಲ್ಲಿ ಔಪಚಾರಿಕ ದೂರು ಸಲ್ಲಿಸಲಾಗಿದ್ದು, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

ಹರ್ಷ ಕೊಲೆಗೆ ಸಂಬಂಧಿಸಿದಂತೆ ಅವರ ತಾಯಿ ನೀಡಿದ್ದ ದೂರಿನ ಮೇರೆಗೆ ತನಿಖೆ ಆರಂಭಿಸಿದ್ದ ರಾಜ್ಯ ಪೊಲೀಸರು, ಶಿವಮೊಗ್ಗದಲ್ಲಿ 10 ಜನರನ್ನು ಬಂಧಿಸಿದ್ದಾರೆ. ಎಲ್ಲ ಆರೋಪಿಗಳನ್ನು ಶೀಘ್ರವೇ ಎನ್‌ಐಎ ತನ್ನ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ.

ಸಾವಯವ ಗೊಬ್ಬರ ತಯಾರಿಕಾ ಘಟಕದಿಂದ ವಾಯು ಮಾಲಿನ್ಯ

ಕೆಸಿಡಿಸಿ ಘಟಕ: ತಪ್ಪದ ದುರ್ವಾಸನೆ

ಹೊರ ವಲಯ ಒಳ ಬೇಗುದಿ

• ಲಿಂಗರಾಜು

ಬೊಮ್ಮನಹಳ್ಳಿ: ದುರ್ವಾಸನೆಯಲ್ಲಿ ಮುಳುಗಿರುವ ಕೂಡ್ಲು, ಪರಂಗಿಪಾಳ್ಯ, ಹರಳೂರು ಸೋಮಸಂದ್ರಪಾಳ್ಯ ಹಾಗೂ ಹೊಸಪಾಳ್ಯ ನಿವಾಸಿಗಳು, ಸಾವಯವ ಗೊಬ್ಬರ ತಯಾರಿಕಾ ಘಟಕ ಮುಚ್ಚಬೇಕು ಎಂಬ ದಶಕಗಳ ಕೂಗು ಆಳುವವರ ಕಿವಿಗೇ ಮುಟ್ಟಿಲ್ಲ.

ಕೂಡ್ಲು ಗ್ರಾಮದ ಹರಳೂರು ರಸ್ತೆಯಲ್ಲಿನ ಕರ್ನಾಟಕ ಸಾವಯವ ಗೊಬ್ಬರ ಅಭಿವೃದ್ಧಿ ನಿಗಮದ (ಕೆಸಿಡಿಸಿ) ಈ ಘಟಕದಿಂದ ಸೂಸುವ ದುರ್ವಾಸನೆ ಸುತ್ತಮುತ್ತಲ ಮೂರು ಕಿಲೋ ಮೀಟರ್ ಆವರಿಸಿಕೊಂಡಿದೆ.

ಮಕ್ಕಳು ಮತ್ತು ಹಿರಿಯ ನಾಗರಿಕರು ಉಸಿರಾಟದ ತೊಂದರೆ ಸೇರಿ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಚರ್ಮ ರೋಗಗಳು ಹೆಚ್ಚುತ್ತಿವೆ. ಸೊಳ್ಳೆ ಮತ್ತು ನೊಣಗಳ ಕಾಟದಿಂದ ಸಾಂಕ್ರಾಮಿಕ ರೋಗಗಳು ಹರಡುತ್ತಿವೆ. ಕಣ್ಣು ಉರಿ, ವಾಂತಿ ಬರುವುದು ಇಲ್ಲಿನ ನಿವಾಸಿಗಳಿಗೆ ಸಾಮಾನ್ಯವಾಗಿದೆ. ಕ್ಯಾನ್ಸರ್‌ಗೆ ತುತ್ತಾಗುವ ಆತಂಕವೂ ಜನರನ್ನು ಕಾಡುತ್ತಿದೆ.

‘ಅಂತರ್ಜಲ ಮತ್ತು ಗಾಳಿಯ ಗುಣಮಟ್ಟ ಕುಸಿದಿದೆ. ಈ ಭಾಗದ ಕೊಳವೆ ಬಾವಿಗಳಲ್ಲಿ ಗಡಸು ನೀರು ಬರುತ್ತಿದೆ. ಕೆಲವೆಡೆ ಹಳದಿ ಬಣ್ಣದ ನೀರು ಬರುತ್ತಿದ್ದು, ಕುಡಿಯಲು ಮಾತ್ರವಲ್ಲ ಬಟ್ಟೆ ತೊಳೆಯಲು ಯೋಗ್ಯವಾಗಿಲ್ಲ. ಈ ಭಾಗದ ಜೀವಜಲ ಕಲುಷಿತಗೊಂಡಿದೆ’ ಎಂದು ಸ್ಥಳೀಯರು ಹೇಳುತ್ತಾರೆ.

‘75 ಟನ್ ಕ್ಷಮತೆಯ ಈ ಘಟಕದಲ್ಲಿ ನಿಯಮ ಮೀರಿ 200 ಟನ್‌ಗೂ ಹೆಚ್ಚಿನ ಗೊಬ್ಬರ ಸಂಸ್ಕರಣೆ ಮಾಡಲಾಗುತ್ತಿದೆ. ಇತ್ತೀಚೆಗೆ ಬಯೋ ಫಿಲ್ಟರ್ ಯಂತ್ರಗಳನ್ನು ಅಳವಡಿಸಲಾಗಿದೆ. ಆದರೆ, ಈ ಯಂತ್ರಗಳು ಚಾಲನೆಯಲ್ಲಿ ಇಲ್ಲ. ಇಲ್ಲಿನ ಉಪ ಉತ್ಪನ್ನಗಳನ್ನು ಖರೀದಿಸುತ್ತಿದ್ದ ಕಂಪನಿಗಳು ಕೋವಿಡ್ ಬಳಿಕ ಖರೀದಿ ನಿಲ್ಲಿಸಿವೆ. ಹೀಗಾಗಿ, ಕೊಳೆತ ವಾಸನೆ ಹೆಚ್ಚಾಗಿದೆ. ಈ ಎಲ್ಲ ದುಷ್ಪರಿಣಾಮಗಳ ವಿರುದ್ಧ ದಶಕಗಳಿಂದಲೂ ‘ಸ್ವಚ್ಛ ಗಾಳಿ ನಮ್ಮ ಹಕ್ಕು’ ಎಂಬ ಘೋಷಣೆಯಡಿ ಸ್ಥಳೀಯರು ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಆದರೂ, ಸಮಸ್ಯೆ ಬಗೆಹರಿದಿಲ್ಲ’ ಎಂದು ಅವರು ದೂರುತ್ತಾರೆ.

‘ಶಾಸಕ ಎಂ. ಸತೀಶ್ ರೆಡ್ಡಿ, ಸಂಸದರಾದ ತೇಜಸ್ವಿ ಸೂರ್ಯ, ರಾಜೀವ್ ಚಂದ್ರಶೇಖರ್ ಅವರು ಸ್ಥಳಕ್ಕೆ ಭೇಟಿ ನೀಡಿ ಘಟಕ ಸ್ಥಳಾಂತರಿಸುವ ಭರವಸೆ ನೀಡಿದ್ದರು. ಆದರೆ, ಎಂಟು ವರ್ಷಗಳಿಂದಲೂ ನಮ್ಮ ಕೂಗಿಗೆ ಬೆಲೆ ಸಿಕ್ಕಿಲ್ಲ. ಮನೆಗೆ ನೆಂಟರಿಷ್ಟರನ್ನು ಕರೆಯುವುದನ್ನೇ ಬಿಟ್ಟಿದ್ದೇವೆ. ನಮ್ಮ ಸಿಟ್ಟು ರಟ್ಟೆಗೆ ಬರುವ ಮುನ್ನ ಕ್ರಮಕೈಗೊಳ್ಳಲಿ. ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ ಅನಿವಾರ್ಯ’ ಎಂದು ನಿವಾಸಿಗಳ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ರಮಾಕಾಂತ್ ನರಗುಂದ್ ಹೇಳುತ್ತಾರೆ.

‘ಸುತ್ತಮುತ್ತ ಸುಮಾರು 15ಕ್ಕೂ ಹೆಚ್ಚು ಶಾಲೆಗಳಿವೆ. ಮಕ್ಕಳು ಇದರಿಂದ ತೀವ್ರ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಸ್ವಚ್ಛ ಗಾಳಿಗಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿ ಎದುರಾಗಿರುವುದು ದುರದೃಷ್ಟಕರ’ ಎನ್ನುತ್ತಾರೆ ಸ್ಥಳೀಯರಾದ ವಿಜಯಕುಮಾರ್.

‘ನಾವು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಲೆಮನ್ ಗ್ರಾಸ್ ಸಿಂಪಡಿಸಿ ಸಮಸ್ಯೆಯನ್ನು ಮುಚ್ಚಿ ಹಾಕುತ್ತಾರೆ. ಶಾಶ್ವತ ಪರಿಹಾರದ ಕುರಿತು ಯಾರೊಬ್ಬರೂ ಯೋಚಿಸುತ್ತಿಲ್ಲ. ಇದರಿಂದ ರೋಸಿ ಹೋಗಿದ್ದೇವೆ’ ಎನ್ನುತ್ತಾರೆ ಸೋಮಸಂದ್ರಪಾಳ್ಯ ನಿವಾಸಿ ಕಾಮೇಶ್.

‘ನ್ಯಾಯಾಲಯದ ಸೂಚನೆಯಂತೆ ಕೆಸಿಡಿಸಿ ಘಟಕವನ್ನು ಪರಿಶೀಲಿಸಿ ಘಟಕವನ್ನು ಮುಚ್ಚುವಂತೆ ಆದೇಶ ನೀಡಲಾಗಿತ್ತು. ಆಡಳಿತ ಮಂಡಳಿಯು ಮಾಲಿನ್ಯ ತಡೆಗಟ್ಟುತ್ತೇವೆಂಬ ಭರವಸೆ ನೀಡಿದ್ದರಿಂದ ಮೂರು ವಾರಗಳಲ್ಲಿ ಮಾಲಿನ್ಯ ನಿಯಂತ್ರಣದ ಕಾರ್ಯಯೋಜನೆ ಸಲ್ಲಿಸುವಂತೆ ಗಡುವು ನೀಡಲಾಗಿತ್ತು. ಆದರೆ, ಕಾರ್ಯಯೋಜನೆ ಕೈಸೇರಿಲ್ಲ’ ಎಂದು ಪರಿಸರ ಅಧಿಕಾರಿ ಸುಧಾಕರ್ ಹೇಳಿದರು.

ಕೆಸಿಡಿಸಿ ಘಟಕದಲ್ಲಿ ಶೇಖರಣೆಯಾಗಿರುವ ಕಸದ ರಾಶಿ

‘ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶಕ್ಕೆ ಕಿಮ್ಮತ್ತಿಲ್ಲ’

ಕೆಸಿಡಿಸಿ ಘಟಕದಿಂದ ಜನಜೀವನದ ಮೇಲೆ ಉಂಟಾಗುತ್ತಿರುವ ಪರಿಣಾಮಗಳ ಕುರಿತು ಕೆಎಚ್‌ಎಚ್‌ಎಸ್‌ಪಿ(ಕೂಡ್ಲು, ಹರಳೂರು, ಹೊಸಪಾಳ್ಯ, ಸೋಮಸಂದ್ರಪಾಳ್ಯ, ಪರಂಗಿಪಾಳ್ಯ) ನಿವಾಸಿ ಕ್ಷೇಮಾಭಿವೃದ್ಧಿ ಸಂಘ ನ್ಯಾಯಾಲಯದ ಮೆಟ್ಟಿಲೇರಿತ್ತು. ಕ್ರಮ ಕೈಗೊಳ್ಳುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ನ್ಯಾಯಾಲಯ ಸೂಚನೆ ನೀಡಿತ್ತು. ಆದರೂ ಸಮಸ್ಯೆ ಪರಿಹಾರವಾಗಿಲ್ಲ.

ಕೆಸಿಡಿಸಿ ಘಟಕವನ್ನು ಮುಚ್ಚುವಂತೆ ಜ. 27 ರಂದು ನೋಟೀಸ್ ಜಾರಿ ಮಾಡಿತ್ತು. ಆದರೆ, ಈವರೆಗೂ ಆದೇಶ ಜಾರಿಯಾಗಿಲ್ಲ. ಸುರಕ್ಷಾ ನಿಯಮಗಳನ್ನು ಪಾಲಿಸಿಲ್ಲ ಎಂಬ ಕಾರಣಕ್ಕಾಗಿ ಕೆಸಿಡಿಸಿ ಘಟಕಕ್ಕೆ ಪರವಾನಗಿಯ ನವೀಕರಣ ನಿರಾಕರಿಸಲಾಗಿದೆ. ಈ ಸಂಬಂಧ ಬೆಸ್ಕಾಂಗೆ ಪತ್ರ ಬರೆದು ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಸೂಚಿಸಲಾಗಿತ್ತು. ಪರವಾನಗಿ ಇಲ್ಲದೆಯೂ ಘಟಕ ಚಾಲನೆಯಲ್ಲಿದೆ ಎಂದು ಸ್ಥಳೀಯರು ದೂರುತ್ತಾರೆ.

‘ಬಯೋ ಫಿಲ್ಟರ್ ಅಳವಡಿಕೆಗೆ ಕ್ರಮ’

‘ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನದಂತೆ ನೂತನ ತಂತ್ರಜ್ಞಾನದ ಬಯೋ ಫಿಲ್ಟರ್ ಅಳವಡಿಸಿದ್ದೇವೆ. ಜೈವಿಕ ವೈದ್ಯಕೀಯ ಸಸ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಕೆಸಿಡಿಸಿ ವ್ಯವಸ್ಥಾಪಕ ನಿರ್ದೇಶಕ ಹಾಗೂ ಬಿಬಿಎಂಪಿ ಜಂಟಿ ಆಯುಕ್ತ ಎಂ.ರಾಮಕೃಷ್ಣ ಹೇಳಿದರು.

‘ಕಾಂಪೌಂಡ್ ಸುತ್ತಲೂ ಗಿಡಗಳನ್ನು ಹಾಕಲಾಗಿದೆ. ಪರಿಸರ ಎಂಜಿನಿಯರ್‌ಗಳ ನೇಮಕ ಪ್ರಕ್ರಿಯೆಯೂ ನಡೆದಿದೆ. ಅಕಸ್ಮಾತ್ ವಾಸನೆ ಬಂದ ಸಂದರ್ಭದಲ್ಲಿ ಲೆಮನ್ ಗ್ರಾಸ್ ಸಿಂಪಡಣೆ ಮಾಡುತ್ತಿದ್ದೇವೆ’ ಎಂದು ಅವರು ಸ್ಪಷ್ಟಪಡಿಸಿದರು.

ಬೊಮ್ಮನಹಳ್ಳಿ ಕ್ಷೇತ್ರ: ನಾಳೆ ಜನಸ್ಪಂದನ

ಜನಸ್ಪಂದನ ಸಿಟಿಜ಼ನ್ಸ್ ಫಾರ್ ಚೇಂಜ್

ಬೆಂಗಳೂರು: ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಇದೇ 26ರಂದು ಜೆ.ಪಿ.ನಗರ ಆರನೇ ಹಂತದ ಗಣೇಶ ದೇವಸ್ಥಾನ ಮೈದಾನದಲ್ಲಿ ‘ಜನಸ್ಪಂದನ’ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಸಕ ಎಂ.ಸತೀಶ ರೆಡ್ಡಿ, ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಸ್ಥಳ: ಗಣೇಶ ಮೈದಾನ, 186, ಪುಟ್ಟೇನಹಳ್ಳಿ ರಸ್ತೆ, ಕೆ.ಆರ್.ಬಡಾವಣೆ, ಜೆ.ಪಿ.ನಗರ ಆರನೇ ಹಂತ, ಬೆಂಗಳೂರು–78

ಸಂಪರ್ಕ: 9448528998

ಮುಸ್ಲಿಂ ಸಮಾಜದ ವ್ಯಾಪಾರಿಗಳಿಗೆ ನಿರ್ಬಂಧ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ವ್ಯಾಪಾರಿಗಳಿಗೆ ಜಾತ್ರೆ ಸೇರಿದಂತೆ ವಿವಿಧೆಡೆ ನಿರ್ಬಂಧ ವಿಧಿಸುತ್ತಿರುವುದಕ್ಕೆ ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಸಿ.ಈ. ರಂಗಸ್ವಾಮಿ, ‘ರಾಷ್ಟ್ರೀಯ ನಗರ ಮತ್ತು ಜೀವನೋಪಾಯ ಸಂರಕ್ಷಣೆ ಬೀದಿ ಬದಿ ವ್ಯಾಪಾರಿಗಳ ನಿಯಂತ್ರಣ ಕಾಯ್ದೆ–2014 ಹಾಗೂ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ನಿಯಂತ್ರಣ 2019–20ರ ಅನ್ವಯ ಸಂತೆ, ಹಬ್ಬಗಳಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಅನುಮತಿ ಇರುತ್ತದೆ. ಜಾತ್ರೆ ಸೇರಿದಂತೆ ಕೆಲವೊಂದು ಸ್ಥಳದಲ್ಲಿ ಬೀದಿ ಬದಿ ವ್ಯಾಪಾರಕ್ಕೆ ನಿರ್ಬಂಧ ವಿಧಿಸುತ್ತಿರುವುದರಿಂದ ಬಡ ಮುಸ್ಲಿಂ ಕುಟುಂಬಗಳು ಬೀದಿಗೆ ಬರುವ ಸ್ಥಿತಿಗೆ ತಲುಪಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬೀದಿ ಬದಿ ವ್ಯಾಪಾರ ನಡೆಸಲು ನಿರ್ಬಂಧ ವಿಧಿಸುತ್ತಿರುವವರ ಮೇಲೆ ಸರ್ಕಾರ ಕ್ರಮಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ತೃತೀಯ ಲಿಂಗಿಗಳಿಗೆ ಹಾಸ್ಟೆಲ್: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ (ಯುಜಿಸಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ರಾಜ್ಯದ ಪ್ರಥಮ ತೃತೀಯ ಲಿಂಗಿ ಡಾ. ತ್ರಿನೇತ್ರಾ ಹಲ್ದಾರ್ ಗುಮ್ಮರಾಜು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಾಗೂ ಯುಜಿಸಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ತುರ್ತು ನೋಟಿಸ್ ಜಾರಿಗೆ ಆದೇಶಿಸಿತು. ಈ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿತು.

ಆಕ್ಷೇಪವೇನು?: ‘ರಾಜ್ಯದಲ್ಲಿ ಈತನಕ ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಗಾಗಿ ಯಾವುದೇ ನಿರ್ದಿಷ್ಟ ನಿಯಮ ರೂಪಿಸಲಾಗಿಲ್ಲ. 2020ರ ಅಧಿನಿಯಮದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಶಿಕ್ಷಣವನ್ನೂ ಸೇರಿಸಲಾಗಿದೆ. ಆದರೆ, ಉನ್ನತ ಶಿಕ್ಷಣದ ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಒದಗಿಸಲು ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘2020ರ ಸೆಪ್ಟೆಂಬರ್ 25ರಂದು ತೃತೀಯ ಲಿಂಗಿಗಳ (ಹಕ್ಕುಗಳ ಸಂರಕ್ಷಣೆ) ಅಧಿನಿಯಮ-2020 ಜಾರಿಗೆ ಬಂದಿದೆ. ಅದರ ನಿಯಮ 10ರ ಪ್ರಕಾರ ತೃತೀಯ ಲಿಂಗಿಗಳಿಗೆ ತಾತ್ಕಾಲಿಕ ಶೆಲ್ಟರ್‌ಗಳಷ್ಟೇ ಅಲ್ಲದೆ ಸ್ಟೇ ಹೋಂ ಹಾಗೂ ತಂಗುವಿಕೆಗೆ ಪ್ರತ್ಯೇಕ ವ್ಯವಸ್ಥೆ, ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡ್‌ಗಳು ಹಾಗೂ ಶೌಚಗೃಹಗಳು ಸೇರಿ ಸಾಂಸ್ಥಿಕ ಮೂಲಸೌಕರ್ಯಗಳನ್ನು ಸರ್ಕಾರ ಕಲ್ಪಿಸಿಕೊಡಬೇಕಿದೆ’ ಎಂಬ ಅಂಶವನ್ನು ಅರ್ಜಿಯಲ್ಲಿ ವಿವರಿಸಲಾಗಿದೆ.

ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ಪ್ರಧಾನ ಕಚೇರಿ: ಪಿ.ಬಿ. ನಂ. 17, ಟೌನ್ ಪೊಲೀಸ್ ಸ್ಟೇಷನ್ ಎದುರುಗಡೆ ಹೊಸಪೇಟೆ–583201
The Bellary Dist. Co-Op. Central Bank Ltd.,
Head Office: P.B. No.17, Opp: Town Police Station, HOSPET-583201
ದೂರವಾಣಿ ಸಂಖ್ಯೆ: 08394–228208/228209. website: www.ballaridccbank.com
ಸಂಖ್ಯೆ ಅಶಿವಿ/ಸಿಬ್ಬಂದಿ/ನೇಮಕಾತಿ/5050/2021–22 ದಿನಾಂಕ: 24–03–2022

ನೇಮಕಾತಿ ಪ್ರಕಟಣೆ

ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಹೊಸಪೇಟೆ ಇದರಲ್ಲಿ ಖಾಲಿ ಇರುವ ಈ ಕೆಳಕಂಡ 58 ವಿವಿಧ ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ: 25–03–2022 ರಿಂದ 16–04–2022 ರವರೆಗೆ ಆನ್‌ಲೈನ್ (Online) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಹುದ್ದೆಯ ವಿವರ	ವೇತನ ಶ್ರೇಣಿ	ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಗಳ ಸಂಖ್ಯೆ	ಅರ್ಜಿ ನಮೂನೆ / ಮೀಸಲಾತಿ ವರ್ಗೀಕರಣ / ಕಲ್ಯಾಣ ಕರ್ನಾಟಕ ಮೀಸಲಾತಿ / ಒಳ ಮೀಸಲಾತಿ / ವಯೋಮಿತಿ / ವಿದ್ಯಾರ್ಹತೆ / ಅರ್ಜಿ ಶುಲ್ಕ / ಆಯ್ಕೆ ವಿಧಾನ / ಲಗತ್ತಿಸಬೇಕಾದ ಪ್ರಮಾಣ ಪತ್ರಗಳು ಮತ್ತು ಸೂಚನೆ / ನಿಬಂಧೆ ಇತ್ಯಾದಿ ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ www.ballaridccbank.com ದಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾದ 16–04–2022 ರೊಳಗಾಗಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.
1	ಕಂಪ್ಯೂಟರ್ ಇಂಜಿನೀಯರ್	ರೂ. 33450–62600	01	
2	ಪ್ರಥಮ ದರ್ಜೆ ಸಹಾಯಕರು	ರೂ. 27650–52650	01	
3	ದ್ವಿತೀಯ ದರ್ಜೆ ಸಹಾಯಕರು	ರೂ. 21400–42000	40	
4	ವಾಹನ ಚಾಲಕರು	ರೂ. 19950–37900	01	
5	ಕಿರಿಯ ಸೇವಕರು	ರೂ. 18600–32600	15	
		ಒಟ್ಟು	58	

ಹೊಸಪೇಟೆ
ದಿನಾಂಕ: 23–03–2022

ಸಹಿ/–
ಸಂಚಾಲಕ ಸದಸ್ಯರು,
ಸಿಬ್ಬಂದಿ ನೇಮಕಾತಿ ಸಮಿತಿ,
ಬಿ.ಡಿ.ಸಿ.ಸಿ. ಬ್ಯಾಂಕ್ ಹೊಸಪೇಟೆ

ಸಹಿ/–
ಅಧ್ಯಕ್ಷರು
ಸಿಬ್ಬಂದಿ ನೇಮಕಾತಿ ಸಮಿತಿ,
ಬಿ.ಡಿ.ಸಿ.ಸಿ. ಬ್ಯಾಂಕ್ ಹೊಸಪೇಟೆ

ಹೈಕೋರ್ಟ್ ಆವರಣದಲ್ಲಿ ಕರ್ಣಾಟಕ ಬ್ಯಾಂಕ್ ಶಾಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹೈಕೋರ್ಟ್ ಆವರಣದಲ್ಲಿನ ಕೆಜಿಐಡಿ ಕಟ್ಟಡದಲ್ಲಿ ತೆರೆಯಲಾಗಿರುವ ಕರ್ಣಾಟಕ ಬ್ಯಾಂಕ್‌ನ 879ನೇ ಶಾಖೆಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಬುಧವಾರ ಚಾಲನೆ ನೀಡಿದರು. ಹಿರಿಯ ವಕೀಲ ಬಿ.ವಿ. ಆಚಾರ್ಯ ಅವರಿಗೆ ಚೆಕ್‌ಬುಕ್ ವಿತರಿಸುವ ಮೂಲಕ ನೂತನ ಶಾಖೆಯ ಮೊದಲ ಖಾತೆ ತೆರೆದು ವಹಿವಾಟು ಆರಂಭಿಸಲಾಯಿತು.

ಈ ವೇಳೆ ಮಾತನಾಡಿದ ಋತುರಾಜ್ ಅವಸ್ಥಿ, ‘ದೇಶದ ಯಾವುದೇ ಹೈಕೋರ್ಟ್ ಆವರಣದಲ್ಲಿ ಕರ್ಣಾಟಕ ಬ್ಯಾಂಕ್ ಆರಂಭಿಸುತ್ತಿರುವ ಮೊದಲ ಶಾಖೆ ಇದಾಗಿದ್ದು, ಮುಂದಿನ ದಿನಗಳಲ್ಲಿ ಉತ್ತಮ ವಹಿವಾಟು ನಡೆಸುವ ಮೂಲಕ ಹೆಚ್ಚಿನ ಯಶಸ್ಸು ಕಾಣಲಿ’ ಎಂದು ಶುಭ ಹಾರೈಸಿದರು.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಂ.ಎಸ್. ಮಹಾಬಲೇಶ್ವರ ಮಾತನಾಡಿ, ‘ಬ್ಯಾಂಕ್, ಉತ್ತಮ ಸೇವೆಯ ಜತೆಗೆ ತಾಂತ್ರಿಕವಾಗಿಯೂ ಅತ್ಯುತ್ತಮ ವ್ಯವಸ್ಥೆಗಳನ್ನು ಹೊಂದಿದೆ. ನೂತನ ಶಾಖೆಯಲ್ಲಿ ನ್ಯಾಯಮೂರ್ತಿಗಳು, ವಕೀಲರು ಸೇರಿದಂತೆ ಎಲ್ಲ ವರ್ಗಗಳ ಗ್ರಾಹಕರಿಗೆ ತೃಪ್ತಿದಾಯಕ ಸೇವೆ ದೊರೆಯಲಿದೆ’ ಎಂಬ ಭರವಸೆ ನೀಡಿದರು.

ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಪಿ. ಪ್ರದೀಪ್ ಕುಮಾರ್, ನ್ಯಾಯಮೂರ್ತಿಗಳಾದ ಬಿ. ವೀರಪ್ಪ, ಪಿ.ಎಸ್. ದಿನೇಶ್ ಕುಮಾರ್, ಇ.ಎಸ್. ಇಂದಿರೇಶ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ, ಖಜಾಂಚಿ ಎಂ.ಟಿ. ಹರೀಶ್, ಶಾಖೆಯ ವ್ಯವಸ್ಥಾಪಕ ವಿಶ್ವಾಸ್, ಉಪ ಪ್ರಧಾನ ವ್ಯವಸ್ಥಾಪಕ ನಾಗರಾಜ ಐತಾಳ್ ಸೇರಿದಂತೆ ಬ್ಯಾಂಕ್‌ನ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಶ್ರವಣದೋಷವುಳ್ಳ ಮಕ್ಕಳ ಶಾಲೆಗೆ ಪ್ರವೇಶ

ಬೆಂಗಳೂರು: ಎಸ್.ಜಿ.ಎಸ್. ವಾಗ್ದೇವಿ ಶ್ರವಣ ನ್ಯೂನ್ಯತೆಯುಳ್ಳವರ (ಕಿವುಡು ಮಕ್ಕಳ) ಶಾಲೆಯಲ್ಲಿ 2022-23ನೇ ಸಾಲಿನ ತರಗತಿಗಳಿಗೆ ಪ್ರವೇಶ ಕಲ್ಪಿಸಲಾಗುತ್ತಿದೆ.

‘1996ರಿಂದ ಬೆಂಗಳೂರಿನ ಗಿರಿನಗರದಲ್ಲಿ ಶ್ರವಣ ನ್ಯೂನ್ಯತೆ ಮಕ್ಕಳಿಗೆ ನರ್ಸರಿಯಿಂದ ಹತ್ತನೇ ತರಗತಿಯವರೆಗೆ ಉಚಿತ ಶಿಕ್ಷಣ, ಸ್ಪೀಚ್ ಥೆರಪಿ ನೀಡುತ್ತಾ ಬಂದಿದೆ. ಶಾಲೆಯಲ್ಲಿ ಹಲವಾರು ಕಿವುಡು ಮಕ್ಕಳು ಶಿಕ್ಷಣ ಪಡೆದು ಸ್ವಾವಲಂಬಿಗಳಾಗಿ ಜೀವನ ನಡೆಸುತ್ತಿದ್ದಾರೆ. ಕಿವುಡು ಮಕ್ಕಳ ಮೂರು ತಿಂಗಳಿನಿಂದ ಐದು ವರ್ಷಗಳ ತಾಯಂದಿರಿಗೆ ತರಬೇತಿ ನೀಡಲಾಗುತ್ತದೆ’ ಎಂದು ಶಾಲೆಯ ಡಾ. ಶಾಂತ ರಾಧಾಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೂರವಾಣಿ ಸಂಖ್ಯೆ: 080-26727141, 9972915759, 9448881271

ಉಚಿತ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ಮಾರ್ಚ್ 28ರಿಂದ ಏ.11ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಬಿಎಂಟಿಸಿ ಅವಕಾಶ ಕಲ್ಪಿಸಿದೆ.

ವಾಸ ಸ್ಥಳದಿಂದ ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ ಮತ್ತು ವಾಪಸ್ ಬರುವಾಗ ಪ್ರವೇಶ ಪತ್ರ ತೋರಿಸಿ ಪ್ರಯಾಣಿಸಬಹುದು ಎಂದು ಬಿಎಂಟಿಸಿ ತಿಳಿಸಿದೆ.

ಕುಂಬಾರರ ಸಂಘದ ಚುನಾವಣೆ 27ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಾರರ ಸಂಘದ ಆಡಳಿತ ಮಂಡಳಿ ಚುನಾವಣೆ ಇದೇ 27ರಂದು ನಗರದ ಚಾಮರಾಜಪೇಟೆಯ ರಾಯ ರಾಯ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಅಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಮತದಾನ ಮಾಡಲು ಅರ್ಹರಿರುವ ಸಂಘದ ಸದಸ್ಯರು ಆಧಾರ್ ಕಾರ್ಡ್ ಹಾಗೂ ಸಂಘವು ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು. ಒಂದು ವೇಳೆ ಗುರುತಿನ ಚೀಟಿಯನ್ನು ಹಾಜರುಪಡಿಸದಿದ್ದಲ್ಲಿ ಮತದಾನಕ್ಕೆ ಅವಕಾಶವಿರುವುದಿಲ್ಲ ಎಂದು ಚುನಾವಣಾಧಿಕಾರಿ ಎಂ.ಪಿ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ವನಜಾ ಬಾಯಿ

ಬೆಂಗಳೂರು: ಬಾಗಲಗುಂಟೆ ನಿವಾಸಿ ವನಜಾ ಬಾಯಿ (96) ಅವರು ಗುರುವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪುತ್ರ ಹಾಗೂ ಐವರು ಪುತ್ರಿಯರು ಇದ್ದಾರೆ.

ಅಕ್ಷಯಾ ಪೋಷಕರಿಗೆ ₹ 8 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ ಬಳಿ ರಸ್ತೆ ದಾಟುವ ವೇಳೆ ಬಿಬಿಎಂಪಿಯ ಕಸದ ಲಾರಿ ಡಿಕ್ಕಿ ಹೊಡೆದು ಮೃತಪಟ್ಟ ಬಾಲಕಿ ಅಕ್ಷಯಾ ಅವರ ತಂದೆ ನರಸಿಂಹಮೂರ್ತಿ ಹಾಗೂ ತಾಯಿ ಗೀತಾ ಅವರಿಗೆ ಬುಧವಾರ ಒಟ್ಟು ₹ 8 ಲಕ್ಷ ಪರಿಹಾರ ವಿತರಿಸಲಾಯಿತು.

ಬಿಬಿಎಂಪಿ ವತಿಯಿಂದ ₹ 5 ಲಕ್ಷ , ಸ್ಥಳೀಯ ಶಾಸಕ ಬೈರತಿ ಸುರೇಶ್ ಅವರು ₹ 3 ಲಕ್ಷ ಸೇರಿದಂತೆ ಒಟ್ಟು ₹ 8 ಲಕ್ಷ ಪರಿಹಾರ ಚೆಕ್ ಅನ್ನು ಶಾಸಕ ಬೈರತಿ ಸುರೇಶ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಪೋಷಕರಿಗೆ ವಿತರಿಸಿದರು.

‘ಸಂತ್ರಸ್ತ ಕುಟುಂಬಕ್ಕೆ ಕಸದ ಲಾರಿಯ ಮಾಲೀಕರಿಂದ ₹ 2 ಲಕ್ಷ ಪರಿಹಾರವನ್ನು ಕೊಡಿಸಲಾಗುವುದು’ ಎಂದು ಬಿಬಿಎಂಪಿ ಗೌರವ್ ಗುಪ್ತ ಭರವಸೆ ನೀಡಿದರು.

‘ರಸ್ತೆ ಸುರಕ್ಷತೆಯ ಬಗ್ಗೆ ನಾವು ಮತ್ತಷ್ಟು ಜಾಗ್ರತೆ ವಹಿಸಬೇಕಿದೆ. ಘಟನೆ ನಡೆದಿರುವ ಸ್ಥಳದ ಬಳಿಯೇ 8 ತಿಂಗಳ ಹಿಂದೆಯೇ ಪಾದಚಾರಿ ಮೇಲುಸೇತುವೆಯನ್ನು ಉದ್ಘಾಟಿಸಲಾಗಿತ್ತು. ಬಳಕೆಯೋಗ್ಯವಾಗಿರುವಂತೆ ಅದನ್ನು ನಿರ್ವಹಿಸಲು ಕ್ರಮವಹಿಸಬೇಕು.

ರಸ್ತೆ ಅಪಘಾತದಲ್ಲಿ ಅಕ್ಷಯಾ ಅವರ ಗೀತಾ ಮತ್ತು ತಂದೆ ನರಸಿಂಹಮೂರ್ತಿ ಅವರಿಗೆ ಬೈರತಿ ಸುರೇಶ್ ಹಾಗೂ ಗೌರವ್ ಗುಪ್ತ ಅವರು ಪರಿಹಾರದ ಚೆಕ್ ವಿತರಿಸಿದರು. ಅಬ್ದುಲ್ ವಾಜಿದ್ ಇದ್ದಾರೆ

ಪಾದಚಾರಿ ಕೆಳ ಸೇತುವೆಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು’ ಎಂದು ಗೌರವ್ ಗುಪ್ತ ತಿಳಿಸಿದರು.

‘ಮೇಲ್ಸೇತುವೆ ಹಾಗೂ ಕೆಳಸೇತುವೆಗಳನ್ನು ಸರಿಯಾಗಿ ನಿರ್ವಹಣೆ ಮಾಡದ ಅಧಿಕಾರಿ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಮೃತ ಬಾಲಕಿಯ ಪೋಷಕರ ಇನ್ನಿಬ್ಬರು ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕೊಡಿಸಲು ಕ್ರಮಕೈಗೊಳ್ಳಲಿದ್ದೇವೆ’ ಎಂದು ತಿಳಿಸಿದರು.

ಪೂರ್ವ ವಲಯ ಆಯುಕ್ತ ಮನೋಜ್ ಜೈನ್, ವಲಯ ಜಂಟಿ ಆಯುಕ್ತರಾದ ಶಿಲ್ಪಾ, ಸ್ಥಳಿಯ ಮುಖಂಡ ಅಬ್ದುಲ್ ವಾಜಿದ್ ಉಪಸ್ಥಿತರಿದ್ದರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ

ಸಂಖ್ಯೆ: ಹಿಸತೋನಿ/ಜಅಇ/ಕೋ/ಪಿ.ಎಂ.ಕೆ ಎಸ್‌ವೈ–ಡಬ್ಲೂಡಿಸಿ2.0/ ಖು.ತೋ.ಟೆಂಡರ್/2021–22 ದಿನಾಂಕ: 21.03.2022

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2021–22ನೇ ಸಾಲಿನಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ–ಜಲಾನಯನ ಅಭಿವೃದ್ಧಿ ಘಟಕ 2.0 ಯೋಜನೆಯ ಖುಷ್ಕಿ ತೋಟಗಾರಿಕೆ ಕಾರ್ಯಕ್ರಮಗಳ ಅಡಿಯಲ್ಲಿ ಕೋಲಾರ ಜಿಲ್ಲೆಯ ವಿವಿಧ ಜಲಾನಯನ ಪ್ರದೇಶಗಳ ಗ್ರಾಮಗಳಲ್ಲಿ ಈ ಕೆಳಕಂಡ ಖುಷ್ಕಿ ತೋಟಗಾರಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನರ್ಸರಿದಾರರು/ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

(1) ಮನೆಯಂಗಳ/ಶಾಲಾ ಅಂಗಳ ಕೈ ತೋಟ ನಿರ್ಮಿಸಲು ವಿವಿಧ ಜಾತಿಯ ಗುಣಮಟ್ಟದ ಹಾಗೂ ಸ್ಥಳೀಯವಾಗಿ ಹೊಂದಿಕೊಳ್ಳುವಂತಹ ಸುಧಾರಿತ ತೋಟಗಾರಿಕೆ ಹಣ್ಣು/ತರಕಾರಿ ಬೆಳೆಯ ವಿವಿಧ ತಳಿಗಳ ಪೋಷಕಾಂಶ ಸಸಿ/ಕಸಿ ಗಿಡಗಳನ್ನು ಸಾಗಾಣಿಕೆ ಒಳಗೊಂಡಂತೆ ಇಲಾಖಾ ದರಗಳಲ್ಲಿ ಸರಬರಾಜು ಮಾಡುವುದು. (2) ರೈತರ ಜಮೀನುಗಳ ಬದುಗಳಲ್ಲಿ ನಾಟಿ/ಬಿತ್ತನೆ ಮಾಡಿಸಲು ವಿವಿಧ ಜಾತಿಯ ಗುಣಮಟ್ಟದ ಹಾಗೂ ಸ್ಥಳೀಯವಾಗಿ ಹೊಂದಿಕೊಳ್ಳುವಂತಹ ಸುಧಾರಿತ ತೋಟಗಾರಿಕೆ ಹಣ್ಣು/ತರಕಾರಿ ತಳಿಗಳ ಸಸಿ/ಬೀಜಗಳನ್ನು ಸಾಗಾಣಿಕೆ ಒಳಗೊಂಡಂತೆ ಇಲಾಖಾ ದರಗಳಲ್ಲಿ ಸರಬರಾಜು ಮಾಡುವುದು. (3) ರೈತರಿಗೆ ವಿತರಿಸಲು ವಿವಿಧ ಜಾತಿಯ ಗುಣಮಟ್ಟದ, ಸ್ಥಳೀಯವಾಗಿ ಹೊಂದಿಕೊಳ್ಳುವಂತಹ ಹಾಗು ಸರಕಾರಿ ಸಂಸ್ಥೆಗಳು/ಕೃಷಿ ವಿಶ್ವ ವಿದ್ಯಾಲಯಗಳು ಅಭಿವೃದ್ಧಿಪಡಿಸಿರುವ ಸುಧಾರಿತ ತೋಟಗಾರಿಕೆ ಬೆಳೆಗಳ ಬೀಜಗಳನ್ನು ಒಳಗೊಂಡಂತೆ ಇರುವ ತರಕಾರಿ ಮಿನಿ ಕಿಟ್‌ಗಳನ್ನು ಸಾಗಾಣಿಕೆ ಒಳಗೊಂಡಂತೆ ಇಲಾಖಾ ದರಗಳಲ್ಲಿ ಸರಬರಾಜು ಮಾಡುವುದು.

ಆಸಕ್ತ ನರ್ಸರಿ/ಸಂಸ್ಥೆಗಳು ಪ್ರತ್ಯೇಕವಾಗಿ ಟೆಂಡರು ಫಾರಂಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆದು **ದಿನಾಂಕ: 28.03.2022ರ ಅಪರಾಹ್ನ 4.00 ಗಂಟೆ ಒಳಗಾಗಿ** ಟೆಂಡರುಗಳನ್ನು ಪ್ರತ್ಯೇಕವಾಗಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ463/ಎಂ.ಸಿ.ಎ/2021–22.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈರುತ್ಯ ರೈಲ್ವೆ

Azadi Ka Amrit Mahotsav

ಆಸಕ್ತಿಯ ಅಭಿವ್ಯಕ್ತಿ

ನೈರುತ್ಯ ರೈಲ್ವೆಗಾಗಿ ಜಾಹೀರಾತು ಏಜೆನ್ಸಿಗಳ ಎಂಪಾನೆಲ್ಮೆಂಟ್

ಭಾರತದ ರಾಷ್ಟ್ರಪತಿಗಳ ಪರವಾಗಿ ಮುದ್ರಣ ಮಾಧ್ಯಮದಲ್ಲಿ ಡಿಸ್ಪ್ಲೇ ಅಭಿಯಾನಗಳು, ನೈರುತ್ಯ ರೈಲ್ವೆಯ ಪಿಆರ್ ಕೆಲಸ ಸೇರಿದಂತೆ ರೈಲ್ವೆ ಜಾಹೀರಾತುಗಳ ನಿರ್ವಹಣೆಗಾಗಿ ಜಾಹೀರಾತು ಏಜೆನ್ಸಿಗಳ ಸಮಿತಿಯನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಐಎನ್‌ಎಸ್ ಮಾನ್ಯತೆ ಮತ್ತು ಹುಬ್ಬಳ್ಳಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಪೂರ್ಣ ಪ್ರಮಾಣದ ಕಾರ್ಯಾಲಯ ಹೊಂದಿರುವ ಜಾಹೀರಾತು ಏಜೆನ್ಸಿಗಳು ಎಂಪಾನಲ್‌ಮೆಂಟ್‌ಗೆ ಅರ್ಜಿ ಸಲ್ಲಿಸಬಹುದು.

ಎಲ್ಲಾ ಸಂಬಂಧಿತ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಮುಚ್ಚಿದ ಲಕೋಟೆಯ ಮೇಲೆ "ಜಾಹೀರಾತು ಏಜೆನ್ಸಿಗಳ ಎಂಪನೆಲ್‌ಮೆಂಟ್‌ಗಾಗಿ ಅರ್ಜಿ" ಎಂದು ಬರೆದಿರುವ ಲಕೋಟೆಯನ್ನು ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿರವರ ಕಚೇರಿ, ನೈರುತ್ಯ ರೈಲ್ವೆ, ಐದನೇ ಮಹಡಿ, ಮಹಡಿ, ರೈಲು ಸೌಧ, ಗದಗ ರಸ್ತೆ, ಹುಬ್ಬಳ್ಳಿ – 580020 ಗೆ ಕಳುಹಿಸಬಹುದು.

ಸಲ್ಲಿಸಲು ಕೊನೆಯ ದಿನಾಂಕ: 19.04.2022, 12.00 ಗಂಟೆಯವರೆಗೆ (ಮಂಗಳವಾರ)

ತೆರೆಯುವ ದಿನಾಂಕ: 19.04.2022 ರಂದು 14:00 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/479/AAV/PRB/SWR/2021-22 — ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

KENDRIYA VIDYALAYA NAL CAMPUS, BANGALORE-560017

Azadi Ka Amrit Mahotsav

Advertisement for Registration of firms /Agencies 2022-2023

Applications are invited from eligible firms / agencies for / Supply of Stationary / Printing of Question papers & Study materials / Conservancy Material / Sports Materials & Uniform / Track Suit / Catering / Shamiyana & other accessories / Inverter / Battery for UPS etc., Annual Maintenance of Computer & Peripherals / LCD Projector / Xerox Machine / Fax / Water purifier / EPABX / Copy Printer / at the office of Kendriya Vidyalaya NAL Campus, Bangalore. Interested parties / firms / agencies may apply in the format for registration before 11-04-2022, which is available in our website: www.kvnal.edu.in

Firm / Agencies are required to submit the profile of the company and proof of registation of Income tax / GST/ GEM Registration / pan card / copy / Form-16 along with each form of registation.

ಟ್ರಾನ್ಸ್‌ಫಾರ್ಮರ್ ಸ್ಫೋಟ: ಬೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಗಾಯಗೊಂಡಿದ್ದ ಯುವತಿಯೂ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮೇಲ್ಸೇತುವೆ ಬಳಿ ಸಂಭವಿಸಿದ್ದ ಟ್ರಾನ್ಸ್‌ಫಾರ್ಮರ್ ಸ್ಫೋಟದಿಂದ ಗಾಯಗೊಂಡಿದ್ದ ಯುವತಿ ಚೈತನ್ಯಾ (19) ಅವರು ಚಿಕಿತ್ಸೆಗೆ ಸ್ಪಂದಿಸದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗುರುವಾರ ನಸುಕಿನಲ್ಲಿ ತೀರಿಕೊಂಡಿದ್ದಾರೆ.

‘ಸ್ಥಳೀಯ ನಿವಾಸಿ ಚೈತನ್ಯಾ ಹಾಗೂ ಅವರ ತಂದೆ ಶಿವರಾಜ್ (55) ಜೊತೆ ಬುಧವಾರ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಅದೇ ವೇಳೆ ರಸ್ತೆ ಬದಿಯಲ್ಲಿದ್ದ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡಿತ್ತು. ದ್ವಿಚಕ್ರ ವಾಹನ ಹಾಗೂ ತಂದೆ-ಮಗಳಿಗೂ ಬೆಂಕಿ ತಗುಲಿತ್ತು’ ಎಂದು ಪೊಲೀಸರು ಹೇಳಿದರು.

‘ತೀವ್ರ ಗಾಯಗೊಂಡಿದ್ದ ತಂದೆ-ಮಗಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಶಿವರಾಜ್, ಬುಧವಾರವೇ ತೀರಿಕೊಂಡಿದ್ದರು. ಮಗಳು ಸಹ ಗುರುವಾರ ನಸುಕಿನ 3 ಗಂಟೆ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ’ ಎಂದೂ ತಿಳಿಸಿದರು.

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್: ‘ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಟ್ರಾನ್ಸ್‌ಫಾರ್ಮರ್ ಸ್ಫೋಟ ಸಂಭವಿಸಿ, ತಂದೆ-ಮಗಳು ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮೃತರ ಸಂಬಂಧಿಕರು ನೀಡಿರುವ ದೂರು ಆಧರಿಸಿ, ಬೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬುಧವಾರ ಬೆಳಿಗ್ಗೆಯೇ ಟ್ರಾನ್ಸ್‌ಫಾರ್ಮರ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಬೆಂಕಿ ಹಾಗೂ ಹೊಗೆ ಕಾಣಿಸಿಕೊಂಡಿತ್ತು. ಅದನ್ನು ನೋಡಿದ್ದ ಸ್ಥಳೀಯರು, ಬೆಸ್ಕಾಂ ಸಹಾಯವಾಣಿಗೆ ಕರೆ ಮಾಡಿ ದೂರು ದಾಖಲಿಸಿ ಕೊಂಡಿದ್ದ ಸಿಬ್ಬಂದಿ, ದೂರು ಸ್ವೀಕೃತಿ ನಂಬರ್ ಸಹ ನೀಡಿದ್ದರು. ಆದರೆ, ಯಾರೊಬ್ಬರೂ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿರಲಿಲ್ಲವೆಂಬ ಆರೋಪ ಬೆಸ್ಕಾಂ ಮೇಲಿದೆ ’ ಎಂದೂ ವಿವರಿಸಿದರು.

₹ 20 ಲಕ್ಷ ಪರಿಹಾರ: ಸಚಿವ ಸುನೀಲ್‌ಕುಮಾರ್

‘ಟ್ರಾನ್ಸ್‌ಫಾರ್ಮರ್ ಸ್ಫೋಟದಿಂದ ಮೃತಪಟ್ಟಿರುವ ಶಿವರಾಜ್ ಹಾಗೂ ಚೈತನ್ಯಾ ಅವರ ಕುಟುಂಬಕ್ಕೆ ಒಟ್ಟು ₹ 20 ಲಕ್ಷ ಪರಿಹಾರ ನೀಡಲಾಗುವುದು’ ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ಬಿಜೆಪಿಯ ಎಸ್.ಸುರೇಶ್‌ಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಟ್ರಾನ್ಸ್‌ಫಾರ್ಮರ್‌ನ ಮುಖ್ಯ ತಂತಿ ಸುಟ್ಟು ತೈಲ ಸೋರಿಕೆಯಾಗಿದ್ದರಿಂದ ಸ್ಫೋಟ ಸಂಭವಿಸಿದೆ. ಬೆಳಿಗ್ಗೆ 11.50ರ ವೇಳೆಗೆ ಟ್ರಾನ್ಸ್‌ಫಾರ್ಮರ್‌ನಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿತ್ತು. ಆ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದ್ದರು. ಆದರೆ, ಸಿಬ್ಬಂದಿ ಗಮನಹರಿಸಲಿಲ್ಲ. ಅಗತ್ಯ ಕ್ರಮ ಕೈಗೊಂಡಿದ್ದರೆ ಅನಾಹುತ ಆಗುತ್ತಿರಲಿಲ್ಲ’ ಎಂದರು.

‘ಘಟನೆ ಬಗ್ಗೆ ಅಧಿಕಾರಿಗಳ ಸಭೆ ನಡೆಸಲಾಗಿದೆ. ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಮೃತರಿಗೆ ತಲಾ ₹ 10 ಲಕ್ಷ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. ಅಪಾಯದ ಸ್ಥಿತಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಘಟನೆಗೆ ಕಾರಣರಾದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದೂ ಸುನೀಲ್ ಹೇಳಿದರು.

ವಿಷಯ ಪ್ರಸ್ತಾಪಿಸಿದ್ದ ಸುರೇಶ್ ಕುಮಾರ್, ‘ಬಿಬಿಎಂಪಿ ಕಸದ ಲಾರಿ ಗುದ್ದಿ ಶಾಲಾ ಬಾಲಕಿ ಮೃತಪಟ್ಟ ಘಟನೆ ಹೆಬ್ಬಾಳ ಬಳಿ ಇತ್ತೀಚೆಗೆ ನಡೆದಿದೆ. ನಗರದಲ್ಲಿ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ ಇತ್ಯಾದಿ ಸಂಸ್ಥೆಗಳ ಮಧ್ಯೆ ಸಮನ್ವಯತೆ ಇಲ್ಲದಿದ್ದರಿಂದ ಅಮಾಯಕರ ಪ್ರಾಣ ಹೋಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು’ ಎಂದು ಆಗ್ರಹಿಸಿದ್ದರು.

‘ಕಲ್ಯಾಣ ಮಂಟಪ ಕಾಯ್ದಿರಿಸಿದ್ದರು’

‘ಚೈತನ್ಯಾ ಅವರಿಗೆ ಮದುವೆ ನಿಶ್ಚಯವಾಗಿತ್ತು. ವರನ ಮನೆಯವರು ಮುಂದಿನ ವಾರವೇ ನಿಶ್ಚಿತಾರ್ಥ ಮಾಡಿಕೊಳ್ಳಲು ಒಪ್ಪಿದ್ದರು. ಮದುವೆಗೆ ಸೂಕ್ತ ದಿನಾಂಕವನ್ನೂ ಸೂಚಿಸಿದ್ದರು. ತಂದೆ ಶಿವರಾಜ್ ಅವರು ಮದುವೆ ತಯಾರಿ ಆರಂಭಿಸಿದ್ದರು’ ಎಂದು ಸಂಬಂಧಿಕರೊಬ್ಬರು ಹೇಳಿದರು.

‘ಮಗಳ ಮದುವೆಗೆ ಸೂಕ್ತ ಕಲ್ಯಾಣ ಮಂಟಪಕ್ಕಾಗಿ ಶಿವರಾಜ್ ಹುಡುಕಾಡುತ್ತಿದ್ದರು. ಮನೆ ಸಮೀಪದಲ್ಲಿದ್ದ ಕಲ್ಯಾಣ ಮಂಟಪವೊಂದನ್ನು ನೋಡಲು ಮಗಳ ಜೊತೆಯಲ್ಲಿ ಬುಧವಾರ ಹೋಗಿದ್ದರು. ಇಬ್ಬರಿಗೂ ಒಪ್ಪಿಗೆಯಾಗಿದ್ದರಿಂದ ಅದೇ ಕಲ್ಯಾಣ ಮಂಟಪ ಕಾಯ್ದಿರಿಸಿದ್ದರು. ಅಲ್ಲಿಂದ ವಾಪಸು ಮನೆಗೆ ಬರುವಾಗಲೇ ಈ ಅವಘಢ ಸಂಭವಿಸಿದೆ’ ಎಂದೂ ತಿಳಿಸಿದರು.

ಶಿವರಾಜ್

ಚೈತನ್ಯಾ

‘ಬೆಸ್ಕಾಂ ಹಿರಿಯ ಅಧಿಕಾರಿಗಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಟ್ರಾನ್ಸ್‌ಫಾರ್ಮರ್ ಯಾವಾಗ ಅಳವಡಿಸಲಾಗಿತ್ತು ? ಅದರ ನಿರ್ವಹಣೆ ಜವಾಬ್ದಾರಿ ಯಾರಿಗೆ ವಹಿಸಲಾಗಿತ್ತು ? ಮಂಗನಹಳ್ಳಿ ಉಸ್ತುವಾರಿ ಎಂಜಿನಿಯರ್‌ಗಳು ಯಾರು ? ಎಂಬಿತ್ಯಾದಿ ಮಾಹಿತಿ ಕೋರಲಾಗಿದೆ. ಅದಕ್ಕೆ ಉತ್ತರ ಬರುತ್ತಿದ್ದಂತೆ ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದೂ ಪೊಲೀಸರು ಹೇಳಿದರು.

ಅಂತ್ಯಕ್ರಿಯೆ: ಮರಣೋತ್ತರ ಪರೀಕ್ಷೆ ಮುಗಿಸಿ, ತಂದೆ– ಮಗಳ ಮೃತದೇಹಗಳನ್ನು ಪೊಲೀಸರು ಸಂಬಂಧಿಕರಿಗೆ ಹಸ್ತಾಂತರಿಸಿದರು. ಗುರುವಾರವೇ ಅಂತ್ಯಕ್ರಿಯೆ ನಡೆಯಿತು. ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಬಂದಿದ್ದ ಎಸ್‌.ಟಿ.ಸೋಮಶೇಖರ್ ಅವರನ್ನು ಸ್ಥಳೀಯರು ತರಾಟೆಗೆ ತೆಗೆದುಕೊಂಡರು.

‘ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಎರಡು ಜೀವಗಳು ಹೋಗಿವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ‘ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಸೋಮಶೇಖರ್ ಸಮಾಧಾನಪಡಿಸಿದರು.

ಹಗಲಲ್ಲೇ ಬೀಗ ಮುರಿದು 23 ಕಡೆ ಕಳ್ಳತನ

ಬೆಂಗಳೂರು: ನಗರದಲ್ಲಿ ಸುತ್ತಾಡಿ ಮನೆಗಳ ಬೀಗ ಮುರಿದು ಕಳ್ಳತನ ಮಾಡುತ್ತಿದ್ದ ಆರೋಪದಡಿ ಜಯಂತಿ ಅಲಿಯಾಸ್ ಕುಟಿಯಮ್ಮ ಅಲಿಯಾಸ್ ಮೇರಿ (31) ಎಂಬುವರನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

‘ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಬಳಿಯ ಕಾವಲ್ ಬೈರಸಂದ್ರದ ಜಯಂತಿ, ವಿದ್ಯಾರಣ್ಯಪುರದ ಎ.ಎಂ.ಎಸ್. ಬಡಾವಣೆಯ ಮನೆಯೊಂದರಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದರು. ಪುರಾವೆಗಳನ್ನ ಸಂಗ್ರಹಿಸಿ ಅವರನ್ನು ಬಂಧಿಸಲಾಗಿದೆ. 75 ಗ್ರಾಂ ಚಿನ್ನಾಭರಣ ಹಾಗೂ 638 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಹೇಳಿದರು.

ಜಯಂತಿ

‘ಅಪರಾಧ ಹಿನ್ನೆಲೆಯುಳ್ಳ ಜಯಂತಿ, 2017ರಿಂದಲೇ ಕಳ್ಳತನ ಎಸಗುತ್ತಿದ್ದರು. ಅಶೋಕನಗರ, ಆರ್‌.ಟಿ. ನಗರ, ಯಶವಂತಪುರ, ಹೆಬ್ಬಾಳ ಹಾಗೂ ಸುತ್ತಮುತ್ತಲಿನ 23 ಮನೆಗಳಲ್ಲಿ ಆರೋಪಿ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ‘ಮಾರ್ಕೆಟ್ ಬಾಬು ಎಂಬುವರನ್ನು ಜಯಂತಿ ಮದುವೆಯಾಗಿದ್ದರು. ಕೌಟುಂಬಿಕ ಕಲಹದಿಂದಾಗಿ ಪತಿಯಿಂದ ದೂರವಾಗಿ, ಪ್ರತ್ಯೇಕವಾಗಿ ವಾಸವಿದ್ದರು. ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಜಯಂತಿ, ಕದ್ದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು’ ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Frazer Town

LUXURIOUS READY 3 Bed Apartment with Staff Quarter in Frazer Town. Gated complex with swimming pool and clubhouse. Price Rs. 3.45 Cr. For details contact -9945039194

Yelahanka

PRESTIGE MONTE CARLO, 3 BHK, Area-1535. sft, Semi furnished apartment for Resale. Contact: 6366971311.

3 BHK 1490 sqft Flat at Ajantha Vihar Apartments Yelahanka New Town. semifurnished with modular kitchen, 2 bathrooms, 2 balconies with grills, No common walls, 1 car-park. Other amenities: lift, 24hr security, playground, swimmingpool, party hall, gym. 80 Lakhs Negotiable. Contact: 9972238099

Sites

Devanahalli

PRESTIGE PARK DRIVE, Located at Devanahalli, plots sizes available for sale ranging from 30*40, 30*50, 40*60 & larger plots up to 3389 sqft. Contact: 6366971311

General

PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7259886212.

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

JOB OPPORTUNITIES

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Wanted

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Teachers/ Professors

KENNETH GEORGE ENGLISH SCHOOL, Teacher's Wanted, for Kempapura and R.T.Nagar Branches Call: 9663398209, Email: kennethgeorgeschool@gmail.com

SRI MAHAVEER JAIN VIDYALAYA, Court Road, Rojipura, Doddaballapur-561203. Required the following Teaching Faculty for English Medium High School and Higher Primary classes. 1) Qualified and experienced HEAD MASTER/ MISTRESS. 2) Qualified English and Social Science TEACHERS. Attractive Salary, Accommodation facility. Apply, Walk-in Interview on Sunday, 3rd April 2022 at 11.00am at School office. Mobile No: 9886972665, Email: srimahaveerjainvidyalaya@gmail.com

EDUCATIONAL

Admission

ONE SITTING: B.Sc (Paramedical All/ Agriculture/ Hotel/ Hospital Management/ Yoga/ IT/CS). D.Pharma/ B.Pharma/ BPT/DPT/ DMLT/BYNS/ B.Tech/ MBA/ BBA/BCA/ SSLC/PU. Asha Academy: Bangalore. 9448460103/ 7093438248

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

NRI'S INVESTMENT And Finance availableOn LowInterest Against properties, Lands, Building, sites, Flats,converted Lands, Agriculture Lands Also Towards Businesses call 7411265189

Business For Sale

INVESTORS ARE WELCOME
Promising Wood Interiors Business FOR SALE in Mysore With EMPLOYEES, Showroom, Office EQUIPMENT And CLIENTS. Genuine Investors Are Welcome
CALL: 9972825343

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

PUBLIC NOTICE

PUBLIC NOTICE

I, M NATARAJAN, Son of **Sri N Muthu Subramanian,** residing at Flat No. A Door No.3 (Old No.1-A), 21st Street, Nanganallur, Chennai – 600 061 hereby declare that the Residential immovable property bearing No.32, Khata No. 266, situated at Kalena Agrahara Village, Begur Hobli, Bangalore South Taluk purchased through the sale deed dated.15.12.1993 is lost by Bank at Bangalore.Sale deed details: Registered document No.3200/93-94, Book 1, Volume No.3792 at pages 162-168 on 23.12.1993 on 15.12.1993 in the office of the Sub Registrar, Bangalore South Taluk, Bangalore. Anyone who finds the document will be suitably rewarded. Mr Natarajan is to be contacted at the above address at Nanganallur Chennai - mobile no - 9820287567.

PUBLIC NOTICE

My Client **Smt. M.Urmila W/o Sri. Mitulal,** residing at No. 219, 68th Cross, 5th Block, Rajajinagar, Bangalore – 560 010 has entered into a Agreement of Sale without possession dt. 01.03.2022 to purchase below mentioned Schedule Property from **Sri. G. S. Shivakumar S/o. Late. G. K. Srikantaiah,** he has acquired the title of the Schedule Property through Release Deed.

Any person having any right, title, interest, claim in or to the Schedule Property or any part thereof by way of any agreement, contract, lease, trust, inheritance, gift, possession, mortgage, exchange or any such deed/instrument of transfer, easement or otherwise, may submit their objection(s), claim(s) by direct or in writing with us at the under mentioned address through Registered Post along with the supporting documentary proof, within **Ten (10) days** from the date of this publication. Any objections received thereafter will not be binding on my Client and my Client shall proceed with the Sale.

SCHEDULE: All that piece & parcel of Residential Property bearing No.50, BBMP Katha No.1005/50, BDA Site No.1005, PID No.22-1-50, situated at 1st Main Road, 4th Block, Rajajinagar, Old Ward No.22/Sriram Mandira, New Ward No.108/Sriram Mandira, Bangalore, measuring east to west 85 feet north to south 45 feet, ad-measuring 3,825 square feet and the entire building thereon and bounded on: **East By :** Road, **West By :** Conservancy Road, **North By :** Private Property, **South By :** Site No.1006

B.S.Leena Devi Papanna, Advocate
Roll No. KAR1558/05
70/1, V.V.Mohalla, Mysore,
Ph No. 9449135412

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WEEKEND CORNER ಕ್ಲಾಸಿಫೈಡ್ಸ್

HOUSSO
Where smiles become wider
THE GOLDEN WATTLE @ WHITEFIELD
1km From Sai Baba Ashram
5 Acres Gated Community
CC Roads
Bank Loans Available
DC converted sites
Ph: 9035055773 / 7338271412

Rangachari Textiles (P) Ltd
526, Sampige Road, Malleswaram, Bengaluru - 3
Tel: 080 2346 3402, 2346 5868

PERSONAL

Lost

LOST
I, Vinutha Balaji have lost my Original Property sale Deed. Serial no: 3774 dtd- 22.08.1998 Flate no. 27-1/12/301, Situated at Sri Krishnanagar, Malkajgiri, Hyderabad. **While shifting the house. Finders please Contact: 9611484317, 9945060336**

LOST
I, Gayathri Ravindra have lost my original Sale Deed of Sy.No 91/2, Presently 91/4. measuring 0.26.08 Guntas situated at Honnahalli Village,Sathnuru Hobli, Kanakapura Taluk, Ramanagar District **Finders please Contact: 9686266309**

Change of Name

CHANGE OF NAME
I, **RAGHAVENDRA** Residing No. 1084, Second Main, A.E.C.S Layout, A Block, Singasandra, Bangalore- 560068, have changed my name to **RAGHAVENDRA SHENOY,** vide affidavit dated 21.03.2022, before notary B.M. Chandrashekar, Bangalore. Henceforth I shall be called **RAGHAVENDRA SHENOY** only.

I, N. VARALAKSHMI W/o Sharavanan R., R/at No.21/1, 2nd Cross, Kalappa Block, 9thMain Road, Sriramapuram, Bengaluru-560021, have changed my name to VARALAKSHMI S vide affidavit dated: 22/3/2022 Before Notary L.Veena Bangalore.

I, R. SARAVANAN S/o G. Rajendran R/at No. 21/1, 2nd Cross, Kalappa Block, 9th Main Road, Sriramapuram, Bengaluru-560021 have changed my name to R. SHARAVANAN vide affidavit dated: 22/3/2022 Before Notary L.Veena Bangalore.

ANAND JOHNSON
The entire world of lingerie..
VESTS-BRIEF-BRA-PANTY-SLIPS-TOWELS
Wallets, Ladies Fancy Bags & Clutches
Only @ BRIGHTWAYS WHOLESALERS Since 1957
AVENUE ROAD
Ph: 080-22237504
Mob: 9742202223
OPEN ON SUNDAY ALSO
Shop Online @ www.brightways.in

CHANGE OF NAME
I, **LAKSHMI SUNDERESH SHENOY** Residing No. 1084, Second Main, A.E.C.S Layout, A Block, Singasandra, Bangalore-560068, have changed my name to **LAKSHMI SHENOY,** vide affidavit dated 21.03.2022, before notary B.M. Chandrashekar, Bangalore. Henceforth I shall be called **LAKSHMI SHENOY** only.

I, MURALI. N F/o 14842261M– Sep/MT-ANOOP M R/a Murali Bhavan, Vallikunnam, Alappuzha, Kerala changed name from MURALI. N to MURALEEDHARAN notary KV Mani, Bangalore.

I, VEERESH Residing at-No.34,5th Cross,Manjunath nagar, Raghuvanahalli, Kanakapura Road,Bangalore 560061 have changed my Name to VEERESH PATIL vide Affidavit Dated:24.03.2022 Sworn Before Notary H.S.Sakalesh Aradhya, Bangalore

EDUCATION
To Place your Classified Ads Contact:
9845114560

DH Deccan Herald | ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

2022 ಜೂನ್ 30ರ ಬಳಿಕ ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆಗೆ ಇಲ್ಲ ಅವಕಾಶ

ಚುನಾವಣೆ ದೀರ್ಘ ಕಾಲ ಮುಂದೂಡಿಕೆ?

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಜನಗಣತಿ ಪ್ರಕ್ರಿಯೆಗೆ ತಯಾರಿ ನಡೆಯುತ್ತಿದ್ದು, ಎಲ್ಲ ತಾಲ್ಲೂಕುಗಳು, ಗ್ರಾಮಗಳು ಹಾಗೂ ನಗರಾಡಳಿತ ಪ್ರದೇಶಗಳ ಮೇರೆಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ನಡೆಯುತ್ತಿದ್ದರೆ ಅವುಗಳನ್ನು 2022ರ ಜೂನ್ 30ರ ಒಳಗೆ ಪೂರ್ಣಗೊಳಿಸಬೇಕು ಎಂದು ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ಬಿಬಿಎಂಪಿ ವಾರ್ಡ್ ಮರುವಿಂಗಡಣಾ ಪ್ರಕ್ರಿಯೆ ಜೂನ್ 30ರ ಒಳಗೆ ಪೂರ್ಣಗೊಳ್ಳದೇ ಹೋದರೆ, ಚುನಾವಣೆ ದೀರ್ಘ ಕಾಲ ಮುಂದಕ್ಕೆ ಹೋಗುವ ಸಾಧ್ಯತೆ ಇದೆ.

'ತಾಲ್ಲೂಕು, ನಗರಾಡಳಿತ ಸಂಸ್ಥೆಗಳು ಹಾಗೂ ಗ್ರಾಮಗಳಲ್ಲಿ ಆಡಳಿತಾತ್ಮಕ ಸೀಮೆಗಳನ್ನು ಪರಿಷ್ಕರಿಸಿ ಹೊಸ ಘಟಕಗಳನ್ನು ರಚಿಸುವ ಪ್ರಸ್ತಾವನೆಗಳು ಬಾಕಿ ಇದ್ದರೆ ಜೂನ್ 30ರ ಒಳಗೆ ಪೂರ್ಣಗೊಳಿಸಿ ಜನಗಣತಿ ನಡೆಸುವುದನ್ನು ಖಾತರಿ ಪಡಿಸಬೇಕು. ಆ ಬಳಿಕ ಜನಗಣತಿ ಕಾರ್ಯ ಪೂರ್ಣಗೊಳ್ಳುವವರೆಗೆ ಆಡಳಿತಾತ್ಮಕ ಘಟಕಗಳಲ್ಲಿ ಯಾವುದೇ ಬದಲಾವಣೆ ಮಾಡುವುದಕ್ಕೆ ಅವಕಾಶ ಇಲ್ಲ' ಎಂದು ಕಂದಾಯ ಇಲಾಖೆಯ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ವಾರ್ಡ್ ಮರುವಿಂಗಡಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಸರ್ಕಾರ ಆಸಕ್ತಿಯನ್ನೇ ತೋರಿಸದಿರುವುದು ಬಿಬಿಎಂಪಿ ಚುನಾವಣೆಯ ನಿರೀಕ್ಷೆಯಲ್ಲಿರುವ ವಿವಿಧ ಪಕ್ಷ ಸ್ಥಳೀಯ ಮುಖಂಡರಲ್ಲಿ ಕಳವಳ ಹೆಚ್ಚಿಸಿದೆ.

'ಒಮ್ಮೆ ಜನಗಣತಿ ಆರಂಭವಾದರೆ, ಅದರ ಅಂಕಿ ಅಂಶ ಆಧರಿಸಿ ಚುನಾವಣೆ ನಡೆಸುವ ಸಾಧ್ಯತೆ ಹೆಚ್ಚು. ಜನಗಣತಿ ನಡೆಸಿ, ಅಂಕಿ ಅಂಶ ವಿಶ್ಲೇಷಿಸಿ ವರದಿ ಬಿಡುಗಡೆಯಾಗಲು ಏನಿಲ್ಲವೆಂದರೂ ಎರಡು ವರ್ಷ ಕಾಲಾವಕಾಶ ಬೇಕು. ಅಲ್ಲಿವರೆಗೂ ಬಿಬಿಎಂಪಿ ಚುನಾವಣೆ ಮುಂದೂಡಿದರೂ ಆಶ್ಚರ್ಯವಿಲ್ಲ' ಎಂದು ಬಿಜೆಪಿ ಪ್ರಮುಖರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರತಿವಾರ್ಡ್‌ನಲ್ಲೂ ಪಕ್ಷದ ಟಿಕೆಟ್‌ಗೆ ನಾಲ್ಕೈದು ಆಕಾಂಕ್ಷಿಗಳಿದ್ದಾರೆ. ಒಬ್ಬರಿಗೆ ಟಿಕೆಟ್ ನೀಡಿದರೆ ಉಳಿದವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ವಿಧಾನಸಭಾ ಚುನಾವಣೆಯಲ್ಲಿ ಇದರಿಂದ ಹಿನ್ನಡೆಯಾಗುವ ಅಪಾಯವಿದೆ. ಹಾಗಾಗಿ ವಿಧಾನಸಭಾ ಚುನಾವಣೆ ಬಳಿಕವೇ ಬಿಬಿಎಂಪಿ ಚುನಾವಣೆ ನಡೆಸುವಂತೆ ಶಾಸಕರು ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ. ವಿಧಾನಸಭಾ ಚುನಾವಣೆ ನಡೆದ ವರ್ಷದೊಳಗೆ ಲೋಕಸಭೆ ಚುನಾವಣೆಯೂ ಬರಲಿದೆ. ಅಲ್ಲಿವರೆಗೂ ಬಿಬಿಎಂಪಿ ಚುನಾವಣೆ ನಡೆಯುವುದು ಅನುಮಾನ' ಎಂದರು.

2020ರ ಬಿಬಿಎಂಪಿ ಕಾಯ್ದೆ 2021ರ ಜನವರಿಯಲ್ಲಿ ಜಾರಿಯಾಗಿದ್ದು, ಇದರನ್ವಯ ಪಾಲಿಕೆ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ.

ನಗರದ ಹೊರವಲಯದ ಗ್ರಾಮಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಕುರಿತು ಅಧ್ಯಯನ ನಡೆಸಿ ಶಿಫಾರಸು ಮಾಡುವುದಕ್ಕೆ ಪಾಲಿಕೆಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ 2021ರ ಜ.29ರಂದು ಅಧಿಕಾರಿಗಳ ಸಮಿತಿಯನ್ನು ಮತ್ತೊಮ್ಮೆ ರಚಿಸಲಾಯಿತು. 2021ರ ಜು. 28ಕ್ಕೆ ಕೊನೆಗೊಂಡಿದ್ದ ಈ ಸಮಿತಿಯ ಅವಧಿಯನ್ನು ಮತ್ತೆ ಆರು ತಿಂಗಳು ವಿಸ್ತರಿಸಲಾಯಿತು. ಅದರ ಗಡುವೂ 2022ರ ಜನವರಿಯಲ್ಲಿ ಕೊನೆಗೊಂಡಿದ್ದು, ಅದನ್ನು ಸರ್ಕಾರ ವಿಸ್ತರಿಸಿಲ್ಲ. ಈ ಸಮಿತಿ ಒಂದೆರಡು ಬಾರಿ ಅನೌಪಚಾರಿಕವಾಗಿ ಸಭೆ ಸೇರಿತ್ತಾದರೂ ವಾರ್ಡ್ ಮರುವಿಂಗಡಣೆ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿಲ್ಲ.

'ಪರಿಧಿ ವಿಸ್ತರಿಸಿ ವಾರ್ಡ್ ಮರುವಿಂಗಡಣೆ ಮಾಡುವುದಾದರೆ ಮಾತ್ರ ಬಿಬಿಎಂಪಿಗೆ ಈ ಆದೇಶ ಅನ್ವಯವಾಗುತ್ತದೆ. ಪರಿಧಿಯನ್ನು ಈಗಿನಷ್ಟೇ ಉಳಿಸಿಕೊಂಡು ವಾರ್ಡ್‌ಗಳ ಮರುವಿಂಗಡಣೆ ಮಾಡುವುದಕ್ಕೆ ಅಭ್ಯಂತರ ಇಲ್ಲ' ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಮುಖಂಡರು ಏನನ್ನುತ್ತಾರೆ?

'ಚುನಾವಣೆ ನಡೆಸಲು ಬಿಜೆಪಿಗೆ ಭಯ'

ಚುನಾವಣೆ ನಡೆಸಲು ನಿಜವಾದ ಆಸಕ್ತಿ ಇದ್ದರೆ ವಾರ್ಡ್ ಮರುವಿಂಗಡಣೆ ಪೂರ್ಣಗೊಳಿಸುತ್ತಿತ್ತು. ನಿರ್ದಿಷ್ಟ ಅವಧಿಯೊಳಗೆ ಚುನಾವಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರವೇ ಪ್ರಮಾಣಪತ್ರ ಸಲ್ಲಿಸುತ್ತಿತ್ತು. ಕೋವಿಡ್ ಹಾಗೂ ಪ್ರವಾಹ ನಿರ್ವಹಣೆಯಲ್ಲಿ ಆಡಳಿತ ವ್ಯವಸ್ಥೆ ವಿಫಲವಾಗಿದೆ. ಈಗ ಚುನಾವಣೆ ನಡೆಸಿದರೆ ಬಿಜೆಪಿಗೆ ಸೋಲು ಖಚಿತ. ಹಾಗಾಗಿ ಚುನಾವಣೆ ನಡೆಸಲು ಸರ್ಕಾರಕ್ಕೆ ಭಯ.

ಅಬ್ದುಲ್ ವಾಜಿದ್, ಕಾಂಗ್ರೆಸ್ ಮುಖಂಡ

'2 ತಿಂಗಳಲ್ಲಿ ಪ್ರಕ್ರಿಯೆ ಮುಗಿಸಬಹುದು'

ಈಗಲೂ ಸರ್ಕಾರ ಮನಸ್ಸು ಮಾಡಿದರೆ ಬಿಬಿಎಂಪಿಯ ಪರಿಧಿಯನ್ನು ಈಗಿರುವಷ್ಟೇ ಉಳಿಸಿಕೊಂಡು ವಾರ್ಡ್ ಮರುವಿಂಗಡಣೆ ಮಾಡಬಹುದು. ಎರಡು ತಿಂಗಳಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು. ಆದರೆ, ಬಿಬಿಎಂಪಿ ಚುನಾವಣೆ ನಡೆಯುವುದು ಸರ್ಕಾರಕ್ಕೆ ಬೇಕಿಲ್ಲ.

ಎಂ.ಶಿವರಾಜು, ಕಾಂಗ್ರೆಸ್ ಮುಖಂಡ

'ಮೇ ತಿಂಗಳಲ್ಲಿ ಚುನಾವಣೆ– ಸಿ.ಎಂ. ಭರವಸೆ'

2022ರ ಮೇ ತಿಂಗಳಲ್ಲಿ ಚುನಾವಣೆ ನಡೆಸುವ ಭರವಸೆಯನ್ನು ಪಕ್ಷದ ಪ್ರಮುಖರ ಸಭೆಯಲ್ಲಿ (ಕಳೆದ ತಿಂಗಳು) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೀಡಿದ್ದರು. ಅದರಂತೆ ನಡೆಸಿಕೊಳ್ಳುವ ನಂಬಿಕೆ ಇದೆ. ಯಾವಾಗ ಚುನಾವಣೆ ನಡೆದರೂ ಪಕ್ಷ ಗೆಲ್ಲಲಿದೆ.

ಪದ್ಮನಾಭ ರೆಡ್ಡಿ, ಬಿಜೆಪಿ ಮುಖಂಡ

'ಜನರ ಅಳಲು ಕೇಳುವವರು ಯಾರು ಇಲ್ಲ'



ರಸ್ತೆ ಗುಂಡಿಗೆ ಬಿದ್ದು ಜನ ಸಾಯುತ್ತಿದ್ದಾರೆ, ಜನರ ಅಳಲನ್ನು ಹೇಳುವವರು ಕೇಳುವವರು ಯಾರು ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಆದಷ್ಟು ಬೇಗ ನಡೆಸಬೇಕು.

ಆರ್.ಪ್ರಕಾಶ್, ಜೆಡಿಎಸ್ ನಗರ ಘಟಕದ ಅಧ್ಯಕ್ಷ

ದೇವರ ಹೊಸಹಳ್ಳಿಯ ಭದ್ರಕಾಳಮ್ಮ ಹಾಗೂ ವೀರಭದ್ರಸ್ವಾಮಿ ಬ್ರಹ್ಮರಥೋತ್ಸವ

ಹೊಸಹಳ್ಳಿ ವೀರಭದ್ರಸ್ವಾಮಿ ವಿಜೃಂಭಣೆಯ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯ ಪ್ರಸಿದ್ಧ ದೇವರ ಹೊಸಹಳ್ಳಿಯ ಭದ್ರಕಾಳಮ್ಮ ಹಾಗೂ ವೀರಭದ್ರಸ್ವಾಮಿ ಬ್ರಹ್ಮರಥೋತ್ಸವವು ಗುರುವಾರ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆಯಿಂದ ದೇವರಿಗೆ ಶತರುದ್ರಾಭಿಷೇಕ ಹೋಮಾದಿಗಳು ನಡೆದು ಮೂಲ ನಕ್ಷತ್ರದ ಮಧ್ಯಾಹ್ನ 1 ರಿಂದ 1.30 ಗಂಟೆ ಒಳಗೆ ಶುಭಮಿಥುನ ಲಗ್ನದಲ್ಲಿ ಸಾವಿರಾರು ಭಕ್ತಾದಿಗಳ ಸಮೂಹದಲ್ಲಿ ಜಯ ಘೋಷದ ಮೂಲಕ ರಥ ಎಳೆಯಲಾಯಿತು. ನಾದಸ್ವರ, ತಾಳ್ಯ ವಾದ್ಯದೊಂದಿಗೆ 15ಕ್ಕೂ ಹೆಚ್ಚು ಮಂದಿ ವೀರಗಾಸೆಯವರೊಂದಿಗೆ ರಥೋತ್ಸವ ಕಳೆಗಟ್ಟಿತ್ತು. ರಥವನ್ನು ಬಣ್ಣ ಬಣ್ಣದ ವಸ್ತ್ರ, ಹೂವು, ತಳಿರು ತೋರಣ, ಎಳನೀರು ಗೊಂಚಲು, ಬಾಳೆಗೊನೆಗಳಿಂದ ಅಲಂಕರಿಸಲಾಗಿತ್ತು. ಭಕ್ತಾದಿಗಳು ರಥೋತ್ಸವವನ್ನು ಮತ್ತು ಅಲಂಕೃತ ದೇವರುಗಳನ್ನು ನೋಡಿ ಪುನೀತರಾದರು.

ಕರ್ನಾಟಕ ಸರ್ಕಾರ

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ
(ಇಡಿಸಿಎಸ್) ಸಿಆಸುಇ (ಇ-ಆಡಳಿತ ಇಲಾಖೆ)
ಸಂಖ್ಯೆ 3, 4ನೇ ಮಹಡಿ, ಎಂಬೆಸ್ಸಿ ಐಕಾನ್, ಇನ್‌ಫ್ಯಾಂಟರಿ ರಸ್ತೆ, ಬೆಂಗಳೂರು – 560001
ದೂರವಾಣಿ : 080–22230281 / 22230282

ನಂ. ಇಡಿಸಿಎಸ್/7/ಎಡಿಎಂ/2022–ಇಡಿಸಿಎಸ್ ದಿನಾಂಕ : 24.03.2022

ಟೆಂಡರ್ ಪ್ರಕಟಣೆ

ಮೈಸೂರು (ಡಿ3) ಮತ್ತು ಕಲ್ಬುರ್ಗಿ (ಡಿ4) ಕಂದಾಯ ವಿಭಾಗಗಳಲ್ಲಿ ಗ್ರಾಮ ಒನ್ ಯೋಜನೆಗೆ ಆಪರೇಷನ್ ಪಾಲುದಾರರನ್ನು ಆಯ್ಕೆ ಮಾಡುವ ಬಗ್ಗೆ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ (ಆರ್‌ಎಫ್‌ಪಿ)

ಇಡಿಸಿಎಸ್ ನಿರ್ದೇಶನಾಲಯವು, ''ಮೈಸೂರು (ಡಿ3) ಮತ್ತು ಕಲ್ಬುರ್ಗಿ (ಡಿ4) ಕಂದಾಯ ವಿಭಾಗಗಳಲ್ಲಿ ಗ್ರಾಮ ಒನ್ ಯೋಜನೆಯ ಅನುಷ್ಠಾನಕ್ಕಾಗಿ ಆಪರೇಷನ್ ಪಾಲುದಾರರನ್ನು ಆಯ್ಕೆ ಮಾಡಲು'' ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 07.04.2022ರ ಸಂಜೆ 6.00 ಗಂಟೆಯವರೆಗೆ.

DIPR/CP/3905/Yakshi/2021-22 ಸಹಿ/- ನಿರ್ದೇಶಕರು, ಇಡಿಸಿಎಸ್

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಕಾಲಿಕ ಮಳೆ: ರೈತರ ವರ್ಷದ ಆದಾಯಕ್ಕೂ ಕುತ್ತು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯುದ್ದಕ್ಕೂ ಮೂರು ದಿನಗಳಿಂದ ಸುರಿಯುತ್ತಿರುವ ಅಕಾಲಿಕ ಮಳೆಯಿಂದ ಮಾವು, ಹುಣಸೆ, ಶೀಗೆ, ಹೊಂಗೆ ಫಸಲು ಹಾಳಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಸೋಮವಾರ ರಾತ್ರಿ ಮಳೆ ಪ್ರಮಾಣ ಕಡಿಮೆ ಇತ್ತು. ಮಂಗಳವಾರ ಮೋಡ ಕವಿದ ವಾತಾವರಣ ಇತ್ತು. ಬುಧವಾರ ರಾತ್ರಿ ಆರಂಭವಾದ ಮಳೆ ರಾತ್ರಿಯೆಲ್ಲಾ ಸುರಿಯಿತು. ಗುರುವಾರ ಸಂಜೆ ಜಡಿ ಮಳೆಯಾಯಿತು.

ಮಳೆಯಿಂದ ಮಾವಿನ ಹೂ ಮತ್ತು ಪೀಚು, ಹುಣಸೆ ಹಣ್ಣುಗಳು ನೆಲಕ್ಕುರುಳಿವೆ. ಇದರಿಂದ ರೈತರ ಆದಾಯಕ್ಕೆ ಖೋತಾ ಆಗಿದೆ. ಒಕ್ಕಣೆ ಮಾಡಿದ ರಾಗಿ ಹುಲ್ಲಿನ ಮೆದೆಗಳು

ಮಳೆಯಿಂದ ನೆನೆದ ಹುಲ್ಲಿನ ಮೆದೆ

ನೀರು ತುಂಬಿಕೊಂಡು ಕೊಳೆತು ಹೋಗಬಹುದು ಎಂದು ರೈತರು ಆತಂಕ ವ್ಯಕ್ತಪಡಿಸಿದರು.

ಕಳೆದ ವರ್ಷ ರೈತರು ರಾಗಿ, ಭತ್ತ, ತೊಗರಿ, ಹುರುಳಿ, ಇನ್ನಿತರ ಬೆಳೆಗಳ ಕೊಯ್ಲು ಮಾಡುವಾಗ, ಕೂಡಿಡುವಾಗ ಮತ್ತು ಒಕ್ಕಣೆ ಮಾಡುವಾಗ ಅಕಾಲಿಕ ಮಳೆ ಬಂದು ಫಸಲು ಹಾಳು ಮಾಡಿತ್ತು. ಹುಲ್ಲು, ರಾಗಿ ಕಪ್ಪಾದವು. ಇದೀಗ ಮತ್ತೆ ಮಳೆ ಬಂದು ವರ್ಷದ ಆದಾಯದ ಮೂಲಗಳಾದ ಹುಣಸೆ, ಮಾವು, ಶೀಗೆಕಾಯಿ ಬೆಳೆಗಳನ್ನು ಹಾಳು ಮಾಡಿದೆ.

ಹೂವು, ಟೊಮೆಟೊ, ತರಕಾರಿ ಬೆಳೆಗಳಿಗೂ ಅಕಾಲಿಕ ಮಳೆಯಿಂದ ತೊಂದರೆಯಾಗಿದೆ. ಈ ಬಾರಿ ಮೊದಲೇ ಮಾವಿನ ಫಸಲು ಕಡಿಮೆ. ಈ ಮಧ್ಯೆ ಮಳೆ ಬಂದು ಇನ್ನಷ್ಟು ನಷ್ಟ ಉಂಟು ಮಾಡಿದೆ ಎನ್ನುತ್ತಾರೆ ರೈತರು.

ಶೀತ ಗಾಳಿ, ಮಳೆಯಿಂದಾಗಿ ಚಳಿಯ ವಾತಾವರಣ ಮೂಡಿದ್ದು, ಜನರು ಮನೆಯಿಂದ ಹೊರಬರಲು ಸಾಧ್ಯವಾಗದಂತಾಗಿದೆ. ಅಕಾಲಿಕ ಮಳೆಯಿಂದ ಶೀತ, ನೆಗಡಿ, ಕೆಮ್ಮು ಮೊದಲಾದ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಳ್ಳುತ್ತವೆ ಅನ್ನುತ್ತಾರೆ ಆರೋಗ್ಯ ಇಲಾಖೆ ಸಿಬ್ಬಂದಿ.

₹ 1.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ಓಡಾಡುತ್ತಿದ್ದ ಇಬ್ಬರು ಆರೋಪಿಗಳು, ಎಂಡಿಎಂಎ ಡ್ರಗ್ಸ್ ಮಾರುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು. ಒಬ್ಬ ಸಿಕ್ಕಿಬಿದ್ದ. ಮತ್ತೊಬ್ಬ ಓಡಿ ಹೋದ. ಬಂಧಿತನಿಂದ ₹1.50 ಲಕ್ಷ ಮೌಲ್ಯದ 11 ಗ್ರಾಂ ತೂಕದ 22 ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಇವರ ಜಾಲದಲ್ಲಿ ಇನ್ನಷ್ಟು ಮಂದಿ ಬಾಗಿಯಾಗಿದ್ದಾರೆ' ಎಂದರು.

ಕಲಾ ಉತ್ಸವವನ್ನು ಎನ್.ಸಂತೋಷ್ ಹೆಗ್ಡೆ ಉದ್ಘಾಟಿಸಿದರು. ಟ್ರಸ್ಟ್‌ನ ಅಧ್ಯಕ್ಷ ಟಿ.ರಾಮಕೃಷ್ಣಪ್ಪ, ಕಾರ್ಯದರ್ಶಿ ಎನ್.ಜ್ಯೋತಿ, ಹೊಯ್ಸಳ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ವಿ.ಗೌರಿಶಂಕರ್ ಇದ್ದರು

'ಯಾರ ಭಾವನೆಗೂ ಚ್ಯುತಿ ತರಬೇಡಿ'

ನೆಲಮಂಗಲ: 'ಧರ್ಮ ಮತ್ತು ಭಾಷೆಯನ್ನು ಎಲ್ಲಿ ಬಳಕೆ ಮಾಡಬೇಕೊ ಅಲ್ಲಿ ಬಳಕೆ ಮಾಡಬೇಕು. ಪ್ರತಿಯೊಬ್ಬರು ಅವರ ಧರ್ಮವನ್ನು ನಂಬಿದ್ದಾರೆ. ಅವರ ಭಾವನೆ ಮೇಲೆ ಹೊಡೆಯುವ ಕೆಲಸ ಮಾಡಬಾರದು' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಹೊಯ್ಸಳ ಪದವಿ ಪೂರ್ವ ಕಾಲೇಜಿನಿಂದ ಆಯೋಜಿಸಿದ್ದ ಸಮಾಲೋಚನಾ ಸಮಾರಂಭ ಹಾಗೂ ಕಲಾ ಉತ್ಸವ ಉದ್ಘಾಟಿಸಿ ಮಾತನಾಡಿದರು.

'ಸಮಾಜ ತನ್ನ ಭಾವನೆಗಳನ್ನ ಬದಲಾಯಿಸಬೇಕು. ಹಿಜಾಬ್ ವಿಚಾರವಾಗಿ ಕೋರ್ಟ್ ತೀರ್ಪು ನೀಡಿದ್ದು, ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಬಹುದು. ಅದನ್ನು ಬಿಟ್ಟು ಬಂದ್ ಮಾಡುವುದು ಸರಿಯಲ್ಲ. ನ್ಯಾಯಾಲಯದ ಮಾತಿಗೆ ಪ್ರತಿಯೊಬ್ಬರು ಬೆಲೆ ಕೊಡಬೇಕು' ಎಂದರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಸಂ: ಕೆಆರ್‌ಡಿಸಿಎಲ್/ಐಎಫ್‌ಬಿ/2021–22/29 ದಿನಾಂಕ: 24.03.2022

ಟೆಂಡರ್ ಆಹ್ವಾನ ಪ್ರಕಟಣೆ

ಹಾಸನ ಜಿಲ್ಲೆ, ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ರಸ್ತೆ ಕಾಮಗಾರಿಗಳ ಅಭಿವೃದ್ಧಿ ಕಾಮಗಾರಿಗೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು https://eproc.karnataka.gov.in ವೆಬ್‌ಸೈಟ್ ಮೂಲಕ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 12.04.2022ರ 17.30 ಗಂಟೆಯವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 16.04.2022ರ 11.00 ಗಂಟೆಗೆ ತೆರೆಯಲಾಗುತ್ತದೆ.

ಗಮನಿಸಿ: ಇನ್ನು ಮುಂದೆ ಈ ಪ್ರಕಟಣೆ ಕುರಿತಾದ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಅವುಗಳನ್ನು ಕೇವಲ ಇ–ಪೋರ್ಟಲ್ / ಕರಅನಿನಿ ವೆಬ್‌ಸೈಟ್ http://www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಮುಖ್ಯ ಅಭಿಯಂತರರು
DIPR/CP/3911/Yakshi/2021-22 ಕೆಆರ್‌ಡಿಸಿಎಲ್, ಬೆಂಗಳೂರು

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪತ್ರಕರ್ತೆ ಸಾವು: ಪತಿ ವಿರುದ್ಧ ಎಫ್‌ಐಆರ್

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಯಿಟರ್ಸ್' ಸುದ್ದಿ ಸಂಸ್ಥೆಯ ಉದ್ಯೋಗಿಯಾಗಿದ್ದ ಪತ್ರಕರ್ತೆ ಶ್ರುತಿ (35) ಸಾವಿನ ಸಂಬಂಧ, ಪತಿ ಅನಿಶ್ ಕೊಯಾಡನ್ ವಿರುದ್ಧ ವೈಟ್‌ಫೀಲ್ಡ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಶ್ರುತಿ

ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಶ್ರುತಿ ಹಾಗೂ ಅನಿಶ್ ದಂಪತಿ ನೆಲೆಸಿದ್ದರು. ಫ್ಲ್ಯಾಟ್‌ನ ಕೊಠಡಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಶ್ರುತಿ ಮೃತದೇಹ ಪತ್ತೆ ಆಗಿತ್ತು.

'ಶ್ರುತಿ ಅವರಿಗೆ ಪತಿ ಅನಿಶ್ ಕಿರುಕುಳ ನೀಡುತ್ತಿದ್ದರು. ಅವರೇ ಶ್ರುತಿ ಸಾವಿಗೆ ಕಾರಣ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂಬುದಾಗಿ ಸಹೋದರ ನಿಶಾಂತ್ ದೂರು ನೀಡಿದ್ದಾರೆ. ಹೀಗಾಗಿ, ಅನಿಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅನಿಶ್, ತಲೆಮರೆಸಿಕೊಂಡಿದ್ದಾರೆ' ಎಂದೂ ತಿಳಿಸಿವೆ.

ದೇವಸ್ಥಾನ ಹುಂಡಿ ಕಳ್ಳತನ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಮಾರಮ್ಮ ದೇವಸ್ಥಾನದ ಹುಂಡಿ ಕಳ್ಳತನ ಮಾಡಿದ್ದ ಆರೋಪದಡಿ ಅಬ್ದುಲ್ ಫಜಲ್ ಅಹ್ಮದ್ (22) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಜಾರ್ಖಂಡ್‌ನ ಅಬ್ದುಲ್, ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಖಾಸಗಿ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದರು. ಕಳ್ಳತನ ಪ್ರಕರಣದಲ್ಲಿ ಅವರನ್ನು ಬಂಧಿಸಲಾಗಿದೆ. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಭದ್ರತಾ ಕೆಲಸದಿಂದ ಬರುತ್ತಿದ್ದ ಸಂಬಳ ಆರೋಪಿಗೆ ಸಾಲುತ್ತಿರಲಿಲ್ಲ. ಹೀಗಾಗಿ, ಕಳ್ಳತನ ಮಾಡಲು ಮುಂದಾಗಿದ್ದರು. ರಾತ್ರಿ ಪಾಳಿಯಲ್ಲಿ ಹೆಚ್ಚಾಗಿ ಕೆಲಸ ಮಾಡುತ್ತಿದ್ದರು. ಅದೇ ವೇಳೆಯೇ ಕಂಪನಿ ಕಚೇರಿ ಸುತ್ತಮುತ್ತ ಓಡಾಡುತ್ತಿದ್ದರು. ದೇವಸ್ಥಾನಗಳ ಹುಂಡಿ ಗಮನಿಸುತ್ತಿದ್ದರು.'

'ಮಾರಮ್ಮ ದೇವಸ್ಥಾನದ ಹುಂಡಿ ನೋಡಿದ್ದ ಆರೋಪಿ, ಅದನ್ನು ಕದ್ದೊಯ್ದಿದ್ದರು. ಈ ಕಳ್ಳತನದ ಬಗ್ಗೆ ದೇವಸ್ಥಾನದವರು ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದರು' ಎಂದೂ ತಿಳಿಸಿದರು.

ಪ್ರೇಮಾ ಸೇರಿ ಮೂವರಿಗೆ 'ಪುಸ್ತಕ ಪ್ರಶಸ್ತಿ'

ಲೇಖಕಿಯರ ಸಂಘದ ದತ್ತಿ ಪ್ರಶಸ್ತಿಗಳು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ 2020ನೇ ಸಾಲಿನ ವಿವಿಧ ವಾರ್ಷಿಕ ದತ್ತಿ ಪ್ರಶಸ್ತಿಗಳು ಪ್ರಕಟವಾಗಿದ್ದು, ಡಾ.ಎಚ್.ಎಸ್. ಪ್ರೇಮಾ ಸೇರಿದಂತೆ ಮೂವರು ಲೇಖಕಿಯರು 'ಪುಸ್ತಕ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ ಅವರು ಪ್ರಶಸ್ತಿ ಪಟ್ಟಿ ಪ್ರಕಟಿಸಿದ್ದಾರೆ. ಪ್ರೇಮಾ ಅವರ 'ಇಮ್ಯುನಿಟಿಗಾಗಿ ಆಹಾರ' ವಿಜ್ಞಾನ ಕೃತಿ 'ಭಾಗ್ಯ ನಂಜಪ್ಪ ವಿಜ್ಞಾನ ಸಾಹಿತ್ಯ ಪ್ರಶಸ್ತಿ'ಗೆ, ಮಂಜುಳಾ ರಾಜ್ ಅವರ 'ಜನರೇಶನ್ ಗ್ಯಾಪ್' ಲಲಿತ ಪ್ರಬಂಧ 'ನಾಗರತ್ನ ಚಂದ್ರಶೇಖರ ದತ್ತಿ ಪ್ರಶಸ್ತಿ'ಗೆ ಹಾಗೂ ಪ್ರೊ.ಬಿ.ವೈ. ಲಲಿತಾಂಬ ಅವರ 'ಮೇಘರಾಗ' ಅನುವಾದಿತ ಕಾದಂಬರಿ 'ಜಿ.ವಿ. ನಿರ್ಮಲ ದತ್ತಿ ಪ್ರಶಸ್ತಿ'ಗೆ ಆಯ್ಕೆಯಾಗಿವೆ.

ಧಾರವಾಡದ ಲಲಿತಾ ಕೆರಿಮನಿ, ಬೆಂಗಳೂರಿನ ವಿಜಯಾ ಗುರುರಾಜ್, ಕಲಬುರಗಿಯ ಕಾವ್ಯಶ್ರೀ ಮಹಾಗಾಂವಕರ್, ಬೆಂಗಳೂರಿನ ಡಾ. ಪದ್ಮಿನಿ ನಾಗರಾಜು, ಹಾಸನದ ಶೈಲಜಾ ಹಾಸನ, ಮುಂಬೈನ ಗಿರಿಜಾ ಶಾಸ್ತ್ರಿ, ಬೆಂಗಳೂರಿನ ಗಾಯತ್ರಿ ರಾಮಣ್ಣ, ದಾವಣಗೆರೆಯ ಮಲ್ಲಮ್ಮ ನಾಗರಾಜ್, ಬೆಳಗಾವಿಯ ದೀಪಿಕಾ ಚಾಟೆ ಹಾಗೂ ಉತ್ತರ ಕನ್ನಡದ ಭಾಗೀರಥಿ ಹೆಗಡೆ ಅವರು 'ವಿಶಿಷ್ಟ ಲೇಖಕಿ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

'ಗೀತಾ ದೇಸಾಯಿ ದತ್ತಿನಿಧಿ ಬಹುಮಾನ'ಕ್ಕೆ ಡಾ. ರಾಧಾ ಕುಲಕರ್ಣಿ ಅವರ 'ವೈಚಾರಿಕ ಅಭಿವ್ಯಕ್ತಿ' ಕೃತಿ, 'ಕಾಕೋಳು ಸರೋಜಮ್ಮ ಕಾದಂಬರಿ ಬಹುಮಾನ'ಕ್ಕೆ ಮಾಧುರಿಕೃಷ್ಣ ಅವರ 'ಅಸ್ತಮಾನದ ಅಂಚಿನಲ್ಲಿ' ಕಾದಂಬರಿ, 'ಸುಧಾಮೂರ್ತಿ ದತ್ತಿನಿಧಿ ತ್ರಿವೇಣಿ ಸಾಹಿತ್ಯ ಪುರಸ್ಕಾರ'ಕ್ಕೆ ಮೀನಾ ಮೈಸೂರು ಅವರ 'ಲೋಕ ಪಾವನಿ' ಕಥಾ ಸಂಕಲನ, 'ಕಮಲಾ ರಾಮಸ್ವಾಮಿ ದತ್ತಿನಿಧಿ ಬಹುಮಾನ'ಕ್ಕೆ ಎಂ. ಜಾನಕಿ ಬ್ರಹ್ಮಾವರ ಅವರ 'ರಷ್ಯಾದಲ್ಲಿ ಏಳು ದಿನಗಳು' ಪ್ರವಾಸ ಸಾಹಿತ್ಯ, 'ನುಗ್ಗೇಹಳ್ಳಿ ಪಂಕಜ ದತ್ತಿನಿಧಿ ಬಹುಮಾನ'ಕ್ಕೆ ಮಾಲತಿ ಮುದಕವಿ ಅವರ 'ಹಾಸ್ಯ ರಂಗೋಲಿ' ಹಾಸ್ಯ ಕೃತಿ, ಗುಣಸಾಗರಿ ನಾಗರಾಜು ಮಕ್ಕಳ ಸಾಹಿತ್ಯ ದತ್ತಿನಿಧಿ ಬಹುಮಾನ'ಕ್ಕೆ ಡಾ.ಕೆ.ಎಸ್. ಚೈತ್ರಾ ಅವರ 'ಕಾಮನಬಿಲ್ಲಿನ ಕೊಡೆ ಮತ್ತು ಇತರ ಕಥೆಗಳು' ಮಕ್ಕಳ ಸಾಹಿತ್ಯ ಕೃತಿ ಆಯ್ಕೆಯಾಗಿವೆ.

'ಇಂದಿರಾ ವಾಣಿರಾವ್ ದತ್ತಿನಿಧಿ ಬಹುಮಾನ'ಕ್ಕೆ ಸುಶೀಲಾ ಆರ್. ರಾವ್ ಅವರ 'ಅಮ್ಮಂದಿರ ಆಂದೋಲನ' ನಾಟಕ, 'ಡಾ.ಜಯಮ್ಮ ಕರಿಯಮ್ಮ ದತ್ತಿನಿಧಿ ಬಹುಮಾನ'ಕ್ಕೆ ಶಾಂತಿ ನಾಯಕ ಅವರ 'ಕೆಸು ಪುರಾಣ ಮತ್ತು ವಾಸ್ತವ' ಸಂಶೋಧನಾ ಕೃತಿ, 'ಬ.ನ. ಸುಂದರರಾವ್ ದತ್ತಿನಿಧಿ ಬಹುಮಾನ'ಕ್ಕೆ ಡಾ. ಸುಕನ್ಯಾ ಪ್ರಭಾಕರ್ ಅವರ 'ಹರಿಯನ್ನರಸಿದ ವನಿತೆಯರು' ಕೃತಿ, 'ಉಮಾದೇವಿ ಶಂಕರರಾವ್ ದತ್ತಿನಿಧಿ ಬಹುಮಾನ'ಕ್ಕೆ ಉಮಾ ಪ್ರಕಾಶ್ ಶೆಟ್ಟಿ ಅವರ 'ತೆರೆಯೋ ಬಾಗಿಲನು...', 'ನಿರುಪಮಾ ಕಥಾ ಸ್ಪರ್ಧೆ ಬಹುಮಾನ'ಕ್ಕೆ ಜಯಶ್ರೀ ದೇಶಪಾಂಡೆ ಅವರ ಅಂತರ್ಜಾಲ ಪತ್ರಿಕೆಯಲ್ಲಿ ಪ್ರಕಟವಾದ ಸಣ್ಣಕಥೆ ಹಾಗೂ 'ಡಾ.ನಿರ್ಮಲಾ ಎಲಿಗಾರ್ ದತ್ತಿನಿಧಿ ಬಹುಮಾನ'ಕ್ಕೆ ಎಡೆಯೂರು ಪಲ್ಲವಿ, ಗೀತಾ ಲಕ್ಷ್ಮಿ ಎಲ್., ಮರಿಯಾಂಬಿ, ಅನು ಗೋವೇನಹಳ್ಳಿ ಮತ್ತು ಸುಕನ್ಯಾ ಶಿವಶಂಕರ್ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಬೆಂಗಳೂರಿನ ಬಿಎಂಶ್ರೀ ಕಲಾಭವನದಲ್ಲಿ ಏರ್ಪಡಿಸಿದ್ದ ರಾಷ್ಟ್ರಕವಿ ಎಂ.ಗೋವಿಂದ ಪೈ ಅವರ 140ನೇ ಜನ್ಮದಿನ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪ್ರಕಾಶ್ ಮೂರ್ತಿ, ಸಾಹಿತಿ ಸುಂ.ಕಂ.ಗೋವರ್ಧನ, ಸಾಹಿತಿ ನಾ. ದಾಮೋದರ ಶೆಟ್ಟಿ, ಪತ್ರಕರ್ತ ರಾಮಣ್ಣ ಎಚ್.ಕೋಡಿಹೊಸಹಳ್ಳಿ ಮತ್ತು ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ಅವರು ಎಂ.ಗೋವಿಂದ ಪೈ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

ಲೇಖಕಿ ಜಯಶ್ರೀ ದೇಶಪಾಂಡೆ ಅವರ 'ಹಲವು ನಾಡು ಹೆಜ್ಜೆ ಹಾಡು' ಮತ್ತು 'ನೋಟ್ ಬುಕ್ಕಿನ ಕಡೆಯ ಪುಟ' ಪುಸ್ತಕಗಳನ್ನು ಚಿತ್ರ ನಿರ್ದೇಶಕ ಪಿ.ಶೇಷಾದ್ರಿ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಪ್ರಕಾಶಕರಾದ ರಾಮನಾಥ್, ಆರ್.ಪೂರ್ಣಿಮಾ, ಲೇಖಕಿಯರಾದ ಭುವನೇಶ್ವರಿ ಹೆಗಡೆ, ಜಯಶ್ರೀ ಕಾಸರವಳ್ಳಿ ಇದ್ದಾರೆ

ನಗರದಲ್ಲಿ ಇಂದು

ನೈರುತ್ಯ ರೈಲ್ವೆಯ ಮೊಟ್ಟ ಮೊದಲ ಮಳಿಗೆ ಪ್ರಾರಂಭ: ಸ್ಥಳ– ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ, ಬೆಳಿಗ್ಗೆ 10

ಉದ್ಯೋಗ ಮೇಳ ಮತ್ತು ಉದ್ಯಮಶೀಲತೆ ಸಮಾವೇಶ: **ಅತಿಥಿಗಳು:** ಡಾ.ಆರ್. ರವೀಂದ್ರ, ಡಾ. ಸೆಲ್ವಕುಮಾರ್, ಕೃಷ್ಣನ್, ಅಶ್ವಿನ್ ಡಿ.ಗೌಡ, ಸಂಗೀತಾ ಪಾತ್ರಾ, ಗೌರವ್, ಗುರುಚರಣನ್, ಆಯೋಜನೆ– ಸೆಂಟರ್ ಫಾರ್ ಸಸ್ಟೇನೆಬಲ್ ಡೆವಲಪ್‌ಮೆಂಟ್, ಗ್ರೀನ್ ಸ್ಕಿಲ್ಸ್ ಅಕಾಡೆಮಿ, ಸ್ಥಳ– ಐಎಎಸ್ ಆಫಿಸರ್ಸ್ ಅಸೋಸಿಯೇಷನ್, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ವಕೀಲರಿಗೆ ಅಭಿನಂದನೆ: ಮುಖ್ಯ ಅತಿಥಿಗಳು– ಎಸ್. ಸುಜಾತಾ, ಕೆ.ಎಸ್. ಮುದಗಲ್, ವಿಶೇಷ ಆಹ್ವಾನಿತರು– ಹರಿಪ್ರಿಯಾ, ಭಾವನಾ, ಕೆ.ಎಸ್. ಸುರೇಖಾ, ಸೋನಿಕಾ ಗೌಡ, ಅಧ್ಯಕ್ಷತೆ– ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ– ವಕೀಲರ ಸಂಘ, ಸ್ಥಳ– ವಕೀಲರ ಭವನ, ಸಿ.ಟಿ. ಸಿವಿಲ್ ನ್ಯಾಯಾಲಯದ ಆವರಣ, ಮಧ್ಯಾಹ್ನ 1.45

ಕರ್ನಾಟಕ ಸಂಗೀತ ಕಛೇರಿ: ಟಿ.ಎಂ. ಕೃಷ್ಣ, ಜಿ. ರವಿಕಿರಣ್, ರಿತ್ವಿಕ್ ರಾಜ್, ಪ್ರವೀಣ್ ಸ್ಪರ್ಶ್, ವಿಘ್ನೇಶ್ ಈಶ್ವರ್, ಆದಿತ್ಯ ಪ್ರಕಾಶ, ವಿಘ್ನೇಶ್ ಕೃಷ್ಣಮೂರ್ತಿ, ಶಾಲಿನಿ ಎಂ., ಆಯೋಜನೆ– ರೇವಾ ವಿಶ್ವವಿದ್ಯಾಲಯದ ಸೆಂಟರ್ ಫಾರ್ ವಿಷುಯಲ್ ಆ್ಯಂಡ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ– ಸಿವಿಲ್ ಎಂಜಿನಿಯರಿಂಗ್ ವಿಭಾಗ, ಆರ್.ವಿ. ವಿಶ್ವವಿದ್ಯಾಲಯ, ಮೈಸೂರು ರಸ್ತೆ, ಬೆಳಿಗ್ಗೆ 10.30ರಿಂದ 12.30, ಸ್ಥಳ– ಶಿವಾನಂದ ಶರ್ಮ ಕಲಾಕ್ಷೇತ್ರ, ಆರ್.ವಿ. ದಂತ ವೈದ್ಯಕೀಯ ಕಾಲೇಜು, ಜೆ.ಪಿ.ನಗರ, ಸಂಜೆ 6



ಟಿ.ಎಂ. ಕೃಷ್ಣ

ಬೆಂಗಳೂರು ನಗರ ವಲಯ ಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣೆ: ಜೆ.ಸಿ. ಮಾಧುಸ್ವಾಮಿ, ಅಧ್ಯಕ್ಷತೆ– ಸಿ.ಎನ್. ಬಾಲಕೃಷ್ಣ, ಮುಖ್ಯ ಅತಿಥಿಗಳು– ದ್ವಾರಕನಾಥ್ ಬಾಬು, ವಿವೇಕ್ ಸುಬ್ಬಾರೆಡ್ಡಿ, ಟಿ. ಕೋನಪ್ಪ ರೆಡ್ಡಿ, ಆಯೋಜನೆ– ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ವಿಶ್ವೇಶ್ವರಪುರ ಕಾನೂನು ಮಹಾವಿದ್ಯಾಲಯ, ಸ್ಥಳ– ಜಿಲ್ಲಾ ಪಂಚಾಯಿತಿ ಸಭಾಂಗಣ, ಬನಶಂಕರಿ, ಮಧ್ಯಾಹ್ನ 3

ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ: ಉದ್ಘಾಟನೆ– ಬಸವರಾಜ ಹೊರಟ್ಟಿ, ಮುಖ್ಯ ಅತಿಥಿ– ಕೆ.ಸಿ. ನಾರಾಯಣಗೌಡ, ಅಧ್ಯಕ್ಷತೆ– ರಿಜ್ವಾನ್ ಅರ್ಷದ್, ಉಪಸ್ಥಿತಿ– ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಕೆ.ಸಿ. ರಾಮಮೂರ್ತಿ, ಆಯೋಜನೆ– ಯುವಜನ ಮತ್ತು ಕ್ರೀಡಾ ಸಚಿವಾಲಯ, ಸ್ಥಳ– ಯುವನಿಕಾ, ನೃಪತುಂಗ ರಸ್ತೆ, ಸಂಜೆ 4.30

'ನಾದಜ್ಯೋತಿ ಸಂಗೀತ ಸಂಭ್ರಮ' ಹಾಗೂ ಪುರಂದರದಾಸರ ಮತ್ತು ತ್ರಿಮೂರ್ತಿಗಳ ಉತ್ಸವ: ಗಾಯನ– ಐಶ್ವರ್ಯ ರಘುನಾಥ್, ವಯೋಲಿನ್– ವಿ. ನಳಿನಾ ಮೋಹನ್, ಮೃದಂಗ– ವಿ. ಕೃಷ್ಣ, ಖಂಜರಿ– ಅನಿಲ್ ಪರಾಶರ, ಆಯೋಜನೆ– ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ– ಶ್ರೀರಾಮ ಮಂದಿರ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಎಂಟನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಶಾಲಾ ವಿದ್ಯಾರ್ಥಿ ಧೀರಜ್‌ಕುಮಾರ್ (14) ಎಂಬಾತ ಬುಧವಾರ ಸಂಜೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

'ಧೀರಜ್, ಸ್ಥಳೀಯ ಶಾಲೆಯೊಂದರಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿದ್ದ. ಶಾಲೆಯಲ್ಲಿ ಬುಧವಾರ ಮುಖ್ಯ ಪರೀಕ್ಷೆಯಲ್ಲಿ ನಕಲು ಮಾಡುವಾಗ ಧೀರಜ್ ಶಿಕ್ಷಕರ ಕೈಗೆ ಸಿಕ್ಕಿಬಿದ್ದಿದ್ದಾನೆ. ಹೀಗಾಗಿ ಪೋಷಕರನ್ನು ಪ್ರಾಂಶುಪಾಲರು ಶಾಲೆಗೆ ಕರೆದಿದ್ದಾರೆ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಪೋಷಕರು ಶಾಲೆಗೆ ಬಂದಿದ್ದರಿಂದ ಸ್ನೇಹಿತರ ಎದುರು ಅವಮಾನವಾಯಿತೆಂದು ಧೀರಜ್ ನೊಂದುಕೊಂಡಿದ್ದ. ಈ ಸಂಗತಿ ಮರಣಪತ್ರದಲ್ಲಿದೆ. ಇದೇ ಕಾರಣಕ್ಕೆ ಬಾಲಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗುತ್ತಿದೆ' ಎಂದೂ ಪೊಲೀಸರು ಹೇಳಿದರು.

ಪ್ರಜಾವಾಣಿ

ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್

ನೀವು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಿವಾಸಿಯೇ?
ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ.
ನಿಮ್ಮ ಅಹವಾಲು ಆಲಿಸಲಿದ್ದಾರೆ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಂ. ಸತೀಶ್ ರೆಡ್ಡಿ ಅವರೊಂದಿಗೆ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ನಿಮ್ಮ ನೋವಿಗೆ ಕಿವಿಯಾಗಲಿದ್ದಾರೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.

ಶ್ರೀ ಎಂ.ಸತೀಶ್ ರೆಡ್ಡಿ

- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು

ಕಾರ್ಯಕ್ರಮದ ದಿನಾಂಕ – 26/03/2022, ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ
(ನೋಂದಣಿ: ಬೆಳಿಗ್ಗೆ 9ರಿಂದ, ಪ್ರವೇಶ ಉಚಿತ)
ಸ್ಥಳ: ಗಣೇಶ ದೇವಸ್ಥಾನ ಮೈದಾನ
186, ಪುಟ್ಟೇನಹಳ್ಳಿ ರೋಡ್, ಕೆ ಆರ್ ಲೇಔಟ್,
ಜೆ ಪಿ ನಗರ 6ನೇ ಹಂತ, ಬೆಂಗಳೂರು 78.

ಸಂಪರ್ಕಕ್ಕೆ:
ಚಂದ್ರಶೇಖರ್ ಜಿ ಜಿ: 94485 28998

ಮಾವಿಗೆ ಕಂಟಕವಾದ ಅಕಾಲಿಕ ಮಳೆ • ತಡವಾಗಿ ಹೂಬಿಟ್ಟ ಮರಗಳು

ಇಳುವರಿ ಕುಸಿತ: ಈ ಬಾರಿ ಮಾವು 'ಕಹಿ'

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯದಲ್ಲಿ ಸುರಿದ ಅಕಾಲಿಕ ಮಳೆಯಿಂದ ಮಾವು ಹೂವು ಕಟ್ಟುವ ಅವಧಿ ಒಂದು ತಿಂಗಳು ಮುಂದಕ್ಕೆ ಹೋದ ಪರಿಣಾಮ ಈ ಬಾರಿ ಮಾವಿನ ಇಳುವರಿ ಅರ್ಧದಷ್ಟು ಕುಸಿಯಲಿದ್ದು, ಮಾರುಕಟ್ಟೆ ಪ್ರವೇಶಿಸುವುದೂ ತಡವಾಗಲಿದೆ.

ತೇವಾಂಶದಿಂದಾಗಿ ಮರಗಳು ತಡವಾಗಿ ಹೂ ಬಿಟ್ಟರೂ ಬಿಸಿಲು, ಗಾಳಿಗೆ ಅರ್ಧದಷ್ಟು ಉದುರಿ ಹೋದವು. ನಿರೀಕ್ಷಿತ ಪ್ರಮಾಣದಲ್ಲಿ ಕಾಯಿ ಕಟ್ಟಲಿಲ್ಲ. ಕಟ್ಟಿದ ಕಾಯಿ ಮರದಲ್ಲಿ ನಿಲ್ಲಲಿಲ್ಲ. ಇಳುವರಿ ಕುಂಠಿತದಿಂದ ಸಹಜವಾಗಿ ಮಾವು ಈ ಬಾರಿ ದುಬಾರಿಯಾಗಲಿದೆ!

ರಾಜ್ಯದಲ್ಲಿ ಈ ವರ್ಷ 1.6 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ಇಳಿ ಹಂಗಾಮಿನ ಕಾರಣ ಸರಾಸರಿ ಶೇ 20-25ರಷ್ಟು ಇಳುವರಿ ಮಾತ್ರ ಸಿಗಲಿದೆ. ರಾಜ್ಯದಲ್ಲಿ ವಾರ್ಷಿಕ ಮಾವು ಉತ್ಪಾದನೆ ಸರಾಸರಿ 12–15 ಲಕ್ಷ ಟನ್‌ಗೆ ಪ್ರತಿಯಾಗಿ ಈ ವರ್ಷ 5–6 ಲಕ್ಷ ಟನ್ ಉತ್ಪನ್ನ ಮಾತ್ರ ದೊರೆಯುವ ನಿರೀಕ್ಷೆ ಇದೆ.

ಮಾವು ಹೆಚ್ಚಾಗಿ ಬೆಳೆಯುವ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಹಾವೇರಿ, ಮೈಸೂರು, ಮಂಡ್ಯ ಮೊದಲಾದ ಜಿಲ್ಲೆಗಳ ಪರಿಸ್ಥಿತಿ ಭಿನ್ನವಾಗಿಲ್ಲ.

'ರಾಜ್ಯದಲ್ಲೇ ಮೊದಲು ಮಾವು ಮಾರುಕಟ್ಟೆಗೆ ಬರುವುದು ರಾಮನಗರದಿಂದ. ಹಂಗಾಮು ವಿಳಂಬವಾದ ಕಾರಣ ಏಪ್ರಿಲ್ ಮೊದಲ ವಾರದ ನಂತರ ಮಾರುಕಟ್ಟೆ ಪ್ರವೇಶಿಸಲಿದೆ. ಚಿಕ್ಕಬಳ್ಳಾಪುರ ಸುತ್ತಮುತ್ತ ಮರಗಳು ಹೇರಳವಾಗಿ ಹೂ ತುಂಬಿಕೊಂಡಿಲ್ಲ. ಶೇ 50ರಿಂದ 60ರಷ್ಟು ಹೀಚು ಕಟ್ಟಿದ್ದು, ಫಸಲು ಕಡಿಮೆಯಾಗಲಿದೆ' ಎನ್ನುತ್ತಾರೆ ಚಿಂತಾಮಣಿಯ ಮಾವು ಅಭಿವೃದ್ಧಿ ಮಂಡಳಿಯ ಉಪ ನಿರ್ದೇಶಕ ಡಿ.ಕುಮಾರಸ್ವಾಮಿ.

ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಯ ಕೆಲವೆಡೆ ಮರಗಳು ಇನ್ನೂ ಹೂ ಬಿಡುತ್ತಿವೆ. ಇನ್ನೂ ಕೆಲವೆಡೆ ಕಾಯಿಯಾಗುವ ಹಂತದಲ್ಲಿವೆ. ಈಗಾಗಲೇ ಮಾರುಕಟ್ಟೆಯಲ್ಲಿ ಇರಬೇಕಿದ್ದ ತೋತಾಪುರಿ ಇನ್ನೂ ಕಾಣುತ್ತಿಲ್ಲ.

ಅಲ್ಫಾನ್ಸೊ ಮತ್ತು ಕಲ್ಮಿ ತಳಿಯ ಮಾವಿಗೆ ಹೆಸರುವಾಸಿಯಾದ ಹುಬ್ಬಳ್ಳಿ–ಧಾರವಾಡ, ಹಾವೇರಿ, ಬೆಳಗಾವಿ ಸುತ್ತಮುತ್ತ ಜನವರಿಯಲ್ಲಿ ಅರಳಿದ್ದ ಹೂವು ಭಾರಿ ನಿರೀಕ್ಷೆ ಹುಟ್ಟು ಹಾಕಿತ್ತು. ಆದರೆ, ನಿರೀಕ್ಷೆಯಂತೆ ಕಾಯಿ ಕಟ್ಟಲಿಲ್ಲ.

'ಈ ವರ್ಷ ಶೇ 85-90 ಮರಗಳಲ್ಲಿ ಹೂವು ಕಾಣಿಸಿಕೊಂಡಿದ್ದು, ಉತ್ತಮ ಫಸಲಿನ ನಿರೀಕ್ಷೆ ಹುಟ್ಟಿಸಿತ್ತು. ನಂತರದಲ್ಲಿ ಮರಗಳು ಮತ್ತೆ ಚಿಗುರಿದ್ದು, ಹೂವೆಲ್ಲ ಉದುರಿ ಹೋಗಿದೆ. ಬದಾಮಿ ಹೊರತುಪಡಿಸಿ ಉಳಿದ ತಳಿಯ ಮಾವಿಗೆ ಹೆಚ್ಚು ಹಾನಿಯಾಗಿದೆ. ಉತ್ಪನ್ನದ ಕೊರತೆ ಕಾರಣ ಸಹಜವಾಗಿಯೇ ಬೆಲೆ ಏರಿಕೆ ಆಗಲಿದೆ' ಎಂದು ತೋಟಗಾರಿಕೆ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಎಸ್.ವಿ. ಹಿತ್ತಲಮನಿ 'ಪ್ರಜಾವಾಣಿ'ಗೆ ತಿಳಿಸಿದರು.

ಈ ವರ್ಷ ಮಾವು ಬೆಳೆದ ಪ್ರದೇಶ

3,500 ಹೆಕ್ಟೇರ್ ಮೈಸೂರು	870 ಹೆಕ್ಟೇರ್ ಚಾಮರಾಜನಗರ	600 ಹೆಕ್ಟೇರ್ ಮಂಡ್ಯ
30,000 ಹೆಕ್ಟೇರ್ ರಾಮನಗರ	15,778 ಹೆಕ್ಟೇರ್ ಚಿಕ್ಕಬಳ್ಳಾಪುರ	50,000 ಹೆಕ್ಟೇರ್ ಚಿಕ್ಕಬಳ್ಳಾಪುರ

ವಿವಿಧ ಜಿಲ್ಲೆಗಳಲ್ಲಿ ಈ ವರ್ಷ ಮಾವು ಉತ್ಪಾದನೆ ನಿರೀಕ್ಷೆ

97,000 ಟನ್ ಧಾರವಾಡ

6,000 ಟನ್ ಮೈಸೂರು

800 ಟನ್ ಮಂಡ್ಯ

ಶೇ 40 ಕೋಲಾರ

ಮರ ದತ್ತು

ರೈತರೇ ಕಟ್ಟಿಕೊಂಡ ಸಂಘ, ಉತ್ಪಾದನಾ ಕಂಪನಿಗಳು ನೇರವಾಗಿ ಗ್ರಾಹಕರನ್ನು ತಲುಪಲು ಪ್ರಯತ್ನಿಸುತ್ತಿವೆ. ರಾಮನಗರದ ತೆನೆ ಸಾವಯವ ಕೃಷಿಕ ಬಳಗ 'ಮಾವಿನ ಮರ ದತ್ತು' ಯೋಜನೆ ರೂಪಿಸಿದೆ. ₹1 ಸಾವಿರ ನೀಡಿ ಗ್ರಾಹಕರು ಇಷ್ಟದ ಮಾವಿನ ಮರವನ್ನು ದತ್ತು ಪಡೆಯಬಹುದು.

ಅಂಕಿ-ಅಂಶಗಳು

1.6 ಲಕ್ಷ ಹೆಕ್ಟೇರ್ ರಾಜ್ಯದಲ್ಲಿ ಈ ವರ್ಷ ಮಾವು ಬೆಳೆದ ಪ್ರದೇಶ

ಶೇ **20-25** ಸರಾಸರಿ ಇಳುವರಿ ನಿರೀಕ್ಷೆ

ಸರಾಸರಿ **12-15** ಲಕ್ಷ ಟನ್ ರಾಜ್ಯದಲ್ಲಿ ವಾರ್ಷಿಕ ಮಾವು ಉತ್ಪಾದನೆ

5-6 ಲಕ್ಷ ಟನ್ ರಾಜ್ಯದಲ್ಲಿ ಈ ವರ್ಷ ಮಾವು ಉತ್ಪಾದನೆ ನಿರೀಕ್ಷೆ

ನಾಲ್ಕು ವರ್ಷದಿಂದ ಮಾವು ಬೆಳೆಗಾರರು ಸಂಕಷ್ಟದಲ್ಲಿದ್ದರೂ ಸರ್ಕಾರ ನೆರವಿಗೆ ಧಾವಿಸಿಲ್ಲ, ಕ್ರೇಟ್‌ಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಶೇ 50ರಿಂದ 25ಕ್ಕೆ ಇಳಿಸಿದೆ.

ಸಿ. ಪುಟ್ಟಸ್ವಾಮಿ, ರೈತ ಮುಖಂಡ, ರಾಮನಗರ

ಆರೋಪಿ ಶಿಕ್ಷಕನಿಗೆ ನ್ಯಾಯಾಂಗ ಬಂಧನ

24 ವರ್ಷಗಳಿಂದ ಅಣ್ಣನ ಹೆಸರಲ್ಲಿ ಶಿಕ್ಷಕನಾಗಿ ಕೆಲಸ: ತಮ್ಮನ ಬಂಧನ

ಪ್ರಜಾವಾಣಿ ವಾರ್ತೆ



ಲಕ್ಷ್ಮಣೇಗೌಡ

ಹುಣಸೂರು: 24 ವರ್ಷಗಳಿಂದ ಮೃತ ಅಣ್ಣನ ಹೆಸರಿನಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆರೋಪಿ ಶಿಕ್ಷಕ ಲಕ್ಷ್ಮಣೇಗೌಡನನ್ನು ಪೊಲೀಸರು ಬಂಧಿಸಿದ್ದು, ಪಿರಿಯಾಪಟ್ಟಣ ಜೆಎಂಎಫ್‌ಸಿ ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ.

ಆರೋಪಿಯ ಅಣ್ಣ ಲೋಕೇಶ್ ಗೌಡ ಅವರು ಶಿಕ್ಷಕ ಹುದ್ದೆಗೆ ನೇಮಕಾತಿ ಆದೇಶ ಲಭಿಸಿದ ಕೆಲವೇ ದಿನಗಳ ನಂತರ ಮೃತಪಟ್ಟರು. ಅವರ ನೇಮಕಾತಿ ಪತ್ರ ಸೇರಿದಂತೆ ಎಲ್ಲಾ ದಾಖಲೆಯನ್ನು ಶಿಕ್ಷಣ ಇಲಾಖೆಗೆ ನೀಡಿ ತಾನೇ ಲೋಕೇಶ್ ಗೌಡ ಎಂದು ಬಿಂಬಿಸಿಕೊಂಡ ಲಕ್ಷ್ಮಣೇಗೌಡ, ಪಿರಿಯಾಪಟ್ಟಣದ ಮುದ್ದನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 1998ರಲ್ಲಿ ಶಿಕ್ಷಕ ವೃತ್ತಿಗೆ ಸೇರಿದರು. ಬಳಿಕ ಜಿಲ್ಲೆಯ ವಿವಿಧ ಶಾಲೆಗಳಲ್ಲಿ 24 ವರ್ಷ ಕಾರ್ಯನಿರ್ವಹಿಸಿದ್ದಾರೆ.

ತಾಲ್ಲೂಕಿನ ಕಟ್ಟೆಮಳಲವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾಗ ಆರೋಪಿ ಕುಟುಂಬದಲ್ಲಿ ಉಂಟಾದ ಭಿನ್ನಾಭಿಪ್ರಾಯದಿಂದ ಈ ಸಂಗತಿ ಹೊರಬಿದ್ದಿದೆ.

ಸ್ಥಳೀಯ ಪತ್ರಕರ್ತ ಇಂಟೆಕ್ ರಾಜು ಎಂಬುವವರು ಶಿಕ್ಷಣ ಇಲಾಖೆಗೆ 2019ರ ಜನವರಿಯಲ್ಲಿ ದೂರು ನೀಡಿದ್ದರು. ಇಲಾಖೆ ಕ್ರಮಕೈಗೊಳ್ಳದ ಕಾರಣ ಲೋಕಾಯುಕ್ತಕ್ಕೂ ದೂರು ಸಲ್ಲಿಸಿದ್ದರು. ಆರೋಪಿಯು ಇಲಾಖೆಗೆ ನೀಡಿದ ವಂಶವೃಕ್ಷ ಮತ್ತು ಅಂಕಪಟ್ಟಿ ನಕಲಿ ಎಂಬುದು ವಿಚಾರಣೆಯಲ್ಲಿ ಸಾಬೀತಾಯಿತು. ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಮಾರ್ಚ್ 21ರಂದು ದೂರು ದಾಖಲಿಸಿ, ಬಂಧಿಸಲಾಯಿತು.

'ಲೋಕಾಯುಕ್ತದ ಆದೇಶದ ಮೇಲೆ ನಾಲ್ಕು ಹಂತಗಳಲ್ಲಿ ವಿಚಾರಣೆ ನಡೆಸಿ ಪ್ರಕರಣಕ್ಕೆ ಅಂತ್ಯ ಹಾಡಿದ್ದೇವೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ತಿಳಿಸಿದರು.

ದೂರುದಾರ ಇಂಟೆಕ್ ರಾಜು, 'ಶಿಕ್ಷಣ ಇಲಾಖೆಗೆ ದೂರು ನೀಡಿದ್ದರೂ ಕ್ರಮ ಕೈಗೊಳ್ಳಲಿಲ್ಲ. ಲೋಕಾಯುಕ್ತರಿಗೆ ದೂರು ಸಲ್ಲಿಸಿದ ಬಳಿಕ ವಿಚಾರಣೆ ಚುರುಕುಗೊಂಡಿತು' ಎಂದರು.

ಮುಖ್ಯಾಂಶಗಳು

- ಶಿಕ್ಷಕರಾಗಿ ನೇಮಕಗೊಂಡ ಕೆಲ ದಿನಗಳ ನಂತರ ಲೋಕೇಶ್ ಗೌಡ ನಿಧನ
- 1998ರಲ್ಲಿ ಶಿಕ್ಷಕರಾಗಿ ತಮ್ಮ ಲಕ್ಷ್ಮಣೇಗೌಡ ಕೆಲಸಕ್ಕೆ ಹಾಜರು
- ಕುಟುಂಬದಲ್ಲಿನ ಭಿನ್ನಾಭಿಪ್ರಾಯದಿಂದ ಸಂಗತಿ ಬಹಿರಂಗ

ಎಸಿಬಿ ಬಲೆಗೆ ಸಿಇಒ

ಮೈಸೂರು: ಟೆಂಡರ್ ಪಡೆದ ವ್ಯಕ್ತಿಯೊಬ್ಬರಿಗೆ ಕಾರ್ಯಾದೇಶ ನೀಡಲು ₹ 1 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಗಿರೀಶ್ ಅವರನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ.

'ಪ್ರಾಧಿಕಾರಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡಲು ಟೆಂಡರ್ ತೆಗೆದುಕೊಂಡಿದ್ದ ವ್ಯಕ್ತಿಯೊಬ್ಬರಿಗೆ ಕಾರ್ಯಾದೇಶ ನೀಡಲು ₹ 1 ಲಕ್ಷಕ್ಕೆ ಗಿರೀಶ್ ಬೇಡಿಕೆ ಇರಿಸಿದ್ದರು.

ಮಗನಿಗೂ ಸವಲತ್ತು ಪಡೆದ ಶಾಸಕ ರೇಣುಕಾಚಾರ್ಯ: ಆರೋಪ

ಮೈಸೂರು: 'ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಪರಿಶಿಷ್ಟ ಜಾತಿಯ ಹೆಸರಿನಲ್ಲಿ ತಮ್ಮ ಪುತ್ರನ ಶಿಕ್ಷಣಕ್ಕೆ ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ನಿಗಮದಿಂದ ₹ 42 ಲಕ್ಷ ಪಡೆದಿದ್ದಾರೆ' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದರು.

'ಮಗಳು ಪರಿಶಿಷ್ಟ ಜಾತಿ ಹೆಸರಿನಲ್ಲಿ ಪ್ರಮಾಣಪತ್ರ ಪಡೆದಿರುವುದನ್ನು ರೇಣುಕಾಚಾರ್ಯ ಒಪ್ಪಿಕೊಂಡಿದ್ದಾರೆ. ಅವರ ಮಗ ಎಂ.ಆರ್.ಚಂದನ್ ಕೂಡ ಪ್ರಮಾಣಪತ್ರ ಪಡೆದಿದ್ದಾರೆ. ಅಮೆರಿಕದಲ್ಲಿ ಎಂಜಿನಿಯರಿಂಗ್ ಶಿಕ್ಷಣಕ್ಕಾಗಿ ನಿಗಮದಿಂದ ಹಣ ಪಡೆದಿದ್ದಾರೆ. ಬ್ಯಾಂಕ್ ಮೂಲಕ ₹ 80 ಲಕ್ಷ ಪಡೆದುಕೊಂಡಿರುವ ಮಾಹಿತಿಯೂ ಇದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು' ಎಂದರು. 'ಪರಿಶಿಷ್ಟರ ಸೌಲಭ್ಯ ಕಸಿದುಕೊಂಡ ರೇಣುಕಾಚಾರ್ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಬಂಧಿಸಬೇಕು. ರಾಜಕೀಯ ಕಾರ್ಯದರ್ಶಿ ಮಾಡಿರುವ ಬಗ್ಗೆ ಮುಖ್ಯಮಂತ್ರಿ ಮೌನವಹಿಸಿರುವುದೇಕೆ' ಎಂದರು.

ಹಲ್ಲಿ ಬಿದ್ದ ಬಿಸಿಯೂಟ ಸೇವಿಸಿ 34 ವಿದ್ಯಾರ್ಥಿಗಳು ಅಸ್ವಸ್ಥ

ಅರಸೀಕೆರೆ: ತಾಲ್ಲೂಕಿನ ನಾರಾಯಣಘಟ್ಟೆಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಹಲ್ಲಿ ಬಿದ್ದ ಬಿಸಿಯೂಟ ಸೇವಿಸಿದ 34 ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದಾರೆ.

ಶಾಲೆಯಲ್ಲಿ ಮಧ್ಯಾಹ್ನ ಬಿಸಿಯೂಟ ಸೇವಿಸುವ ವೇಳೆ ಮೂರನೇ ತರಗತಿ ವಿದ್ಯಾರ್ಥಿಗೆ ಹಲ್ಲಿ ಸಿಕ್ಕಿದೆ. ತಕ್ಷಣ ಶಿಕ್ಷಕರು ಎಲ್ಲಾ ಮಕ್ಕಳನ್ನು ಪಟ್ಟಣದ ಜಯರಾಮರಾಜೇಂದ್ರ ಆಸ್ಪತ್ರೆಗೆ ದಾಖಲಿಸಿದರು. 'ಎಲ್ಲರಿಗೂ ಚಿಕಿತ್ಸೆ ನೀಡಿದ್ದು, ಆರೋಗ್ಯವಾಗಿದ್ದಾರೆ' ಎಂದು ವೈದ್ಯರು ತಿಳಿಸಿದರು.

'ಅಡುಗೆ ಸಿಬ್ಬಂದಿ ಬೇಜವಾಬ್ದಾರಿಯಿಂದ ಈ ಘಟನೆ ನಡೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮಕ್ಕಳು ಆರೋಗ್ಯದಿಂದ ಇದ್ದಾರೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ್ ಕುಮಾರ್ ತಿಳಿಸಿದರು.

ರಥನ್ ಪರಿಮು ಸೇರಿ ಐವರಿಗೆ 'ಚಿತ್ರಕಲಾ ಸಮ್ಮಾನ್' ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ನೀಡುವ 'ಚಿತ್ರಕಲಾ ಸಮ್ಮಾನ್' ಪ್ರಶಸ್ತಿಗೆ ಪ್ರೊ. ರಥನ್ ಪರಿಮು ಸೇರಿದಂತೆ ಐವರು ಕಲಾವಿದರು ಆಯ್ಕೆಯಾಗಿದ್ದಾರೆ.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, '₹ 1 ಲಕ್ಷ ನಗದು ಬಹುಮಾನ ಹಾಗೂ ಫಲಕವನ್ನು ಒಳಗೊಂಡಿರುವ 'ಪ್ರೊ.ಎಂ.ಎಸ್. ನಂಜುಂಡರಾವ್ ಪ್ರಶಸ್ತಿಗೆ ಗುಜರಾತಿನ ಪ್ರೊ. ರಥನ್ ಪರಿಮು ಅವರನ್ನು ಆಯ್ಕೆ ಮಾಡಲಾಗಿದೆ. 'ಡಿ.ದೇವರಾಜ ಅರಸು ಪ್ರಶಸ್ತಿ'ಗೆ ಎನ್. ಪುಷ್ಪಮಾಲ, 'ವೈ. ಸುಬ್ರಹ್ಮಣ್ಯರಾಜು ಪ್ರಶಸ್ತಿ'ಗೆ ನರೇಂದ್ರ ವಿ.ಜಿ., 'ಎಂ.ಆರ್ಯಮೂರ್ತಿ ಪ್ರಶಸ್ತಿ'ಗೆ ಬಸವರಾಜ್ ಮುಸಾವಳಗಿ ಹಾಗೂ 'ಎಚ್.ಕೆ.ಕೇಜ್ರಿವಾಲ್ ಪ್ರಶಸ್ತಿ'ಗೆ ಪ್ರೊ. ವಿಶ್ವಂಭರ ಕೆ.ಎಸ್. ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ಮತ್ತು ಫಲಕಗಳನ್ನು ಒಳಗೊಂಡಿವೆ' ಎಂದು ತಿಳಿಸಿದರು.

'ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಇದೇ 26ರಂದು ಬೆಳಿಗ್ಗೆ 11.30ಕ್ಕೆ ಕುಮಾರಕೃಪಾ ರಸ್ತೆಯಲ್ಲಿರುವ ಪರಿಷತ್ತಿನ ಆವರಣದಲ್ಲಿ ನಡೆಯಲಿದೆ. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಚಿತ್ರಕಲಾ ಪ್ರದರ್ಶನವನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಇದೇ 27ರಂದು 19ನೇ ಚಿತ್ರಸಂತೆಯನ್ನು ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ' ಎಂದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಾರ್ಯಾಲಯ,
ಕೃ.ಭಾ.ಜ.ನಿ.ನಿ, ಅರಣ್ಯ ವಿಭಾಗ, ಆಲಮಟ್ಟಿ. ತಾಲೂಕು: ನಿಡಗುಂದಿ
ದೂರವಾಣಿ: 08426–281410.ಇ–ಮೇಲ್:almattidcf@gmail.com
ಸಂ:ಉಅಸಂ/ಕೃ.ಭಾ.ಜ.ನಿ.ನಿ/ಹೊರ ಗುತ್ತಿಗೆ/ಟೆಂಡರ್/2021–22 ದಿನಾಂಕ:22.03.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಕೃ.ಬಾ.ಜ.ನಿ.ನಿ ಅರಣ್ಯ ವಿಭಾಗ, ಆಲಮಟ್ಟಿ, ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ, ಈ ಕೃ.ಬಾ.ಜ.ನಿ.ನಿ ಅರಣ್ಯ ವಿಭಾಗ, ಆಲಮಟ್ಟಿ. ವಿಭಾಗದಲ್ಲಿ ಗಣಕಯಂತ್ರ ಸಹಾಯಕರು, ಅಕ್ಷರಸ್ಥ ಸಹಾಯಕ ಹಾಗೂ ವಾಹನ ಚಾಲಕ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **ದಿನಾಂಕ: 29.03.2022** ರಂದು ಸಾಯಂಕಾಲ 17:00 ಗಂಟೆಯವರೆಗೆ ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ : 30.03.2022** ಸಾಯಂಕಾಲ 17:00 ಗಂಟೆಗೆ ಹಾಗೂ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 31.03.2022** ಸಾಯಂಕಾಲ 17:00 ಗಂಟೆಗೆ ತೆರೆಯಲಾಗುವುದು. ಸದರಿ ದಿನಾಂಕದಂದು ಟೆಂಡರ್ ಬರದೆ ಇದ್ದಲ್ಲಿ ಮರು ಟೆಂಡರ ಅವಧಿ ಮುಂದಿನ 03 ದಿನ ವಿಸ್ತರಿಸಲಾಗುವುದು.
ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ, ಅರಣ್ಯ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/609/ಎಂಸಿಎ/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194–220500 Email ID:ubpee07@gmail.com
ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2021–22/30,31
ದಿನಾಂಕ:21.03.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗ ಇವರಿಂದ ಶೇಕಡಾವಾರು ಟೆಂಡರನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕಶೀರ್ಷಿಕೆ 4701–ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ **http://www.eproc.karnataka.gov.in** ವೆಬ್‌ಸೈಟ್‌ನಿಂದ ದಿನಾಂಕ:06.04.2022ರ ಸಂಜೆ 17.30 ಗಂಟೆಯ ವರೆಗೆ ಖಾಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್‌ಅನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ:08.04.2022ರ ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗರವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194–200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ. **ಕಾಮಗಾರಿಯ ಇಂಡೆಂಟ್ ಸಂಖ್ಯೆ:–** (1) VJNL/2021-22/RD/WORK_INDENT1985 ಇ.ಎಂ.ಡಿ. **ಮೊತ್ತ ರೂ.ಗಳಲ್ಲಿ:–** 2,67,500.00/– **ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ:–** 2,67,05,165.75/–
(2) VJNL/2021-22/RD/WORK_INDENT1986 ಇ.ಎಂ.ಡಿ. ಮೊತ್ತ ರೂ.ಗಳಲ್ಲಿ:– 1,78,000.00/– **ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ:–** 1,77,68,406.26/–
DIPR/CTA/MCA/1086/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್

ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ.
ಇ ಮೇಲ್:pa1969bagalkot@gmail.com ಹಳೇ SBI ಕಟ್ಟಡ, ಹಳೇ ತಹಶೀಲ್ದಾರರ ಕಚೇರಿ ಹತ್ತಿರ, ಬಾಗಲಕೋಟೆ–587101,ದೂರವಾಣಿ:08354–295326
ಸಂ:ಬಾನಪ್ರಾಬಾ/ಮ.ಯೋ/ಪ್ರಕಟಣೆ/2021–22/428 ದಿನಾಂಕ:23–03–2022

: ಅಧಿಸೂಚನೆ :
(ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳ 1965ರ ನಿಯಮ 32ಎ)
:ಮಹಾಯೋಜನೆಯನ್ನು ತಯಾರಿಸುವ ಉದ್ದೇಶ:

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/197/ಬೆಮಪ್ರಾ/2021(ಇ–ಕಡತ), ದಿನಾಂಕ:10–03–2022 ರನ್ವಯ ಬಾಗಲಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲಾಗಿರುತ್ತದೆ. ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರವು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 ಕಲಂ 10ರ ಅಡಿಯಲ್ಲಿ ಬಾಗಲಕೋಟೆ ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಸುವ ಉದ್ದೇಶವನ್ನು ಹೊಂದಿದೆ ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಸಾರ್ವಜನಿಕರು ಸಲಹೆಗಳನ್ನು ಕರ್ನಾಟಕ ಸರಕಾರದ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಎರಡು ತಿಂಗಳ ಅವಧಿಯವರೆಗೆ ಖುದ್ದಾಗಿ ಅಥವಾ ನೋಂದಣಿ ಅಂಚೆಯ ಮೂಲಕ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ ಇವರಿಗೆ ಸಲ್ಲಿಸುವಂತೆ ತಿಳಿಯಪಡಿಸಿದೆ.

ಸಹಿ/– (ಬಸಲಿಂಗಪ್ಪ ಕಾಶೀನಾಥ ನಾವಲಗಿ) ಅಧ್ಯಕ್ಷರು ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ
ಸಹಿ/– (ಗಣಪತಿ ಜಯಗೌಡ ಪಾಟೀಲ ಕೆ.ಎಮ್.ಎ.ಎಸ್) ಆಯುಕ್ತರು, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ
DIPR/BGM/RO-NO-633/MCA/2021-22

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಲೇಖನ ಸಾಮಗ್ರಿ ಮಳಿಗೆ, ಮೈಸೂರು ರಸ್ತೆ, ಬೆಂಗಳೂರು–59.
No.GSDB 15 STR (A) 2021-22/214 Date: 11.03.2022

ಅಧಿಸೂಚನೆ

ಮುದ್ರಣ, ಲೇಖನ ಸಾಮಗ್ರಿ ಪ್ರಕಟಣೆ ಇಲಾಖೆಯ ಕೇಂದ್ರ ಲೇಖನ ಸಾಮಗ್ರಿ ಮಳಿಗೆ, ಬೆಂಗಳೂರು ಹಾಗೂ ಅಧೀನ ಕಛೇರಿಗಳಾದ ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು, ಧಾರವಾಡ, ಕಲಬುರಗಿ ಕಛೇರಿಯ ಲೇಖನ ಸಾಮಗ್ರಿ ಮಳಿಗೆಗಳಲ್ಲಿ 2021–22ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯ ಪ್ರಯುಕ್ತ **ದಿನಾಂಕ: 04.04.2022 ರಿಂದ 08.04.2022 ರವರೆಗೆ** ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿಗಳು ಹಾಗೂ ಕಾಗದಗಳ ವಿತರಣೆಯನ್ನು ನಿಲ್ಲಿಸಲಾಗುತ್ತಿದೆ ಎಂಬ ವಿಷಯವನ್ನು ಸಂಬಂಧಿಸಿದ ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಛೇರಿಗಳಿಗೆ ಈ ಮೂಲಕ ತಿಳಿಸಲಾಗಿದೆ.
ವಾಸಾಸಂಇ/ಉನಿ.ನ/3870/ಎಂಸಿಎ/2021–22 ಸಹಿ/- ನಿರ್ದೇಶಕರು

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 07.04.2022 ಸಂಜೆ 4.00 ರವರೆಗೆ

ಕ್ರ. ಸಂ.	ಕಾಮಗಾರಿಯ ಸ್ಥಳ
1	ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ತೋಟಗಾರಿಕಾ ಕಾಲೇಜಿಗೆ 2ನೇ ಅಂತಸ್ತಿನ ಕಾಲೇಜು ಕಟ್ಟಡ, ಗ್ರಂಥಾಲಯ ಕಟ್ಟಡ ಮತ್ತು 1ನೇ ಮಹಡಿ ಯುಜಿ ಬಾಲಕರ ಹಾಸ್ಟೆಲ್ ಕಟ್ಟಡ ನಿರ್ಮಾಣ ಕಾಮಗಾರಿ. Work Indent No: KHB/2021-22/BD/WORK_INDENT 954 & IFT No.221/2021-22, Date: 23.03.2022. ಟೆಂಡರ್‌ಗಿಟ್ಟ ಮೊತ್ತ ರೂ. 5,19,35,991/–
2	ಶಿವಮೊಗ್ಗದಲ್ಲಿ ಕೃಷಿ ಕಾಲೇಜಿಗೆ ಯುಜಿ ಬಾಲಕರ ಹಾಸ್ಟೆಲ್ ಬ್ಲಾಕ್–2 ಮತ್ತು ಪಿಜಿ ಬಾಲಕಿಯರ ಹಾಸ್ಟೆಲ್ ಕಟ್ಟಡ ನಿರ್ಮಾಣ ಕಾಮಗಾರಿ. Work Indent No: KHB/2021-22/BD/WORK_INDENT 955 & IFT No.223/2021-22, Date: 23.03.2022. ಟೆಂಡರ್‌ಗಿಟ್ಟ ಮೊತ್ತ ರೂ.2,94,34,744/–
3	ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ 1ನೇ ಮತ್ತು 2ನೇ ಹಂತದ ಕಾಲೇಜು ಕಟ್ಟಡ ಮತ್ತು ತೋಟಗಾರಿಕಾ ಕಾಲೇಜಿಗೆ ಪಿಜಿ ಅಕಾಡೆಮಿಕ್ ಬ್ಲಾಕ್ ಕಟ್ಟಡ ನಿರ್ಮಾಣ ಕಾಮಗಾರಿ. Work Indent No: KHB/2021-22/BD/WORK_INDENT 956 & IFT No.224/2021-22, Date: 23.03.2022. ಟೆಂಡರ್‌ಗಿಟ್ಟ ಮೊತ್ತ ರೂ.2,01,46,624/–.

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು, ದೂರವಾಣಿ: 080–22273511 / 080–22100077 web site : https://eproc.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/3909/ಆಕಾರ್/21–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2021–22/7708 ದಿನಾಂಕ:21/03/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶೀರ್ಷಿಕೆ 3054–ಜಿಮುರ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ ಹಾಗೂ ಲೆಕ್ಕ ಶೀರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ, ಹೀಗೆ ಒಟ್ಟು 2 ಕಾಮಗಾರಿಗಳ ಗುತ್ತಿಗೆ ಇಟ್ಟ ಮೊತ್ತ ಕ್ರಮವಾಗಿ ರೂ. 131.58 ಲಕ್ಷ ಹಾಗೂ ಮೊತ್ತ ರೂ. 26.32 ಲಕ್ಷ ಇರುತ್ತದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 28–03–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:29–03–2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:31–03–2022 (ಸಾಯಂಕಾಲ 5.00 ಗಂಟೆಯವರೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 04–04–2022 (ಸಾಯಂಕಾಲ 4.30 ಗಂಟೆಗೆ), 5)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 04–04–2022 (ಸಾಯಂಕಾಲ 4.30 ಗಂಟೆಗೆ), 6)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1863/MCA/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಂಟೋನ್‌ಮೆಂಟ್, ಬಳ್ಳಾರಿ
ಫೋನ್ ನಂ: 08392-242293 ಇ–ಮೇಲ್ : eemidbly@gmail.com
ಸಂ. ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2021–22/725 ದಿನಾಂಕ: 18–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ **ಡಿಸ್ಟ್ರಿಕ್ಟ್ ಮಿನರಲ್ ಫೌಂಡೇಷನ್ ಫಂಡ್** ಹಾಗೂ 4702 ಪ್ರಧಾನ ಕಾಮಗಾರಿಗಳಡಿ ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಬಲಕುಂದಿ ಹಾಗೂ ಮುದೆನೂರು ಗ್ರಾಮದ ವೇದಾವತಿ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 3105.00 ಲಕ್ಷಗಳಿರುತ್ತದೆ. ಟೆಂಡರ್‌ನ್ನು **ದಿನಾಂಕ: 28–03–2022** ರಿಂದ **ದಿನಾಂಕ: 27–04–2022 ಸಂಜೆ 5:30** ಗಂಟೆಯವರೆಗೆ ಸಲ್ಲಿಸಬಹುದು. ಟೆಂಡರಿನ ತಾಂತ್ರಿಕ ಬಿಡ್‌ನ್ನು **ದಿನಾಂಕ: 29–04–2022** ರಂದು **ಬೆಳಿಗ್ಗೆ 11:00** ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು **ದಿನಾಂಕ: 09–05–2022** ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in / e-portal/index.seam ನಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ

ಕರ್ನಾಟಕ ಸರ್ಕಾರ
ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ–582101
ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂರವಾಣಿ : 08372–259932
ಇ–ಮೇಲ್ : itstaff.ulb.gadag@gmail.com
ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2021–22 ದಿನಾಂಕ : 24–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಗದಗ–ಬೆಟಗೇರಿ ನಗರಸಭೆ ಅಮೃತ ನಿರ್ಮಲ ನಗರ ಯೋಜನೆಯಡಿ ಗದಗ ಬೆಟಗೇರಿ ನಗರಸಭೆ ಮಂಜೂರಾದ ಅನುದಾನದಲ್ಲಿ 02 ಕಾಮಗಾರಿಗಳ ಅಂದಾಜು ಮೊತ್ತ ರೂ. **70.00** ಲಕ್ಷಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಕೆಡಬ್ಲ್ಯೂ–2 ಪ್ರಕಾರ ಆಹ್ವಾನಿಸಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಬಿಡ್ಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಶಾಖೆಯಲ್ಲಿ ಕೇಳಿ ಪಡೆಯಬಹುದು.

ಪ್ಯಾ. ನಂ.	ಕಾಮಗಾರಿ ಇಂಡೆಂಟ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ	ಕಾಮಗಾರಿಯ ಕಾಲಾವಕಾಶ
1	DMA/2021-22/BD/WORK_INDENT 127171 Call-2	50.00	125000.00	180 ದಿನ
2	DMA/2021-22 BD/WORK_INDENT 127267 Call-2	20.00	50000.00	180 ದಿನ

(1) ಟೆಂಡರ ಫಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ : **25–03–2022** (2) ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ **(Upload)** ಮಾಡುವ ಕೊನೆಯ ದಿನಾಂಕ : **31–03–2022** ಸಾಯಂಕಾಲ 4:00 ಘಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ : **01–04–2022** ರ ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.
ಹೆಚ್ಚಿನ ಮಾಹಿತಿಗಾಗಿ **Website : www.eproc.karnataka.gov.in** ವೆಬ್‌ಸೈಟನಲ್ಲಿ ನೋಡಬಹುದು
ಸಹಿ/– (ಶ್ರೀಮತಿ ಉಷಾ ಎಮ್ ದಾಸರ) ಅಧ್ಯಕ್ಷರು ನಗರಸಭೆ, ಗದಗ–ಬೆಟಗೇರಿ
ಸಹಿ/– (ಶ್ರೀ ರಮೇಶ ಎಸ್ ಸುಣಗಾರ) ಪೌರಾಯುಕ್ತರು ನಗರಸಭೆ, ಗದಗ–ಬೆಟಗೇರಿ
ವಾಸಾಸಂಇ/ಗದಗ/ಎಂ.ಸಿ.ಎ/626/2021–22

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
Email: commissionergda@gmail.com
ಸಂಖ್ಯೆ : ನಪ್ರಾಕ/ಡಿ.ಬಿ/ಕುಸನೂರ/ಡ್ರೇನ್/ /2021–22/3516
ದಿನಾಂಕ: 23–03–2022

–: ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ (2ನೇ ಕರೆ) :–

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕುಸನೂರ ವಸತಿ ಯೋಜನೆಯಲ್ಲಿ ಈ ಕೆಳಕಂಡ ಕಾಮಗಾರಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ (ಕೆ.ಡಬ್ಲ್ಯು–4) ದ್ವಿಲಕೋಟೆ ಮಾದರಿಯಲ್ಲಿ ಇ–ಪ್ರೋಕ್ಯೂರಮೆಂಟ ಟೆಂಡರ ಕರೆಯಲಾಗಿರುವುದು.
1) ಕಾಮಗಾರಿಯ ಹೆಸರು : (A) ಕುಸನೂರ ವಸತಿ ಯೋಜನೆಯಲ್ಲಿಯ ರಸ್ತೆಗುಂಟ ಸಿ.ಸಿ. ಡ್ರೇನ್, (B) ಡಾಂಬರಿಕೃತ ರಸ್ತೆಗಳ ನಿರ್ಮಾಣ, (C) 10 ಉದ್ಯಾನವನಗಳಿಗೆ ಆವರಣ ಗೋಡೆ ನಿರ್ಮಾಣ ಕಾಮಗಾರಿ, 2) ಟೆಂಡರಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ):Rs. 18,01,69,966/- 3) ಇ.ಎಂ.ಡಿ. ಮೊತ್ತ : Rs. 1.00 Lakhs Through e- portal & Rs.17,01,700/- through FDR/B.G/DD., 4) ಟೆಂಡರ ಅರ್ಜಿ ಶುಲ್ಕ : As per e- portal, 5) ಕೆಲಸದ ಅವಧಿ : (ಮಳೆಗಾಲ ಹೊರತುಪಡಿಸಿ) : A) 06 ತಿಂಗಳು, (B) 04 ತಿಂಗಳು, (C) 04 ತಿಂಗಳು.
ಟೆಂಡರ ದಿನಾಂಕ ಮತ್ತು ಸಮಯ ಈ ಕೆಳಗಿನಂತಿದೆ:
1) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ : 19-04-2022 @ 11.00 am, 2) ಕ್ವಾರೀಸ್‌ಗಾಗಿ ಕೊನೆಯ ದಿನಾಂಕ ಮತ್ತು ಸಮಯ : 20-04-2022 upto 1.30 pm, 3) ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 26-04-2022 upto 4.00 pm, 4) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: 28-04-2022 @ 11.00 am 5) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ: 06-05-2022 @ 11.00 am / ಸರ್ಕಾರದಿಂದ ತಾಂತ್ರಿಕ ಬಿಡ್ಡ ಅನುಮೋದನೆಯಾದ ನಂತರ
ಟೆಂಡರ ಬಗ್ಗೆ ವಿವರ ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1258/ಎಂ.ಸಿ.&ಎ/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.
ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ/2021–22/1464 ದಿನಾಂಕ: 23.03.2022

ಶೇಕಡಾವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 07/2021–22 ದಿ:23.03.2022

(ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರೆಮೆಂಟ್ ಪೋರ್ಟಲ್ ಮೂಲಕ ಮಾತ್ರ) ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ ಇವರು ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿಗೆ ಶೇಕಡಾವಾರು ಅಲ್ಪಾವಧಿ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ.
Sl. No.1)Name of work: Construction of 1) CC road from BH Road Via vishnupura Bhovi Colony to Kellengere cross 2) CC road from kabburu village road to haranahalli SC Colony 3) CC road from bendekere garudanagiri road to kommaragatta thanda 4) CC road & drain from yaadapura road to muddanahalli thanda and Muddanahalli thanda village surroundings roads 5)CC road from ajjanahalli Gollarahatti road to Chellapura SC Colony via Ajjanahalli garden in Arasikere Constituency under SCP Works. Amount put to tender (Rs. In Lakhs): 330.00 Category of Contractor: VJNL enrolled Category-III and above contractors 2)Construction of CC road & Drain from Jenukal Siddapura MDR road to jadagatta ST Colony in Arasikere Constituency under TSP Work. Amount put to tender (Rs. In Lakhs): 65.30 Category of Contractor: KPWD Class-1 /VJNL enrolled Category-III and above contractors 3)Improvements to road in Javagal Hobli, javagal to ramakrishnapura harijana colony of Belur Constituency (Asphalt Road) Belur Constituency under SCP Work Amount put to tender (Rs. In Lakhs): 66.70 Category of Contractor: KPWD Class-1 /VJNL enrolled Category-III and above contractors 4)Improvements to road in Javagal Hobli, Javagal road to Singatagere Palya, Singatagere village Surroundings Road of Belur Constituency (CC Road) under TSP Work. Amount put to tender (Rs. In Lakhs): 65.20 Category of Contractor: KPWD Class-1 /VJNL enrolled Category-III and above contractor ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಷರತ್ತುಗಳು/ಬಿಡ್ಡುದಾರರ ಅರ್ಹತೆ/ಪೂರ್ವಭಾವಿ ಸಭೆಯ ವಿವರ/ಟೆಂಡರ್ ನಿಭಂಧನೆಗಳು/ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ–ಪ್ರೋಕ್ಯೂರೆಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ: 25.03.2022 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ–ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, **http://www.eproc.karnataka.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯ ಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174–233111
ಸಹಿ/– ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/870/2021–22

ವಿಧಾನ ಪರಿಷತ್ತಿನಲ್ಲೂ ಪ್ರತಿಧ್ವನಿಸಿದ ವ್ಯಾಪಾರಕ್ಕೆ ನಿರ್ಬಂಧ

ಮುಸ್ಲಿಂ ವರ್ತಕರಿಗೆ 'ಬಹಿಷ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಸ್ಥಾನಗಳಲ್ಲಿ ನಡೆಯುವ ಜಾತ್ರೆ, ಉತ್ಸವಗಳಲ್ಲಿ ಮುಸ್ಲಿಂ ಸಮುದಾಯದವರಿಗೆ ವ್ಯಾಪಾರ, ವಹಿವಾಟಿಗೆ ನಿರ್ಬಂಧ ಹೇರುತ್ತಿರುವ ವಿಚಾರ ಗುರುವಾರ ವಿಧಾನ ಪರಿಷತ್ತಿನಲ್ಲೂ ಪ್ರತಿಧ್ವನಿಸಿತು.

ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ಸಿನ ಸಿ.ಎಂ.ಇಬ್ರಾಹಿಂ, 'ಮಂಗಳೂರು, ಉಡುಪಿ ಸೇರಿದಂತೆ ಹಲವು ಕಡೆಗಳಲ್ಲಿ ಹಿಂದೂ ಧಾರ್ಮಿಕ ಜಾತ್ರೆ, ಹಬ್ಬ ಹಾಗೂ ಇತರ ಸಂದರ್ಭಗಳಲ್ಲಿ ಹಿಂದೂಯೇತರರಿಗೆ ವ್ಯಾಪಾರ, ವಹಿವಾಟು ನಡೆಸಲು ನಿರ್ಬಂಧಿಸಲಾಗಿದೆ. ಹಣ್ಣು ವ್ಯಾಪಾರ ಮಾಡಿಕೊಂಡು ಜೀವನ ನಡೆಸಲು ಅವಕಾಶ ಕೇಳುತ್ತಿದ್ದೇವೆ. ಸರ್ಕಾರ ಕರುಣೆ ತೋರಿಸಬೇಕು' ಎಂದರು.

ಅದಕ್ಕೆ ಉತ್ತರಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಹಿಂದೂ ದೇವಸ್ಥಾನಗಳ ಆವರಣದ ಸ್ವತ್ತು ಮತ್ತು ಜಾಗವನ್ನು ಹಿಂದೂ ಧರ್ಮದವರಲ್ಲದೇ ಬೇರೆಯವರ ಬಳಕೆಗೆ ನೀಡಬಾರದು ಎಂದು ಈ ಹಿಂದೆಯೇ ಕಾನೂನು ರೂಪಿಸಲಾಗಿದೆ. ಈಗ ಧಾರ್ಮಿಕ ಸಂಸ್ಥೆಗಳು ಅದನ್ನು ಪಾಲಿಸುತ್ತಿವೆ' ಎಂದು ಸ್ಪಷ್ಟನೆ ನೀಡಿದರು.

'2002ರಲ್ಲಿ ಧಾರ್ಮಿಕ ದತ್ತಿ ಕಾಯ್ದೆಯಲ್ಲಿ ದೇವಸ್ಥಾನದ ಸ್ವತ್ತನ್ನು ಹಿಂದೂಗಳಲ್ಲದವರ ಬಳಕೆಗೆ ಅವಕಾಶ ನೀಡತಕ್ಕದ್ದಲ್ಲ ಎಂದು ತಿದ್ದುಪಡಿ ಮಾಡಲಾಗಿದೆ. ಈಗ ಧಾರ್ಮಿಕ ಸಂಸ್ಥೆಯವರು ಅದನ್ನು ಜಾರಿ ಮಾಡುತ್ತಿದ್ದಾರೆ. ದೇವಸ್ಥಾನಗಳ ಆಡಳಿತ ಮಂಡಳಿಗಳ ಕ್ರಮ ಕಾನೂನು ವಿರುದ್ಧ ಅಲ್ಲ. ದೇವಸ್ಥಾನದ ಆವರಣದಲ್ಲಿ ಕಾನೂನು ಬಳಕೆಗೆ ವಿರೋಧ ವ್ಯಕ್ತಪಡಿಸಲು ಸಾಧ್ಯವಿಲ್ಲ. ಕಾನೂನಿನ ಪ್ರಕಾರ ಆ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲು ಅವಕಾಶ ಇಲ್ಲ' ಎಂದೂ ವಿವರಿಸಿದರು.

ಕಾಂಗ್ರೆಸ್ಸಿನ ಸಲೀಂ ಅಹ್ಮದ್ ಮತ್ತು ನಜೀರ್ ಅಹ್ಮದ್, 'ಅಲ್ಪಸಂಖ್ಯಾತರ ವ್ಯಾಪಾರಕ್ಕೆ ಅಡ್ಡಿಪಡಿಸುವುದು ಬೇರೆ ಜಾಗಗಳಿಗೂ ವಿಸ್ತರಿಸುತ್ತಿದೆ. ಬೆಂಗಳೂರಿನ ಚಿಕ್ಕಪೇಟೆಯಲ್ಲೂ ನಡೆದಿದೆ. ಸರ್ಕಾರ ಇದನ್ನು ತಡೆಯಬೇಕು' ಎಂದು ಆಗ್ರಹಿಸಿದರು.

2002 ರ ಕಾಯ್ದೆ ಅನುಸಾರ ದೇವಸ್ಥಾನದ ಆವರಣದೊಳಗೆ ಹಿಂದೂಯೇತರರು ಮಳಿಗೆ ಹಾಕಲು ಅವಕಾಶ ಇಲ್ಲ. ಒಂದು ವೇಳೆ ಬೇರೆ ಜಾಗದಲ್ಲಿ ವ್ಯಾಪಾರಕ್ಕೆ ಅಡ್ಡಿಪಡಿಸಿದರೆ ಕ್ರಮ ಕೈಗೊಳ್ಳಲಾಗುವುದು

ಜೆ.ಸಿ. ಮಾಧುಸ್ವಾಮಿ, ಕಾನೂನು ಸಚಿವ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ಗುರುವಾರ ವಿಧಾನ ಪರಿಷತ್ತಿನಲ್ಲಿ ಸಿ.ಎಂ. ಇಬ್ರಾಹಿಂ ಮಾತನಾಡಿದರು. ಈ ವೇಳೆ ಕಾಂಗ್ರೆಸ್‌ನ ಸಲೀಂ ಅಹಮ್ಮದ್ ಸೇರಿದಂತೆ ಮತ್ತಿತ್ತರರು ಇದ್ದಾರೆ.

'ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ: ಬಿಜೆಪಿಯ ರಹಸ್ಯ ಕಾರ್ಯಸೂಚಿ'

ಬೆಳಗಾವಿ: 'ದೇವಸ್ಥಾನಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಿರುವುದು ಬಿಜೆಪಿಯ ರಹಸ್ಯ ಕಾರ್ಯಸೂಚಿಯಾಗಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಆರೋಪಿಸಿದರು.

ಇಲ್ಲಿ ಗುರುವಾರ ಮಾತನಾಡಿದ ಅವರು, 'ನಮ್ಮದು ಜಾತ್ಯತೀತ ದೇಶ. ಮುಸ್ಲಿಮರಿಗೆ ವ್ಯಾಪಾರವನ್ನು ಸಂಪೂರ್ಣವಾಗಿ ನಿರ್ಬಂಧಿಸುವುದು ಅಸಾಧ್ಯ. ಎಲ್ಲ ಸಮುದಾಯದವರೂ ಒಂದಾಗಿ ಬಾಳುವುದು ಹಿಂದಿನಿಂದಲೂ ಇದೆ' ಎಂದರು. 'ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ವಿವಾದ ಸೃಷ್ಟಿಸುವಂತಹ ಸೂಕ್ಷ್ಮ ವಿಚಾರಗಳನ್ನೇ ತನ್ನ ಅಸ್ತ್ರವನ್ನಾಗಿಸಿಕೊಂಡು ಬಿಜೆಪಿ ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತಿದೆ' ಎಂದು ದೂರಿದರು.

'ಮುಸ್ಲಿಮರೊಂದಿಗೆ 'ಆರ್ಥಿಕ ಬಹಿಷ್ಕಾರ'ಕ್ಕೆ ಆಂದೋಲನ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಸ್ಲಿಮರೊಂದಿಗೆ 'ಆರ್ಥಿಕ ಬಹಿಷ್ಕಾರ'ಕ್ಕೆ ಶ್ರೀರಾಮ ಸೇನೆಯಿಂದ ದೊಡ್ಡ ಮಟ್ಟದ ಆಂದೋಲನವನ್ನು ರಾಜ್ಯದಾದ್ಯಂತ ನಡೆಸಲಾಗುವುದು' ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ತಿಳಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ನಮ್ಮ ಜಾತ್ರೆಯಲ್ಲಿ ಮತ್ತು ದೇವಸ್ಥಾನಗಳ ಆವರಣದಲ್ಲಿ ಮುಸ್ಲಿಂ ವರ್ತಕರಿಗೆ ನಿರ್ಬಂಧ ಹೇರಿರುವುದಕ್ಕೆ ಸಂಘಟನೆಯ ಬೆಂಬಲವಿದೆ' ಎಂದರು.

'ಬೆಳಗಾವಿಯ ಸವದತ್ತಿ ಯಲ್ಲಮ್ಮ, ಪಂತಬಾಳೇಕುಂದ್ರಿ, ಹುಕ್ಕೇರಿ ಹೊಳೆಮ್ಮದೇವಿ ದೇವಸ್ಥಾನ ಮೊದಲಾದ ಕಡೆಗಳಲ್ಲಿ ಕುರಿಗಳನ್ನು ಬಲಿ ಕೊಡುವಲ್ಲಿ ಮುಸ್ಲಿಮರು 'ಹಲಾಲ್' ಮಾಡುವುದನ್ನು ನಿಲ್ಲಿಸುತ್ತೇವೆ. ಸವದತ್ತಿ ಯಲ್ಲಮ್ಮನಗುಡ್ಡದಲ್ಲೂ 100 ಮೀಟರ್ ಅಂತರದಲ್ಲಿರುವ ಮುಸ್ಲಿಮರ ಅಂಗಡಿಗಳನ್ನು ಕಾನೂನು ಪ್ರಕಾರ ತೆಗೆಯಬೇಕು. ತೆಗೆಸದಿದ್ದರೆ ನುಗ್ಗುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಉತ್ಸವಮೂರ್ತಿ ಮೆರವಣಿಗೆಗೆ ಮುಸ್ಲಿಂ ಅಧಿಕಾರಿ ಚಾಲನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಐತಿಹಾಸಿಕ ಕೋಟೆನಾಡಿನ ನವದುರ್ಗೆಯರಲ್ಲಿ ಒಬ್ಬರಾದ ಕಣಿವೆ ಮಾರಮ್ಮನ ಉತ್ಸವಮೂರ್ತಿಯ ಮೆರವಣಿಗೆಗೆ ನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ನಯೀಂ ಅಹಮ್ಮದ್ ಗುರುವಾರ ಚಾಲನೆ ನೀಡಿದರು. ಧಾರ್ಮಿಕ ವಿಚಾರದಲ್ಲಿ ಪ್ರಕ್ಷುಬ್ಧಗೊಂಡ ನಾಡಿನಲ್ಲಿರುವ ಸೌಹಾರ್ದ ಪರಂಪರೆಗೆ ಇದು ಸಾಕ್ಷಿಯಂತೆ ಗೋಚರಿಸಿತು.

ನಗರ ಠಾಣೆಯ ಆವರಣದಲ್ಲಿರುವ ದೇಗುಲದಿಂದ ಹೊರಬಂದ ಉತ್ಸವಮೂರ್ತಿಯನ್ನು ಅಲಂಕೃತಗೊಂಡ ಸಾರೋಟಿನಲ್ಲಿ ಕೂರಿಸಲಾಯಿತು. ನಯೀಂ ಅಹಮ್ಮದ್ ಅವರು ಪೂಜೆ ಸಲ್ಲಿಸಿ, ಊದುಬತ್ತಿ ಬೆಳಗಿದ ಬಳಿಕ ಮೆರವಣಿಗೆ ಹೊರಟಿತು. ದೇವಸ್ಥಾನದ ಆವರಣದಿಂದ ಪ್ರಾರಂಭಗೊಂಡ ಮೆರವಣಿಗೆ ರಾಜಬೀದಿಯಲ್ಲಿ ಸಂಚರಿಸಿ ದೇಗುಲಕ್ಕೆ ಮರಳಿತು.

ಕಣಿವೆ ಮಾರಮ್ಮ ಜಾತ್ರಾ ಮಹೋತ್ಸವ ಮಾರ್ಚ್ 22ರಿಂದ ಆರಂಭವಾಗಿದ್ದು, ಶುಕ್ರವಾರ ಸಿಡಿ ಉತ್ಸವದೊಂದಿಗೆ ಕೊನೆಯಾಗಲಿದೆ.

ಚಿತ್ರದುರ್ಗದಲ್ಲಿ ಗುರುವಾರ ಕಣಿವೆ ಮಾರಮ್ಮ ಉತ್ಸವಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದ ಠಾಣೆಯ ಇನ್‌ಸ್ಪೆಕ್ಟರ್ ನಯೀಂ ಅಹಮ್ಮದ್

ನಿತ್ಯವೂ ಪೂಜಾ ಕೈಂಕರ್ಯ, ಅನ್ನಸಂತರ್ಪಣೆ ನಡೆಯುತ್ತಿದೆ. ಉತ್ಸವ ಸಮಿತಿಗೆ ನಯೀಂ ಅಹಮ್ಮದ್ ಅವರದೇ ನೇತೃತ್ವ.

ಚಿತ್ರದುರ್ಗ ತಾಲ್ಲೂಕಿನ ಕುಂಚಿಗನಾಳ್ ಗ್ರಾಮದ ದೇವತೆಯಾಗಿದ್ದ ಕಣಿವೆ ಮಾರಮ್ಮ ನಗರ ಠಾಣೆಯ ಆವರಣದಲ್ಲಿ ನೆಲೆಸಿರುವುದಕ್ಕೆ ವಿಶೇಷ ಘಟನೆಯೊಂದು ಸಾಕ್ಷಿಯಾಗಿದೆ. ಗ್ರಾಮದಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದು ದೇವರ ವಿಗ್ರಹವನ್ನು ನಗರ ಪೊಲೀಸ್ ಠಾಣೆಗೆ ತರಲಾಗಿತ್ತು. ಪ್ರಕರಣದ ತನಿಖಾಧಿಕಾರಿಯ ಕನಸಿನಲ್ಲಿ ದೇವಿ ಕಾಣಿಸಿಕೊಂಡ ಪರಿಣಾಮ 50 ವರ್ಷಗಳ ಹಿಂದೆ ಠಾಣೆಯ ಆವರಣದಲ್ಲಿ ದೇಗುಲ ನಿರ್ಮಿಸಿ ಪ್ರತಿಷ್ಠಾಪಿಸಲಾಗಿದೆ ಎಂಬ ಪ್ರತೀತಿ ಇದೆ. ಅಂದಿನಿಂದ ಪ್ರತಿ ವರ್ಷ ನಡೆಯುವ ಜಾತ್ರಾ ಮಹೋತ್ಸವ ಸಮಿತಿಗೆ ಠಾಣೆಯ ಇನ್‌ಸ್ಪೆಕ್ಟರ್ ನೇತೃತ್ವ ವಹಿಸುವುದು ವಾಡಿಕೆ.

ವ್ಯಾಪಾರ ನಿರ್ಬಂಧ: ನಿಯಮದಲ್ಲೇನಿದೆ?

ಬೆಂಗಳೂರು: 'ಮುಜರಾಯಿ ಇಲಾಖೆಗೆ ಸೇರಿದ ಸಂಸ್ಥೆಗಳ ಜಮೀನು, ಕಟ್ಟಡ ಅಥವಾ ನಿವೇಶನಗಳೂ ಸೇರಿದಂತೆ ಯಾವುದೇ ಸ್ವತ್ತನ್ನು ಹಿಂದೂಗಳಲ್ಲದವರಿಗೆ ನೀಡಬಾರದು' ಎಂದು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ನಿಯಮಗಳು 2002 ರಲ್ಲಿ ಉಲ್ಲೇಖಿಸಲಾಗಿದೆ.

ಆದರೆ, ಮುಜರಾಯಿ ಇಲಾಖೆಗೆ ಸೇರಿದ ಸ್ವತ್ತು, ದೇವಸ್ಥಾನದ ಆವರಣದ ಹೊರಗೆ ಅಂದರೆ ಜಾತ್ರೆ–ಉತ್ಸವ ನಡೆಯುವ ಜಾಗದಲ್ಲಿ ನಿರ್ಬಂಧ ವಿಧಿಸುವ ಬಗ್ಗೆ ಯಾವುದೇ ಪ್ರಸ್ತಾಪ ನಿಯಮದಲ್ಲಿ ಇಲ್ಲ.

ಜಾತ್ರೆಗಳ ಆವರಣದಲ್ಲಿ ಮುಸ್ಲಿಮರಿಗೆ ಅನುಮತಿ ನಿರಾಕರಿಸಿರುವ ಪ್ರಕರಣಗಳ ಬೆನ್ನಲ್ಲೇ ಈ ನಿಯಮದ ಕುರಿತ ಚರ್ಚೆ ಆರಂಭವಾಗಿದೆ. 2002 ರ ನಿಯಮಾವಳಿ ಪ್ರಕಾರ ಮುಜರಾಯಿ ಇಲಾಖೆಯ ದೇವಸ್ಥಾನಗಳ ವ್ಯಾಪ್ತಿಗೆ ಬರುವ ಜಮೀನು, ಕಟ್ಟಡ ಅಥವಾ ನಿವೇಶನಗಳಲ್ಲಿ ವ್ಯಾಪಾರ ನಡೆಸಲು ಗುತ್ತಿಗೆ ನೀಡಲಾಗುತ್ತದೆ.

ಅಲ್ಲದೆ, ಗುತ್ತಿಗೆದಾರನು, ದೇವಸ್ಥಾನದ ಭಕ್ತ ವೃಂದದ ಭಾವನೆಗಳಿಗೆ ನೋವುಂಟು ಮಾಡಬಹುದಾದ ಅಥವಾ ಆವರಣದ ಪಾವಿತ್ರ್ಯತೆಗೆ ಧಕ್ಕೆ ಉಂಟು ಮಾಡಬಹುದಾದ ಯಾವುದೇ ವ್ಯವಹಾರವನ್ನು ನಡೆಸಬಾರದು ಎಂದು ನಿಯಮ ಹೇಳಿದೆ.

ಗುತ್ತಿಗೆ ನೀಡಲಾಗಿರುವ ಸ್ವತ್ತಿನಲ್ಲಿ ಬಾರ್, ಮಾಂಸಾಹಾರದ ಹೋಟೆಲ್, ಮದ್ಯ ಅಥವಾ ಮಾದಕ ಪಾನೀಯಗಳ ಅಂಗಡಿ ಅಥವಾ ಲೈವ್ ಬ್ಯಾಂಡ್‌ಗಳನ್ನು ನಡೆಸುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ.

ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಈ ನಿಯಮಾವಳಿಯನ್ನು ರೂಪಿಸಲಾಗಿತ್ತು. ಮೇಲೆ ತಿಳಿಸಿದ ಮೂರು ಅಂಶಗಳನ್ನು ಹೊರತುಪಡಿಸಿದರೆ, ಗುತ್ತಿಗೆದಾರನ ಜವಾಬ್ದಾರಿಗಳು, ಬಾಡಿಗೆ, ನಿರ್ವಹಣೆ ಮುಂತಾದ ವಿಷಯಗಳು ಇವೆ.

ಎಡಿಯೂರು ಜಾತ್ರೆ: ವ್ಯಾಪಾರಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ಜಾತ್ರೆಯಲ್ಲಿ ಅನ್ಯ ಧರ್ಮೀಯರಿಗೆ ವ್ಯಾಪಾರ ಮಾಡಲು ಅವಕಾಶ ನೀಡಬಾರದು ಎಂದು ಬಜರಂಗದಳ ಮುಖಂಡರು ಒತ್ತಾಯಿಸಿದ್ದಾರೆ.

ಈ ಬಗ್ಗೆ ದೇವಸ್ಥಾನದ ವ್ಯವಸ್ಥಾಪಕ ಮಂಜುನಾಥ ಅವರಿಗೆ ಬಜರಂಗದಳ ಜಿಲ್ಲಾ ಸಂಚಾಲಕ ಹರೀಶ್ ನೇತೃತ್ವದ ತಂಡ ಗುರುವಾರ ಮನವಿ ಸಲ್ಲಿಸಿದೆ.

ಏಪ್ರಿಲ್ 1ರಿಂದ ಜಾತ್ರೆ ಆರಂಭವಾಗಲಿದ್ದು, ದೇವಸ್ಥಾನದ ಜಾಗದಲ್ಲಿ ಬೇರೆ ಧರ್ಮದವರಿಗೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದ್ದಾರೆ.

'ಹಿಂದೂಯೇತರರಿಗೆ ಅವಕಾಶ ಬೇಡ'

ಪ್ರಜಾವಾಣಿ ವಾರ್ತೆ

ಬೇಲೂರು: 'ಏಪ್ರಿಲ್‌ನಲ್ಲಿ ನಡೆಯಲಿರುವ ಬೇಲೂರಿನ ಚನ್ನಕೇಶವ ಸ್ವಾಮಿ ರಥೋತ್ಸವ ಸಂದರ್ಭದಲ್ಲಿ ಹಿಂದೂಯೇತರರಿಗೆ ವ್ಯಾಪಾರ–ವಹಿವಾಟು ನಡೆಸಲು ಅವಕಾಶ ನೀಡದಂತೆ ಆದೇಶ ಹೊರಡಿಸಬೇಕು' ಎಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು ತಹಶೀಲ್ದಾರ್ ಮೋಹನ್ ಅವರಿಗೆ ಮನವಿ ಸಲ್ಲಿಸಿದರು.

'ಏ.2ರಿಂದ 15 ದಿನಗಳವರೆಗೆ ನಡೆಯುವ ಜಾತ್ರಾ ಮಹೋತ್ಸವದಲ್ಲಿ ವ್ಯಾಪಾರ– ವಹಿವಾಟು ನಡೆಸಲು ಹಿಂದೂಗಳಿಗೆ ಮಾತ್ರ ಅವಕಾಶ ನೀಡಬೇಕು. ಹಿಜಾಬ್ ಕುರಿತು ಹೈಕೋರ್ಟ್ ನೀಡಿರುವ ಆದೇಶ ವಿರೋಧಿಸಿ ರಾಜ್ಯದಾದ್ಯಂತ ಮುಸ್ಲಿಮರು ಅಂಗಡಿ ಬಂದ್ ಮಾಡಿದ್ದರು. ಆದ್ದರಿಂದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಸ್ಥಾನ, ಜಾತ್ರಾ ಮಹೋತ್ಸವ, ರಥೋತ್ಸವ ಹಾಗೂ ಇತರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅವರಿಗೆ ಅವಕಾಶ ನೀಡಬಾರದು' ಎಂದು ವಿಶ್ವ ಹಿಂದೂ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಕೃಷ್ಣೇಗೌಡ ತಿಳಿಸಿದರು.

'ಅಂಗಡಿ ಹಾಕಲು ಅವಕಾಶ ನೀಡಬಾರದು'

ಕುಂದಾಪುರ: ಇಲ್ಲಿಗೆ ಸಮೀಪದ ಅಸೋಡು ಗ್ರಾಮದ ಬೆಂಕಿಕಾನ್ ನಂದಿಕೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಹಿಂದೂಯೇತರರಿಗೆ ಅಂಗಡಿ ಹಾಕಲು ಅವಕಾಶ ನೀಡಬಾರದು ಎಂದು ಗ್ರಾಮದ ವಿವಿಧ ಸಂಘಟನೆಗಳ ಪ್ರಮುಖರು ದೇವಸ್ಥಾನದ ಆಡಳಿತ ಮಂಡಳಿಗೆ ಮನವಿ ನೀಡಿದರು.

ದೇವಸ್ಥಾನದ ಆಡಳಿತ ಸಮಿತಿಯ ಪ್ರಮುಖರಾದ ಅಜಿತ್ ಶೆಟ್ಟಿ ಅವರಿಗೆ ಪ್ರದೀಪ್ ಮಾರ್ಕೋಡು, ಅಶೋಕ್ ಶೇರಿಗಾರ್ ಅಸೋಡು, ಮಾರುತಿ ಕೋಟೇಶ್ವರ, ಶಶಿ ಕಾಳಾವರ, ಹರ್ಷವರ್ಧನ್ ಮನವಿ ನೀಡಿದರು.

'ಖುಷ್ಯಶೃಂಗ ಜಾತ್ರೆ: ಅನ್ಯ ಧರ್ಮೀಯರ ವ್ಯಾಪಾರಕ್ಕೆ ವಿರೋಧ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಕಿಗ್ಗಾದ ಖುಷ್ಯಶೃಂಗ ದೇವಸ್ಥಾನದ ಜಾತ್ರೆಯಲ್ಲಿ ಅನ್ಯ ಧರ್ಮೀಯರಿಗೆ ವ್ಯಾಪಾರ ನಡೆಸಲು ಅನುಮತಿ ನೀಡಬಾರದು ಎಂದು ಮರ್ಕಲ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಪೇಂದ್ರ ಅವರಿಗೆ ಗ್ರಾಮಸ್ಥರು ಮನವಿ ಸಲ್ಲಿಸಿದರು.

ಕಿಗ್ಗಾದ ಖುಷ್ಯಶೃಂಗ ದೇವರ ಜಾತ್ರಾ ಮಹೋತ್ಸವದಲ್ಲಿ ಹಿಂದೂ ಭಕ್ತರು ದೇವರಿಗೆ ಹರಕೆ– ಕಾಣಿಕೆ, ಪೂಜೆ ಸಲ್ಲಿಸಲು ಬರುತ್ತಾರೆ. ಜಾತ್ರೆಯಲ್ಲಿ ಹಿಂದೂ ಧರ್ಮೀಯರಿಗೆ ಮಾತ್ರ ವ್ಯಾಪಾರ ನಡೆಸಲು ಅನುಮತಿ ನೀಡಬೇಕು. ಧಾರ್ಮಿಕ ದತ್ತಿ ಇಲಾಖೆ ನಿಯಮವನ್ನು ಪಾಲಿಸಬೇಕು, ಹಿಂದೂಯೇತರರಿಗೆ ವ್ಯಾಪಾರಕ್ಕೆ ಅನುಮತಿ ನೀಡಬಾರದು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

'ಗಣಪತಿ ಜಾತ್ರೆ: ಹಿಂದೂಗಳಿಗಷ್ಟೇ ವ್ಯಾಪಾರಕ್ಕೆ ಅವಕಾಶ'

ಪ್ರಜಾವಾಣಿ ವಾರ್ತೆ

ಸಾಗರ: ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ನಡೆಯಲಿರುವ ಇಲ್ಲಿಯ ಗಣಪತಿ ಜಾತ್ರೆಯಲ್ಲಿ ವ್ಯಾಪಾರದ ಮಳಿಗೆಗಳನ್ನು ಹಿಂದೂ ಸಮಾಜದವರಿಗೆ ಮಾತ್ರ ನೀಡಬೇಕು ಎಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್, ಬಜರಂಗ ದಳದ ಪ್ರಮುಖರು ಗುರುವಾರ ಉಪವಿಭಾಗಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದ್ದಾರೆ.

ಗಣಪತಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದೆ. ಏ. 5ರಿಂದ ಗಣಪತಿ ಜಾತ್ರೆ ನಡೆಯಲಿದ್ದು, ದೇವಸ್ಥಾನದ ರಸ್ತೆಯ ಅಕ್ಕಪಕ್ಕ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ. ಮುಜರಾಯಿ ಇಲಾಖೆ ನಿಯಮಗಳ ಪ್ರಕಾರ ಈ ಮಳಿಗೆಗಳನ್ನು ಹಿಂದೂ ಧರ್ಮದವರನ್ನು ಹೊರತುಪಡಿಸಿ ಉಳಿದವರಿಗೆ ನೀಡಲು ಅವಕಾಶವಿಲ್ಲ. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮನವಿ ಸಲ್ಲಿಸುವ ವೇಳೆ ಪ್ರಮುಖರಾದ ಐ.ವಿ. ಹೆಗಡೆ, ಕೆ.ಎಚ್. ಸುದರ್ಶನ, ರವೀಶ್ ಕುಮಾರ್, ನಂದೀಶ್, ರಾಘವೇಂದ್ರ ಕಾಮತ್ ಇದ್ದರು.

ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಹೇಳಿಕೆ

ಕಣ್ಣನ್ ಹೇಳಿಕೆಯಿಂದ ಅಂತರ ಕಾಯ್ದುಕೊಳ್ಳಲ್ಲ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಚಿಂತಕ ಹಿರೇಮಗಳೂರು ಕಣ್ಣನ್ ಅವರನ್ನು ಮೈಸೂರು ರಂಗಾಯಣಕ್ಕೆ ಕರೆಸಿದ್ದೇ ನಾವು. ಹೀಗಾಗಿ ಅವರು ಹಿಜಾಬ್ ವಿಚಾರದ ಕುರಿತು ಆಡಿದ ಮಾತಿನಿಂದ ರಂಗಾಯಣ ಅಂತರ ಕಾಯ್ದುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ' ಎಂದು ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಹೇಳಿದರು.

'ತಾಯಿ' ವಿಷಯವನ್ನಿಟ್ಟುಕೊಂಡು ಮೈಸೂರು ರಂಗಾಯಣದಿಂದ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರೇಮಗಳೂರು ಕಣ್ಣನ್ ಅವರು ಆಡಿದ ಮಾತು ಈಗ ವಿವಾದಕ್ಕೆ ಗುರಿಯಾಗಿದೆ. ಹೀಗೇ ಮಾತಾಡಿ ಎಂದು ಅವರಿಗೆ ನಾವು ಬರೆದುಕೊಡಲು ಆಗುವುದಿಲ್ಲ. ಅಂದು ಅವರ ಮಾತು ಕೇಳಿ ಸಭಿಕರು ನಕ್ಕಿದ್ದಾರೆ. ಏನೂ ಸಿಗದೇ ಇದ್ದಾಗ ಕೆಲವರು ಇದನ್ನು ವಿವಾದ ಮಾಡಿದ್ದಾರೆ' ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಚಕ್ರವರ್ತಿ ಸೂಲಿಬೆಲೆ ಒಬ್ಬ ವಾಗ್ಮಿ. 2–3 ನಾಟಕಗಳನ್ನು ಬರೆದಿದ್ದಾರೆ. ಅವರು ಅಂದು ವಿವಾದವಾಗುವ ಯಾವ ಮಾತನ್ನೂ ಆಡಲಿಲ್ಲ. ಆಗ ಕೆಲವರಿಗೆ ನಿರಾಸೆಯಾಗಿದೆ. ಹೀಗಾಗಿ, ಕಣ್ಣನ್ ಆಡಿದ ಮಾತನ್ನು ಎಲಾಸ್ಟಿಕ್ ಎಳೆದಂತೆ ಎಳೆಯುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು. 'ರಂಗಕರ್ಮಿ ಪ್ರಸನ್ನ ಅವರು ಕಣ್ಣನ್ ಹೇಳಿಕೆ ಖಂಡಿಸಿ ಧರಣಿ ನಡೆಸುವುದಾಗಿ ಹೇಳಿದ್ದಾರೆ. ಪ್ರಸನ್ನರ ನಾಟಕಗಳಲ್ಲಿ ಬೈಗುಳಗಳೇ ಇಲ್ಲವೇ? ಆ ಬಗ್ಗೆ ಸಂಶಯವಿದ್ದವರು ಅವರ 'ದಂಗೆಯ ಮುಂಚಿನ ದಿನಗಳು' ನಾಟಕವನ್ನು ನೋಡಲಿ' ಎಂದು ತಿರುಗೇಟು ನೀಡಿದರು.

ಯಾರನ್ನೂ ನೋಯಿಸುವ ಉದ್ದೇಶವಿಲ್ಲ: ಕಣ್ಣನ್

ಚಿಕ್ಕಮಗಳೂರು: 'ಮೈಸೂರು ರಂಗಾಯಣದಲ್ಲಿ ನಡೆದ 'ಬಹುರೂಪಿ' ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮದಲ್ಲಿ ನಾನು ಆಡಿರುವ ಮಾತುಗಳ ಹಿಂದೆ ಯಾರನ್ನೂ ನೋಯಿಸುವ ಉದ್ದೇಶವಿರಲಿಲ್ಲ. ಅವು ಹಾಸ್ಯಪ್ರಜ್ಞೆಯಿಂದ ಹೇಳಿದ ಮಾತುಗಳಷ್ಟೇ ಆಗಿದ್ದು, ಹಾಸ್ಯದ ಗೆರೆ ಮೀರಿದ್ದೇನೆ ಎಂದು ಯಾರಿಗಾದರೂ ಅನ್ನಿಸಿದ್ದಲ್ಲಿ, ಅನ್ಯಥಾ ಭಾವಿಸದಿರಲು ಕೋರುತ್ತೇನೆ' ಎಂದು ಹಿರೇಮಗಳೂರು ಕಣ್ಣನ್ ಹೇಳಿದ್ದಾರೆ.

ಬಹುರೂಪಿ ರಂಗೋತ್ಸವದಲ್ಲಿ ಅವರು ಆಡಿರುವ ಮಾತುಗಳ ಬಗ್ಗೆ ವ್ಯಾಪಕ ಟೀಕೆಗಳು ಬಂದಿದ್ದವು. ಅದಕ್ಕೆ ಪ್ರಕಟಣೆಯ ಮೂಲಕ ಸ್ಪಷ್ಟನೆ ನೀಡಿರುವ ಕಣ್ಣನ್, 'ನಾನು ಪ್ರಾರಂಭದಿಂದಲೂ ಜಾತ್ಯತೀತ ನಿಲುವನ್ನು ಪ್ರತಿಪಾದಿಸಿಕೊಂಡು, ಅನುಸರಿಸಿಕೊಂಡು ಬಂದಿರುವಾತ. ನಿತ್ಯ ಜೀವನದಲ್ಲಿ ಹಾಸ್ಯಪ್ರಜ್ಞೆಯೊಂದಿಗೆ ವಿಚಾರಗಳನ್ನು ಹಂಚಿಕೊಳ್ಳುವ ಪ್ರವೃತ್ತಿಯುಳ್ಳವನು ಎಂಬುದನ್ನು ನನ್ನನ್ನು ಹತ್ತಿರದಿಂದ ಕಂಡವರಿಗೆ ಗೊತ್ತಿರುವ ವಿಚಾರ. ನಾನು ಯಾವಾಗಲೂ ಜಾತಿ, ಧರ್ಮ, ಮತ, ಪಂಥಗಳ ಆಚೆಗೆ ಆಲೋಚಿಸಿ ಬದುಕುತ್ತಿರುವವನು. ಹಾಸ್ಯದ ಧಾಟಿಯಲ್ಲಿ ನಾನಾಡುವ ಮಾತುಗಳಲ್ಲಿ ಯಾವುದೇ ದುರುದ್ದೇಶವಿರುವುದಿಲ್ಲ, ಅದಕ್ಕೆ ನನ್ನ ಬದುಕೇ ಉತ್ತರವಾಗಿದೆ' ಎಂದಿದ್ದಾರೆ.

'ಕನ್ನಡ ಕಾವ್ಯಗಳಲ್ಲಿ ತಾಯಿ' ವಿಷಯವನ್ನು ಕುರಿತ ನನ್ನ ಭಾಷಣದಲ್ಲಿನ ಅಂಶಗಳನ್ನು ಗಮನಿಸದೇ, ಕೊನೆಯಲ್ಲಿ ಹಾಸ್ಯದ ದೃಷ್ಟಿಯಿಂದ ಗ್ರಾಮ್ಯ ಭಾಷೆಯಲ್ಲಿ ಹೇಳಿದ ಮಾತುಗಳ ಆಧಾರದಲ್ಲಿ ನನ್ನ ವ್ಯಕ್ತಿತ್ವವನ್ನು ನಿರ್ಣಯಿಸಿ, ತಪ್ಪಾಗಿ ಬಿಂಬಿಸುತ್ತಿರುವುದು ಬೇಸರ ತಂದಿದೆ. ಈ ಪದ ಬಳಕೆಯ ಹಿಂದೆ ದುರುದ್ದೇಶವಾಗಲೀ ಬೇರೆಯವರ ಮನಸ್ಸನ್ನೂ ನೋಯಿಸುವ ಇಂಗಿತವಾಗಲೀ ಇರಲಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಬಯಸುತ್ತೇನೆ' ಎಂದಿದ್ದಾರೆ.

ಅಡ್ಡಂಡ ವಿರುದ್ಧ ಪ್ರತಿಭಟನೆ: ಶಿವರಾಮು

ಮೈಸೂರು: 'ಬೌನ್ಸರ್ ಹೊಡೆದ ಏಟಿನಿಂದ ಸಿದ್ದರಾಮಯ್ಯ ಅವರ ಪುತ್ರ ರಾಕೇಶ್ ಸಿದ್ದರಾಮಯ್ಯ ಮೃತಪಟ್ಟರು ಎಂಬುದಾಗಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದ್ದಾರೆ. ಈ ಕೂಡಲೇ ಅವರು ಕ್ಷಮೆಯಾಚಿಸಬೇಕು ಇಲ್ಲವೇ ಈ ಕುರಿತ ದಾಖಲೆ ಬಿಡುಗಡೆ ಮಾಡಬೇಕು' ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಒತ್ತಾಯಿಸಿದರು.

'ಕ್ಷಮೆಯಾಚಿಸದಿದ್ದರೆ ರಂಗಾಯಣ ಆವರಣದಲ್ಲಿ ಅಡ್ಡಂಡ ಕಾರ್ಯಪ್ಪ ಅವರ ಅಣಕು ಶವಯಾತ್ರೆ ನಡೆಸಲಾಗುವುದು. ಕಾನೂನು ಹೋರಾಟಕ್ಕೂ ಮುಂದಾಗಲಿದ್ದೇವೆ' ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

'ಸಂಸ್ಕೃತಿ, ಶಿಸ್ತಿಗೆ ಹೆಸರಾಗಿರುವ ಆರ್‌ಎಸ್‌ಎಸ್ ಕೂಡಲೇ ಕಾರ್ಯಪ್ಪ ಅವರನ್ನು ನಿಯಂತ್ರಿಸಬೇಕು. ಅಸಂಸ್ಕೃತಿಯ ಹೇಳಿಕೆ ನೀಡುವ ಮೂಲಕ ಆರ್‌ಎಸ್‌ಎಸ್‌ಗೆ ಕಾರ್ಯಪ್ಪ ಕಳಂಕ ತಂದಿದ್ದಾರೆ' ಎಂದು ಹರಿಹಾಯ್ದರು.

'ಕಾರ್ಯಪ್ಪ ಈ ಹಿಂದೆ ಜೈಲಿಗೆ ಹೋಗಿದ್ದು ಏಕೆ ಎಂಬುದನ್ನು ಅವರೇ ಬಹಿರಂಗಪಡಿಸಬೇಕು. ಗಾಜಿನ ಮನೆಯಲ್ಲಿ ಕುಳಿತು ಕಲ್ಲೆಸೆಯುವ ಪ್ರವೃತ್ತಿಯನ್ನು ಇನ್ನಾದರೂ ಬಿಡಬೇಕು' ಎಂದರು.

'ತಾಯಿ ಕುರಿತ 'ಬಹುರೂಪಿ' ರಂಗೋತ್ಸವದಲ್ಲಿ ಹಿರೇಮಗಳೂರು ಕಣ್ಣನ್ ಮಹಿಳೆಯರ ಕುರಿತು ಕೀಳಾಗಿ ಮಾತನಾಡಿರುವುದು ಸರಿಯಲ್ಲ. ಅಸಹ್ಯ ತರುವ ಹಾಗೂ ಸಮಾಜವನ್ನು ಕುಲಗೆಡಿಸುವ ಹೇಳಿಕೆ ನೀಡಿದ್ದು, ಇಂಥವರು ಸಂಸ್ಕೃತಿ ಚಿಂತಕರೇ' ಎಂದು ಪ್ರಶ್ನಿಸಿದರು.

ಬಹುರೂಪಿ ರಂಗೋತ್ಸವದ ಸಮಾರೋಪದಲ್ಲಿ ಅಡ್ಡಂಡ ಕಾರ್ಯಪ್ಪ, 'ಮಾಜಿ ಮುಖ್ಯಮಂತ್ರಿಯ ಮಗ, ವಿದೇಶದಲ್ಲಿ ಬೌನ್ಸರ್‌ನಿಂದ ಪೆಟ್ಟು ತಿಂದು ಮೃತಪಟ್ಟಾಗ ಅವರ ಶ್ರದ್ಧಾಂಜಲಿ ಸಭೆಯನ್ನು ರಂಗಾಯಣದಲ್ಲಿ ಮಾಡಿದಾಗ ಯಾರೂ ವಿರೋಧಿಸಿರಲಿಲ್ಲ ಏಕೆ?' ಎಂದು ಕೇಳಿದ್ದರು.

ದುಷ್ಟ ಶಕ್ತಿಗಳ ಬಗ್ಗೆ ಎಚ್ಚರವಿರಲಿ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾವೈಕ್ಯತೆ ಗೂಡಾಗಿರುವ ಜಾತ್ರೆ, ಹಬ್ಬದ ಆಚರಣೆಗಳಲ್ಲಿ ಧರ್ಮಾಧಾರಿತ ದ್ವೇಷ ಮೂಡಿಸುವ ದುಷ್ಟ ಶಕ್ತಿಗಳನ್ನು ಅರಿಯಬೇಕು. ಇಲ್ಲದೇ ಹೋದರೆ ಬದುಕು ನಡೆಸಲೂ ಕೂಡಾ ಕಠಿಣವಾಗುವ ದಿನಗಳು ಬರಲಿವೆ ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಎಚ್ಚರಿಸಿದ್ದಾರೆ.

'ಜಾತ್ರೆ, ಹಬ್ಬ ಮತ್ತು ಆಚರಣೆಗಳು ಎಂದಿಗೂ ಸರ್ವ ಧರ್ಮ ಮತ್ತು ಜಾತಿಯ ಭಾವೈಕ್ಯತೆಯ ಸಂಕೇತ. ಯುಗಾದಿಯ ಹೋಳಿಗೆಯ ಹೂರಣ ಮತ್ತು ರಂಜಾನ್ ಖೀರನ್ನು ವಿನಿಮಯ ಮಾಡಿಕೊಳ್ಳುವ ಎಷ್ಟೋ ಕುಟುಂಬಗಳನ್ನು ನಾನು ನೋಡಿದ್ದೇನೆ. ಹಲವು ಬಾರಿ ಭಾಗವಹಿಸಿದ್ದೇನೆ' ಎಂದು ಅವರು ಹೇಳಿದ್ದಾರೆ.

'ಸೂಫಿಗಳು, ಸಾಧು–ಸಂತರು, ಶರಣರು ಹುಟ್ಟಿದ ನಾಡಿನಲ್ಲಿ ಧಾರ್ಮಿಕ ಐಕ್ಯತೆ ಮತ್ತು ಸಾಮಾಜಿಕ ಸಾಮರಸ್ಯದ ವಾತಾವರಣವು ಇದೆ. ಇದಕ್ಕೆ ಸಾಕ್ಷಿ ಎಂಬಂತೆ ಗುಡಿ ಮತ್ತು ದರ್ಗಾಗಳು ಒಂದೆಡೆ ಇರುವ ಎಷ್ಟೋ ಸ್ಥಳಗಳು ಕರಾವಳಿಯಲ್ಲೂ, ಉತ್ತರ ಕರ್ನಾಟಕದಲ್ಲಿ ಇವೆ' ಎಂದು ಅವರು ತಿಳಿಸಿದ್ದಾರೆ.

'ಬದುಕು ಕಟ್ಟಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಇನ್ನೂ ಹೆಣಗುತ್ತಿರುವ ಸಣ್ಣಪುಟ್ಟ ವ್ಯಾಪಾರಿಗಳು ಮತ್ತು ಬಡ ಜನರಲ್ಲಿ ಧರ್ಮದ ಆಧಾರದಲ್ಲಿ ಕಲಹ ಹುಟ್ಟು ಹಾಕುತ್ತಿರುವುದು ಅಪಾಯಕಾರಿ ಸಂಗತಿ. ಕೋವಿಡ್ ಬಳಿಕ ಶಾಲೆಗಳು ತೆರೆದ ನಂತರ ತರಗತಿಗಳು ನಡೆಯಬೇಕಾದ ಸ್ಥಳದಲ್ಲಿ ಹಿಜಾಬ್ ಗಲಾಟೆ ನಡೆಯುತ್ತಿರುವುದು ಅದಕ್ಕಿಂತಲೂ ಅಪಾಯಕಾರಿ' ಎಂದು ಮಹದೇವಪ್ಪ ಹೇಳಿದ್ದಾರೆ.

ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತೆಗೆ ಒತ್ತಾಯಿಸಿ ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಸಾಗರ: ಭಾಷೆ, ಕಲೆ, ಸಂಸ್ಕೃತಿ, ರಂಗಭೂಮಿಗೆ ಸಂಬಂಧಿಸಿದ ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಬದ್ಧತೆ ತೋರಬೇಕು ಎಂದು ಒತ್ತಾಯಿಸಿ ರಂಗಕರ್ಮಿ ಪ್ರಸನ್ನ ಅವರು ವಿಶ್ವ ರಂಗಭೂಮಿ ದಿನವಾಗಿರುವ ಮಾರ್ಚ್ 27ರಂದು ಮೈಸೂರಿನಲ್ಲಿ ಒಂದು ದಿನ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದಾರೆ.

ದೇಶದ ವಿವಿಧ ರಾಜ್ಯಗಳಲ್ಲಿರುವ ನಾಟಕ ಶಾಲೆ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಮರ್ಜಿಯಿಂದ ಸಂಪೂರ್ಣ ಮುಕ್ತವಾಗಿರಬೇಕು. ಶಾಲೆಗಳಲ್ಲಿ ರಂಗಭೂಮಿ ಚಟುವಟಿಕೆಯನ್ನು ನಡೆಸಲು ಸರ್ಕಾರ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು ಎಂಬ ಬೇಡಿಕೆಯನ್ನೂ ಈಡೇರಿಸಲು ಒತ್ತಾಯಿಸಿ ಈ ಉಪವಾಸ ಕೈಗೊಳ್ಳುತ್ತಿರುವುದಾಗಿ ಅವರು ಹೇಳಿಕೆ ನೀಡಿದ್ದಾರೆ.

'ಸಾಂಸ್ಕೃತಿಕ ಸಂಸ್ಥೆಗಳು ಜನರ ಸಂಸ್ಥೆಗಳೇ ಹೊರತು ಸರ್ಕಾರದ ಸಂಸ್ಥೆಗಳಲ್ಲ. ಸರ್ಕಾರ ಅನುದಾನ ನೀಡಿದೆ ಎಂದ ಮಾತ್ರಕ್ಕೆ ಅವುಗಳ ಚಟುವಟಿಕೆಯಲ್ಲಿ ಮೂಗು ತೂರಿಸುವ ಅಧಿಕಾರವಿಲ್ಲ. ಆದರೆ ಈಚೆಗೆ ಸರ್ಕಾರ ಹಾಗೂ ರಾಜಕಾರಣಿಗಳ ಹಸ್ತಕ್ಷೇಪ ಅತಿಯಾಗುತ್ತಿರುವುದರಿಂದ ಸಾಂಸ್ಕೃತಿಕ ಸಂಘಟನೆಗಳ ಸ್ವಾಯತ್ತೆಗೆ ಧಕ್ಕೆಯಾಗುತ್ತಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ರಾಜ್ಯದ ಕೇಂದ್ರಗಳಲ್ಲಿರುವ ನಾಟಕ ಶಾಲೆಗಳು ಕೂಡ ಆಯಾ ಭಾಗದ ಜನರ ಸಂಸ್ಥೆಯಾಗಿವೆ. ಅವುಗಳನ್ನು ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ರೂಪಿಸುವ ಅಗತ್ಯವಿದೆ. ಆದರೆ ದೆಹಲಿಯಲ್ಲಿರುವ ಸಂಸ್ಥೆ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಿದರೆ ಸ್ಥಳೀಯ ಅಭಿರುಚಿಗೆ ವಿರುದ್ಧವಾದ ಕಾರ್ಯಕ್ರಮಗಳೇ ಮುನ್ನೆಲೆಗೆ ಬರುತ್ತವೆ' ಎಂದು ಅವರು ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಶಾಲೆಗಳಲ್ಲಿ ಈಗಿರುವ ಶಿಕ್ಷಣ ಪದ್ಧತಿಯಿಂದ ಭಾಷೆ, ಸಂಸ್ಕೃತಿ ಬೆಳೆಯಲು ಸಾಧ್ಯವಿಲ್ಲ ಎಂಬುದು ಸಾಬೀತಾಗಿದೆ. ಹೀಗಾಗಿ ಮಕ್ಕಳಲ್ಲಿ ಸದಭಿರುಚಿಯ ಸಾಂಸ್ಕೃತಿಕ ಮನೋಭಾವ ಬೆಳೆಸಲು ಸರ್ಕಾರ ನೇರವಾಗಿ ಶಾಲೆಗಳಿಗೆ ದೊಡ್ಡ ಮೊತ್ತದ ಅನುದಾನ ನೀಡಬೇಕು. ಆಯಾ ಭಾಗದ ಶಾಲೆಗಳ ಸಮಿತಿ ಸ್ಥಳೀಯ ರಂಗ ಕಲಾವಿದರ ನೆರವಿನಿಂದ ಮಕ್ಕಳಲ್ಲಿ ರಂಗಭೂಮಿ ಕುರಿತು ಆಸಕ್ತಿ ಮೂಡಿಸುವಂತೆ ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಮುಖ್ಯ ನಿಯಂತ್ರಣ ಸೌಲಭ್ಯ
ಪಿ.ಬಿ.ನಂ. 66, ಹಾಸನ-573210, ಭಾರತ. ದೂರವಾಣಿ : 08172-273343 ಫ್ಯಾಕ್ಸ್: 08172-273953

ಸಂಕ್ಷಿಪ್ತ ಇ-ಟೆಂಡರ್ ಆಹ್ವಾನದ ಸೂಚನೆ

1.ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಆನ್‌ಲೈನ್ ಮೂಲಕ ಐಟಂ ರೇಟ್ ಇ-ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ (ರೂ.)	ಇಎಂಡಿ (ಮೊತ್ತ ರೂ.)	ಕೆಲಸ ಮುಗಿಸಲು ಕಾಲಾವಧಿ
MCF/CMG/H/eTN-26/2021-22 Dtd. 22.03.2022	ಎಂಸಿಎಫ್ ಹಾಸನದ ಮುಖ್ಯ ಆವರಣದಲ್ಲಿನ ಓ.ಎಚ್.ಟಿ ಯಿಂದ ವಿವಿಧ ಕಟ್ಟಡಗಳಿಗೆ ನೀರು ಸರಬರಾಜು ಮಾಡುವ ಪೈಪ್‌ಗಳ ಬದಲಾವಣೆ.	7,24,014/-	14,480/-	06 ತಿಂಗಳು

ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: 23.03.2022ರ 10.00 ಗಂಟೆಯಿಂದ 01.04.2022ರ 17.00 ಗಂಟೆವರೆಗೆ
ಬಿಡ್ ಸ್ಪಷ್ಟನೆ ಪಡೆಯುವ ಅವಧಿ : 23.03.2022ರ 10:01 ಗಂಟೆಯಿಂದ 02.04.2022ರ 17.00 ಗಂಟೆವರೆಗೆ
ಬಿಡ್ ಸ್ಪಷ್ಟನೆಗೆ ಉತ್ತರ ನೀಡುವ ಕಡೇ ದಿನಾಂಕ ಮತ್ತು ಸಮಯ: 04.04.2022ರ 17:30 ಗಂಟೆವರೆಗೆ
ಟೆಂಡರ್‌ಗಳನ್ನು ಸ್ವೀಕರಿಸುವ ಕಡೇ ದಿನಾಂಕ ಮತ್ತು ಸಮಯ: 05.04.2022ರ 17.00 ಗಂಟೆವರೆಗೆ
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 13.04.2022 ರಂದು 11.30 ಗಂಟೆಯ ನಂತರ

2. ಆಸಕ್ತ ಟೆಂಡರುದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ನೋಡಬಹುದು. ಇದನ್ನು ವೆಬ್‌ಸೈಟ್: www.isro.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಫಾರಂಗಳನ್ನು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ www.tenderwizard.com/ISRO ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಎಲ್ಲಾ ತಿದ್ದುಪಡಿ, ಸಮಯ ವಿಸ್ತರಣೆ, ಸ್ಪಷ್ಟೀಕರಣ ಇತ್ಯಾದಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ. ಟೆಂಡರ್ ದಾರರು ತಿದ್ದುಪಡಿಗಾಗಿ ನಿಯಮಿತವಾಗಿ ವೆಬ್‌ಸೈಟ್‌ಗೆ ಭೇಟಿ ನೀಡಬೇಕು

ವಿಭಾಗ ಮುಖ್ಯಸ್ಥರು, ಸಿಸಿಎಂಡಿ-ಸಿಎಂಜಿ

ಜಂಟಿ ನಿರ್ದೇಶಕರು, ಮತ್ತು ತನಿಖಾಧಿಕಾರಿಗಳು, ಆಯುಕ್ತರ ಕಾರ್ಯಾಲಯ
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ
ಸಂಖ್ಯೆ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052. ಕ್ಯಾಂಪ್: ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆ.
ದೂರವಾಣಿ ಸಂಖ್ಯೆ: 080–22262187 ಇ–ಮೇಲ್: ddit.fcs-ka@nic.in

ಸಂಖ್ಯೆ: ಸಿಎಫ್‌ಎಸ್/ಐಟಿ–5/04/2021–22 ದಿನಾಂಕ: 24–03–2022

ಸಾರ್ವಜನಿಕ ಪ್ರಕಟಣೆ

ವಿಷಯ: ಬಂಗಾರಪೇಟೆ ಪಟ್ಟಣದ ಮೆ॥ ಪಿ.ಆರ್.ಎಸ್. ಆಗ್ರೋಟೆಕ್ ರೈಸ್ ಮಿಲ್‌ನಲ್ಲಿ ವಶಪಡಿಸಿಕೊಂಡಿರುವ ಅಕ್ಕಿ ಮತ್ತು ಅಕ್ಕಿ ನುಚ್ಚು ಹಾಗೂ ವಾಹನಗಳ ಬಹಿರಂಗ ಹರಾಜಿನ ಬಗ್ಗೆ.

ಉಲ್ಲೇಖ: ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ ಜಿಲ್ಲೆ ಆದೇಶ ಸಂಖ್ಯೆ: ಇಸಿಎ:ಸಿಆರ್:04/2021–22, ದಿನಾಂಕ: 04–03–2022.

1) ಕೋಲಾರ ಜಿಲ್ಲೆಯ ಬಂಗಾರಪೇಟೆ ಪಟ್ಟಣದ ಮೆ॥ ಪಿ.ಆರ್.ಎಸ್. ಆಗ್ರೋಟೆಕ್ ರೈಸ್ ಮಿಲ್‌ನಲ್ಲಿ ವಶಪಡಿಸಿಕೊಂಡಿರುವ ಅಕ್ಕಿ ಮತ್ತು ಅಕ್ಕಿ ನುಚ್ಚು ಹಾಗೂ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ ಜಿಲ್ಲೆ ದಿನಾಂಕ: 04–03–2022ರಂದು ಆದೇಶಿಸಿದೆ. ಈ ರೀತಿ ಮುಟ್ಟುಗೋಲು ಹಾಕಿಕೊಂಡಿರುವ ವಸ್ತುಗಳನ್ನು ಬಹಿರಂಗ ಹರಾಜು ಮಾಡಲು ಜಿಲ್ಲಾಧಿಕಾರಿಗಳ ನ್ಯಾಯಾಲಯವು ಆದೇಶಿಸಿದ್ದು ಅವುಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಅಗತ್ಯ ವಸ್ತುಗಳ ವಿವರ	ಚೀಲಗಳು ಹಾಗೂ ವಾಹನಗಳ ಸಂಖ್ಯೆ	ತೂಕ (ಕ್ವಿಂ)	ಪ್ರತಿ ಕ್ವಿಂಟಾಲ್ ಹಾಗೂ ವಾಹನದ ಅಂದಾಜು ಬೆಲೆ	ಒಟ್ಟು ಮೊತ್ತ
1	ಅಕ್ಕಿ	17538 (10 ಲಾಟ್)	8497.00	ರೂ.2500.00	ರೂ.2,12,42,500.00
2	ಅಕ್ಕಿ ನುಚ್ಚು	2498 (03 ಲಾಟ್)	1213.70	ರೂ.1600.00	ರೂ.19,41,920.00
3	ವಾಹನ	ಟಾಟಾ ಈಚರ್ ಲಾರಿ (ಮಿನಿ) 1109 ಎವೈ ಕೆ.ಎ–63–3463	–	ರೂ.6,00,000.00	ರೂ.6,00,000.00
4	ವಾಹನ	ಲಾರಿ ಟಿ.ಎನ್–29–ಎ.ಕೆ.5314	–	ರೂ.12,00,000.00	ರೂ.12,00,000.00
5	ವಾಹನ	ಮಿನಿ ಲಾರಿ ಈಚರ್ ಕೆ.ಎ–04–ಎ.ಸಿ–0796	–	ರೂ.8,00,000.00	ರೂ.8,00,000.00
6	ವಾಹನ	ಟಾಟಾ ಈಚರ್ ಲಾರಿ (ಮಿನಿ) ಲಾರಿ ಕೆ.ಎ–02–ಎ.ಜಿ–5688	–	ರೂ.5,50,000.00	ರೂ.5,50,000.00
7	ವಾಹನ	ಈಚರ್ ಕೆ.ಎ.04–ಎ.ಸಿ.2993	–	ರೂ.8,00,000.00	ರೂ.8,00,000.00
8	ವಾಹನ	ಟ್ರ್ಯಾಕ್ಟರ್ ಕೆ.ಎ–07–ಟಿ.ಎ–2734	–	ರೂ.2,00,000.00	ರೂ.2,00,000.00
9	ವಾಹನ	ಈಚರ್ ಕೆ.ಎ.04–ಎ.ಸಿ.3011	–	ರೂ.8,00,000.00	ರೂ.8,00,000.00

2) ಮೇಲೆ ಕಾಣಿಸಿದ ವಿವಿಧ ಬಗೆಯ ಅಕ್ಕಿ / ನುಚ್ಚಕ್ಕಿ ಹಾಗೂ ವಾಹನಗಳನ್ನು **ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆಯಲ್ಲಿ ದಿನಾಂಕ: 28–03–2022ರಂದು ಮಧ್ಯಾಹ್ನ 12.00 ಗಂಟೆಯಿಂದ ಬಹಿರಂಗ ಹರಾಜು ಮಾಡಲಾಗುವುದು.**

3) ಬಹಿರಂಗ ಹರಾಜಿನ ಷರತ್ತುಗಳು ಕೆಳಕಂಡಂತೆ ಇವೆ:

ಅ) ಅಗತ್ಯ ವಸ್ತುಗಳ ಸಗಟು / ಚಿಲ್ಲರೆ ವ್ಯಾಪಾರಸ್ಥರು ಮತ್ತು ಕಮಿಷನ್ ಏಜೆಂಟರು ಹಾಗೂ ಅಕ್ಕಿ ಗಿರಣಿ ಮಾಲೀಕರು ಹಾಗೂ ದೊಡ್ಡ ಪ್ರಮಾಣದ ಬಳಕೆದಾರ ಸಂಸ್ಥೆಗಳು ಹರಾಜಿನಲ್ಲಿ ಭಾಗವಹಿಸಬಹುದು.

ಆ) ಅಕ್ಕಿ / ಅಕ್ಕಿನುಚ್ಚು ಹರಾಜಿನಲ್ಲಿ ಭಾಗವಹಿಸುವವರು **ರೂ. 350000–00 (ಮೂರು ಲಕ್ಷದ ಐವತ್ತು ಸಾವಿರ)** ಹಾಗೂ ವಾಹನಗಳ ಹರಾಜಿನಲ್ಲಿ ಭಾಗವಹಿಸುವವರು **ರೂ. 125000–00 (ಒಂದು ಲಕ್ಷದ ಇಪ್ಪತ್ತೈದು ಸಾವಿರ)** ಮೌಲ್ಯದ ಡಿ.ಡಿ. ಯನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ **"ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ"** ಹೆಸರಿಗೆ ಪಡೆದು ಹರಾಜಿಗೆ ಮುನ್ನ ಠೇವಣಿಯಾಗಿ ಸಲ್ಲಿಸಬೇಕು.

ಇ) ಈ ಪದಾರ್ಥಗಳನ್ನು **"ಎಲ್ಲಿವೆಯೋ ಅಲ್ಲಿ ಹಾಗೂ ಹೇಗಿವೆಯೋ ಹಾಗೆ"** ಷರತ್ತಿನಡಿ ಹರಾಜು ಮಾಡಲಾಗುತ್ತಿರುವುದರಿಂದ ಹರಾಜಿನಲ್ಲಿ ಭಾಗವಹಿಸುವವರು ಅದಕ್ಕೂ ಮುನ್ನ ದಿನಾಂಕ: **28–03–2022ರಂದು ಬೆಳಿಗ್ಗೆ 10.00 ಗಂಟೆಗೆ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆಗೆ** ಭೇಟಿ ನೀಡಿ ಅಕ್ಕಿಯ ಪರಿಶೀಲನೆ ಮಾಡಿಕೊಳ್ಳಬಹುದು.

ಈ) ಹರಾಜು ಮಾಡುವ ಅಕ್ಕಿ / ಅಕ್ಕಿ ನುಚ್ಚಿನ ವಿವರಗಳನ್ನು ಹರಾಜು ಸ್ಥಳದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು. ಹರಾಜನ್ನು ಲಾಟ್ ಪ್ರಕಾರವಾಗಿ ಮಾಡಲಾಗುವುದು.

ಉ) ಹರಾಜಿನಲ್ಲಿ ಭಾಗವಹಿಸಲು ಬಯಸುವವರು ದಿನಾಂಕ: **28–03–2022ರಂದು ಬೆಳಿಗ್ಗೆ 10.00 ಗಂಟೆಗೆ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆಯಲ್ಲಿ** ಹೆಸರು ನೋಂದಾಯಿಸಿಕೊಳ್ಳಬೇಕು.

ಊ) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ವ್ಯಾಪಾರಿ ನೋಂದಣಿ ಪತ್ರ / ಸಂಸ್ಥೆ ನೋಂದಣಿ ಪತ್ರ / ಪ್ಯಾನ್ ಕಾರ್ಡ್ / ಆಧಾರ್ ದಾಖಲಾತಿಗಳನ್ನು ನೋಂದಾವಣೆ ಸಮಯದಲ್ಲಿ ಹಾಜರುಪಡಿಸಬಹುದು.

ಋ) ಹರಾಜಿಗೆ ಇಟ್ಟಿರುವ ಅಕ್ಕಿ / ಅಕ್ಕಿನುಚ್ಚು / ವಾಹನಗಳ ಮಾರುಕಟ್ಟೆ ಮೌಲ್ಯದ ಅಂದಾಜನ್ನು ನಮೂದಿಸಲಾಗಿದ್ದು ಇವುಗಳನ್ನು ಬಿಡ್ಡುದಾರರು ಗಮನಿಸಬೇಕು.

ಎ) ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಪ್ರಕರಣಕ್ಕೆ ಒಳಗಾಗಿರುವ ವ್ಯಕ್ತಿ ಮತ್ತು ಸಂಸ್ಥೆಗಳು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ಏ) ಬಹಿರಂಗ ಹರಾಜಿನಲ್ಲಿ ಬರುವ ಸ್ಪರ್ಧಾತ್ಮಕ ದರಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಥವಾ ಈ ಹರಾಜನ್ನು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ.

ಐ) ಬಿಡ್‌ನಲ್ಲಿ ನಮೂದಾಗುವ ದರಗಳನ್ನು ಜಿಲ್ಲಾಧಿಕಾರಿಗಳು ಅನುಮೋದಿಸಿದ ನಂತರ ಬಿಡ್ಡಿನ ಒಟ್ಟು ಮೌಲ್ಯವನ್ನು ಸರ್ಕಾರದ ಲೆಕ್ಕ ಶಿರ್ಷಿಕೆಗೆ ನಿಗದಿತ ಗಡುವಿನೊಳಗಾಗಿ ಜಮಾ ಮಾಡಿ ಚಲನ್ ಹರಾಜುಪಡಿಸಿದ ನಂತರ ಹರಾಜಾದ ಪದಾರ್ಥ ಎತ್ತುವಳಿಗೆ ಅವಕಾಶ ನೀಡಲಾಗುವುದು.

ಒ) ಬಹಿರಂಗ ಹರಾಜಾದ ಅಕ್ಕಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ಆದೇಶ ನೀಡಿದ 3 ದಿನಗಳಲ್ಲಿ ಪಿ.ಆರ್.ಎಸ್ ಆಗ್ರೋಟೆಕ್ ರೈಸ್ ಮಿಲ್, ಬಂಗಾರಪೇಟೆ ಯಿಂದ ಎತ್ತುವಳಿ ಮಾಡಬೇಕು.

ಓ) ಹರಾಜು ಷರತ್ತು ಉಲ್ಲಂಘಿಸಿದರೆ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಮಾಹಿತಿಗಾಗಿ **ಜಂಟಿ ನಿರ್ದೇಶಕರು (ಐಟಿ) ರವರ ನಂ: 9611165367 ಗೆ ಅಥವಾ ಉಪ ನಿರ್ದೇಶಕರು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕೋಲಾರ ಜಿಲ್ಲೆ ರವರ ನಂ: 9449559926** ಇವರನ್ನು ಸಂಪರ್ಕಿಸಲು ಕೋರಿದೆ.

ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶದ ಮೇರೆಗೆ.

ಸಹಿ/– (ಡಾ. ಕೆ. ರಾಮೇಶ್ವರಪ್ಪ)
ಜಂಟಿ ನಿರ್ದೇಶಕರು (ಐಟಿ) ಮತ್ತು ತನಿಖಾಧಿಕಾರಿಗಳು,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/3903/ಅಡ್ವರ್ಟೋರ್/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ಪ್ರಜಾವಾಣಿ' ವರದಿ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ

ಕಾಸು ಕೊಟ್ಟರಷ್ಟೇ ಪೊಲೀಸ್ ಬಾಸ್

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ

ಕಾಸು ಕೊಟ್ಟರಷ್ಟೇ 'ಪೊಲೀಸ್ ಬಾಸ್'

ಬೆಂಗಳೂರು: 'ಕಾಸು ಕೊಟ್ಟರಷ್ಟೇ ಪೊಲೀಸ್ ಬಾಸ್' ವರದಿಯ ಮೂಲಕ 'ಪ್ರಜಾವಾಣಿ' ಪೊಲೀಸ್ ಇಲಾಖೆಯಲ್ಲಿನ ಸಮಗ್ರ ಭ್ರಷ್ಟಾಚಾರವನ್ನು ಬಯಲು ಮಾಡಿದೆ. ಹೋಟೆಲ್ ತಿಂಡಿ ದರದ ಪಟ್ಟಿಯಂತೆ ಆಯಕಟ್ಟಿನ ಸ್ಥಳಕ್ಕೆ ಅಧಿಕಾರಿಗಳ ವರ್ಗಾವಣೆಯ ದರ ನಿಗದಿ ಆಗಿರುವುದನ್ನೂ ವರದಿ ಉಲ್ಲೇಖಿಸಿದೆ. ಇಡೀ ಪೊಲೀಸ್ ಇಲಾಖೆಯೇ ದಾರಿ ತಪ್ಪಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹರಿಹಾಯ್ದರು.

ವಿಧಾನಸಭೆಯಲ್ಲಿ ಗುರುವಾರ ನಿಯಮ 69 ರಡಿ 'ರಾಜ್ಯದಲ್ಲಿ ಕುಸಿದು ಬೀಳುತ್ತಿರುವ ಕಾನೂನು ಸುವ್ಯವಸ್ಥೆ'ಯ ಬಗ್ಗೆ ಅವರು ಮಾತನಾಡಿದರು. 'ಇಲಾಖೆಯ ವಿವಿಧ ಹುದ್ದೆಗಳ ದರವನ್ನು ಹೋಟೇಲ್‌ಗಳಲ್ಲಿ ಕೇಸರಿ ಬಾತ್, ಮಸಾಲೆದೋಸೆ, ಇಡ್ಲಿ-ವಡೆ, ಉಪ್ಪಿಟ್ಟಿನ ದರದಂತೆ ನಿಗದಿಯಾಗಿದೆ. ಪತ್ರಿಕೆಯಲ್ಲಿ ಬಂದ ಈ ಆರೋಪವನ್ನು ನೀವಾಗಲಿ, ಮುಖ್ಯಮಂತ್ರಿಯವರಾಗಲಿ ಇಲ್ಲಿಯವರೆಗೆ ನಿರಾಕರಿಸಿಲ್ಲ, ಒಪ್ಪಿಕೊಂಡೂ ಇಲ್ಲ ಎಂದರೆ ಏನು ಅರ್ಥ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಒಬ್ಬರಂತೂ ₹65 ಲಕ್ಷವನ್ನು ಬಡ್ಡಿಗೆ ತಂದು ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದೂ ವರದಿಯಾಗಿದೆ. ಇಂತಹ ಅಧಿಕಾರಿಗಳಿಂದ ನಾವು ಕಾನೂನು ಸುವ್ಯವಸ್ಥೆಯನ್ನು ನಿರೀಕ್ಷಿಸಲು ಸಾಧ್ಯವೇ? ಲಂಚ ತಿಂದು ನಾಯಿಗಳಂತೆ ಬಿದ್ದಿರುತ್ತಾರೆ ಎಂದು ಬಗ್ಗೆ ನೀವೇ (ಆರಗ ಜ್ಞಾನೇಂದ್ರ) ಒಮ್ಮೆ ಪೊಲೀಸರನ್ನು ಟೀಕಿಸಿದ್ದನ್ನು ಒಪ್ಪಿಕೊಳ್ಳುತ್ತೀರಾ' ಎಂದು ಗೃಹ ಸಚಿವ ಜ್ಞಾನೇಂದ್ರ ಅವರನ್ನು ಕೆಣಕಿದರು.

'ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಶಾಂತಿ- ಸುವ್ಯವಸ್ಥೆ ಕದಡಿದೆ. ಶಾಂತಿ ಸುವ್ಯವಸ್ಥೆ ಇಲ್ಲದ ಕಡೆಗಳಲ್ಲಿ ಅಭಿವೃದ್ಧಿಯೂ ಆಗುವುದಿಲ್ಲ. ಇದನ್ನು ಪ್ರಪಂಚದ ಹಲವು ರಾಷ್ಟ್ರಗಳಲ್ಲಿ ಕಾಣಬಹುದು. ಬಹುತ್ವ ಮತ್ತು ಶಾಂತಿ- ಸುವ್ಯವಸ್ಥೆ ಇರುವ ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಫಿನ್ಲೆಂಡ್, ಜಪಾನ್ ಮುಂತಾದ ಕಡೆಗಳಲ್ಲಿ ಅಭಿವೃದ್ಧಿ ಆಗಿದೆ. ಒಂದೇ ಧರ್ಮದ ಪ್ರಾಬಲ್ಯವಿರುವ ದಕ್ಷಿಣ ಆಫ್ರಿಕಾ, ಅಫ್ಘಾನಿಸ್ತಾನ, ಪಾಕಿಸ್ತಾನಗಳಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಿದ್ದೇವೆ. ಅಲ್ಲಿ ಕಾನೂನು ಸುವ್ಯವಸ್ಥೆಯೂ ಇಲ್ಲ ಅಭಿವೃದ್ಧಿಯೂ ಇಲ್ಲ' ಎಂದು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಆರಗ ಜ್ಞಾನೇಂದ್ರ, 'ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಆರಂಭವಾಗಿದ್ದು ನಮ್ಮ ಕಾಲದಲ್ಲಿ ಅಲ್ಲ. ನಿಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರವೇ ನಡೆದಿಲ್ಲವೇ? ನಾನು ಗೃಹಮಂತ್ರಿ ಆದ ಬಳಿಕ ಏಜೆಂಟರನ್ನು ಇಟ್ಟುಕೊಂಡಿಲ್ಲ. ಆ ವ್ಯವಸ್ಥೆಗೆ ಇತಿಶ್ರೀ ಹಾಡಿದ್ದೇನೆ. ಹಳೆ ಕುದುರೆಗೆ ಹೊಸ ಸವಾರ ಅಷ್ಟೇ' ಎಂದರು.

ಇದಕ್ಕೆ ತಿರುಗೇಟು ನೀಡಿದ ಸಿದ್ದರಾಮಯ್ಯ, 'ಈಗ ನಿಮ್ಮ ಸರ್ಕಾರ ಇದೆ. ಜನ ತೀರ್ಪು ಕೊಟ್ಟು ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ಆದರೆ, ನೀವು ಕೊಟ್ಟ ಕುದುರೆಯನ್ನು ಏರದ ಧೀರರೂ ಅಲ್ಲ ಶೂರರೂ ಅಲ್ಲ' ಎಂದರು.

'ನಿಮ್ಮ ಮೇಲೆ ಬಂದ ಆರೋಪಗಳಿಗೆ ಉತ್ತರ ಕೊಟ್ಟಿಲ್ಲ, ಕೇಸೂ ಹಾಕಿಲ್ಲ. ಅಂದರೆ ಒಪ್ಪಿಕೊಂಡಂತೆ ಅಲ್ಲವೇ' ಎಂದು ಪ್ರಶ್ನಿಸಿದರು. 'ಆರೋಪಗಳನ್ನು ನಿರಾಕರಿಸಿ ಪತ್ರಿಕೆಗೆ ಪತ್ರ ಬರೆದಿದ್ದೇನೆ' ಎಂದು ಜ್ಞಾನೇಂದ್ರ ಹೇಳಿದರು. 'ಹಾಗಿದ್ದರೆ ನಿಮ್ಮ ಪತ್ರಕ್ಕೆ ಉತ್ತರ ಬಂದರೆ ಅದನ್ನು ಸದನದಲ್ಲಿ ಇಡಿ' ಎಂದರು.

ಮೇಕೆದಾಟು: ಅನುಮತಿಗೆ ಆಗ್ರಹಿಸಿ ನಿರ್ಣಯ

ತಮಿಳುನಾಡು ನಿಲುವಿಗೆ ಖಂಡನೆ: ಪಕ್ಷಭೇದ ಮರೆತು ಒಗ್ಗಟ್ಟು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಹಾನಿಯಾಗದ ಮೇಕೆದಾಟುಯೋಜನೆಗೆಅಗತ್ಯವಿರುವಎಲ್ಲಅನುಮತಿಗಳನ್ನು ತಕ್ಷಣವೇ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ವಿಧಾನಸಭೆಯಲ್ಲಿ ಗುರುವಾರ ಒಮ್ಮತದ ನಿರ್ಣಯ ಅಂಗೀಕರಿಸಲಾಯಿತು.

ತಮಿಳುನಾಡು ವಿಧಾನಸಭೆಯು ಮೇಕೆದಾಟು ಯೋಜನೆಯನ್ನು ವಿರೋಧಿಸಿ ಅಂಗೀಕರಿಸಿರುವ ನಿರ್ಣಯವನ್ನು ಖಂಡಿಸುವ ತೀರ್ಮಾನದೊಂದಿಗೆ ವಿಧಾನಸಭೆಯ ಎಲ್ಲ ಸದಸ್ಯರು ಒಕ್ಕೊರಲಿನಿಂದ ಈ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿದ ನಿರ್ಣಯವನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್‌ನ ಎಚ್.ಡಿ.ರೇವಣ್ಣ ಅನುಮೋದಿಸಿದರು.

ಕೇಂದ್ರ ಜಲ ಆಯೋಗ ಹಾಗೂ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಮೇಕೆದಾಟು ಯೋಜನೆಗೆ ಅಗತ್ಯವಿರುವ ಅನುಮತಿಗಳನ್ನು ತಕ್ಷಣವೇ ನೀಡಬೇಕು ಎಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.

ನದಿ ಜೋಡಣೆಗೂ ವಿರೋಧ: ರಾಜ್ಯದ ಒಪ್ಪಿಗೆ ಇಲ್ಲದೇ ನದಿ ಜೋಡಣೆ ಯೋಜನೆ ಅನುಷ್ಠಾನಗೊಳಿಸುವುದನ್ನು ವಿರೋಧಿಸುವ ನಿರ್ಣಯವನ್ನೂ ವಿಧಾನಸಭೆ ಅಂಗೀಕರಿಸಿದೆ.

'ಕಣಿವೆ ರಾಜ್ಯಗಳ ನ್ಯಾಯಸಮ್ಮತ ಪಾಲನ್ನು ನಿರ್ಧರಿಸುವವರೆಗೆ ಗೋದಾವರಿ- ಕೃಷ್ಣಾ- ಪೆನ್ನಾರ್- ಕಾವೇರಿ- ವೈಗೈ- ಗುಂಡಾರ್ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಅಂತಿಮಗೊಳಿಸಬಾರದು. ಪ್ರಸ್ತುತ ಸಿದ್ಧಪಡಿಸಿರುವ ಡಿಪಿಆರ್‌ನಲ್ಲಿರುವ ಅಂಶಗಳಿಗೆ ಕರ್ನಾಟಕದ ಒಪ್ಪಿಗೆ ಪಡೆಯದೇ ಈ ಯೋಜನೆಯನ್ನು ಅನುಮೋದಿಸಬಾರದು' ಎಂದು ನಿರ್ಣಯದಲ್ಲಿ ಆಗ್ರಹಿಸಲಾಗಿದೆ.

'ತಮಿಳುನಾಡಿನ ಕಾನೂನುಬಾಹಿರ ಯೋಜನೆಗಳಿಗೆ ಅನುಮೋದನೆ ನೀಡಬಾರದು. ಆ ಯೋಜನೆಗಳನ್ನು ಮುಂದುವರಿಸದಂತೆ ತಮಿಳುನಾಡು ರಾಜ್ಯಕ್ಕೆ ಸಂಬಂಧಪಟ್ಟ ಕೇಂದ್ರ ಸಂಸ್ಥೆಗಳು ನಿರ್ದೇಶನ ನೀಡಬೇಕು' ಎಂದು ಒತ್ತಾಯಿಸಲಾಗಿದೆ.

ಮೇಕೆದಾಟು ಯೋಜನೆಯಿಂದ ತಮಿಳುನಾಡು ರಾಜ್ಯಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಆದರೆ, ಈ ಯೋಜನೆಯನ್ನು ವಿರೋಧಿಸಿ ಸಭ್ಯವಲ್ಲದ ಭಾಷೆಯಲ್ಲಿ ತಮಿಳುನಾಡು ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ. ಬೆಂಗಳೂರು ನಗರಕ್ಕೆ ಹಂಚಿಕೆಯಾಗಿರುವ 24 ಟಿಎಂಸಿ ಅಡಿ ನೀರನ್ನು ಬಳಸಲು ಮತ್ತು ಜಲವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟು ಯೋಜನೆ ರೂಪಿಸಲಾಗಿದೆ. ಈ ಅಣೆಕಟ್ಟೆ ನಿರ್ಮಿಸಲು ಕರ್ನಾಟಕವು ಸಾಂವಿಧಾನಿಕ ಅಧಿಕಾರ ಹೊಂದಿದೆ ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ತಮಿಳುನಾಡು ಸರ್ಕಾರವು ಕಾವೇರಿ ನದಿ ನೀರನ್ನು ಬಳಸಿಕೊಳ್ಳಲು ಕೈಗೆತ್ತಿಕೊಂಡಿರುವ ಕುಂದಾ ಪಿಎಸ್‌ಪಿ, ಸಿಲ್ಲಹಳ್ಳ ಪಿಎಸ್‌ಪಿ, ಹೊಗೇನಕಲ್ ಎರಡನೇ ಹಂತ, ಕಾವೇರಿ (ಕಟ್ಟಲೈ)- ವೈಗೈ- ಗುಂಡಾರ್ ಜೋಡಣೆ ಯೋಜನೆಗಳನ್ನು ವಿಧಾನಸಭೆಯು ವಿರೋಧಿಸಿದೆ. ಮೇಕೆದಾಟು ಯೋಜನೆಗೆ ತನ್ನ ಅನುಮತಿ ಪಡೆಯಬೇಕೆಂಬ ತಮಿಳುನಾಡು ಸರ್ಕಾರದ ನಿಲುವನ್ನು ಖಂಡಿಸಿದೆ.

ನದಿ ಜೋಡಣೆಯನ್ನು ವಿರೋಧಿಸುವ ನಿರ್ಣಯದಲ್ಲಿನ ಕೆಲವು ಅಂಶಗಳಿಗೆ ಕಾಂಗ್ರೆಸ್‌ನ ಎಚ್.ಕೆ. ಪಾಟೀಲ ಆಕ್ಷೇಪ ಎತ್ತಿದರು. 'ನದಿ ಜೋಡಣೆ ಯೋಜನೆಯನ್ನು ಕರ್ನಾಟಕ ಒಪ್ಪಿಕೊಂಡಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸುವ ವಾಕ್ಯವನ್ನು ಸೇರಿಸಬೇಕು' ಎಂದು ಒತ್ತಾಯಿಸಿದರು. ಬಳಿಕ ನಿರ್ಣಯದಲ್ಲಿ ತಿದ್ದುಪಡಿ ಮಾಡಲಾಯಿತು.

ಮುಖ್ಯಮಂತ್ರಿಯನ್ನು ತೋರಿಸಲಾ? ತಬ್ಬಿಬ್ಬಾದ ಕಾಂಗ್ರೆಸ್ ಸದಸ್ಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೋ... ಇಲ್ಲವೋ ಎಂಬುದನ್ನು ತೋರಿಸಲೇ?' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಏರಿದ ಧ್ವನಿಯಲ್ಲಿ ಸವಾಲು ಎಸೆದಾಗ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ತಡಬಡಾಯಿಸಿದ ಪ್ರಸಂಗ ವಿಧಾನ ಪರಿಷತ್‌ನಲ್ಲಿ ಗುರುವಾರ ನಡೆಯಿತು.

ಪ್ರಶ್ನೋತ್ತರ ಅವಧಿಯಲ್ಲಿ ವೆಂಕಟೇಶ್, 'ನಗರದ ಬೊಮ್ಮನಹಳ್ಳಿ ವಲಯದಲ್ಲಿ ಭೂ ಪರಿವರ್ತನೆಗೊಂಡ ಏಕ ನಿವೇಶನವನ್ನು ನಿಯಮಬಾಹಿರವಾಗಿ ಖಾತೆ ವಿಭಜನೆ ಮಾಡಿದ್ದಾರೆ' ಎಂದು ಆರೋಪಿಸಿದರು. ಅಲ್ಲದೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೆ ಎಂದು ತೋರಿಸಿ' ಎಂದು ಸವಾಲು ಹಾಕಿದರು.

ಇದರಿಂದ ಕುಪಿತರಾದ ಮುಖ್ಯಮಂತ್ರಿ, 'ಈ ರೀತಿಯೆಲ್ಲಾ ಮಾತನಾಡಬಾರದು. ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೋ ಇಲ್ಲವೋ ಎಂದು ಸೂಕ್ತ ಕ್ರಮಗಳ ಮೂಲಕ ತೋರಿಸಬೇಕಾ? ತೋರಿಸಲಾ? ಎಂದು ಗಡಸು ಧ್ವನಿಯಲ್ಲಿ ಕೇಳಿದರು. ಮುಖ್ಯಮಂತ್ರಿಯ ಸಿಟ್ಟು ಕಂಡು ತಬ್ಬಿಬ್ಬಾದ ವೆಂಕಟೇಶ್, 'ಬೇಡ ಸರ್, ಮಾಡಿ ಸರ್' ಎಂದು ಏನೂ ಮಾತನಾಡಲಾಗದೇ ಕುಳಿತುಕೊಂಡರು.

ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, 'ಖಾತೆ ವಿಭಜನೆಯಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎಂದು ನಾನೇ ಉತ್ತರ ನೀಡಿದ್ದೇನೆ. ಬಿಬಿಎಂಪಿಯಲ್ಲಿ ಆಸ್ತಿ ವಿಭಜನೆಗೆ ಅವಕಾಶ ಇಲ್ಲ. ಅಧಿಕಾರಿಗಳು ಕಾನೂನುಬಾಹಿರವಾಗಿ ಆಸ್ತಿ ವಿಭಜನೆ ಮಾಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯ ಕಂದಾಯ ನಿರೀಕ್ಷಕ, ಉಪ ಆಯುಕ್ತ, ಜಂಟಿ ಆಯುಕ್ತರ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ' ಎಂದರು.

'ಹಿರಿಯ ಕೆಎಎಸ್ ಅಧಿಕಾರಿಗಳನ್ನು ಬಿಬಿಎಂಪಿಗೆ ನಿಯೋಜಿಸಲು ನಿರ್ಧರಿಸಲಾಗಿದೆ' ಎಂದೂ ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಅವರು ಗುರುವಾರ ಆಯೋಜಿಸಿದ್ದ ಭೋಜನಕೂಟದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಕೆ.ಎಸ್.ಈಶ್ವರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವ ಆರ್. ಅಶೋಕ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಕೆಪಿಎಸ್‌ಸಿಗೆ ಹೊಸ ಸ್ವರೂಪ- ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಕಾಯಕಲ್ಪ ನೀಡಲು ನಿರ್ಧರಿಸಿದ್ದು, ಈಗಾಗಲೇ ಎರಡು ಸಭೆ ನಡೆಸಲಾಗಿದೆ. ಶೀಘ್ರವೇ ಆಯೋಗಕ್ಕೆ ಹೊಸ ಸ್ವರೂಪ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ನಜೀರ್ ಅಹ್ಮದ್ ಪ್ರಶ್ನೆಗೆ ಉತ್ತರಿಸಿದ ಅವರು, '2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆಸಿದ ಮುಖ್ಯ ಪರೀಕ್ಷೆಯ ಉತ್ತರಪತ್ರಿಕೆಯ ಪ್ರತಿಯನ್ನು ಮಾಹಿತಿ ಹಕ್ಕಿನ ಅಡಿ ನೀಡಲು ಕೆಪಿಎಸ್‌ಸಿ ನಿರಾಕರಿಸಿದೆ. ಹೈಕೋರ್ಟ್ ಏಕಸದಸ್ಯ ಪೀಠವು ಉತ್ತರ ಪತ್ರಿಕೆ ನೀಡಲು ಆದೇಶಿಸಿದೆ. ಏಕ ಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠ ತಡೆಯಾಜ್ಞೆ ನೀಡಿದೆ' ಎಂದರು.

'ಮುಖ್ಯಪರೀಕ್ಷೆ ಬರೆದು ಫಲಿತಾಂಶ ಬಂದ ಬಳಿಕ ಅಭ್ಯರ್ಥಿಗಳಿಗೆ ಉತ್ತರಪತ್ರಿಕೆ ನೋಡಲು ಅವಕಾಶ ಇಲ್ಲ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತರಪತ್ರಿಕೆ ನೀಡುವ ಅಗತ್ಯ ಇಲ್ಲ ಎಂದು ಸುಪ್ರೀಂ ಕೋರ್ಟ್ ಪ್ರಕರಣವೊಂದರಲ್ಲಿ ತೀರ್ಪು ನೀಡಿದೆ. ಆದರೆ, ಬೇರೆ ಪ್ರಕರಣಗಳಲ್ಲಿ ಉತ್ತರ ಪತ್ರಿಕೆ ನೀಡಲು ಕೋರ್ಟ್ ಆದೇಶಿಸಿದೆ ಎಂದು ಅಭ್ಯರ್ಥಿಗಳು ವಾದಿಸುತ್ತಿದ್ದಾರೆ. ಒಂದು ವೇಳೆ ಆ ರೀತಿಯ ತೀರ್ಪು ಇದ್ದರೆ ಅದನ್ನು ಪರಿಶೀಲಿಸಿ, ಅಭ್ಯರ್ಥಿಗಳಿಗೆ ನೆರವು ನೀಡಲಾಗುವುದು' ಎಂದರು.

ಹಂತ ಹಂತವಾಗಿ ಭರ್ತಿ: ಕಾಂಗ್ರೆಸ್ಸಿನ ಎಸ್. ರವಿ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, 'ಆರ್ಥಿಕ ಪರಿಸ್ಥಿತಿ ಪರಿಗಣಿಸಿ ಖಾಲಿ ಇರುವ 2.50 ಲಕ್ಷ ಭರ್ತಿಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು' ಎಂದರು.

'ಹಲವು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಹಿಂದಿನ ಸರ್ಕಾರಗಳು ನೇಮಕಾತಿ ತಡೆಹಿಡಿದಿದ್ದರಿಂದ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚಾಗಿವೆ. ನೇಮಕಾತಿಗೆ 517 ಅಧಿಸೂಚನೆಗಳನ್ನು ಹೊರಡಿಸಿ, 26 ಸಾವಿರ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿತ್ತು. ಅದರಲ್ಲಿ 17 ಸಾವಿರ ಹುದ್ದೆಗಳಿಗೆ ನೇಮಕಾತಿ ಆಗಿದೆ' ಎಂದೂ ಹೇಳಿದರು.

₹ 26,953 ಕೋಟಿ ಮೊತ್ತದ ಪೂರಕ ಅಂದಾಜಿಗೆ ಒಪ್ಪಿಗೆ

ಬೆಂಗಳೂರು: ₹ 26,953.33 ಕೋಟಿ ಮೊತ್ತದ ಪೂರಕ ಅಂದಾಜುಗಳಿಗೆ ವಿಧಾನಸಭೆಯು ಗುರುವಾರ ಅನುಮೋದನೆ ನೀಡಿತು.

2021–22ನೇ ಆರ್ಥಿಕ ವರ್ಷದ ಮೂರನೇ ಕಂತಿನ ಪೂರಕ ಅಂದಾಜುಗಳನ್ನು ಮಂಡಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪ್ರಸಕ್ತ ವರ್ಷ ಬಜೆಟ್ ಅಂದಾಜಿಗೆ ಹೋಲಿಸಿದರೆ ವರಮಾನ ಸಂಗ್ರಹದಲ್ಲಿ ₹ 27,774 ಹೆಚ್ಚಳವಾಗಿದೆ. ಇದರಿಂದಾಗಿ ಹೆಚ್ಚುವರಿ ವೆಚ್ಚಗಳನ್ನು ಮಾಡಲು ಸರ್ಕಾರಕ್ಕೆ ಸಾಧ್ಯವಾಗಿದೆ' ಎಂದರು.

ವರಮಾನ ಸಂಗ್ರಹದಲ್ಲಿ ಸೋರಿಕೆ ತಡೆಗೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅನಗತ್ಯ ಲೆಕ್ಕ ಶೀರ್ಷಿಕೆಗಳು ಮತ್ತು ಅನುಪಯುಕ್ತ ಯೋಜನೆಗಳನ್ನು ತೆಗೆದುಹಾಕಲಾಗುವುದು. ಕಡತಗಳ ಚಲನೆಯ ಹಂತವನ್ನು ಕಡಿಮೆ ಮಾಡಲಾಗುವುದು. ಕಟ್ಟಡಗಳ ನಿರ್ಮಾಣಕ್ಕೆ ಅನಗತ್ಯ ವೆಚ್ಚ ಮಾಡುವುದನ್ನೂ ತಗ್ಗಿಸಲಾಗುವುದು ಎಂದು ಹೇಳಿದರು.

ಕ್ರಮದ ಭರವಸೆ: 'ಜಲ ಸಂಪನ್ಮೂಲ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ನಿಗಮಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳನ್ನು ಆಡಳಿತಾತ್ಮಕ ಅನುಮೋದನೆ ಇಲ್ಲದೆ ಕೈಗೆತ್ತಿಕೊಳ್ಳಲಾಗಿದೆ. ಅಕ್ರಮ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಕಾಂಗ್ರೆಸ್‌ನ ಎಚ್.ಕೆ. ಪಾಟೀಲ ಆಗ್ರಹಿಸಿದರು.

'ಕಾಮಗಾರಿಗಳ ಗುತ್ತಿಗೆ ಪ್ರಕ್ರಿಯೆಯಲ್ಲಿನ ಅಕ್ರಮಕ್ಕೆ ಕಡಿವಾಣ ಹಾಕುವ ಕೆಲಸ ಆರಂಭಿಸಿದ್ದೇನೆ. ನಿಯಮ ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಟೆಂಡರ್ ತಡೆಹಿಡಿಯಲು ಸೂಚಿಸಲಾಗಿದೆ. ಭ್ರಷ್ಟರ ವಿರುದ್ಧದ ಗದಾಪ್ರಹಾರ ಆರಂಭವಾಗಿದೆ. ಈವರೆಗೆ ಯಾರೂ ಮುಟ್ಟದ ಸಂಸ್ಥೆಗಳನ್ನು ನಮ್ಮ ಸರ್ಕಾರ ಮುಟ್ಟಿದೆ. ಇದು ನಿಲ್ಲುವುದಿಲ್ಲ' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

'ನಮ್ಮ ಆರ್‌ಎಸ್‌ಎಸ್'ಗೆ ತೀವ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು 'ನಮ್ಮ ಆರ್‌ಎಸ್‌ಎಸ್' ಎಂದು ಹೇಳಿದ್ದು ಕಾಂಗ್ರೆಸ್ ಶಾಸಕರ ತೀವ್ರ ಆಕ್ಷೇಪಕ್ಕೆ ಕಾರಣವಾಯಿತು. ಇದು ವಿಧಾನಸಭೆಯಲ್ಲಿ ಗುರುವಾರ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಬಿಸಿ ಬಿಸಿ ವಾಗ್ವಾದಕ್ಕೂ ಕಾರಣವಾಯಿತು.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾನೂನು ಸುವ್ಯವಸ್ಥೆ ಕುರಿತು ಮಾತನಾಡುವ ಸಂದರ್ಭದಲ್ಲಿ ಆರ್‌ಎಸ್‌ಎಸ್ ಎಂಬ ಪದವನ್ನು ಬಳಸಿದರು. ಆಗ ಮಧ್ಯ ಪ್ರವೇಶಿಸಿದ ಕಾಗೇರಿ, 'ಸಿದ್ದರಾಮಯ್ಯ ತಮ್ಮ ಮಾತುಗಳ ಮಧ್ಯೆ ಅಗತ್ಯ ಇಲ್ಲದಿದ್ದರೂ ನಮ್ಮ ಆರ್‌ಎಸ್‌ಎಸ್ ಅನ್ನು ಎಳೆದು ತರುತ್ತಾರೆ' ಎಂದು ಹೇಳಿದರು.

ಈ ಮಾತನ್ನು ಕಾಂಗ್ರೆಸ್‌ನ ಜಮೀರ್ ಅಹ್ಮದ್ ಖಾನ್ ಮತ್ತು ಪ್ರಿಯಾಂಕ್ ಖರ್ಗೆ ಮುಂತಾದವರು ಆಕ್ಷೇಪಿಸಿದರು. 'ಸಭಾಧ್ಯಕ್ಷ ಪೀಠದಲ್ಲಿ ಕುಳಿತು ಆರ್‌ಎಸ್‌ಎಸ್‌ನವರು ಎಂದು ಹೇಳುವುದು ಸರಿಯಲ್ಲ' ಎಂದರು.

ಅದಕ್ಕೆ ತಿರುಗೇಟು ನೀಡಿದ ಕಾಗೇರಿ, 'ನಾನು ಆರ್‌ಎಸ್‌ಎಸ್‌ನಿಂದಲೇ ಬಂದವನು ಹೇಳುವುದರಲ್ಲಿ ತಪ್ಪೇನು' ಎಂದು ಪ್ರಶ್ನಿಸಿದರು. ಆಗ ಮಧ್ಯ ಪ್ರವೇಶಿಸಿದ ಸಿದ್ದರಾಮಯ್ಯ, 'ಆರ್‌ಎಸ್‌ಎಸ್‌ನಿಂದ ದೇಶದಲ್ಲಿ ಮನುವಾದ ಸ್ಥಾಪನೆ ಆಗುತ್ತದೆ' ಎಂದರು.

'ಈಗ ದೇಶದಲ್ಲಿ ರಾಷ್ಟ್ರಪತಿ, ಪ್ರಧಾನಿ, ಹಲವು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳು ಆರ್‌ಎಸ್‌ಎಸ್‌ನವರೇ ಇದ್ದಾರೆ' ಎಂದು ಸಚಿವ ಆರಗ ಜ್ಞಾನೇಂದ್ರ ಹೇಳಿದರು.

'ಮುಂದೆ ಎಲ್ಲ ಮುಸ್ಲಿಮರು ಮತ್ತು ಕ್ರೈಸ್ತರು ಆರ್‌ಎಸ್‌ಎಸ್‌ನವರೇ ಆಗುತ್ತಾರೆ' ಎಂದು ಸಚಿವ ಈಶ್ವರಪ್ಪ ಅವರು ಹೇಳಿದಾಗ ಕಾಂಗ್ರೆಸ್‌ನ ಕೆ.ಜೆ.ಜಾರ್ಜ್ ಮತ್ತು ಯು.ಟಿ.ಖಾದರ್ ಆಕ್ಷೇಪಿಸಿದರು.

'ಸಭಾಧ್ಯಕ್ಷರ ಪೀಠದಲ್ಲಿ ಕುಳಿತು ಆರ್‌ಎಸ್‌ಎಸ್ ಪರ ಇದ್ದೇನೆ ಎಂದು ಹೇಳಿದ್ದೀರಿ. ಇದು ಸರಿಯಲ್ಲ. ಆರ್‌ಎಸ್‌ಎಸ್‌ನವರು ದೆಹಲಿಯಲ್ಲಿ 150 ಬಾರಿ ಸಭೆಗಳನ್ನು ನಡೆಸಿ ಸಂವಿಧಾನ ಬದಲಿಸುತ್ತೇವೆ' ಎಂದು ಹೇಳಿದ್ದಾರೆ ಎಂದು ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ಹೇಳಿದಾಗ, 'ಸುಮ್ಮನೆ ಇಲ್ಲದ್ದೆಲ್ಲ ಹೇಳಿ ದಾರಿ ತಪ್ಪಿಸಬೇಡಿ. ರಾಜಕೀಯ ಹೊರಗೆ ಮಾಡಿ' ಎಂದು ಕಾಗೇರಿ ತಿರುಗೇಟು ನೀಡಿದರು.

'ಬೆಂಕಿ ಹಚ್ಚುವ ಅಯೋಗ್ಯ'

ಕಾಂಗ್ರೆಸ್‌ನ ಜಮೀರ್ ಅಹ್ಮದ್ ಅವರನ್ನು ಉದ್ದೇಶಿಸಿ ಸಚಿವ ಕೆ.ಎಸ್.ಈಶ್ವರಪ್ಪ ಅವರು, 'ಬೆಂಕಿ ಹಚ್ಚುವ ಅಯೋಗ್ಯ' ಎಂದು ಹೇಳಿದ್ದು ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿ, ವಿಧಾನಸಭೆಯಲ್ಲಿ ಗದ್ದಲಕ್ಕೆ ಕಾರಣವಾಯಿತು.

ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್, ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್, ಯತೀಂದ್ರ ಸಿದ್ದರಾಮಯ್ಯ, ಜಮೀರ್ ಅಹ್ಮದ್ ಅವರು ಈಶ್ವರಪ್ಪ ಅವರು ಹೇಳಿದ ಮಾತನ್ನು ಕಡತದಿಂದ ತೆಗೆದು ಹಾಕುವಂತೆ ಆಗ್ರಹಿಸಿದರು.

'ಮೈಮೇಲೆ ಗ್ಯಾನ ಇಟ್ಟುಕೊಂಡು ಮಾತನಾಡಿ. ಶಿವಮೊಗ್ಗದಲ್ಲಿ ಬೆಂಕಿ ಹಚ್ಚಿದ್ದೇ ಈಶ್ವರಪ್ಪ, ಅವರಿಗೆ ನನ್ನ ಕುರಿತು ಮಾತನಾಡಲು ನೈತಿಕ ಹಕ್ಕಿಲ್ಲ' ಎಂದು ಜಮೀರ್ ಕಿಡಿಕಾರಿದರು.

'ಸದಸ್ಯರು ಬಳಸಿದ ಪದಗಳನ್ನು ನೋಡುತ್ತೇನೆ. ಅಸಂಸದೀಯ ಪದಗಳು ಮಾತ್ರವಲ್ಲ, ಸಾಮರಸ್ಯ ಕೆಡಿಸುವ ಪದಗಳು ಯಾರೂ ಆಡಿದರೂ ಕಡತದಿಂದ ತೆಗೆಯಬೇಕಾಗುತ್ತದೆ' ಎಂದು ಸಭಾಧ್ಯಕ್ಷ ಕಾಗೇರಿ ಹೇಳಿದರು. ಇದಕ್ಕೆ ಸಹಮತ ವ್ಯಕ್ತಪಡಿಸಿದ ಸಿದ್ದರಾಮಯ್ಯ, 'ಒಂದು ವೇಳೆ ನಾನು ಅಂತಹ ಮಾತನಾಡಿದರೆ ಮುಲಾಜಿಲ್ಲದೆ ತೆಗೆದು ಹಾಕಿ' ಎಂದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net Facebook LIVE
ಫೇಸ್‌ಬುಕ್‌ನಲ್ಲಿ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ನಗೆಸಂತ– ಯಶವಂತ ಸೆಲೆಬ್ರಿಟಿ LIVE
ನಟ, ಹಾಸ್ಯ ನಾಟಕಕಾರ ಯಶವಂತ ಸರದೇಶಪಾಂಡೆ
ಬೆಳಿಗ್ಗೆ 11 ರಿಂದ 12

ಪರಿಹಾರದಲ್ಲಿ ತಾರತಮ್ಯ ನಿಲ್ಲಿಸಿ: ಸಿದ್ದರಾಮಯ್ಯ ಆಗ್ರಹ

'ಕೊಡಗಿನ ಯೋಧ ಅಲ್ತಾಫ್ ಅಹಮ್ಮದ್ ಕುಟುಂಬಕ್ಕೆ ₹25 ಲಕ್ಷ ಏಕಿಲ್ಲ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತೀಯ ಸಂಘರ್ಷ, ದುರ್ಘಟನೆಗಳಲ್ಲಿ ಮಡಿದವರ ಕುಟುಂಬಗಳಿಗೆ ಪರಿಹಾರ ನೀಡುವಾಗ ಸರ್ಕಾರವೇ ತಾರತಮ್ಯ ಮಾಡಿದರೆ ಹೇಗೆ? ಜಾತಿ, ಧರ್ಮ, ಸಂಘಟನೆಯ ಆಧಾರದಲ್ಲಿ ತಾರತಮ್ಯ ಮಾಡದೇ ಮೃತರ ಕುಟುಂಬಗಳಿಗೆ ಪರಿಹಾರ ನೀಡಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸರ್ಕಾರವನ್ನು ಆಗ್ರಹಿಸಿದರು.

ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಗುರುವಾರ ನಿಯಮ 69ರಡಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, 'ಶಿವಮೊಗ್ಗದಲ್ಲಿ ಕೊಲೆಯಾದ ಹರ್ಷನ ಕುಟುಂಬಕ್ಕೆ ಸರ್ಕಾರ ₹ 25 ಲಕ್ಷ ಪರಿಹಾರ ನೀಡಿದೆ. ಬೆಳ್ತಂಗಡಿಯಲ್ಲಿ ಬಜರಂಗದಳದ ಮುಖಂಡನಿಂದ ಕೊಲೆಯಾದ ಪರಿಶಿಷ್ಟ ಪಂಗಡದ ದಿನೇಶ್ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ₹ 4 ಲಕ್ಷ ಮಾತ್ರ ನೀಡಲಾಗಿದೆ. ದಿನೇಶ್ ಬಜರಂಗ ದಳಕ್ಕೆ, ಬಿಜೆಪಿಗೆ ಸೇರಿಲ್ಲ ಎಂಬ ಕಾರಣಕ್ಕೆ ಕಡಿಮೆ ಪರಿಹಾರ ಕೊಟ್ಟಿದ್ದೀರಾ' ಎಂದು ಪ್ರಶ್ನಿಸಿದರು.

'ಗದಗದಲ್ಲಿ ಸಮೀರ್ ಎಂಬ ಯುವಕನನ್ನು ಸಂಘ ಪರಿವಾರದ ಕಾರ್ಯಕರ್ತರು ಕೊಲೆ ಮಾಡಿದ್ದಾರೆ. ಆ ಯುವಕನ ಕುಟುಂಬಕ್ಕೆ ಬಿಡಿಗಾಸೂ ಪರಿಹಾರ ನೀಡಿಲ್ಲ. ಕೊಡಗು ಜಿಲ್ಲೆಯ ವಿರಾಜಪೇಟೆಯ ಅಲ್ತಾಫ್ ಅಹಮ್ಮದ್ ಎಂಬ ಯೋಧ ಕಾಶ್ಮೀರದಲ್ಲಿ ಹಿಮಗಡ್ಡೆ ಕುಸಿತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ಈ ಇಬ್ಬರ ಕುಟುಂಬಗಳಿಗೂ ₹ 25 ಲಕ್ಷ ಪರಿಹಾರ ನೀಡಬೇಕಲ್ಲವೆ' ಎಂದು ಕೇಳಿದರು.

ಶಿವಮೊಗ್ಗದಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿ ಸಚಿವ ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲೇ ಶವ ಮೆರವಣಿಗೆ ಮಾಡಲಾಗಿದೆ. ಜಿಲ್ಲಾಧಿಕಾರಿ, ಎಸ್‌ಪಿ ಎದುರಿನಲ್ಲೇ ಗಲಭೆ ಸೃಷ್ಟಿಸಿ, ಹಲವರ ಮನೆಗಳನ್ನು ದೋಚಲಾಗಿದೆ. ಸಚಿವರ ವಿರುದ್ಧ ಈವರೆಗೂ ಏಕೆ ಕ್ರಮ ಕೈಗೊಂಡಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಯಾರನ್ನೂ ಬಿಡುವುದಿಲ್ಲ: ಆರಗ ಜ್ಞಾನೇಂದ್ರ

ಬೆಂಗಳೂರು: 'ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರನ್ನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂದು ನೋಡುವುದಿಲ್ಲ. ಆರ್‌ಎಸ್‌ಎಸ್, ಬಜರಂಗದಳ ಸೇರಿದಂತೆ ಯಾವುದೇ ಸಂಘಟನೆ ಸದಸ್ಯರು ಅಪರಾಧ ಕೃತ್ಯದಲ್ಲಿ ಭಾಗಿಯಾದರೂ ಕ್ರಮ ನಿಶ್ಚಿತ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಕಾನೂನು ಸುವ್ಯವಸ್ಥೆ ಕುರಿತು ನಡೆದ ಚರ್ಚೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿದೆ. ಯಾವ ಲೋಪವೂ ಆಗಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರಣಿ ಹತ್ಯೆಗಳು ನಡೆದಿದ್ದವು. ಆಗಿನಿಂದಲೇ ಪಿಎಫ್‌ಐ ಸಂಘಟನೆ ಬೆಳೆದು ನಿಂತಿತು. ಎಲ್ಲ ಮುಸ್ಲಿಮರೂ ಕೆಟ್ಟವರಲ್ಲ. ಕೆಲವು ಮೂಲಭೂತ ಶಕ್ತಿಗಳು ಹೆಡೆ ಎತ್ತಿ ನಿಂತಿವೆ. ಅವುಗಳನ್ನು ಬಗ್ಗುಬಡಿಯಲು ಸರ್ಕಾರ ಸಿದ್ಧ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 80 ಕೋಮು ಸಂಘರ್ಷದ ಪ್ರಕರಣ ನಡೆದಿದ್ದು, 47 ಆಸ್ತಿ ಹಾನಿ ಪ್ರಕರಣ ದಾಖಲಾಗಿದ್ದವು. 142 ಜನರನ್ನು ಬಂಧಿಸಲಾಗಿತ್ತು. ಬಿಜೆಪಿ ಸರ್ಕಾರದ ಅವಧಿಯಲ್ಲಿ 40 ಕೋಮು ಸಂಘರ್ಷ ಪ್ರಕರಣ, 30 ಆಸ್ತಿ ಹಾನಿ ಪ್ರಕರಣ ನಡೆದಿದ್ದು, 145 ಜನರನ್ನು ಬಂಧಿಸಲಾಗಿದೆ ಎಂದು ವಿವರ ನೀಡಿದರು.

ಬಿಜೆಪಿ– ಕಾಂಗ್ರೆಸ್ ವಾಕ್ಸಮರ

ಸಿದ್ದರಾಮಯ್ಯ ಮಾತನಾಡುತ್ತಿದ್ದಾಗ ಮಧ್ಯ ಪ್ರವೇಶಿಸಿದ ಬಿಜೆಪಿ ಶಾಸಕಿ ರೂಪಾಲಿ ನಾಯ್ಕ, 2017ರಲ್ಲಿ ನಡೆದಿದ್ದ ಪರೇಶ್ ಮೇಸ್ತ ಸಾವಿನ ಪ್ರಕರಣದ ಕುರಿತು ಪ್ರಸ್ತಾಪಿಸಲು ಯತ್ನಿಸಿದರು. ಆದರೆ, ಸಿದ್ದರಾಮಯ್ಯ ಮಾತು ನಿಲ್ಲಿಸಲಿಲ್ಲ. ಬಿಜೆಪಿ ಶಾಸಕರು ರೂಪಾಲಿ ಬೆಂಬಲಕ್ಕೆ ನಿಂತು ಏರಿದ ಧ್ವನಿಯಲ್ಲಿ ಕೂಗಲಾರಂಭಿಸಿದರು. ಕಾಂಗ್ರೆಸ್ ಶಾಸಕರೂ ಪ್ರತ್ಯುತ್ತರ ನೀಡಿದರು.

ಬಿಜೆಪಿಯ ಜಿ. ಸೋಮಶೇಖರ ರೆಡ್ಡಿ, ವೇದವ್ಯಾಸ ಕಾಮತ್, ಹರೀಶ್ ಪೂಂಜ, ಸಂಜೀವ ಮಠಂದೂರು ಸೇರಿದಂತೆ ಹಲವು ಶಾಸಕರು ಗುಂಪುಗೂಡಿ ಆಡಳಿತ ಪಕ್ಷದ ಕಡೆಯ ಮುಂದಿನ ಸಾಲಿನಲ್ಲಿ ನಿಂತು ಏರಿದ ಧ್ವನಿಯಲ್ಲಿ ಆಕ್ಷೇಪಿಸಿದರು.

ಲಂಚಕ್ಕೆ ಆಸ್ಪದವಿಲ್ಲ: 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಗೃಹ ಸಚಿವರಿಗೆ ಸಲಹೆಗಾರರಾಗಿ ಕೆಂಪಯ್ಯ ಇದ್ದರು. ಅವರ ಕುರಿತು ಮಾಧ್ಯಮಗಳಲ್ಲಿ ಏನು ವರದಿಗಳು ಬಂದಿದ್ದವು ಒಮ್ಮೆ ನೋಡಿ. ಪೊಲೀಸ್ ಇಲಾಖೆಯಲ್ಲಿ ಲಂಚದ ಹಾವಳಿಗೆ ದೀರ್ಘ ಇತಿಹಾಸವಿದೆ. ನಾನಾದರೂ ಶುದ್ಧವಾಗಿರಬೇಕು ಅಂದುಕೊಂಡಿದ್ದೇನೆ. ಯಾರೇ ಲಂಚ ಕೇಳಿದರೂ ನನಗೆ ನೇರವಾಗಿ ದೂರು ನೀಡಬಹುದು' ಎಂದು ಜ್ಞಾನೇಂದ್ರ ಹೇಳಿದರು.

ದುಪ್ಪಟ್ಟಾ ಹಿಜಾಬ್ ಅಲ್ಲ. ಹೀಗಾಗಿ, ಪದವಿ ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಸಮವಸ್ತ್ರದ ಬಣ್ಣದ ದುಪ್ಪಟ್ಟಾ ಧರಿಸಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಬೇಕು

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಕನ್ಯಾಡಿಯ ದಿನೇಶ್, ಗದಗದ ಸಮೀರ್ ಮತ್ತು ವಿರಾಜಪೇಟೆಯ ಅಲ್ತಾಫ್ ಕುಟುಂಬಗಳಿಗೂ ₹ 25 ಲಕ್ಷ ಪರಿಹಾರ ನೀಡುವ ಕುರಿತು ಮುಖ್ಯಮಂತ್ರಿಯವರ ಜತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ

ಆರಗ ಜ್ಞಾನೇಂದ್ರ, ಗೃಹ ಸಚಿವ

'ಅಂತರ್ಜಲ ವೃದ್ಧಿಗೆ ಹೆಚ್ಚಿನ ಒತ್ತು'

ಬೆಂಗಳೂರು: 'ಅಂತರ್ಜಲ ವೃದ್ಧಿಗೆ ರಾಜ್ಯ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದ್ದು, ವಿವಿಧ ಯೋಜನೆಗಳಲ್ಲಿ ಕೆರೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದಲ್ಲಿ 36 ಸಾವಿರ ಕೆರೆಗಳ ಪೈಕಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ 3,670 ಕೆರೆಗಳಿವೆ. 870 ಕೆರೆಗಳು ಪೂರ್ಣವಾಗಿ ತುಂಬುತ್ತವೆ. 999 ಕೆರೆಗಳಲ್ಲಿ ಶೇ 50ಕ್ಕಿಂತ ಹೆಚ್ಚು ನೀರು ತುಂಬಲಿದ್ದು, 1,454 ಕೆರೆಗಳಲ್ಲಿ ಶೇ 50ಕ್ಕಿಂತ ಕಡಿಮೆ ನೀರು ನಿಲ್ಲುತ್ತಿದೆ' ಎಂದು ಮಾಹಿತಿ ನೀಡಿದರು.

'ಬಹುತೇಕ ಕೆರೆಗಳು ನೈಸರ್ಗಿಕವಾಗಿ ತುಂಬುತ್ತವೆ. ಕೆಲವು ಕೆರೆಗಳನ್ನು ನೀರು ಹರಿಸುವ ಮೂಲಕ ತುಂಬಿಸಲಾಗುತ್ತದೆ. ಹಳ್ಳದಲ್ಲಿ ನೀರು ಹರಿದರೆ ಮಾತ್ರ ಅಂತರ್ಜಲ ವೃದ್ಧಿ ಸಾಧ್ಯವಾಗಲಿದೆ. ಕೆರೆ ಸಂರಕ್ಷಣೆಗೆ ಬಜೆಟ್‌ನಲ್ಲಿ ಮುಖ್ಯಮಂತ್ರಿ ₹ 500 ಕೋಟಿ ಕಾಯ್ದಿರಿಸಿದ್ದಾರೆ. ಹಲವು ಯೋಜನೆಗಳನ್ನು ರೂಪಿಸಲಾಗುವುದು' ಎಂದರು.

'ಅಟಲ್ ಭೂ ಜಲ ಯೋಜನೆಯಡಿ ಕೇಂದ್ರ ಸರ್ಕಾರ ನಾಲ್ಕು ವರ್ಷಗಳ ಅವಧಿಗೆ ₹ 1,002 ಕೋಟಿ ನೀಡಿದೆ' ಎಂದರು.

ವಿಧಾನ ಪರಿಷತ್‌ನಲ್ಲಿ ಸಚಿವ ಬಿ.ಸಿ. ನಾಗೇಶ್ ಭರವಸೆ

ಶಾಲಾ ಕಟ್ಟಡ ಸುರಕ್ಷತೆ: ನವೀಕರಣ ಶುಲ್ಕ ಕಡಿತಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿನ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡ ಮತ್ತು ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ ಕೆಲ ಬದಲಾವಣೆಗಳನ್ನು ಮಾಡಲಾಗುತ್ತಿದ್ದು, ನವೀಕರಣದ ಶುಲ್ಕ ಕಡಿಮೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಗುರುವಾರ ಈ ಬಗ್ಗೆ ನಡೆದ ಚರ್ಚೆಗೆ ಉತ್ತರಿಸಿದ ಸಚಿವರು, 'ಇನ್ನೆರಡು ತಿಂಗಳಲ್ಲಿ ಶುಲ್ಕ ಕಡಿಮೆ ಮತ್ತು ನವೀಕರಣದ ಅವಧಿ ಕಡಿಮೆ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಮುಖ್ಯಾಂಶಗಳು

- 'ಎರಡು ತಿಂಗಳಲ್ಲಿ ಶುಲ್ಕ ಕಡಿಮೆ ಮತ್ತು ನವೀಕರಣದ ಅವಧಿ ಕುರಿತು ನಿರ್ಧಾರ'
- 'ಶಾಲೆ ಸುರಕ್ಷತೆಗೆ ಸಂಬಂಧಿಸಿ ರಚಿಸಿದ್ದ ಸಮಿತಿ ವರದಿ ಅನುಷ್ಠಾನ ಆಗಿಲ್ಲ'

'ನವೀಕರಣದ ಅವಧಿಯನ್ನು ಪ್ರತಿ ವರ್ಷದ ಬದಲು ಮೂರು ವರ್ಷಗಳಿಗೆ ಒಂದು ಬಾರಿ ನಿಗದಿಪಡಿಸುವ ಬಗ್ಗೆಯೂ ಯೋಚಿಸಲಾಗುವುದು. ಶೇ 99ರಷ್ಟು ಸರ್ಕಾರಿ ಶಾಲೆಗಳು ನೆಲಮಟ್ಟದಲ್ಲಿರುವುದರಿಂದ ಮಕ್ಕಳು ಮೆಟ್ಟಿಲು ಇಳಿದು ನಡೆದುಕೊಂಡು ಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೂ, ಈ ಶಾಲೆಗಳಲ್ಲೂ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಬಿಜೆಪಿಯ ಎಸ್.ವಿ. ಸಂಕನೂರು, 'ಶಾಲೆಗಳ ಸುರಕ್ಷತೆಗೆ ಸಂಬಂಧಿಸಿದಂತೆ ಎಂಟು ಶಾಸಕರು ಮತ್ತು ಒಂಬತ್ತು ಅಧಿಕಾರಿಗಳನ್ನು ಒಳಗೊಂಡ ರಚಿಸಿದ್ದ ಸಮಿತಿಯು ವರದಿ ನೀಡಿ ಆರು ತಿಂಗಳಾಗಿದೆ. ಆದರೆ, ವರದಿ ಅನುಷ್ಠಾನವಾಗಿಲ್ಲ. ಪರವಾನಗಿ ಪಡೆಯುವ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸಬೇಕು ಎಂದು ಶಿಫಾರಸು ಮಾಡಲಾಗಿತ್ತು. ಆದರೆ, ಇದುವರೆಗೆ ಜಾರಿಯಾಗಿಲ್ಲ. ಅಗ್ನಿ ಸುರಕ್ಷತಾ ಪ್ರಮಾಣಪತ್ರ ಪಡೆಯುವಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ' ಎಂದು ದೂರಿದರು.

'ಸುರಕ್ಷತಾ ಕ್ರಮಗಳನ್ನು ಖಾಸಗಿ ಶಾಲೆಗಳಿಗೆ ಮಾತ್ರ ಅನ್ವಯಿಸಲಾಗುತ್ತಿದೆ. ಸರ್ಕಾರಿ ಶಾಲೆಗಳಿಗೆ ಏಕೆ ಇಲ್ಲ. ಈಗಿರುವ ವ್ಯವಸ್ಥೆಯನ್ನು ಸರಳೀಕರಣಗೊಳಿಸಬೇಕು ಮತ್ತು ಶುಲ್ಕ ಕಡಿಮೆ ಮಾಡಬೇಕು' ಎಂದು ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ಮರಿತಿಬ್ಬೇಗೌಡ, ಬಿಜೆಪಿಯ ಅರುಣ ಶಹಾಪುರ, ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿ ಒತ್ತಾಯಿಸಿದರು.

ಟಿಪ್ಪು ಸುಲ್ತಾನ್ ವೈಭವೀಕರಣಕ್ಕೆ ಕತ್ತರಿ?

ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪುಸ್ತಕ ಪರಿಶೀಲನಾ ಸಮಿತಿ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಿಪ್ಪು ಸುಲ್ತಾನ್ ಬಗೆಗಿನ ವೈಭವೀಕರಣ ಕಡಿಮೆ ಮಾಡಬೇಕು, ಈಶಾನ್ಯ ಭಾರತವನ್ನು 600 ವರ್ಷಗಳ ಕಾಲ ಆಳಿದ ಆಹೋಂ ಸಾಮ್ರಾಜ್ಯ ಮತ್ತು ಕಾಶ್ಮೀರ ಕಣಿವೆಯನ್ನು 300 ವರ್ಷಗಳವರೆಗೆ ಆಳಿದ ಕಾರ್ಕೋಟ ವಂಶದ ರಾಜರ ಬಗ್ಗೆ ಪಠ್ಯ ಅಳವಡಿಸಬೇಕು' ಎಂದು ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪುಸ್ತಕ ಪರಿಶೀಲನಾ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಮಿತಿ ಪರಿಷ್ಕರಿಸಿದ ಒಂದರಿಂದ 10ನೇ ತರಗತಿವರೆಗಿನ ಕನ್ನಡ ಭಾಷಾ ವಿಷಯದ 15 ಪಠ್ಯಗಳು ಮತ್ತು 6ರಿಂದ 8ನೇ ತರಗತಿಯ ಸಮಾಜ ವಿಜ್ಞಾನದ ಏಳು ಮಾಧ್ಯಮಗಳ 68 ಪಠ್ಯಪುಸ್ತಕಗಳನ್ನು (ಒಟ್ಟು 83 ಪರಿಷ್ಕೃತ ಪಠ್ಯಪುಸ್ತಕಗಳು) 2022–23ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಪಠ್ಯಪುಸ್ತಕ ಪರಿಷ್ಕರಣೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದರು. ಈ ಸಮಿತಿಯು ಮಾರ್ಚ್ 8ರಂದು ವರದಿ ನೀಡಿದೆ. ಪರಿಷ್ಕರಣೆಗೊಂಡಿರುವ ಪಠ್ಯ ಪುಸ್ತಕಗಳನ್ನು ಮುದ್ರಿಸಿ ವಿತರಿಸಲು ಇದೇ 19ರಂದು ಆದೇಶ ಹೊರಡಿಸಲಾಗಿದೆ.

'ಪಠ್ಯ ಪುಸ್ತಕದಲ್ಲಿದ್ದ ಟಿಪ್ಪು ಸುಲ್ತಾನನ ಕುರಿತ ಮಾಹಿತಿಗಳನ್ನು ತೆಗೆದು ಹಾಕಿಲ್ಲ. ಆದರೆ, ಈ ಪಠ್ಯವು ವರ್ಣರಂಜಿತ ಆಗಿರುವುದಿಲ್ಲ' ಎಂದು ಸಮಿತಿಯ ಮೂಲಗಳು ತಿಳಿಸಿವೆ.

'ಒಬ್ಬ ರಾಜನಾಗಿ ಇತಿಹಾಸದಲ್ಲಿ ಟಿಪ್ಪು ಸುಲ್ತಾನ್ ಪಾಠವನ್ನು ಕಲಿಯುವ ಅಗತ್ಯವಿದೆ. ನಾವು ಪಠ್ಯವನ್ನು ಪರಿಷ್ಕರಿಸುವ ಮೂಲಕ ಟಿಪ್ಪು ಕುರಿತ ಮಾಹಿತಿಯಲ್ಲಿದ್ದ ಅಸಮತೋಲನ ಸರಿಪಡಿಸಿದ್ದೇವೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿಯು ಟಿಪ್ಪು ಸುಲ್ತಾನ್ ಕುರಿತ ಕೆಲವು ವಿಷಯಗಳನ್ನು ಹೆಚ್ಚು ವೈಭವೀಕರಿಸಿತ್ತು' ಎಂದೂ ಮೂಲಗಳು ಹೇಳಿವೆ.

ಕೊಡಗಿನ ಹಲವು ಸ್ಥಳ ನಾಮಗಳನ್ನು ಬದಲಿಸಿದ್ದ ಮತ್ತು ಹಿಂದೂ ದೇವಾಲಯಗಳನ್ನು ಕೆಡವಿದ್ದ ಟಿಪ್ಪು ಸುಲ್ತಾನನ ಕುರಿತ ಪಠ್ಯವನ್ನು ಪಠ್ಯಪುಸ್ತಕದಿಂದ ತೆಗೆದು ಹಾಕುವಂತೆ ಅಪ್ಪಚ್ಚು ರಂಜನ್ ಸೇರಿದಂತೆ ಬಿಜೆಪಿಯ ಹಲವು ಶಾಸಕರು ಒತ್ತಾಯಿಸಿದ್ದರು. ಪಠ್ಯಪುಸ್ತಕ ಸಮಿತಿ ಈ ಬಗ್ಗೆ ನಿರ್ಣಯ ತೆಗೆದುಕೊಂಡಾಗ ವಿವಾದ ಸೃಷ್ಟಿಯಾಗಿತ್ತು. ಹೀಗಾಗಿ, ಮತ್ತೆ ಪಠ್ಯ ಭಾಗವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಲಾಗಿತ್ತು.

ಸ್ವಾತಂತ್ರ ಹೋರಾಟದ ಮುಂಗೋಳಿ ಎಂದೇ ಹೆಸರಾದ ಮೈಸೂರು ಹುಲಿ ಟಿಪ್ಪುಸುಲ್ತಾನ್ ಬಗೆಗೆ ಬಿಜೆಪಿ ಆಕ್ಷೇಪ ಎತ್ತುತ್ತಲೇ ಬಂದಿದೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಟಿಪ್ಪುಸುಲ್ತಾನ್ ಜಯಂತಿ ಆಚರಣೆಗೆ ಚಾಲನೆ ನೀಡಿತ್ತು. ಬಿಜೆಪಿ ಅಧಿಕಾರಕ್ಕೆ ಬರುತ್ತಲೇ ಅದನ್ನು ರದ್ದುಪಡಿಸಿದೆ.

ಯಾವುದು ಪರಿಷ್ಕರಣೆ: 1ರಿಂದ 10ನೇ ತರಗತಿವರೆಗಿನ ಕನ್ನಡ ಭಾಷಾ ವಿಷಯಗಳ ಪಠ್ಯಪುಸ್ತಕಗಳು, 2 ಮತ್ತು 4ನೇ ತಗರತಿಯ ಪರಿಸರ ಅಧ್ಯಯನ ಹಾಗೂ 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನದ ಪಠ್ಯಪುಸ್ತಕಗಳನ್ನು ಸಮಿತಿ ಪರಿಷ್ಕರಿಸಿದ್ದು, ಇದಕ್ಕೆ ಸರ್ಕಾರ ಅನುಮತಿ ನೀಡಿದೆ.

6ರಿಂದ 10ನೇ ತರಗತಿ ಸಮಾಜ ವಿಜ್ಞಾನ ವಿಷಯದ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪರಿಷ್ಕೃತ ಪಠ್ಯಗಳು ಮತ್ತು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು ಇತರ 5 ಮಾಧ್ಯಮಗಳಲ್ಲಿ (ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ) ಅನುವಾದಿಸಿ, ಅನುವಾದ ಕಾರ್ಯ ಮುಗಿದ ಬಳಿಕ 2022–23ನಿಂದಲೇ ವಿತರಿಸಲು ಆದೇಶ ಹೊರಡಿಸಲಾಗಿದೆ.

ಅನಿಲ್ ಸಿದ್ದು, ಹನ್ಸಿಕಾ ಮೋಟ್ವಾನಿ

ಹನ್ಸಿಕಾ ಜೊತೆ ತೆರೆಯಲ್ಲಿ ಸಿದ್ದು

ಖಳನಾಯಕನ ಪಾತ್ರದಲ್ಲಿ ಚಂದನವನದಲ್ಲಿ ಮಿಂಚಿ ಇತರೆ ಚಿತ್ರರಂಗಕ್ಕೆ ಕಾಲಿಟ್ಟ ಕಲಾವಿದರ ಪಟ್ಟಿಯಲ್ಲಿ ನಟ ಅನಿಲ್ ಸಿದ್ದು ಅವರೂ ಒಬ್ಬರು. ಇದೀಗ ಅನಿಲ್, ಖ್ಯಾತ ನಟಿ ಹನ್ಸಿಕಾ ಮೋಟ್ವಾನಿ ಜೊತೆ ಸಿನಿಮಾವೊಂದರಲ್ಲಿ ತೆರೆಹಂಚಿಕೊಂಡಿದ್ದಾರೆ.

ಕನ್ನಡದ 'ಎ+' ಚಿತ್ರದ ಮುಖಾಂತರ ನಾಯಕನಾಗಿಯೂ ಕಾಣಿಸಿಕೊಂಡ ಅನಿಲ್ ಅವರಿಗೆ ತಮಿಳು ಚಿತ್ರರಂಗ ಹೊಸದೇನಲ್ಲ. ಇದಕ್ಕೂ ಮುನ್ನ ಮಣಿರತ್ನಂ ನಿರ್ದೇಶನದ 'ಕಾಟ್ರು ವೆಲಿಯಿದೈ', ಎ.ಆರ್.ಮುರಗದಾಸ್ ಅವರ 'ಕತ್ತಿ' ಹಾಗೂ ಶಂಕರ್ ಆಕ್ಷನ್ ಕಟ್ ಹೇಳಿರುವ 'ಐ' ಚಿತ್ರಗಳಲ್ಲಿ ಅನಿಲ್ ಸಣ್ಣ ಪಾತ್ರಗಳಿಗೆ ಬಣ್ಣ ಹಚ್ಚಿದ್ದರು.

ವಿಕ್ರಂ, ಸಿಂಬು, ವಿಜಯ್ ಸೇತುಪತಿ ಸಿನಿಮಾಗಳನ್ನು ನಿರ್ದೇಶನ ಮಾಡಿರುವ ವಿಜಯಚಂದರ್ ಇದೀಗ ನಿರ್ಮಾಣ ಸಂಸ್ಥೆಯನ್ನು ತೆರೆದಿದ್ದು, ಇದರಡಿ ನಿರ್ಮಾಣಗೊಳ್ಳುತ್ತಿರುವ ಸಿನಿಮಾವೊಂದರಲ್ಲಿ ಕಂಪೆನಿ ಸಿಇಒ ಪಾತ್ರಕ್ಕೆ ಅನಿಲ್ ಬಣ್ಣ ಹಚ್ಚಿದ್ದಾರೆ. ಇವರ ಸಹೋದ್ಯೋಗಿ ಪಾತ್ರದಲ್ಲಿ ಹನ್ಸಿಕಾ ಮೋಟ್ವಾನಿ ನಟಿಸಿದ್ದಾರೆ. ತಮಿಳು ನಿರ್ದೇಶಕ ಕೆ.ಎಸ್.ರವಿಕುಮಾರ್ ಪುತ್ರರಾದ ಶರವಣ-ಶಬರಿ ಜಂಟಿಯಾಗಿ ಈ ಹೊಸ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈಗಾಗಲೇ ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಇನ್ನಷ್ಟು ಮಾಹಿತಿಯನ್ನು ಹಂಚಿಕೊಳ್ಳುವುದಾಗಿ ಚಿತ್ರತಂಡ ತಿಳಿಸಿದೆ.

ಪೃಥ್ವಿ ಅಂಬಾರ್

ಯಶಸ್ಸು, ಸಮೃದ್ಧ ಬದುಕೂ ಮುಖ್ಯ

ಕಾಲೇಜು ದಿನಗಳಲ್ಲಿ ನಿರೂಪಕನಾಗಿದ್ದ ಈ ಹುಡುಗ ಹೀರೋ ಆಗುವ ಕನಸು ಕಂಡವನಲ್ಲ. ಆದರೆ, ಈಗ ಬಹುಭಾಷಾ ಚಿತ್ರಗಳಲ್ಲಿ ಬ್ಯುಸಿ ನಾಯಕ. ಅವರ ಅಭಿನಯದ 'ಶುಗರ್‌ಲೆಸ್' ಬಿಡುಗಡೆಯ ಹಾದಿಯಲ್ಲಿದೆ. 'ಫಾರ್ ರಿಜಿಸ್ಟ್ರೇಷನ್'ನ ಚಿತ್ರೀಕರಣ ನಡೆದಿದೆ. ಈ ಹೊತ್ತಿನಲ್ಲಿ 'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಜೊತೆ ಮಾತುಕತೆ.

ಶರತ್ ಹೆಗ್ಡೆ

- **ತುಳು ಚಿತ್ರ 'ಬರ್ಕೆ'ಯಿಂದ 'ಫಾರ್ ರಿಜಿಸ್ಟ್ರೇಷನ್'ವರೆಗಿನ ಸಿನಿಪಯಣ ನೆನಪಿಸುವುದಾದರೆ?**

ಹೌದು ಎಲ್ಲವೂ ಅನಿರೀಕ್ಷಿತ. ಗುರುಕಿರಣ್ ಅವರ ಕಾರ್ಯಕ್ರಮಗಳಲ್ಲಿ ನಿರೂಪಣೆ ಮಾಡುತ್ತಿದ್ದೆ. ಒಮ್ಮೆ ಅವರೇ ಸಿನಿಮಾಕ್ಕೆ ಪ್ರಯತ್ನಿಸುವಂತೆ ಪ್ರೋತ್ಸಾಹಿಸಿದರು. ಚಿತ್ರದಲ್ಲಿ ನಿರೂಪಕನ ಪಾತ್ರವೇ ಸಿಕ್ಕಿತು. ಆ ಬಳಿಕ 'ದಿಯಾ' ಚಿತ್ರಕ್ಕಾಗಿ ಆಡಿಷನ್ ನಡೆಯುತ್ತಿತ್ತು. ಸುಮ್ಮನೆ ಪ್ರಯತ್ನಿಸಿದೆ. ಆಯ್ಕೆಯೂ ನಡೆಯಿತು. ಈ ಮಧ್ಯೆ ಶಿಕ್ಷಣವೂ ಬೇಕಲ್ಲಾ. ಅದಕ್ಕಾಗಿ ಸಮೂಹ ಸಂವಹನ ವಿಷಯದಲ್ಲಿ ಪದವಿಯೂ ಆಯಿತು. ಕೆಲಕಾಲ ರೇಡಿಯೊ ಜಾಕಿ ಆಗಿದ್ದೆ. ಈಟವಿಯ ಡ್ಯಾನ್ಸ್ ರಿಯಾಲಿಟಿ ಷೋದಲ್ಲಿ ನೃತ್ಯ ಪ್ರದರ್ಶನದ ಮೂಲಕ ಗುರುತಿಸಿಕೊಂಡೆ. ಹಾಗೆ ನೋಡಿದರೆ ನಾನು ನೃತ್ಯ ನಿರ್ದೇಶಕನಾಗಬೇಕು ಅಂದುಕೊಂಡಿದ್ದವನು. ಈಗ ಇಲ್ಲಿಯವರೆಗೆ ಬಂದಿದ್ದೇನೆ ನೋಡಿ.

- **ಸಿನಿಮಾ ಅಥವಾ ಧಾರಾವಾಹಿ ಯಾವುದು ಇಷ್ಟ?**

ಧಾರಾವಾಹಿ ನಿರಂತರ ನಟನಾ ಕಲಿಕೆಯ ಶಾಲೆಯಿದ್ದಂತೆ. ಅಲ್ಲಿ ಕಲಿಕೆಗೆ ಸಾಕಷ್ಟು ಅವಕಾಶ ಇದೆ. ಈಗ ಸಿನಿಮಾಕ್ಕೆ ಬಂದಿದ್ದೇನೆ. ಇಲ್ಲಿಯೇ ಅವಕಾಶಗಳಿವೆ. ಹಾಗಾಗಿ ಸಿನಿಮಾದಲ್ಲೇ ಮುಂದುವರಿಯುತ್ತೇನೆ. ಇದೊಂದು ಆಸಕ್ತಿ ಮತ್ತು ವೃತ್ತಿ ಎಂದು ತುಂಬಾ ಹತ್ತಿರವಾಗಿಬಿಟ್ಟಿದೆ.

- **'ಫಾರ್ ರಿಜಿಸ್ಟ್ರೇಷನ್'ನಲ್ಲಿ ಏನಿದೆ?**

– ಎಷ್ಟೋ ವಿಷಯಗಳನ್ನು ನಾವು ಮನಸ್ಸಿನಲ್ಲಿ ನೋಂದಣಿ (ರಿಜಿಸ್ಟರ್) ಮಾಡಿಕೊಳ್ಳುವುದೇ ಇಲ್ಲ. ಸಂಬಂಧ, ಪ್ರೀತಿ, ಮೌಲ್ಯ, ಘಟನೆ, ವ್ಯಕ್ತಿ... ಹೀಗೆ ತುಂಬಾ ಇವೆ. ಅಂಥ ವಿಷಯ ಇಟ್ಟುಕೊಂಡು ಚಿತ್ರ ಮಾಡಿದ್ದೇವೆ. ಇದೊಂದು ಕುಟುಂಬ ಸಮೇತ ನೋಡಬೇಕಾದ ಮನರಂಜನಾ ಚಿತ್ರ. ಮುಂದಿನದ್ದು ಚಿತ್ರದಲ್ಲೇ ಗೊತ್ತಾಗಲಿದೆ. ಒಳ್ಳೆಯ ತಂಡವಿದು. ಬೇರೆ ಬೇರೆ ಲೊಕೇಷನ್‌ಗಳಲ್ಲಿ ಚಿತ್ರೀಕರಣ ನಡೆದಿದೆ. ಬಹಳಷ್ಟು ಮಂದಿ ಹಿರಿಯ ಕಲಾವಿದರು ಈ ಚಿತ್ರದಲ್ಲಿ ಇದ್ದಾರೆ.

- **ನಿರ್ದೇಶನದ ಕನಸಿದೆಯೇ?**

– ಹೌದು, ಆದರೆ ಅದಕ್ಕೆ ನಾನಿನ್ನೂ ಕಲಿಯಬೇಕಿದೆ. ಇನ್ನೊಂದಿಷ್ಟು ವರ್ಷ ಹೋಗಬೇಕು. ಮುಂದೆ ನೋಡೋಣ. ಸದ್ಯ ಈಗ ಕೈಲಿರುವ ಕೆಲಸಗಳನ್ನು ಮುಗಿಸಬೇಕು.

- **ಕುಟುಂಬ ಜೀವನ ಹೇಗಿದೆ?**

– ತುಂಬಾ ಚೆನ್ನಾಗಿದೆ. ಇತ್ತೀಚೆಗೆ ಮಗುವಾಗಿದೆ. ಪತ್ನಿಯೂ ನನಗೆ ಕಲಾ ಬದುಕಿನಲ್ಲೇ (ಡ್ಯಾನ್ಸ್ ರಿಯಾಲಿಟಿ ಷೋದಲ್ಲಿ) ಸಿಕ್ಕಿದಳು. ಅವಳ ಬೆಂಬಲವೂ ತುಂಬಾ ಇದೆ. ಕೆಲಸದ ಜೊತೆಗೆ ಕುಟುಂಬಕ್ಕೂ ಹೆಚ್ಚು ಸಮಯ ಕೊಡಬೇಕಾದ ಜವಾಬ್ದಾರಿ ಇದೆ. ಸದ್ಯ ಕೆಲಸದ ಒತ್ತಡವೂ ಇರುವುದರಿಂದ ಸಮತೋಲನ ಸಾಧಿಸಬೇಕು ಅಷ್ಟೆ.

- **ನಿಮ್ಮ ಅಭಿರುಚಿ ಆಸಕ್ತಿಗಳು?**

ಏನೇ ಮಾಡಿದರೂ ನಾನು ಕೃಷಿ ಕ್ಷೇತ್ರಕ್ಕೆ ಹೋಗಬೇಕು. ತಂದೆಯವರು ಮೂಲತಃ ಕೃಷಿಕರು. ಪೌಲ್ಟ್ರಿ ಫಾರ್ಮಿಂಗ್ ಮೇಲೂ ಆಸಕ್ತಿ ಇದೆ. ಅಲ್ಲೊಂದಿಷ್ಟು ಕೆಲಸ ಮಾಡಬೇಕು ಎಂಬ ಆಸೆ ಇದೆ. ಅಲ್ಲಿಯೂ ಕಲಿಯುತ್ತಿದ್ದೇನೆ.

ಅಭಿಮಾನಿಗಳಿಗೆ ಏನು ಹೇಳಲು ಬಯಸುತ್ತೀರಿ?

ನೋಡಿ, ನಾವು ಯಶಸ್ಸೊಂದನ್ನೇ ಬೆನ್ನುಹತ್ತಿ ಒತ್ತಡ ಮಾಡಿಕೊಂಡು ಅದರ ಹಿಂದೆ ಓಡುತ್ತೇವೆ. ಕುಟುಂಬ, ಗೆಳೆಯರು, ಖುಷಿಯ ಸಮಯ ಎಲ್ಲವನ್ನೂ ಮರೆಯುತ್ತೇವೆ. ಒಂದು ದಿನ ಯಶಸ್ಸು ಸಿಗುತ್ತದೆ ಅಂತಿಟ್ಟುಕೊಳ್ಳಿ. ಆದರೆ, ಉಳಿದ ಎಲ್ಲಾ ಅಮೂಲ್ಯ ಕ್ಷಣಗಳು, ಸಂಬಂಧಗಳು ಕಳೆದುಹೋಗಿಬಿಡುತ್ತವೆ. ಹಾಗಾಗದಂತೆ ಎಚ್ಚರವಹಿಸಿ. ಈ ಕ್ಷಣದ ಖುಷಿಯನ್ನು ಕಳೆದುಕೊಳ್ಳದಿರಿ.

ಸೋನಲ್ ಮೊಂತೆರೋ

ಸರಣಿ ಹಾಡುಗಳ 'ಶಂಭೋ ಶಿವ ಶಂಕರ'

ವರ್ತೂರು ಮಂಜು ನಿರ್ಮಾಣದ, ಶಂಕರ್ ಕೋನಮಾನಹಳ್ಳಿ ನಿರ್ದೇಶನದ 'ಶಂಭೋ ಶಿವ ಶಂಕರ' ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ ಹಾಗೂ ನಟ ವಸಿಷ್ಠ ಸಿಂಹ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

ನವೀನ್ ಸಜ್ಜು ಹಾಡಿರುವ ಚಿತ್ರದ 'ನಾಟಿಕೋಳಿ' ಹಾಡು ಈಗಾಗಲೇ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡತ್ತಿದೆ. ಕಿರುತೆರೆಯಲ್ಲಿ ಧಾರಾವಾಹಿಗಳನ್ನು ನಿರ್ದೇಶಿಸಿದ್ದ ಶಂಕರ್ ಅವರ ಚೊಚ್ಚಲ ಚಿತ್ರ ಇದಾಗಿದೆ. ಅಭಯ್ ಪುನೀತ್ ಈ ಸಿನಿಮಾದ ಮುಖಾಂತರ ಚಂದನವನಕ್ಕೆ ನಾಯಕನಾಗಿ ಹೆಜ್ಜೆ ಇಡುತ್ತಿದ್ದು, ಸೋನಲ್ ಮೊಂತೆರೋ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಆನಂದ್ ಆಡಿಯೋ ಮೂಲಕ ಚಿತ್ರದ ಹಾಡುಗಳ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ ಎಂದು ಚಿತ್ರತಂಡವು ತಿಳಿಸಿದೆ.

ನಿರ್ದೇಶನದೊಂದಿಗೆ ಬಣ್ಣಹಚ್ಚಿದ ಗುರುಪ್ರಸಾದ್

ಗುರುಪ್ರಸಾದ್

'ಎದ್ದೇಳು ಮಂಜುನಾಥಾ' ಎಂದಾಕ್ಷಣ ನೆನಪಾಗುವುದು ನವರಸ ನಾಯಕ ಜಗ್ಗೇಶ್ ಅವರ ನಟನೆ ಹಾಗೂ ನಿರ್ದೇಶಕ ಗುರುಪ್ರಸಾದ್ ಅವರ ನಿರ್ದೇಶನ. ಇದೀಗ ಈ ಚಿತ್ರದ ಎರಡನೇ ಭಾಗ ಸೆಟ್ಟೇರಿದೆ. ಆದರೆ ಜಗ್ಗೇಶ್ ಅವರು ಎರಡನೇ ಭಾಗದಲ್ಲಿಲ್ಲ. ಬದಲಾಗಿ ನಿರ್ದೇಶನದೊಂದಿಗೆ ಪ್ರಮುಖ ಪಾತ್ರದಲ್ಲಿ ಗುರುಪ್ರಸಾದ್ ಅವರೇ ನಟಿಸಿದ್ದಾರೆ.

ಏಪ್ರಿಲ್‌ನಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ. ರಚಿತಾ ಮಹಾಲಕ್ಷ್ಮೀ ಈ ಚಿತ್ರದ ನಾಯಕಿ. ಶರತ್ ಲೋಹಿತಾಶ್ವ, ಶಶಿಧರ್, ರವಿ ದೀಕ್ಷಿತ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

'ಎದ್ದೇಳು ಮಂಜುನಾಥಾ' ಚಿತ್ರದ ಸಮಯದಲ್ಲೇ ಸಿದ್ಧವಾದ ಕಥೆಯಿದು. ಚಿತ್ರ ನಿರ್ಮಾಣವಾಗಲು ಹತ್ತು ವರ್ಷ ಬೇಕಾಯಿತು. ಇದು ಲಾಕ್‌ಡೌನ್ ಸಮಯದಲ್ಲಿ ಚಿತ್ರೀಕರಣವಾದ ಚಿತ್ರ. ಸ್ನೇಹಿತರು ಸೇರಿ ಈ ಚಿತ್ರ ನಿರ್ಮಾಣ ಮಾಡಿದ್ದೇವೆ. ನಿರ್ಮಾಪಕ ಶಶಿಧರ್ ಈ ಚಿತ್ರದಲ್ಲಿ ನಟನೆ ಕೂಡ ಮಾಡಿದ್ದಾರೆ. ಶೀಘ್ರದಲ್ಲೇ ಟ್ರೇಲರ್ ಬಿಡುಗಡೆ ಮಾಡಲಿದ್ದೇವೆ. ಕಾಮಿಡಿ ಕ್ರೈಂ ಆಧಾರಿತ ಚಿತ್ರವಿದು. ಕ್ರೈಂ ಎಂದರೆ ಬರೀ ರಕ್ತದೋಕುಳಿ ಅಲ್ಲ. ಬೇರೊಂದು ರೀತಿಯಲ್ಲಿ ಹೇಳಬಹುದು ಎಂಬುದನ್ನು ನಮ್ಮ ಚಿತ್ರದಲ್ಲಿ ತೋರಿಸಿದ್ದೇವೆ' ಎನ್ನುತ್ತಾರೆ ಗುರುಪ್ರಸಾದ್.

'ಅನೂಪ್ ಸೀಳಿನ್ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಮನೋಹರ್ ಜೋಶಿ, ಸಿನಿಟಿಕ್ ಸೂರಿ, ವೇಲ್ ಮುರುಗನ್, ಅಶೋಕ್ ಸೇರಿ ನಾಲ್ಕು ಜನ ಛಾಯಾಗ್ರಾಹಕರು. ಏಪ್ರಿಲ್ ಅಂತ್ಯದಲ್ಲಿ ಒಟಿಟಿ ಅಥವಾ ಚಿತ್ರಮಂದಿರಗಳಲ್ಲಿ ನಮ್ಮ ಚಿತ್ರ ಬಿಡುಗಡೆಯಾಗಲಿದೆ' ಎಂದರು.

ಸ್ಟಾರ್ ಸುವರ್ಣದಲ್ಲಿ ಮದುವೆ ಮಂಟಪ...

ಮದುವೆ ಮಂಟಪ ಕಟ್ಟಿದೆ ಸ್ಟಾರ್ ಸುವರ್ಣ ವಾಹಿನಿ...

ಹೌದು ವಾಹಿನಿಯ ಎರಡು ಧಾರಾವಾಹಿಗಳು ಇತ್ತೀಚೆಗೆ ಹೆಚ್ಚು ಜನಪ್ರಿಯತೆಯ ಹಾದಿಯಲ್ಲಿವೆ. 'ಮುದ್ದುಮಣಿಗಳು' ಮತ್ತು 'ಬೆಟ್ಟದ ಹೂ' ಧಾರಾವಾಹಿಗಳು ಈ ವಾರ ಕುತೂಹಲಕಾರಿ ತಿರುವು ಪಡೆಯಲಿವೆಯಂತೆ.

ಈ ಎರಡೂ ಧಾರಾವಾಹಿಯ ಕತೆಗಳ ದಿಕ್ಕು ಮದುವೆ ಮಂಟಪದಲ್ಲಿ ಬದಲಾಗಲಿದೆ. 'ಮುದ್ದುಮಣಿ'ಗಳು ಧಾರಾವಾಹಿಯಲ್ಲಿ ತನ್ನ ಜೊತೆ ಮದುವೆಯಾಗಬೇಕಿದ್ದ ಶ್ರವಣ್, ಭೂಮಿಯನ್ನು ಮದುವೆಯಾಗಿರುವುದನ್ನು ಕಂಡು ದೃಷ್ಟಿಗೆ ಗೊಂದಲ ಶುರುವಾಗಿದೆ. ದೃಷ್ಟಿಯ ಮುಂದಿನ ನಡೆಯೇನು? ಅವಳು ಶಿವನನ್ನು ಮದುವೆಯಾಗುತ್ತಾಳೋ ಇಲ್ಲವೋ ಎನ್ನುವ ಕುತೂಹಲ ವೀಕ್ಷಕನದ್ದು.

'ಬೆಟ್ಟದ ಹೂ' ಧಾರಾವಾಹಿಯಲ್ಲಿ, ರಾಹುಲ್ ಮತ್ತು ಮಾಲಿನಿ ಮದುವೆ ತಯಾರಿ ಸಂಭ್ರಮದಿಂದ ನಡೆಯುತ್ತಿದೆ. ಇದನ್ನು ಮೂಕ ಪ್ರೇಕ್ಷಕಿಯಾಗಿ ನೋಡುತ್ತಿರುವ ಹೂವಿ, ಎಲ್ಲರೆದುರು ರಾಹುಲ್ ತನ್ನನ್ನು ಮದುವೆಯಾಗಿರುವ ಸತ್ಯ ಹೇಳುತ್ತಾಳೆಯೇ ಎನ್ನುವ ಪ್ರಶ್ನೆಗೆ ಉತ್ತರ ಸಿಗಲಿದೆ ಎಂದಿದೆ ವಾಹಿನಿಯ ತಂಡ. ಈ ಧಾರಾವಾಹಿಗಳ ಈ ರೋಚಕ ಕಂತುಗಳನ್ನು ಸೋಮವಾರದಿಂದ ಶನಿವಾರ ರಾತ್ರಿ 7.30 ಮತ್ತು 8ಕ್ಕೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ ವೀಕ್ಷಿಸಬಹುದು.

ಸಿನಿ ಸಂಕ್ಷಿಪ್ತ

ಶೂಟಿಂಗ್ ಅಖಾಡಕ್ಕೆ ಬಂದ 'ವಾಮನ'

'ಬಜಾರ್' ಸಿನಿಮಾ ಮೂಲಕ ಬಣ್ಣದ ಲೋಕದಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದ ನಟ ಧನ್ವೀರ್, ಮೊದಲ ಸಿನಿಮಾದಲ್ಲಿಯೇ ಯಶಸ್ಸು ಕಂಡಿದ್ದರು. ಇದೀಗ, ನಟಿ ಶ್ರೀಲೀಲಾ ಜೋಡಿಯಾಗಿ ನಟಿಸಿದ್ದ 'ಬೈ ಟು ಲವ್' ಸಿನಿಮಾ ಗುಂಗಿನಲ್ಲೇ ಹೊಸ ಸಿನಿಮಾದ ಚಿತ್ರೀಕರಣಕ್ಕೆ ಧನ್ವೀರ್ ಧುಮುಕಿದ್ದಾರೆ.

ಇತ್ತೀಚೆಗಷ್ಟೇ ಕತ್ತಿ ಮಾರಮ್ಮ ದೇಗುಲದಲ್ಲಿ 'ವಾಮನ' ಚಿತ್ರದ ಮುಹೂರ್ತ ನಡೆದಿದೆ. ಸಂಕ್ರಾಂತಿಯಂದು ಚಿತ್ರದ ಫಸ್ಟ್‌ಲುಕ್ ಹಾಗೂ ಶೀರ್ಷಿಕೆ ಬಿಡುಗಡೆಯಾಗಿತ್ತು. ಕನ್ನಡ ಮತ್ತು ತೆಲುಗು ಚಿತ್ರಗಳಿಗೆ ಸಂಭಾಷಣಾಕಾರನಾಗಿ ಕಾರ್ಯನಿರ್ವಹಿಸಿದ್ದ ಶಂಕರ್ ರಾಮನ್ ಈಗ ನಿರ್ದೇಶಕರಾಗಿ ಮೊದಲ ಹೆಜ್ಜೆ ಇಡುತ್ತಿದ್ದಾರೆ.

ಮಾಫಿಯಾ ಲೋಕದ ಕಥೆಯ ಜೊತೆ ಆ್ಯಕ್ಷನ್ ಎಂಟರ್‌ಟೈನರ್ ಸಿನಿಮಾ ಇದಾಗಿದೆ. ಮುಹೂರ್ತದ ದಿನದಿಂದಲೇ ಚಿತ್ರೀಕರಣ ಆರಂಭವಾಗಿದ್ದು, ಬೆಂಗಳೂರಿನಲ್ಲಿಯೇ ಮೊದಲ ಹಂತದ ಚಿತ್ರೀಕರಣ ನಡೆಯಲಿದೆ. ಈಕ್ವಿನಾಕ್ಸ್ ಗ್ಲೋಬಲ್ ಎಂಟರ್‌ಟೈನ್‌ಮೆಂಟ್ ಪ್ರೊಡಕ್ಷನ್‌ನಡಿ ಚೇತನ್ ಕುಮಾರ್ ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ.

ಧನ್ವೀರ್

ಏ. 1ರಂದು ತೆರೆಯಲ್ಲಿ 'ಸೇವಾ ದಾಸ್'

ಬಹುಭಾಷಾ ನಟ ಸುಮನ್ ಅಭಿನಯದ ಬಂಜಾರ ಭಾಷೆಯ ಚಿತ್ರ 'ಸೇವಾ ದಾಸ್' ಏ.1ರಂದು ತೆರೆಗೆ ಬರಲಿದೆ.

'ಬಂಜಾರ ಭಾಷೆ ಮಾತನಾಡುವ ಜನ ಕರ್ನಾಟಕ ಸೇರಿದಂತೆ, ದೇಶದ ವಿವಿಧೆಡೆ ವಾಸವಾಗಿದ್ದಾರೆ. ಈಗ ವಿದೇಶದಲ್ಲೂ ನೆಲೆಸಿದ್ದಾರೆ. ನಮ್ಮ ಜನಾಂಗದ ಶಕ್ತಿಯಾಗಿರುವ ಸಂತ ಸೇವಾಲಾಲ್ ಅವರ ಕೃಪೆಯಿಂದ ಇದೇ ಮೊದಲ ಬಾರಿಗೆ ಈ ಚಿತ್ರವನ್ನು ಭಾರತದ ವಿವಿಧ ಕಡೆ ಬಿಡುಗಡೆ ಮಾಡುತ್ತಿದ್ದೇವೆ' ಎಂದರು ನಿರ್ಮಾಪಕ ಸೀತಾರಾಂ ಬಡಾವತ್.

'ನಾನು ಚಿತ್ರರಂಗಕ್ಕೆ ಬಂದು ನಲವತ್ತು ವರ್ಷ ಕಳೆದಿದೆ. ನನ್ನ ತಂದೆ-ತಾಯಿ ಮಂಗಳೂರಿನವರು. ನಾನು ಹುಟ್ಟಿದ್ದು ಚೆನ್ನೈನಲ್ಲಿ. ಈ ತನಕ ಸುಮಾರು 600ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದೇನೆ. ಇದೇ ಮೊದಲ ಬಾರಿಗೆ ಬಂಜಾರ ಚಿತ್ರದಲ್ಲಿ ನಟಿಸಿದ್ದೇನೆ. ಸಂತ ಸೇವಾಲಾಲ್ ಅವರ ಕೃಪೆಯಿಂದ ಉತ್ತಮ ಪಾತ್ರದಲ್ಲಿ ಅಭಿನಯಿಸಿದ್ದೇನೆ. ಇದೇ ಏಪ್ರಿಲ್ ಒಂದರಂದು ಚಿತ್ರ ಬಿಡುಗಡೆಯಾಗುತ್ತಿದೆ. ನಿಮ್ಮ ಹಾರೈಕೆಯಿರಲಿ' ಎಂದು ಹೇಳಿದರು ನಟ ಸುಮನ್.

ವಿನೋದ್ ರೈನಾ ಸಹ ನಿರ್ಮಾಪಕರು. ಕೆ.ಪಿ.ಎನ್. ಚೌಹಾನ್ ಈ ಚಿತ್ರ ನಿರ್ದೇಶನ ಮಾಡಿದ್ದಾರೆ.

ಸುಮನ್

ಶರ್ಮಿಳಾ ಮಾಂಡ್ರೆ

'ದಸರಾ' ನನ್ನದು: ಶರ್ಮಿಳಾ

ತೆಲುಗು ನಟ ನಾನಿ ನಾಯಕನಾಗಿ ನಟಿಸುತ್ತಿರುವ, ಎಸ್‌ಎಲ್‌ವಿ ಬ್ಯಾನರ್‌ನಡಿ ಸುಧಾಕರ್ ಚೆರುಕುರಿ ನಿರ್ಮಾಣದ ಪ್ಯಾನ್ ಇಂಡಿಯಾ ಸಿನಿಮಾ 'ದಸರಾ' ಟೀಸರ್ ಬಿಡುಗಡೆಯಾದ ಬೆನ್ನಲ್ಲೇ, ಚಿತ್ರದ ಶೀರ್ಷಿಕೆ ಕುರಿತು ನಟಿ ಶರ್ಮಿಳಾ ಮಾಂಡ್ರೆ ಆಕ್ಷೇಪವೆತ್ತಿದ್ದಾರೆ.

ಈ ಕುರಿತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಶರ್ಮಿಳಾ ಅವರು ಪತ್ರ ಬರೆದಿದ್ದಾರೆ. 'ಶರ್ಮಿಳಾ ಮಾಂಡ್ರೆ ಪ್ರೊಡಕ್ಷನ್ಸ್‌ನಡಿ ನಿರ್ಮಾಣಗೊಳ್ಳುತ್ತಿರುವ, ಸತೀಶ್ ನೀನಾಸಂ ನಾಯಕರಾಗಿ ನಟಿಸುತ್ತಿರುವ ನನ್ನ ಮೊದಲ ಸಿನಿಮಾದ ಶೀರ್ಷಿಕೆಯನ್ನು(ದಸರಾ) 2020ರ ಸೆ.30ರಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ನೋಂದಾಯಿಸಿದ್ದೆ. ನಮ್ಮ ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಎಸ್‌ಎಲ್‌ವಿ ಬ್ಯಾನರ್‌ನಡಿ ತೆಲುಗು ನಿರ್ಮಾಪಕರಾದ ಸುಧಾಕರ್ ಚೆರುಕುರಿ ಅವರು 'ದಸರಾ' ಎಂಬ ಶೀರ್ಷಿಕೆಯಲ್ಲೇ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಸಿನಿಮಾದ ಟೀಸರ್ ಹಾಗೂ ಟ್ರೈಲರ್ ಬಿಡುಗಡೆ ಮಾಡಿದ್ದಾರೆ. ಇದರಿಂದ ನಮಗೆ ಸಮಸ್ಯೆಯಾಗಿದೆ. ಈಗಾಗಲೇ ನಾವು ಹಲವು ವೇದಿಕೆಗಳಲ್ಲಿ ನಮ್ಮ ಸಿನಿಮಾ ಶೀರ್ಷಿಕೆಯನ್ನು ಹಂಚಿಕೊಂಡಿದ್ದು, ತೆಲುಗು ನಿರ್ಮಾಪಕರ ಈ ನಡೆಯಿಂದ ನಮಗೆ ತೊಂದರೆಯಾಗಿದೆ. ಇದರಿಂದ ನಮ್ಮ ಚಿತ್ರದ ಗಳಿಕೆಗೂ ಸಮಸ್ಯೆಯಾಗಲಿದ್ದು, ಕನಿಷ್ಠ ಕನ್ನಡ ಅವತರಣಿಕೆಯಲ್ಲಿ 'ದಸರಾ' ಶೀರ್ಷಿಕೆ ಬಳಸದಂತೆ ತಡೆಯಬೇಕು' ಎಂದು ಶರ್ಮಿಳಾ ಮಾಂಡ್ರೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

2019ರಲ್ಲಿ 'ದಸರಾ' ಚಿತ್ರದ ಚಿತ್ರೀಕರಣ ಆರಂಭವಾಗಿತ್ತು, ಕೋವಿಡ್ ಕಾರಣದಿಂದಾಗಿ ಸ್ಥಗಿತಗೊಂಡಿದ್ದ ಚಿತ್ರೀಕರಣ ಕಳೆದ ವರ್ಷಾಂತ್ಯಕ್ಕೆ ಪೂರ್ಣಗೊಂಡಿತ್ತು. ಅರವಿಂದ್ ಶಾಸ್ತ್ರಿ ನಿರ್ದೇಶನದ ಈ ಸಿನಿಮಾದಲ್ಲಿ ಸತೀಶ್ ಅವರು ಪತ್ತೆದಾರನ ಪಾತ್ರ ನಿಭಾಯಿಸುತ್ತಿದ್ದಾರೆ. ಶರ್ಮಿಳಾ ಅವರು ಪತ್ತೆದಾರಿ ಪತ್ರಕರ್ತೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ತಲೆದಂಡ'ಕ್ಕೆ ತೆರೆ ಸಮಸ್ಯೆ?

ತಲೆದಂಡ

ಚೈತ್ರಾ ಆಚಾರ್, ಸಂಚಾರಿ ವಿಜಯ್

ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಬಾಚಿದ, ನಟ ದಿವಂಗತ ಸಂಚಾರಿ ವಿಜಯ್ ನಟನೆಯ 'ತಲೆದಂಡ' ಸಿನಿಮಾ, ರಾಜ್ಯದ ಕೆಲ ಏಕಪರದೆ ಚಿತ್ರಮಂದಿರಗಳಲ್ಲಷ್ಟೇ ಬಿಡುಗಡೆಯಾಗಲಿದ್ದು, ಮಲ್ಟಿಪ್ಲೆಕ್ಸ್‌ಗಳಲ್ಲೇ ಹೆಚ್ಚಿನ ಪ್ರದರ್ಶನಕ್ಕೆ ಚಿತ್ರತಂಡ ನಿರ್ಧರಿಸಿದೆ.

ಏ.1ರಂದು ಸಿನಿಮಾ ಬಿಡುಗಡೆಯಾಗಲಿದೆ. ಆದರೆ ಪ್ಯಾನ್ ಇಂಡಿಯಾ ಬಿಗ್ ಬಜೆಟ್ ಸಿನಿಮಾಗಳ ಬಿಡುಗಡೆ ಹಾಗೂ ಏಕಪರದೆ ಚಿತ್ರಮಂದಿರಗಳ ಬಾಡಿಗೆ ಸಮಸ್ಯೆ ಕಾರಣದಿಂದಾಗಿ ಮಲ್ಟಿಪ್ಲೆಕ್ಸ್‌ಗಳಲ್ಲಷ್ಟೇ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ಏಕಪರದೆ ಚಿತ್ರಮಂದಿರಗಳು ಲಭ್ಯವಿದ್ದಲ್ಲಿ ಸಿನಿಮಾವನ್ನು ಅಲ್ಲಿಯೂ ಬಿಡುಗಡೆಗೊಳಿಸುವುದಾಗಿ ವಿತರಕರು ತಿಳಿಸಿದ್ದಾರೆ.

'ಇದು ಕಮರ್ಷಿಯಲ್ ಸಿನಿಮಾವಲ್ಲದ ಕಾರಣ, ಲಕ್ಷಾಂತರ ರೂಪಾಯಿ ನೀಡಿ ಏಕಪರದೆ ಚಿತ್ರಮಂದಿರಗಳ ಬಾಡಿಗೆ ಕಟ್ಟಿ ಚಿತ್ರಪ್ರದರ್ಶನ ಸಾಧ್ಯವಿಲ್ಲ. ಮಲ್ಟಿಪ್ಲೆಕ್ಸ್‌ಗಳ 40 ಪರದೆಗಳಲ್ಲಷ್ಟೇ ಸದ್ಯಕ್ಕೆ ಬಿಡುಗಡೆಗೆ ನಿರ್ಧರಿಸಲಾಗಿದೆ. ಮಲ್ಟಿಪ್ಲೆಕ್ಸ್ ರೀತಿ ಶೇರಿಂಗ್ ನೀಡಿದರೆ ಏಕಪರದೆ ಚಿತ್ರಮಂದಿರಕ್ಕೂ ಸಿನಿಮಾ ನೀಡಲು ವಿತರಕರು ನಿರ್ಧರಿಸಿದ್ದಾರೆ' ಎಂದು ಚಿತ್ರದ ನಿರ್ದೇಶಕ ಪ್ರವೀಣ್ ಕೃಪಾಕರ್ ತಿಳಿಸಿದ್ದಾರೆ.

ಮತ್ತೊಂದು ರಾಷ್ಟ್ರೀಯ ಪ್ರಶಸ್ತಿ ನಿರೀಕ್ಷೆ: 'ಈ ಚಿತ್ರದಲ್ಲಿ ಸೋಲಿಗ ಬುಡಕಟ್ಟು ಜನಾಂಗಕ್ಕೆ ಸೇರಿದ ಅರೆಬುದ್ಧಿಮಾಂದ್ಯ 'ಕುನ್ನ' ಎಂಬ ಪಾತ್ರದಲ್ಲಿ ಸಂಚಾರಿ ವಿಜಯ್ ನಟಿಸಿದ್ದಾರೆ. ರಸ್ತೆಯೊಂದನ್ನು ಮಾಡಲು ನೂರಾರು ಮರಗಳನ್ನು ಕಡಿಯಲು ಮುಂದಾದಾಗ ಅದನ್ನು ಹೋಗಿ ತಡೆಯುತ್ತಾನೆ. ನಾವು ಈಗ ಎಚ್ಚೆತ್ತುಕೊಳ್ಳದೇ ಹೋದರೆ ಮುಂದೆ ಇಡೀ ಭೂಮಿಯ ತಲೆದಂಡ ಆಗುತ್ತದೆ. ನೀರಿಗಾಗಿ ಯುದ್ಧ ನಡೆಯುತ್ತದೆ. ವಿಜಯ್ ನಮ್ಮ ಜೊತೆ ಇಲ್ಲ ಎನ್ನುವುದು ಬಹಳ ದುಃಖದ ವಿಷಯ. ಈ ಪಾತ್ರಕ್ಕಾಗಿ ವಿಜಯ್ ಪರಕಾಯ ಪ್ರವೇಶ ಮಾಡಿದ್ದಾರೆ. ಈ ಚಿತ್ರದಲ್ಲಿನ ಪಾತ್ರಕ್ಕಾಗಿ ವಿಜಯ್‌ಗೆ ಮತ್ತೊಂದು ರಾಷ್ಟ್ರೀಯ ಪ್ರಶಸ್ತಿ ಬರಲಿದೆ ಎನ್ನುವುದು ನನ್ನ ನಂಬಿಕೆ' ಎಂದರು ಕೃಪಾಕರ್.

'ಕುನ್ನ' ತಾಯಿಯ ಪಾತ್ರದಲ್ಲಿ ಸಂಚಾರಿ ವಿಜಯ್ ಅವರ ರಂಗಭೂಮಿ ಗುರು ಮಂಗಳಾ ಅವರು ನಟಿಸಿದ್ದು, 'ಸಾಕಿ' ಎಂಬ ಸ್ನೇಹಿತೆ ಪಾತ್ರದಲ್ಲಿ ಚೈತ್ರಾ ಆಚಾರ್ ನಟಿಸಿದ್ದಾರೆ. ಶಾಸಕನ ಪಾತ್ರಕ್ಕೆ ಮಂಡ್ಯ ರಮೇಶ್ ಬಣ್ಣಹಚ್ಚಿದ್ದಾರೆ.



❦ ಸುಭಾಷಿತ ❦

ಕಾರ್ಯರೂಪಕ್ಕೆ ಬಾರದ ಜ್ಞಾನವು ನಿಷ್ಪ್ರಯೋಜಕ. ಅಂತೆಯೇ ಜ್ಞಾನ ಹೊಂದದೆ ಕೆಲಸದಲ್ಲಿ ತೊಡಗುವುದು ಅಪಾಯಕಾರಿ.

-ಕನ್‌ಫ್ಯೂಷಿಯಸ್

ವಿದ್ಯಾರ್ಥಿಗಳಿಗೆ 'ತಾತ್ಕಾಲಿಕ' ನೆಮ್ಮದಿ ಸಮಸ್ಯೆ ಇತ್ಯರ್ಥಕ್ಕೆ ಬೇಕಿದೆ ಸಮಗ್ರ ಚಿಂತನೆ

ಯುದ್ಧಪೀಡಿತ ಉಕ್ರೇನ್‌ನಿಂದ ಸ್ವದೇಶಕ್ಕೆ ಮರಳಿರುವ ಅಂದಾಜು 700 ವೈದ್ಯಕೀಯ ವಿಜ್ಞಾನ ವಿದ್ಯಾರ್ಥಿಗಳಿಗೆ ರಾಜ್ಯದ 60 ವೈದ್ಯಕೀಯ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಪ್ರವೇಶ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದು ಸ್ವಾಗತಾರ್ಹ. ಇದರಿಂದಾಗಿ ಈ ವಿದ್ಯಾರ್ಥಿಗಳಿಗೆ ವ್ಯಾಸಂಗ ಮುಂದುವರಿಸಲು ಸಾಧ್ಯವಾಗುತ್ತದೆ. ಉಕ್ರೇನ್‌ಗೆ ಅಧ್ಯಯನಕ್ಕಾಗಿ ತೆರಳಿದ್ದ ಇವರು ತಮ್ಮದಲ್ಲದ ತಪ್ಪಿಗೆ ತೊಂದರೆ ಅನುಭವಿಸುತ್ತಿದ್ದಾರೆ. ಈ ವಿದ್ಯಾರ್ಥಿಗಳನ್ನು ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಮಾಮೂಲಿ ವಿದ್ಯಾರ್ಥಿಗಳಂತೆ ಪರಿಗಣಿಸುವುದಿಲ್ಲವಾದರೂ, ಈಗಿರುವ ನಿಯಮಗಳ ಚೌಕಟ್ಟಿನಲ್ಲಿ ರಾಜ್ಯ ಸರ್ಕಾರವು ಒಳ್ಳೆಯ ಕೆಲಸವನ್ನೇ ಮಾಡಿದೆ ಎನ್ನಲು ಅಡ್ಡಿಯಿಲ್ಲ. ಉಕ್ರೇನ್‌ನಲ್ಲಿ ವೈದ್ಯಕೀಯ ಪದವಿ ಅಧ್ಯಯನ ಮಾಡುತ್ತಿದ್ದ ಭಾರತದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕೇಂದ್ರ ಸರ್ಕಾರವೂ ಚಿಂತನೆ ನಡೆಸುತ್ತಿದೆಯಾದರೂ, ಇವರ ಶೈಕ್ಷಣಿಕ ಭವಿಷ್ಯವನ್ನು ಹೇಗೆ ರೂಪಿಸಬೇಕು ಎಂಬ ಬಗ್ಗೆ ಅಧ್ಯಯನ ನಡೆಸಿ, ವರದಿ ನೀಡಲು ಸಮಿತಿಯೊಂದನ್ನು ರಚಿಸುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಆದರೆ ಈ ವಿಚಾರದಲ್ಲಿ ಇರುವ ಸಂಕೀರ್ಣತೆಗಳನ್ನು ಗಮನಿಸಿದರೆ, ಇದು ಸುಲಭದ ಕೆಲಸವಲ್ಲ ಎಂಬುದು ಸ್ಪಷ್ಟವಾಗುತ್ತದೆ. ವೈದ್ಯಕೀಯ ಶಿಕ್ಷಣ ಪಡೆಯಲು ಭಾರತದಿಂದ 24 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ತೆರಳಿದ್ದರು. ಇಷ್ಟೂ ಜನರ ಭವಿಷ್ಯ ಈಗ ತೂಗುಯ್ಯಾಲೆಯಲ್ಲಿ ಇದೆ. ಇವರನ್ನು ಒಂದು ಬಾರಿಯ ಕ್ರಮವಾಗಿ ದೇಶದ ವೈದ್ಯಕೀಯ ಕಾಲೇಜುಗಳಲ್ಲಿ ಸೇರಿಸಿಕೊಳ್ಳಬೇಕು ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ಹೇಳಿದೆ. ತೊಂದರೆಗೆ ಒಳಗಾದ ವಿದ್ಯಾರ್ಥಿಗಳಿಗೆ, ವಿದೇಶಿ ವೈದ್ಯಕೀಯ ಪದವೀಧರರ ಶಿಕ್ಷಣ (ಎಫ್‌ಎಂಜಿಇ) ಪೂರ್ಣಗೊಳಿಸಿ, ಒಂದು ವರ್ಷದ ಕಡ್ಡಾಯ ಇಂಟರ್ನ್‌ಶಿಪ್ ಅನ್ನು ಭಾರತದಲ್ಲಿ ಕೈಗೊಳ್ಳಲು ರಾಷ್ಟ್ರೀಯ ವೈದ್ಯಕೀಯ ಆಯೋಗವು ಅವಕಾಶ ಕಲ್ಪಿಸಿದೆ. ಆದರೆ ಇದು ವ್ಯಾಸಂಗವನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ.

ವೈದ್ಯಕೀಯ ಶಿಕ್ಷಣ ಹಾಗೂ ದೇಶಕ್ಕೆ ಅಗತ್ಯವಿರುವ ಸಂಖ್ಯೆಯಲ್ಲಿ ವೈದ್ಯರನ್ನು ಸಜ್ಜಾಗಿಸಲು ಶಾಶ್ವತ ಪರಿಹಾರ ಕ್ರಮ ಅಗತ್ಯ

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ, ಮಧ್ಯದಲ್ಲಿ ಭಾರತಕ್ಕೆ ಬಂದ ವಿದ್ಯಾರ್ಥಿಗಳಿಗೆ ದೇಶದ ಕಾಲೇಜುಗಳಲ್ಲಿ ಪೂರ್ಣಾವಧಿಗೆ ಸೇರಿಕೊಳ್ಳಲು ಅವಕಾಶ ಕಲ್ಪಿಸುವ ಯತ್ನಕ್ಕೆ ಕಾನೂನು ಸಮಸ್ಯೆ ಎದುರಾಗಬಹುದು. ಏಕೆಂದರೆ, 'ನೀಟ್'ನಲ್ಲಿ ಉತ್ತಮ ಅಂಕ ಗಳಿಸಿದ್ದರೂ ದುಬಾರಿ ಶಿಕ್ಷಣ ವೆಚ್ಚ ಅಥವಾ ಅರ್ಹತಾ ಅಂಕಗಳ (ಕಟಾಫ್ ಅಂಕಗಳು) ಕಾರಣದಿಂದಾಗಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆದುಕೊಳ್ಳಲು ಆಗದವರು ತಮಗೂ ಪ್ರವೇಶ ಬೇಕು ಎಂದು ಕೇಳಬಹುದು. ಸಾಂಕ್ರಾಮಿಕದ ಕಾರಣದಿಂದಾಗಿ ಚೀನಾ ಹಾಗೂ ಫಿಲಿಪ್ಪೀನ್ಸ್‌ನಿಂದ ಭಾರತಕ್ಕೆ ಮರಳಿದ ವಿದ್ಯಾರ್ಥಿಗಳು ತಮ್ಮನ್ನು ಕೂಡ ಉಕ್ರೇನ್‌ನಿಂದ ಮರಳಿರುವ ವಿದ್ಯಾರ್ಥಿಗಳಂತೆಯೇ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ. ಇಂತಹ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು 60 ಸಾವಿರ ಎಂಬ ಅಂದಾಜು ಇದೆ. ದೇಶದಲ್ಲಿ ಈಗಿರುವ ವೈದ್ಯಕೀಯ ಕಾಲೇಜುಗಳು ಇಷ್ಟು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅಗತ್ಯವಿರುವ ಮೂಲಸೌಕರ್ಯ ಹೊಂದಿಲ್ಲ ಎಂದು ಹಲವು ರಾಜ್ಯಗಳಲ್ಲಿನ ವೈದ್ಯಕೀಯ ಸಂಘಗಳು ಬಹಿರಂಗವಾಗಿ ಹೇಳಿವೆ. ಈ ವಿದ್ಯಾರ್ಥಿಗಳು ಉಕ್ರೇನ್ ಮತ್ತು ಚೀನಾ ದೇಶಗಳಿಗೆ ತೆರಳಲು ಇಲ್ಲಿನ ದುಬಾರಿ ವೈದ್ಯಕೀಯ ಶಿಕ್ಷಣ ವೆಚ್ಚವೂ ಒಂದು ಕಾರಣ ಆಗಿತ್ತು. ಹೀಗಿರುವಾಗ ಈಗ ಇವರು ಇಲ್ಲಿನ ವೆಚ್ಚವನ್ನು ಭರಿಸಲು ಸಾಧ್ಯವೇ ಎಂಬ ಪ್ರಶ್ನೆ ಇದೆ.

ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಪ್ರಕ್ರಿಯೆಯು ಸುಪ್ರೀಂ ಕೋರ್ಟ್ ನೀಡಿರುವ ಕೆಲವು ತೀರ್ಪುಗಳಿಗೆ ಅನುಗುಣವಾಗಿ ಆಗಬೇಕು. ಹಾಗಾಗಿ, ವಿದ್ಯಾರ್ಥಿಗಳ ಭವಿಷ್ಯದ ಹಿತ ಕಾಯುವ ಉದ್ದೇಶದಿಂದ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೀರ್ಮಾನ ಕೈಗೊಳ್ಳುವ ಮುನ್ನ ನ್ಯಾಯಾಲಯಗಳ ಜೊತೆ ಸಮಾಲೋಚನೆ ನಡೆಸಬೇಕು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದಾದರೆ ಸರ್ಕಾರವು ವೈದ್ಯಕೀಯ ಶಿಕ್ಷಣಕ್ಕೆ ಇರುವ ಬೇಡಿಕೆ ಹಾಗೂ ಶಿಕ್ಷಣ ನೀಡುವ ಸಾಮರ್ಥ್ಯದ ನಡುವಿನ ಅಂತರವನ್ನು ಮುಚ್ಚಬೇಕು. ದೇಶದಲ್ಲಿ ಇರುವ ಎಂಬಿಬಿಎಸ್ ಸೀಟುಗಳ ಸಂಖ್ಯೆ 84 ಸಾವಿರ ಮಾತ್ರ. ಆದರೆ, ಪ್ರತಿವರ್ಷ ವೈದ್ಯಕೀಯ ಕೋರ್ಸ್‌ಗೆ ಸೇರುವ ಬಯಕೆಯಿಂದ 16 ಲಕ್ಷಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ನೀಟ್ ಬರೆಯುತ್ತಾರೆ. ಸರ್ಕಾರಗಳು ಈ ಸಮಸ್ಯೆಯನ್ನು ಸಮಗ್ರ ದೃಷ್ಟಿಕೋನದಿಂದ ನೋಡಬೇಕು. ದೂರಗಾಮಿ ಪರಿಣಾಮಗಳನ್ನು ಗ್ರಹಿಸಿ ತೀರ್ಮಾನ ಕೈಗೊಳ್ಳಬೇಕು. ಸಂಬಂಧಪಟ್ಟ ಎಲ್ಲರ ಜೊತೆ ಸಮಾಲೋಚನೆ ನಡೆಸಬೇಕು. ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಪನ್ಮೂಲ ವಿನಿಯೋಗಿಸಲು ಸಿದ್ಧವಾಗಬೇಕು. ವೈದ್ಯಕೀಯ ಶಿಕ್ಷಣ ಹಾಗೂ ದೇಶಕ್ಕೆ ಅಗತ್ಯವಿರುವ ಸಂಖ್ಯೆಯಲ್ಲಿ ವೈದ್ಯರನ್ನು ಸಜ್ಜಾಗಿಸಲು ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಲು ಇವು ಅಗತ್ಯ.

ಹಳ್ಳಿ ಮಟ್ಟದಿಂದ ವಿಶ್ವ ಮಟ್ಟದವರೆಗೆ ಶಾಂತಿ ಬೀಜಗಳನ್ನು ಬಿತ್ತಬೇಕಾದ ಅನಿವಾರ್ಯ ಸ್ಥಿತಿ ಎದುರಾಗಿದೆ

ವೈರಾಣು– ಪರಮಾಣು ಭೀತಿಯಲ್ಲಿ ಪ್ರಪಂಚ

ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ಸಮವಸ್ತ್ರವನ್ನು ಸಮಾನತೆಯ ಸಂಕೇತ ಎಂಬಂತೆ ಭಾವಿಸಲಾಗುತ್ತದೆ. ವಸ್ತ್ರಸಂಹಿತೆಯು ಇತ್ತೀಚಿನ ದಿನಗಳಲ್ಲಿ ವಿವಾದಕ್ಕೆ ಎಡೆಮಾಡಿಕೊಟ್ಟಿತು. ಇದು ಒಂದು ಅಹಿತಕರ ವಿದ್ಯಮಾನಕ್ಕೆ ಸಾಕ್ಷಿಯಾಯಿತು. ಮುಂದೆ ಅದು ಧಾರ್ಮಿಕ ವಿವಾದದ ಸ್ವರೂಪ ಪಡೆದುಕೊಂಡು ಸಾಮಾಜಿಕ ಶಾಂತಿ ಕದಡಲು ಕಾರಣವಾಯಿತು.

ಈ ನಡುವೆ ಹೈಕೋರ್ಟ್ ತೀರ್ಪು ಹೊರಬಿದ್ದು, ವಸ್ತ್ರಸಂಹಿತೆಗೆ ತೆರಬೀಳಬಹುದೆಂದು ನಿರೀಕ್ಷಿಸಲಾಯಿತು. ತೀರ್ಪು ನೀಡಿದ ನ್ಯಾಯಮೂರ್ತಿಗಳಿಗೆ ಬೆದರಿಕೆ ಒಡ್ಡುವ ಮಾತುಗಳು, ಅವರ ವಿರುದ್ಧವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಅಭಿಪ್ರಾಯಗಳು ವ್ಯಕ್ತವಾದದ್ದು, ಸಮಸ್ಯೆಯನ್ನು ಜೀವಂತವಾಗಿ ಇಡುವ ಪ್ರಯತ್ನವೇ ಹೌದು. ನ್ಯಾಯಾಲಯದ ತೀರ್ಪನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಅನಿಸಿಕೆಯನ್ನು ಪ್ರಾಜ್ಞರು ವ್ಯಕ್ತಪಡಿಸಿದರು. ಕೆಲವರು ಮಾತ್ರ ನ್ಯಾಯಮೂರ್ತಿಗಳ ಮೇಲೆ ಮುಗಿಬಿದ್ದರು. ರಾಜ್ಯ ಮತ್ತು ರಾಷ್ಟ್ರದಲ್ಲಿ ಈ ತೆರನಾದ ಸಂಘರ್ಷಗಳು ನಡೆಯುತ್ತಲೇ ಇವೆ.

ವಿಶ್ವಮಟ್ಟದಲ್ಲಿ ಯುದ್ಧ ನಡೆಯುತ್ತಿದೆ. ಯುದ್ಧದ ಭೀಕರತೆಯನ್ನು ಕಲ್ಪಿಸಿಕೊಳ್ಳಲು ಕೂಡಾ ಆಗದು. ಯಾವುದೇ ಯುದ್ಧವು ಬಹುಮುಖ್ಯವಾಗಿ ಜೀವಹಾನಿಯನ್ನು ಉಂಟು ಮಾಡುತ್ತದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಸಾವಿರಾರು ಜನರು ಸಾವನ್ನಪ್ಪಿದ್ದಾರೆ. ಒಡವೆ, ವಸ್ತು, ವಾಹನ, ಕಟ್ಟಡಗಳನ್ನು ಪುನರ್‌ನಿರ್ಮಾಣ ಮಾಡಬಹುದು. ಅದು ಪ್ರಯತ್ನದಿಂದ ಸಾಧ್ಯವಾಗುವ ಕಾರ್ಯ. ಆದರೆ ಹೋದ ಜೀವವನ್ನು ಮರಳಿ ತರಲು ಆಗುವುದಿಲ್ಲ; ಜೀವ ಕೊಡಲು ಸಹ ಸಾಧ್ಯವಿಲ್ಲ. ಇದು ಅಸಂಭವವಾದುದು.

ಮಾನವ ಶರೀರಧಾರಿಯಾಗಿ ಜನಿಸುತ್ತಾನೆ. ಜೀವ ಇರುವವರೆಗೂ ಜೀವಂತಿಕೆ ಇರುತ್ತದೆ. ಜೀವ ಹೋದ ಬಳಿಕ ಆ ಶರೀರವು ನಿರ್ಜೀವವಾಗುತ್ತದೆ. ಜೀವ ಇರುವವರೆಗೆ ಜೀವನ ಮತ್ತು ಸಾಧನೆ. ಜೀವ ಹೋಗುತ್ತದೆ, ಸಾಧನೆ ಉಳಿಯುತ್ತದೆ.

ಯುದ್ಧವು ಜೀವಭಕ್ಷಕ. ನರಭಕ್ಷಕ. ಜೀವಿಗಳ ಭಕ್ಷಕ ಕೂಡ. ಯುದ್ಧಕ್ಕೆ ಜೀವ ತೆಗೆದುಕೊಳ್ಳಲು ಬರುತ್ತದೆ. ಆದರೆ ಅದಕ್ಕೆ ಜೀವವನ್ನು ಕೊಡಲು ಆಗುತ್ತದೆಯೇ? ಎಂದಿಗೂ ಇಲ್ಲ. ನಿಜವಾಗಲೂ ಯುದ್ಧಕ್ಕೆ ಜೀವ ಕೊಡಲು ಸಾಧ್ಯವಿಲ್ಲ. ಅದು ಯಾವಾಗಲೂ ಹಿಂಸಾತ್ಮಕವಾದುದು.

ಯುದ್ಧದ ಭೀಕರತೆ ಅಂದರೆ ಜೀವಹಾನಿ. ಅದರೊಟ್ಟಿಗೆ ಆಸ್ತಿಹಾನಿ, ಕಟ್ಟಡಗಳ ನೆಲಸಮ ಮಾಡುವುದು ಸೇರುತ್ತವೆ. ಉತ್ತಮ ವ್ಯವಸ್ಥೆ ರೂಪಿಸುವಲ್ಲಿ ಉತ್ತಮ ಸೌಕರ್ಯ ಇರಬೇಕಾಗುತ್ತದೆ. ಮೂಲಸೌಕರ್ಯ ಒದಗಿಸುವ ಮುಖಾಂತರ ದೇಶವನ್ನು ಸುಭದ್ರಗೊಳಿಸಬಹುದು, ಸೌಂದರ್ಯಯುಕ್ತ ಆಗಿಸಬಹುದು.

ಒಂದೊಂದು ದೇಶ ಒಂದೊಂದು ವಿಶಿಷ್ಟ ಯೋಜನೆಯನ್ನು ರೂಪಿಸುತ್ತ, ದೇಶ ವಿದೇಶದವರನ್ನು ಆಕರ್ಷಿಸುವ ಪ್ರಯತ್ನ ನಡೆಸುತ್ತದೆ. ಉದಾಹರಣೆಗೆ, ಪಕ್ಕದ ಸಿಂಗಪುರ ದೇಶವು ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿದೆ. ಆ ಮೂಲಕ ಅದು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಅದಕ್ಕೆ ಬೇಕಾದ ಸಾಧನ ಸೌಕರ್ಯಗಳನ್ನು ಆ ದೇಶವು ನಿರ್ಮಿಸಿದೆ. ಅದರಂತೆ ಉಕ್ರೇನ್ ದೇಶವು ಶಿಕ್ಷಣ ಕ್ಷೇತ್ರಕ್ಕೆ ಮಹತ್ವ ನೀಡಿದ್ದು, ಅದಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿತ್ತು. ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ವಿದ್ಯಾರ್ಥಿಗಳು ವೈದ್ಯಕೀಯ ವಿಜ್ಞಾನದ ಶಿಕ್ಷಣ ಪಡೆಯಲು ಆ ದೇಶದತ್ತ ವಲಸೆ ಹೋಗುತ್ತಿದ್ದುದನ್ನು ಕಾಣಬಹುದಾಗಿತ್ತು.

ಈಗ ರಷ್ಯಾ ದೇಶವು ಉಕ್ರೇನ್ ಮೇಲೆ ನಡೆಸಿರುವ ಆಕ್ರಮಣದಿಂದಾಗಿ ಆ ದೇಶದ ಪ್ರಮುಖ ನಗರಗಳು ನೆಲಕಚ್ಚಿವೆ, ಧ್ವಂಸಗೊಂಡು ನಿರುಪಯುಕ್ತ ಆಗಿವೆ. ಆಸ್ಪತ್ರೆ, ಶಾಲೆ- ಕಾಲೇಜುಗಳನ್ನು ಗುರಿಯಾಗಿಸಿಕೊಂಡು ಶೆಲ್ ದಾಳಿ ಮಾಡಲಾಗುತ್ತಿದೆ.

ಯಾವುದೇ ದೇಶವು ಎಲ್ಲ ಹಂತದಲ್ಲೂ ಬಲಿಷ್ಠ ಆಗಲಿ. ಅದಕ್ಕೆ ಯಾರದೂ ಅಭ್ಯಂತರ ಇರಲಾರದು. ಬಲಿಷ್ಠ ರಾಷ್ಟ್ರವು ದುರ್ಬಲ ರಾಷ್ಟ್ರವೊಂದರ ಮೇಲೆ ಯುದ್ಧ ಮಾಡುತ್ತಾ ಆ ರಾಷ್ಟ್ರಕ್ಕೆ ಹಾನಿ ಉಂಟು ಮಾಡುವುದು ಸೂಕ್ತವಲ್ಲ. ಯಾವುದೇ ಸಮಸ್ಯೆಗೆ ಯುದ್ಧವು ಪರಿಹಾರವಲ್ಲ. ಪರಸ್ಪರ ಸಮಾಲೋಚನೆ ಅಥವಾ ಮಾತುಕತೆಯ ಮುಖಾಂತರ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಕದನವಿರಾಮ ಕುರಿತು ಮಾತುಕತೆ ನಡೆದಿದೆ. ಆದರೆ ಅಂತಿಮ ನಿರ್ಣಯ ತೆಗೆದುಕೊಳ್ಳುವಲ್ಲಿ ಯಶಸ್ಸು ಸಾಧಿಸಲು ಇನ್ನೂ ಸಾಧ್ಯವಾಗಿಲ್ಲ. ಮಾತುಕತೆಗಳು ಅಪೂರ್ಣ ಆಗಿವೆ. ಕದನವಿರಾಮ ಕುರಿತು ಮಾತುಕತೆ ನಿಂತಿಲ್ಲ, ಅತ್ತ ಯುದ್ಧವೂ ಕೊನೆಗೊಂಡಿಲ್ಲ. ಇದಕ್ಕೆ ಉಭಯತ್ರರ ಹಟಮಾರಿತನದ ಧೋರಣೆಯೂ ಕಾರಣ ಆಗಿರಬಹುದು.

ಜಗತ್ತಿನ ಯಾವುದೇ ಭಾಗದಲ್ಲಿ ಯುದ್ಧ ಸಂಭವಿಸಿದರೂ ಅದು ಪ್ರತಿಕೂಲ ವಾತಾವರಣವನ್ನು ನಿರ್ಮಿಸುವುದು ಖಚಿತ. ವಾಹನ ಮತ್ತು ಔದ್ಯೋಗಿಕ ಕ್ಷೇತ್ರಕ್ಕೆ ಬೇಕಾಗುವ ಇಂಧನದ ಅಭಾವ ಸೃಷ್ಟಿಸುವುದು, ಜೀವನಾವಶ್ಯಕ ಸಾಮಗ್ರಿಗಳ ಕೊರತೆ ಆಗುವುದು, ಭೌತಿಕ ಬೆಳವಣಿಗೆಗೆ ಅಗತ್ಯವಾಗಿರುವ ಸಿಮೆಂಟ್, ಕಬ್ಬಿಣ ಇತ್ಯಾದಿಗಳ ಬೆಲೆ ಗಗನಕ್ಕೇರುವುದು, ದೇಶದ ಮೇಲೆ ದಿಗ್ಬಂಧನ ವಿಧಿಸುವುದು, ಆಮದು- ರಫ್ತು ವಹಿವಾಟಿಗೆ ತೊಂದರೆ ಆಗುವುದು... ಮುಂತಾದ ಅನನುಕೂಲಗಳನ್ನು ಅನುಭವಿಸಬೇಕಾಗುತ್ತದೆ.

ಆಧುನಿಕ ಜಗತ್ತಿನ ಅತ್ಯಂತ ಅಪಾಯಕಾರಿ ವಿದ್ಯಮಾನವೆಂದರೆ ಪರಮಾಣು ಬಾಂಬುಗಳು. ಇಲ್ಲಿಯವರೆಗೂ ಗನ್, ರೈಫಲ್, ಸ್ಕಡ್, ಟ್ಯಾಂಕರ್, ಯುದ್ಧ ವಿಮಾನಗಳನ್ನು ಬಳಸಲಾಗುತ್ತಿತ್ತು. ಈಗ ಅದಕ್ಕಿಂತಲೂ ಅಪಾಯಕಾರಿ ಶಸ್ತ್ರಾಸ್ತ್ರಗಳನ್ನು ನಿರ್ಮಿಸಿಕೊಳ್ಳಲಾಗಿದೆ. ರಾಸಾಯನಿಕ ಯುದ್ಧಗಳು ನಡೆಯುತ್ತವೆ. ಅವು ಪ್ರವಿಸುವ ಕಣಗಳಿಂದ ನಿಸರ್ಗದಲ್ಲಿ ಪ್ರತಿಕೂಲ ವಾತಾವರಣ ಸೃಷ್ಟಿ ಆಗುವುದು. ಅದರಿಂದಾಗಿ ಜೀವಿಗಳ ಮಾರಣಹೋಮ ನಡೆಯುತ್ತದೆ.

ರಾಸಾಯನಿಕ ಯುದ್ಧಗಳಿಂದಾಗಿ ಒಂದು ಪುಟ್ಟ ದೇಶವು ದೊಡ್ಡ ದೇಶವನ್ನು ನಿಯಂತ್ರಿಸಬಹುದು. ಒಂದು ಬಲಿಷ್ಠ ದೇಶವು ಪುಟ್ಟ ದೇಶವನ್ನು ನಿಗ್ರಹಿಸಬಹುದು. ಅಣು- ಪರಮಾಣು ಶಕ್ತಿಯಿಂದಾಗಿ ಇಡೀ ಜಗತ್ತು ಅಪಾಯದ ಹೊಸ್ತಿಲಲ್ಲಿದೆ.

ಕೊರೊನಾ ವೈರಾಣು ಸೋಂಕಿನ ಭೀತಿಯಿಂದ ಜಗತ್ತು ಸಂಪೂರ್ಣವಾಗಿ ಮುಕ್ತವಾಗಿಲ್ಲ. ಆಗಲೇ ಮಾನವ ಪ್ರಚೋದಿತ ಯುದ್ಧವು ಜಾಗತಿಕ ಮಟ್ಟದಲ್ಲಿ ಇನ್ನಿಲ್ಲದ ಭಯವನ್ನು ಸೃಷ್ಟಿಸಿದೆ. ಒಂದೆಡೆ ಪರಮಾಣು ಭೀತಿ. ಮತ್ತೊಂದೆಡೆ ವೈರಾಣು ಭೀತಿ. ಪರಮಾಣು ಮತ್ತು ವೈರಾಣು ಜಗತ್ತನ್ನು ಕಾಡುತ್ತಿರುವ ಎರಡು ಅಪಾಯಗಳು. ವೈರಾಣು ನಿಸರ್ಗ ನಿರ್ಮಿತ, ಪರಮಾಣು ಮಾನವ ಪ್ರಚೋದಿತ. ಎರಡರ ವಿರುದ್ಧವೂ ಹೋರಾಡಬೇಕಾಗಿರುವ ಅನಿವಾರ್ಯ ಸ್ಥಿತಿ ಉಂಟಾಗಿದೆ.

ವೈರಾಣುವಿನ ವಿರುದ್ಧ ಜಾಗೃತಿ ಮೂಡಿಸುತ್ತಲೇ, ಪರಮಾಣು ಯುದ್ಧದಿಂದ ಆಗುವ ಅಪಾಯಗಳನ್ನು ಅರಿಯುತ್ತಾ, ನಿಗ್ರಹಕ್ಕೆ ಬೇಕಾಗುವ ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ, ಚಾಲನೆ ನೀಡಬೇಕಾಗುತ್ತದೆ. ಅವೆಂದರೆ ಶಾಂತಿ ಪರವಾದ ಪ್ರಕ್ರಿಯೆಗಳು. ಜಾಗತಿಕ ಮಟ್ಟದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಎಲ್ಲ ದೇಶಗಳೂ ಒಟ್ಟಾಗಿ ಹೋರಾಡಬೇಕಾಗುತ್ತದೆ.

ಯುದ್ಧದ ಪರವಾದ ಮಾತುಕತೆಗಿಂತ, ಶಾಂತಿ ಪರವಾದ ಮಾತುಕತೆಗೆ ಒತ್ತಾಸೆ ಬೇಕಾಗಿದೆ. ಭೌತಿಕ ಪ್ರಪಂಚದಲ್ಲಿ ಯಾವುದಕ್ಕೂ ಕೊರತೆ ಇಲ್ಲ. ಹಿಂದೆಂದಿಗಿಂತಲೂ ಈಗ ಶಾಂತಿ ಮತ್ತು ಸಾಮರಸ್ಯದ ಅಗತ್ಯ ಇದೆ. ಮಾನವ ಭೌತಿಕವಾಗಿ ಬೆಳೆದಿರಬಹುದು. ಬೌದ್ಧಿಕವಾಗಿಯೂ ಬೆಳೆದಿರಬಹುದು. ಅದರಿಂದಾಗಿ ದ್ವೇಷ-ಮಾತ್ಸರ್ಯಗಳು ಮಿತಿಮೀರುತ್ತಿವೆ, ಹದ್ದುಮೀರಿ ವರ್ತಿಸುತ್ತಿವೆ. ಪರಸ್ಪರ ರಣಕಹಳೆಗೆ ವೀಳ್ಯ ಕೊಡುತ್ತಿವೆ. ಪ್ರೀತಿಸಾಧನೆ ದೂರವಾಗಿದೆ, ದ್ವೇಷಸಾಧನೆ ಅತಿಯಾಗಿದೆ. ಪ್ರತೀ ಕ್ಷೇತ್ರವನ್ನೂ ಈ ಪಿಡುಗು ಆವರಿಸಿಕೊಂಡಿದೆ.

ವೈಯಕ್ತಿಕ, ಸಾಮಾಜಿಕ ಹಾಗೂ ಜಾಗತಿಕ ಮಟ್ಟದಲ್ಲಿ ದ್ವೇಷಾಸೂಯೆ ತಾಂಡವವಾಡುತ್ತಿದೆ. ದೇಶ- ದೇಶಗಳ ನಡುವೆ ಬಾಂಧವ್ಯ ಬೆಸೆಯುವ ದಿಸೆಯಲ್ಲಿ ವಿಶ್ವಸಂಸ್ಥೆ ರಚನೆಯಾಗಿದೆ. ಹಳ್ಳಿ ಮಟ್ಟದಿಂದ ವಿಶ್ವ ಮಟ್ಟದವರೆಗೆ ಶಾಂತಿ ಬೀಜಗಳನ್ನು ಬಿತ್ತಬೇಕಾದ ಅನಿವಾರ್ಯ ಸ್ಥಿತಿ ಎದುರಾಗಿದೆ.

ಜಗತ್ತು ಉಳಿದರೆ, ನಾ(ನೀ)ವು ಉಳಿದಂತೆ, ಜಗತ್ತು ಅಳಿದರೆ ನಾವು ಅಳಿದಂತೆ. ಅಳಿವು- ಉಳಿವಿನ ನಡುವೆ ಜಗತ್ತನ್ನು ಆಳಬೇಕೆಂಬ ಅರ್ಥಾತ್ ಜಗತ್ತು ನನ್ನ ಕಪಿಮುಷ್ಟಿಯಲ್ಲಿ ಇರಬೇಕೆಂಬ ಸ್ವಾರ್ಥಪರವಾದ ಲಾಲಸೆಗಳು ಕೊನೆಗೊಳ್ಳಬೇಕಾಗಿದೆ.

ಚುರುಮುರಿ



ತೆಪರೇಸಿ ಫೈಲ್ಸ್!

• ಬಿ.ಎನ್.ಮಲ್ಲೇಶ್

'ಲೇ ತೆಪರ, ಈ ಫೈಲ್ಸ್ ಅಂದ್ರೆ ಏನ್ಲೆ?' ಹರಟೆ ಕಟ್ಟೆಯಲ್ಲಿ ತೆಪರೇಸಿಯನ್ನ ಗುಡ್ಡೆ ಕೇಳಿದ.

'ಅಂದ್ರೆ? ಆಫೀಸ್ ಫೈಲ್ಸೋ, ಆಸ್ಪತ್ರೇಲಿ ತೋರ್ಸೋ ಫೈಲ್ಸೋ?'

'ಅಲೆ ಇವ್ನ, ಅದ್ರಾಗೂ ಬೇರೆ ಬೇರೆ ಅದಾವೇನ್ಲೆ? ನಾನು ಕೇಳಿದ್ದು ಫೈಲ್ಸ್ ಅಂತ ಸಿನಿಮಾ ಬಂದೇತಲ್ಲ ಅದು, ಆ ಫೈಲ್ಸ್...'

'ಓ ಅದಾ? ಅದನ್ನ ನಿಂಗೆ ಬಿಡಿಸಿ ಹೇಳೋಕಾಗಲ್ಲ. ಅಂದ್ರೆ ಹಿಂದೆ ನಡೆದದ್ದನ್ನ ಈಗ ಹುಡುಕಿ ತೆಗೆದು ತೋರ್ಸೋದು... ನೋಡ್ರಪ್ಪ ಹಿಂಗಿಂಗ್ ಈ ತರ ಆಗಿತ್ತು ಅಂತ ಹಳೇ ಕತೆನೆಲ್ಲ ಹೇಳೋದು...' ತೆಪರೇಸಿ ವಿವರಿಸಿದ.

'ಓ... ಅಂದ್ರೆ ಹಳೆ ಗಾಯ ಕೆರ್ಕಳಾದು ಅನ್ನು...' ದುಬ್ಬೀರ ನಕ್ಕ.

'ಏನಾದ್ರು ತಿಳ್ಕಾ, ಈಗಿನೋರಿಗೆ ಹಳೇದೆಲ್ಲ ಗೊತ್ತಾಗ್ಲಿ ಅಂತಾನೂ ಇರಬೋದು...'

'ಅಂದ್ರೆ ನಾವು ಹಳೇದ್ನೆಲ್ಲ ತೋರಿಸ್ಬೋದು. ಹಳೆ ದುರಂತಗಳು, ಹಿಂಸೆ, ಹತ್ಯಾಕಾಂಡಗಳು, ಬ್ರಹ್ಮಾಂಡ ಭ್ರಷ್ಟಾಚಾರಗಳು... ಇವನ್ನೆಲ್ಲ ಸಿನಿಮಾ ಮಾಡಿ ತೋರಿಸ್ಬೋದು ಅನ್ನು'.

'ಮತ್ತೆ ಹಳೇ ಪ್ರೇಮ ಪುರಾಣಗಳು, ಮದುವೆ, ಅಪಘಾತಗಳು ಇವುನ್ನೂ ತೋರಿಸ್ಬೋದಾ?' ಗುಡ್ಡೆ ಕೇಳಿದ.

'ನಿನ್ನೆಲಿ, ಏನಾದ್ರೂ ತೋರಿಸ್ತಾ ಹೋಗು, ತೆಲಿ ತಿಂತಾನೆ...' ತೆಪರೇಸಿಗೆ ಸಿಟ್ಟು ಬಂತು.

'ನೋಡ್ರಪ್ಪಾ ನಾನೇನಾದ್ರು ಡೈರೆಕ್ಟರ್ ಆಗಿದ್ರೆ 'ತೆಪರೇಸಿ ಫೈಲ್ಸ್' ಅಂತ ಸಿನಿಮಾ ಮಾಡಿ ತೋರಿಸ್ತಿದ್ದೆ' ಎಂದ ಗುಡ್ಡೆ.

'ಯಾಕಪ್ಪ ಅವುಂದೇನೈತಿ ಹಳೆ ಪುರಾಣ?' ದುಬ್ಬೀರನಿಗೆ ಕುತೂಹಲ.

'ಯಾಕೆ? ಅವನ ಪುರುಷೋತ್ತಮನ ಸಾಹಸಗಳು ನಿಂಗೊತ್ತಿಲ್ವ? ಮದುವೆ ಆದ ಮೇಲೆ ಪಾಪ ಅವನು ಪಡ್ತಿರೋ ಕಷ್ಟ ಆ ದೇವರಿಗೇ ಗೊತ್ತು. ಪಮ್ಮಿ ಕೈಲಿ ಮೂರ್ನಾಲ್ಕು ಸಲ ಮರ್ಡರ್ ಆಗ್ಬೇಕಿತ್ತು, ಬಚಾವಾದ' ಗುಡ್ಡೆ ನಗುತ್ತ ಆಕಾಶ ನೋಡಿದ.

'ಲೇ ಗುಡ್ಡೆ ಏನಕ್ಕೇನಾದ್ರು ಆಗ್ಲಿ, ತೆಪರನ ಮ್ಯಾಲೆ ನೀ ಸಿನಿಮಾ ತೆಗಿಯಲೆ, ನಾ ರೊಕ್ಕ ಹಾಕ್ತೀನಿ' ದುಬ್ಬೀರನಿಗೆ ಹುರುಪು ಬಂತು.

ಅಲ್ಲಿಯವರೆಗೂ ಸುಮ್ಮನೆ ಕೂತಿದ್ದ ಕಡೆಮನಿ ಕೊಟ್ರೇಶಿ 'ಅಲ್ಲೋ ದುಬ್ಬೀರ, ಅವನು ಸಿನಿಮಾ ತೆಗೀಬಹುದು, ಆದ್ರೆ ನೋಡೋರು ಬೇಕಲ್ಲ...' ಎಂದ. ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ಎಚ್ಚರಿಕೆಯ ಕರೆಗಂಟೆ

ಶ್ರೀಲಂಕಾದ ಆಹಾರ ಮತ್ತು ಆರ್ಥಿಕ ಬಿಕ್ಕಟ್ಟಿಗೆ ಅದರ ವಿವೇಚನಾರಹಿತ ನೀತಿಗಳು, ಜನಪ್ರಿಯತೆಯನ್ನು ಮಾತ್ರ ಗುರಿಯಾಗಿಸಿಕೊಂಡ ಯೋಜನೆಗಳು ಮತ್ತು ದುಂದುವೆಚ್ಚ ಕಾರಣ. ಇದು, ಎಲ್ಲಾ ಬಡ ರಾಷ್ಟ್ರಗಳಿಗೂ ಏನು ಮಾಡಬಾರದು ಎಂಬುದಕ್ಕೆ ಒಂದು ಉದಾಹರಣೆ. ಭಾರತದ ಅನೇಕ ರಾಜ್ಯಗಳು ಬೆಳವಣಿಗೆ ಮತ್ತು ಆದ್ಯತೆಯ ಕೆಲಸಗಳನ್ನು ನಿರ್ಲಕ್ಷಿಸಿ, ಚುನಾವಣಾ ಲಾಭಕ್ಕಾಗಿ ದುಡುಕಿನ ಅಲ್ಪಾವಧಿಯ ಉಚಿತ ಭಾಗ್ಯಗಳನ್ನು ನೀಡುತ್ತಿವೆ.

ಜಯಪ್ರಕಾಶ್ ನಾರಾಯಣ್, ಲೋಕಸತ್ತಾ ಪಕ್ಷದ ಸಂಸ್ಥಾಪಕ

ಕಿಡಿನುಡಿ

ಬಿಜೆಪಿ ಶಾಸಕರಾದ ವೇದವ್ಯಾಸ ಕಾಮತ್, ಹರೀಶ್ ಪೂಂಜ, ಸಂಜೀವ ಮಠಂದೂರು ನಿಜವಾಗಿಯೂ ಒಳ್ಳೆಯವರು. ಅವರ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಗುತ್ತಿಗೆದಾರರೆಲ್ಲರೂ ಮುಸ್ಲಿಮರೇ. ಶಾಸಕರು ಕೇವಲ ರಾಜಕೀಯಕ್ಕಾಗಿ ಮುಸ್ಲಿಮರನ್ನು ವಿರೋಧಿಸುತ್ತಾರೆ ಅಷ್ಟೆ.

ಯು.ಟಿ. ಖಾದರ್, ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 25-3-1997

• **ಬಿಡಿಸಿಸಿ ಬ್ಯಾಂಕ್ ಅವ್ಯವಹಾರ: ಸಿಬಿಐ ತನಿಖೆ**

ಬೆಂಗಳೂರು, ಮಾ. 24– ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಕೋಟ್ಯಂತರ ರೂಪಾಯಿಗಳ ಅವ್ಯವಹಾರ ಕುರಿತು ಸಿಬಿಐ ತನಿಖೆ ನಡೆಸುವುದಾಗಿ ಸರ್ಕಾರ ಇಂದು ಪ್ರಕಟಿಸಿದೆ.

ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ್, ವಿ.ಆರ್. ಸುದರ್ಶನ್ ಅವರ ಪ್ರಸ್ತಾಪಕ್ಕೆ ಉತ್ತರಿಸಿದ ಸಹಕಾರಿ ಸಚಿವ ಎಸ್.ಎಸ್. ಪಾಟೀಲ್ ಅವರು, ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಲಾಗುವುದು, ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ, ಅವ್ಯವಹಾರಕ್ಕೆ ಕಾರಣರಾದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಹೇಳಿದರು.

• **ಆಲಮಟ್ಟಿ: ತಜ್ಞರ ವರದಿಗೆ ಮನ್ನಣೆ ಇಲ್ಲ- ಪಟೇಲ್**

ಬೆಂಗಳೂರು, ಮಾ. 24– ಆಲಮಟ್ಟಿ ಅಣೆಕಟ್ಟೆ ವಿಚಾರದಲ್ಲಿ ಅನಧಿಕೃತವಾದ ತಜ್ಞರ ಸಮಿತಿ ನೀಡಿದ ವರದಿಗೆ ರಾಜ್ಯ ಸರ್ಕಾರ ಕಿಂಚಿತ್ತೂ ಮನ್ನಣೆ ನೀಡಿಲ್ಲ ಎಂದು ಇಂದು ವಿಧಾನಸಭೆಯಲ್ಲಿ ಪುನರುಚ್ಚರಿಸಿದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು, ಸಮಿತಿ ನೇಮಕದಲ್ಲಿ ಪ್ರಧಾನಿ ಎಚ್.ಡಿ. ದೇವೇಗೌಡರ ಪಾತ್ರ ಇಲ್ಲ ಎಂದು ಸ್ಪಷ್ಟಪಡಿಸಿದರು.

ಈ ಸಂಬಂಧದಲ್ಲಿ ವಿರೋಧ ಪಕ್ಷಗಳು ಮಾಡಿರುವ ಎಲ್ಲ ಆಪಾದನೆಗಳನ್ನು ಅವರು ಸಾರಾಸಗಟಾಗಿ ತಳ್ಳಿಹಾಕಿದರು. ಅನಧಿಕೃತ ಸಮಿತಿ ನೀಡಿರುವ ವರದಿಯಿಂದ ಉದ್ಭವಿಸಿದ ಪರಿಸ್ಥಿತಿ ಬಗೆಗೆ ನಡೆದ ಚರ್ಚೆಗೆ ಅವರು ಉತ್ತರಿಸಿದರು.

50 ವರ್ಷಗಳ ಹಿಂದೆ

ಶನಿವಾರ, 25-3-1972

• **ಹಿಡುವಳಿ ಮಿತಿ ತಗ್ಗಿಸಲು ಭೂಸುಧಾರಣೆ ಶಾಸನಕ್ಕೆ ತಿದ್ದುಪಡಿ**

ಬೆಂಗಳೂರು, ಮಾ. 24– ರಾಜ್ಯದ ಕೃಷಿ ಹಿಡುವಳಿಗಳ ಗರಿಷ್ಠ ಪರಿಮಿತಿಯನ್ನು ತಗ್ಗಿಸಲು ಅವಕಾಶವಾಗುವಂತೆ, ಮೈಸೂರು ಭೂಸುಧಾರಣಾ ಶಾಸನದಲ್ಲಿ ಸೂಕ್ತ ತಿದ್ದುಪಡಿ ತರಲು ಹೊಸ ಸರ್ಕಾರವು ಉದ್ದೇಶಿಸಿದೆ.

ಕೇಂದ್ರ ಭೂಸುಧಾರಣಾ ಸಮಿತಿಯ ಶಿಫಾರಸುಗಳ ಅಧಾರದ ಮೇಲೆ ರೂಪಿತವಾಗಿರುವ ರಾಷ್ಟ್ರೀಯ ನೀತಿಯ ಚೌಕಟ್ಟಿಗೊಳಪಡುವಂತೆ ಈ ತಿದ್ದುಪಡಿಗಳನ್ನು ಜಾರಿಗೆ ತರಲಾಗುವುದು.

• **ಕೆ.ಎಸ್. ನಾಗರತ್ನಮ್ಮ ವಿಧಾನಸಭೆ ಅಧ್ಯಕ್ಷರು**

ಬೆಂಗಳೂರು, ಮಾ. 24– ಬಿಚ್ಚುನುಡಿಗಳಿಗೆ ಹೆಸರಾದ, ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳೆರಡರಲ್ಲೂ ಸೇವೆ ಸಲ್ಲಿಸಿ ಹದಿನಾಲ್ಕು ವರ್ಷಗಳ ಕಾಲ ಶಾಸಕರಾಗಿ ಅನುಭವ ಇರುವ 46 ವರ್ಷ ವಯಸ್ಸಿನ ಕೆ.ಎಸ್. ನಾಗರತ್ನಮ್ಮ ಅವರು ಭಾರತದಲ್ಲೇ ಪ್ರಥಮ ವಿಧಾನಸಭಾ ಅಧ್ಯಕ್ಷರಾಗಿ ಅತ್ಯಧಿಕ ಬಹುಮತದಿಂದ ಇಂದು ಆಯ್ಕೆಯಾದರು.

'ನ್ಯಾಯದ ತಕ್ಕಡಿ ತೂಗಲು ಸರಿಯಾದ ವ್ಯಕ್ತಿ' ಎಂದು ವಿಧಾನಸಭೆಯ ಉಭಯ ಪಕ್ಷಗಳಿಂದ ಮೆಚ್ಚುಗೆ ಗಳಿಸಿದ ನಾಗರತ್ನಮ್ಮ ಅವರಿಗೆ 'ಸ್ವರ್ಣಾಕ್ಷರದಲ್ಲಿ ಬರೆದಿಡುವಂತಹ ಅಧ್ಯಕ್ಷಗಿರಿ ನಿಮ್ಮ ಕಾಲದಲ್ಲಾಗಲಿ' ಎಂದು ಹಿರಿಯರಾದ ಎಚ್. ಸಿದ್ಧವೀರಪ್ಪನವರು ಹಾರೈಸಿದರು.

ಸಂಗತ

ವರ್ಷಕ್ಕೊಮ್ಮೆ ವಕ್ಕರಿಸುವ ಒಲ್ಲದ ಅತಿಥಿ

ಪದೇಪದೇ ಬಡಜನರ ಜೀವಹಿಂಡುತ್ತಿರುವ ಮಂಗನ ಕಾಯಿಲೆಯನ್ನು ಮೀರುವ ಶಾಶ್ವತ ಪರಿಹಾರದ ನಿರೀಕ್ಷೆಯಲ್ಲಿದೆ ಮಲೆನಾಡು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮಲೆನಾಡೆಂದರೆ ಹಾಗೇ, ಅದು ಕಾಡಿನೊಟ್ಟಿಗೆ ಗಾಢವಾಗಿ ಕೂಡಿಬಾಳುವ ವಿಶಿಷ್ಟ ಬಗೆ. ಆ ಸಾಂಗತ್ಯದಲ್ಲಿ ಖುಷಿ-ನೆಮ್ಮದಿ, ಬೆರಗಿನೊಟ್ಟಿಗೆ ಕಿರಿಕಿರಿ-ತಾಪತ್ರಯಗಳೂ ಉಂಟು. ಮಳೆಗಾಲ ಮುಗಿದು ಮಾಗಿಚಳಿ ಮೈಕೊರೆವ ಹೊತ್ತಿಗೆ ಕಾಡಂಚಿನ ನಿವಾಸಿಗಳಿಗೆ ಉಣುಗುಗಳು ಕಚ್ಚಿದ ಉರಿ-ತುರಿಕೆ, ಮತ್ತೆಮತ್ತೆ ಮರುಕಳಿಸುವ ವಿಲಕ್ಷಣ ಕಾಯಿಲೆಯೊಂದರ ಭೀತಿ-ಕನವರಿಕೆ.

ಅದು, 1956ನೇ ಇಸವಿ ಮಾರ್ಚ್ ತಿಂಗಳು, ಶಿವಮೊಗ್ಗದ ಸೊರಬ ತಾಲ್ಲೂಕು ಕ್ಯಾಸನೂರಿನ ಕಾಡಲ್ಲಿ ಸತ್ತುಬಿದ್ದ ಮಂಗಗಳ ಬಗ್ಗೆ ಅಧ್ಯಯನ ಶುರುವಾಯಿತು. ನೋಡನೋಡುತ್ತಲೇ ಕಾಡಂಚಿನ ಜನರಲ್ಲಿ ಚಳಿಜ್ವರ, ಮೈಕೈಬೇನೆ, ನರಳಿಕೆ... ಅಷ್ಟರಲ್ಲಾಗಲೇ ರೋಗಿಗಳಿಂದ ಆಸ್ಪತ್ರೆಗಳು ಭರ್ತಿಯಾಗತೊಡಗಿದ್ದವು. ಕಾಡಿನ ಸಂಪರ್ಕದಲ್ಲಿದ್ದ ಹಳ್ಳಿಗಳ ಬಡ ರೈತರು, ಕೂಲಿಕಾರರ ಮೈಕೈಗಳಿಗೆ ಅಂಟಿಕೊಂಡಿದ್ದ ಪರಾವಲಂಬಿ ಉಣುಗುಗಳು ತಣ್ಣಗೆ ರಕ್ತಹೀರುತ್ತಲೇ ಇದ್ದವು. ಪ್ರಯೋಗಾಲಯದ ಮಾದರಿ ಪರೀಕ್ಷಾ ವರದಿಯಲ್ಲಿ ಕಾಣದ ಕಾಯಿಲೆಯೊಂದು ಪತ್ತೆಯಾಯಿತು. ಅಲ್ಲಿಯ ಹಳ್ಳಿಗರ ರೋಗಕ್ಕೂ ಮಂಗಗಳ ಸಾವಿಗೂ ಉಣುಗುಗಳ ಬದುಕಿಗೂ ಸಂಬಂಧವಿತ್ತು!

ಮಂಗಗಳ ಸಾವಿಗೆ ಕಾರಣವಾಗುವ ವೈರಾಣುಗಳು ಉಣುಗುಗಳೆಂಬ ವಾಹಕಗಳ ಮೂಲಕ ಮನುಷ್ಯರಿಗೆ ರೋಗ ಹರಡುತ್ತಿದ್ದವು. ಆಗಲೇ ಆ ವ್ಯಾಧಿಯನ್ನು 'ಕ್ಯಾಸನೂರು ಕಾಡಿನ ಕಾಯಿಲ್' (ಕೆಎಫ್‌ಡಿ) ಅಥವಾ 'ಮಂಗನಕಾಯಿಲೆ' ಅಂತಲೂ, ವೈರಸ್ ಅನ್ನು 'ಕೆಎಫ್‌ಡಿ ವೈರಸ್' ಅಂತಲೂ ನಾಮಕರಣ ಮಾಡಲಾಯಿತು. ಮಂಗನ ಕಾಯಿಲೆ ಸಾಮಾನ್ಯವಾಗಿ ಉಲ್ಬಣಿಸುವುದು ಡಿಸೆಂಬರ್‌ನಿಂದ ಮೇ ತಿಂಗಳವರೆಗೆ. ಸೈಬೀರಿಯಾದಿಂದ ಬಂದ ವಲಸೆ ಹಕ್ಕಿಗಳು ರೋಗಾಣುಗಳನ್ನು ಇಲ್ಲಿಗೆ ತಂದಿರಬಹುದೆಂಬ ಸಂಶಯವಿದೆ. ರೋಗವಾಹಕಗಳಾದ ಸೋಂಕಿತ ಉಣ್ಣೆಗಳು ಮನುಷ್ಯರಿಗೆ ರೋಗ ಹರಡುತ್ತವೆ. ಹಾಗೆಂದು ಮನುಷ್ಯರಿಂದ ಮನುಷ್ಯರಿಗೆ ಹರಡುವುದಿಲ್ಲ. ಕಾಡಿನಲ್ಲಿ ಮಂಗಗಳು ಸಾಯುವುದೇ ಈ ಕಾಯಿಲೆಯ ಮೊದಲ ಮುನ್ಸೂಚನೆ.

ಆರಂಭದಲ್ಲಿ 100 ಚದರ ಕಿ.ಮೀ ವ್ಯಾಪ್ತಿಯೊಳಗಿದ್ದ ಮಂಗನ ಕಾಯಿಲೆಯು ಕಾಳ್ಗಿಚ್ಚಿನಂತೆ ಪಕ್ಕದ ಸಾಗರ, ಹೊಸನಗರ, ತೀರ್ಥಹಳ್ಳಿ ಭಾಗಗಳ ಸುಮಾರು 800 ಚದರ ಕಿ.ಮೀ ವ್ಯಾಪ್ತಿಯಲ್ಲಿ ಬಹುಬೇಗ ವ್ಯಾಪಿಸಿಬಿಟ್ಟಿತ್ತು. ನಂತರದಲ್ಲಿ ನೆರೆಯ ಜಿಲ್ಲೆಗಳಾದ ಉತ್ತರ ಕನ್ನಡ, ಚಿಕ್ಕಮಗಳೂರು ಜೊತೆಗೆ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ತನ್ನ ಇರವನ್ನು ತೋರ್ಪಡಿಸಿತ್ತು. ಕ್ರಮೇಣ ಮಲೆನಾಡಿನಲ್ಲಿ ಕಾಡು ಕಡಿದಂತೆಲ್ಲಾ ಮಂಗಗಳು ವಲಸೆ ಹೊರಟ ಕಾರಣಕ್ಕೆ ಕಾಯಿಲೆಯು ಪಶ್ಚಿಮಘಟ್ಟದುದ್ದಕ್ಕೂ ವಿಸ್ತಾರಗೊಳ್ಳುತ್ತಾ ಹೋಯಿತು. 2014ರಲ್ಲಿ ಚಾಮರಾಜನಗರ ಜಿಲ್ಲೆ ಮಾತ್ರವಲ್ಲದೆ ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಕೆಲ ಪ್ರದೇಶಗಳಲ್ಲೂ ಕಾಲುಚಾಚಿದೆ. ಶೇ 3-10ರಷ್ಟು ಮಾರಣಾಂತಿಕ ಎಂಬುದು ದೃಢಪಟ್ಟಿದೆ. ಇಲಾಖೆಯ ಮಾಹಿತಿಯಂತೆ ಪ್ರತಿವರ್ಷವೂ ಮಲೆನಾಡಿನ ಸಾವಿರಾರು ಜನರು ರೋಗಪೀಡಿತರಾಗುತ್ತಿದ್ದಾರೆ.

ಮಲೆನಾಡಿನಲ್ಲಿ ಈಗಲೂ ಮಂಗನಕಾಯಿಲೆ ಹೆಸರೆತ್ತಿದರೆ ಹಳ್ಳಿಜನ ಬೆಚ್ಚಿಬೀಳುತ್ತಾರೆ. ಕಳೆದ ಬೇಸಿಗೆಯಲ್ಲಿ ಅದು ಇಡಿಯ ಊರಿಗೂರನ್ನೇ ಕೊಡವಿಹಾಕಿದೆ. ನೂರಾರು ಬಡಕುಟುಂಬಗಳನ್ನು ದೈಹಿಕವಾಗಿ, ಆರ್ಥಿಕವಾಗಿ ಹಿಂಡಿಬಿಟ್ಟಿದೆ. ಶಿವಮೊಗ್ಗ ಜಿಲ್ಲೆಯೊಂದರಲ್ಲೇ ಕಳೆದೆರಡು ವರ್ಷಗಳಿಂದ ಇಪ್ಪತ್ತಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದಾರೆ. ಮನೆಮಂದಿಯೆಲ್ಲ ತಿಂಗಳಿಡೀ ಹಾಸಿಗೆಯಲ್ಲಿ ನರಳಿದ್ದಾರೆ. ಮತ್ತೀಗ ಬಿಸಿಲಝಳ ಹೆಚ್ಚುತ್ತಿದ್ದಂತೆ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವ ರೋಗಲಕ್ಷಣಗಳು ಜನರನ್ನು ಜೀವಭಯದಲ್ಲಿ ನಿದ್ದೆಗೆಡಿಸುತ್ತಿವೆ.

ಈಗಲೂ ಮಂಗನ ಕಾಯಿಲೆಗೆ ಮುಂಜಾಗ್ರತಾ ಲಸಿಕೆಯ ಹೊರತು ನಿರ್ದಿಷ್ಟ ಔಷಧಗಳಿಲ್ಲ. ಈ ರೋಗದ ತೀವ್ರತೆಯು ರೋಗಿಯ ಪ್ರತಿರೋಧಶಕ್ತಿಯ ಮೇಲೆ ಅವಲಂಬಿತ. ಕಾಯಿಲೆಯು ಸಾಂಕ್ರಾಮಿಕವಾದ್ದರಿಂದ ಸೋಂಕು ಹರಡುವಿಕೆಯನ್ನು ಊಹಿಸುವುದೂ ಅಸಾಧ್ಯ. ರೋಗ ಬಂದ ಮೇಲೆ ಪಡೆವ ಲಸಿಕೆಗಳು ಪರಿಣಾಮಕಾರಿಯಾಗದ ಮತ್ತು ಮೊದಲೇ ಲಸಿಕೆ ಪಡೆದ ಹಲವರಲ್ಲಿ ರೋಗಲಕ್ಷಣಗಳು ಕಂಡುಬಂದ ಹಿನ್ನೆಲೆಯಲ್ಲಿ ವೈರಾಣು ಹಿನ್ನೆಲೆ, ರೋಗಪ್ರಸರಣದ ಬಗೆಗೆ ಹೆಚ್ಚಿನ ಅಧ್ಯಯನ, ಸಂಶೋಧನೆಗಳ ಅಗತ್ಯವಿದೆ. ದೇಶವಿದೇಶಗಳ ಸಂಶೋಧನಾಲಯಗಳು ಈ ಬಗ್ಗೆ ತೊಡಗಿಸಿಕೊಂಡಿದ್ದು ಹಿಂದೆ ವರದಿಯಾಗಿತ್ತಾದರೂ ಫಲಿತಾಂಶ ಹೊರಬರಲಿಲ್ಲ. ಒಟ್ಟಾರೆ ಅರ್ಧಶತಮಾನ ಕಳೆದರೂ ವರ್ಷಕ್ಕೊಮ್ಮೆ ವಕ್ಕರಿಸುವ ಗಂಭೀರ ಕಾಯಿಲೆಗೊಂದು ಮದ್ದು ಅರೆಯಲು ಈವರೆಗೂ ಸಾಧ್ಯವಾಗಿಲ್ಲ ಅನ್ನುವುದೇ ವಿಪರ್ಯಾಸ!

ಕಾಯಿಲೆ ಉಲ್ಬಣಿಸುವ ಸಮಯಕ್ಕೆ ಹೆಲಿಕಾಪ್ಟರ್ ಮೂಲಕ ಔಷಧವನ್ನು ಇಡೀ ಕಾಡಿಗೆ ಸಿಂಪಡಿಸಬೇಕು ಅನ್ನುವುದು ಸ್ಥಳೀಯರ ಒತ್ತಾಯ. ಹಾಗಿದ್ದೂ ಸತ್ತುಬೀಳುವ ಮಂಗಗಳನ್ನು ಪತ್ತೆ ಮಾಡುವುದು, ಆರೋಗ್ಯ ಇಲಾಖೆಯಿಂದ ಹಳ್ಳಿಹಳ್ಳಿಗಳಲ್ಲಿ ಜನಜಾಗೃತಿ ಮೂಡಿಸುವ ಹಾಗೂ ಲಭ್ಯವಿರುವ ರೋಗನಿರೋಧಕ ಲಸಿಕೆ, ಬೂಸ್ಟರ್‌ಡೋಸ್ ನೀಡುವ ಕಾರ್ಯಗಳು ಎಂದಿನಂತೆ ನಡೆಯುತ್ತಿವೆ. ಚಿಕಿತ್ಸೆಗಿಂತ ತಡೆಗಟ್ಟುವುದೇ ಮೇಲು ಎಂಬ ಮಾತಿನಂತೆ, ನಿರಂತರವಾಗಿ ಮುಂಜಾಗ್ರತಾ ಲಸಿಕೆ ಪಡೆದುಕೊಳ್ಳಬೇಕಾದ ಅನಿವಾರ್ಯ, ಹೊಣೆಗಾರಿಕೆಯನ್ನು ಮಲೆನಾಡಿಗರು ಅರಿಯಬೇಕಿದೆ.

ವಾಚಕರ ವಾಣಿ

ನಾಗರಿಕ ಸಮಾಜಕ್ಕೆ ಶೋಭೆ ತಾರದು

ಉಡುಪಿಯ ಜಾತ್ರೆಯೊಂದರಲ್ಲಿ ಮುಸ್ಲಿಂ ವರ್ತಕರಿಗೆ ಬಹಿಷ್ಕಾರ ಹಾಕಿರುವ ಕೆಟ್ಟ ಘಟನೆ ಸಾಂಕ್ರಾಮಿಕದ ರೀತಿ ಎಲ್ಲ ಕಡೆಗೂ ವ್ಯಾಪಿಸುತ್ತಿದೆ. ಈ ದುರುಳರು ದೇಶವನ್ನು ಏನು ಮಾಡಹೊರಟಿದ್ದಾರೆ? 'ಜಾತ್ರೆ ವೇಳೆ ವ್ಯವಸ್ಥಾಪನಾ ಸಮಿತಿಯವರೇ ಅಂಗಡಿಗಳನ್ನು ಗುತ್ತಿಗೆ ಆಧಾರದಲ್ಲಿ ನೀಡುತ್ತಾರೆ. ಹೀಗಾಗಿ, ಇದು ನೇರವಾಗಿ ಸರ್ಕಾರದ ವ್ಯಾಪ್ತಿಗೆ ಬರುವ ವಿಷಯವಲ್ಲ. ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಇದು ತುರ್ತಾಗಿ ಕ್ರಮ ಕೈಗೊಳ್ಳಬೇಕಾದ ವಿಚಾರ. ಈ ರೋಗಕ್ಕೆ ಕಾನೂನಿನ ಮೂಲಕ ಕಠಿಣ ಕ್ರಮ ಕೈಗೊಳ್ಳಬೇಕು. ಇದನ್ನೂ ಚುನಾವಣೆಯ ಅಸ್ತ್ರವಾಗಿ ಬಳಸಿಕೊಂಡು ಆಟವಾಡಹೋದರೆ ಇದು ದೇಶದ ವಿದೇಶಾಂಗ ನೀತಿಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು.

ತರ್ಕ, ಕಾನೂನನ್ನು ಮೀರಿದ್ದು ಮಾನವೀಯತೆ. ಈ ನೆಲೆಯಿಂದ ನೋಡಿದರೆ ಕರ್ನಾಟಕದಲ್ಲಿ ಈಗ ನಡೆಯುತ್ತಿರುವ ವಿದ್ಯಮಾನಗಳು ನಾಗರಿಕ ಸಮಾಜಕ್ಕೆ ಶೋಭೆ ತರುವಂತಿಲ್ಲ ಎಂದು ಅತ್ಯಂತ ದುಃಖದಿಂದ ಹೇಳಬಯಸುತ್ತೇವೆ. ಮುಖ್ಯಮಂತ್ರಿಯವರೇ ಮೊದಲು ಸರ್ವಜನಾಂಗದ ಶಾಂತಿಯ ತೋಟವಾದ ಕರ್ನಾಟಕವನ್ನು ನಾಡಗೀತೆಯ ಆಶಯದಂತೆ ಸಂರಕ್ಷಿಸಿ ಎಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

ಡಾ. ಕೆ.ಮರುಳಸಿದ್ಧಪ್ಪ, ಪ್ರೊ. ಎಸ್.ಜಿ.ಸಿದ್ಧರಾಮಯ್ಯ, ಡಾ. ಕಾಳೇಗೌಡ ನಾಗವಾರ, ಪ್ರೊ. ಚಂದ್ರಶೇಖರ ತಾಳ್ಯ, ಬಿ.ಟಿ.ಲಲಿತಾ ನಾಯಕ್, ರುದ್ರಪ್ಪ ಹನಗವಾಡಿ

ಕ್ಷಮಿಸುವ ಔದಾರ್ಯ ತೋರುವ ಈ ಪರಿ...

ಹಿರೇಮಗಳೂರು ಕಣ್ಣನ್ ಅವರು ಹಿಜಾಬ್ ಧರಿಸುವ ಮುಸ್ಲಿಂ ಯುವತಿಯರ ಬಗ್ಗೆ ಮೈಸೂರಿನ ರಂಗಾಯಣದಲ್ಲಿ ಆಡಿದ ಅಸಭ್ಯ-ಅಶ್ಲೀಲ ಮಾತುಗಳು, ಅವರ ದೇಹಭಾಷೆ, ಅಲ್ಲಿನ ಸಭಿಕರ ನಗೆ, ಎಲ್ಲವನ್ನೂ ವಿಡಿಯೊದಲ್ಲಿ ಕಂಡು, ಪತ್ರಿಕೆಯಲ್ಲಿ ಈ ಕುರಿತು ಓದಿ, ಬಹಳವೇ ಸಂಕಟವಾಯಿತು. ಇದನ್ನು ಅಲ್ಲಿ ಉಪಸ್ಥಿತರಿದ್ದ ಯಾರೂ ಪ್ರತಿರೋಧಿಸಲಿಲ್ಲವೇ ಎಂದು ಬೇಸರವೂ ಆಯಿತು. ಮುಸ್ಲಿಮರ ಮೇಲಿನ ದ್ವೇಷ ಆ ಸಮುದಾಯದ ಹೆಣ್ಣುಮಕ್ಕಳ ಬಗ್ಗೆ ಇಷ್ಟು ಕೆಟ್ಟದಾಗಿ, ಯಾವುದೇ ಅಂಕೆ ಇಲ್ಲದೆ ಮಾತನಾಡುವ ಮಟ್ಟಕ್ಕೂ ಒಬ್ಬರನ್ನು ಕೊಂಡೊಯ್ಯಬಹುದೇ?

ಮತ್ತೆ, ಹಿರಿಯ ರಂಗಕರ್ಮಿ ಪ್ರಸನ್ನ ಅವರು ಅವರನ್ನು ಕ್ಷಮಿಸುವ ಔದಾರ್ಯ ತೋರಿದ್ದನ್ನು ನೋಡಿ, ಇವರು ಯಾವಾಗ ಮಹಿಳಾ ಸಮುದಾಯ ಮತ್ತು ಸಮಾಜದ ಪ್ರಜ್ಞಾವಂತರ ಮುಖವಾಣಿಯಾಗಿದ್ದು ಎಂಬ ಪ್ರಶ್ನೆಯೂ ಉದ್ಭವಿಸಿತು! ಅಸಭ್ಯ- ಅಶ್ಲೀಲ ವರ್ತನೆಯನ್ನು ಸಮಾಜದ ಸುಚಿಂತಕರೆಲ್ಲರೂ ಒಕ್ಕೊರಲಿನಿಂದ ಖಂಡಿಸದಿದ್ದರೆ, ಇಂಥವರ ಬಗ್ಗೆ ಕಾನೂನು ಕ್ರಮಕ್ಕೆ ಆಗ್ರಹಿಸದೇ ಇದ್ದರೆ, ಇದು ಯಾವುದೇ ಅಡೆತಡೆ ಇಲ್ಲದೆ ಮುಂದುವರಿಯುತ್ತಲೇ ಇರುತ್ತದೆ, ನಮ್ಮ ಸಮಾಜದ ಸಂಸ್ಕೃತಿ ಪ್ರಪಾತಕ್ಕೆ ಇಳಿಯುತ್ತದೆ ಎಂದು ಬಹಳ ಆತಂಕದಿಂದ ಹೇಳಬಯಸುತ್ತೇನೆ.

ಡಾ. ಸುಧಾ ಕೆ., ಬೆಂಗಳೂರು

ಪ್ರಶ್ನೆಪತ್ರಿಕೆ ಎಡವಟ್ಟು: ಕಹಿಸತ್ಯ

ಇತ್ತೀಚೆಗೆ ನಡೆದ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲಿನ ಕನ್ನಡ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಇದ್ದ ತಪ್ಪುಗಳನ್ನು ಪತ್ರಿಕಾ ವರದಿಗಳ ಮೂಲಕ ತಿಳಿದಾಗ, ಬೇವಿನ ಬೀಜ ಬಿತ್ತಿ ಮಾವಿನ ಫಲ ಬೇಡಿದರೆ ಹೇಗೆ ಎನಿಸಿತು. ಇದು ಕಹಿಯಾದರೂ ಸತ್ಯ. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕೂಡ ಕನ್ನಡ ಭಾಷಾ ವಿಷಯವನ್ನು ತಾತ್ಸಾರದಿಂದ ನೋಡಲಾಗುತ್ತಿದೆ. ಜೊತೆಗೆ ಶಾಲಾ ಹಂತಗಳಲ್ಲಿ ಶಿಕ್ಷಕರ ಕೊರತೆಯಿಂದಾಗಿ ಗಣಿತ, ವಿಜ್ಞಾನ, ಸಮಾಜವಿಜ್ಞಾನವನ್ನು ಬೋಧಿಸುವ ಶಿಕ್ಷಕರು ಕನ್ನಡ ಭಾಷಾ ವಿಷಯವನ್ನು ಬೋಧಿಸುತ್ತಾರೆ ಹಾಗೂ ಖಾಸಗಿ ಶಾಲೆಗಳು ಕನ್ನಡ ಭಾಷಾ ಶಿಕ್ಷಕರನ್ನು ನೇಮಿಸಿಕೊಳ್ಳದೆ ಇಂಗ್ಲಿಷ್ ಹಾಗೂ ವಿಜ್ಞಾನ ಶಿಕ್ಷಕರೇ ಕನ್ನಡ ಬೋಧಿಸುವಂತೆ ಮಾಡುತ್ತವೆ.

ಇದಕ್ಕೆ ಪೂರಕವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಸಹಶಿಕ್ಷಕರ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ಕನ್ನಡ ಅಧ್ಯಾಪಕರ ಹುದ್ದೆಗಳಿಗೆ ಅವಕಾಶವನ್ನೇ ಕಲ್ಪಿಸಿಲ್ಲ. ಕಾರಣ ಹೀಗಿರುವಾಗ ಶುದ್ಧ ಕನ್ನಡವನ್ನು ಅಥವಾ ಶುದ್ಧ ಕನ್ನಡ ಕಲಿಕೆಯನ್ನು ನಿರೀಕ್ಷಿಸುವುದು ಹೇಗೆ?

ಸುವರ್ಣ ಸಿ.ಡಿ., ತರೀಕೆರೆ

ದೂರದ, ದೂರಲಾಗದ ಜೀವಿಗಳು ಇಲ್ಲಿವೆ, ಸಚಿವರೆ!

ಕರ್ನಾಟಕದಲ್ಲಿ ವ್ಯಾಪಕವಾಗಿ ದುರ್ಬಳಕೆಯಾಗುತ್ತಿರುವ ಗ್ಲೈಫೋಸೇಟ್ ವಿಷದ 'ತೊಂದರೆಗಳ ಕುರಿತು ರೈತರಿಂದ ದೂರು ಬಂದಿಲ್ಲ' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಸದನದಲ್ಲಿ ಹೇಳಿದ್ದಾರೆ. ತೊಂದರೆ ಉಂಟಾಗುತ್ತಿರುವುದು ದುಂಬಿ, ಜೇಡ, ಜೇನ್ನೊಣಗಳಿಗೆ ಮತ್ತು ಎರೆಹುಳುಗಳಿಗೆ; ಹಳ್ಳಕೊಳ್ಳಗಳ ಏಡಿ, ಕಪ್ಪೆ, ಮೀನುಗಳಿಗೆ. ಅವಂತೂ ದೂರು ಕೊಡಲಾರವು. ವಿಷವನ್ನು ಸಿಂಪಡಿಸುವ ಹಾಗೂ ಊಟಕ್ಕೆ ಏಡಿ-ಮೀನುಗಳನ್ನು ಬಳಸುವ ಶ್ರಮಿಕರು, ಅವರ ಮಕ್ಕಳು ಉಸಿರಾಟದ ಕಾಯಿಲೆಗಳಿಂದ ಬಳಲುತ್ತಿದ್ದರೆ ಅವರು ವೈದ್ಯರ ಬಳಿ ಹೋಗುವ ಬದಲು ಕೃಷಿ ಇಲಾಖೆಗೆ ದೂರು ಕೊಡಬೇಕಿತ್ತೇ? ಈ ವಿಷದ ಅತಿಬಳಕೆಯ ವರದಿ (ಪ್ರ.ವಾ., ಮಾರ್ಚ್ 22) ಬಂದಾಕ್ಷಣ ಸಚಿವರು ತಮ್ಮದೇ ಸ್ಮಾರ್ಟ್‌ಫೋನಿನಲ್ಲಿ glyphosate ಎಂದು ಗೂಗಲಿಸಿದ್ದರೆ ಈ ವಿಷದ ದುಷ್ಪರಿಣಾಮಗಳ ಸಾವಿರಾರು ವರದಿಗಳು ಸಿಗುತ್ತಿದ್ದವು. ಮನುಷ್ಯರಲ್ಲೂ ಅದು ಕ್ಯಾನ್ಸರ್‌ಗೆ ಕಾರಣವಾಗಬಲ್ಲದು ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿದ್ದು ಗೊತ್ತಾಗುತ್ತಿತ್ತು. ಏಳು ವರ್ಷಗಳ ಹಿಂದೆ ಜರ್ಮನಿ ಇದನ್ನು ನಿಷೇಧಿಸಿದ ಬೆನ್ನಲ್ಲೇ, ನೆದರ್ಲೆಂಡ್ಸ್, ಫ್ರಾನ್ಸ್, ಶ್ರೀಲಂಕಾ, ಬ್ರೆಜಿಲ್, ಅರ್ಜೆಂಟೀನಾ, ಕೊಲಂಬಿಯಾ ಹೀಗೆ ಸಾಲು ಸಾಲು ದೇಶಗಳು 'ರೌಂಡಪ್' ಹೆಸರಿನ ಇದನ್ನು ಹೊರದಬ್ಬಿದ್ದು ಗೊತ್ತಾಗುತ್ತಿತ್ತು.

ಕರ್ನಾಟಕದಲ್ಲಿ ಯಾವ ಯಾವ ಕಂಪನಿಗಳು ಯಾವ ಯಾವ ಬ್ರ್ಯಾಂಡ್ ಹೆಸರಿನಲ್ಲಿ ಗ್ಲೈಫೋಸೇಟನ್ನು ಮಾರುತ್ತಿವೆ ಎಂಬ ಪಟ್ಟಿಯನ್ನು ಸಚಿವರು ಬಿಡುಗಡೆ ಮಾಡಬೇಕು. ರೈತರಿಗೆ ಆ ಪಟ್ಟಿ ತೀರಾ ಅಗತ್ಯವಿದೆ. ಇನ್ನು, ಇದಕ್ಕೆ ನಿಷೇಧ ಹಾಕಲಾಗದಷ್ಟು ಒತ್ತಡ ಸರ್ಕಾರದ ಮೇಲಿದ್ದರೆ ಹೋಗಲಿ, ಅದರ ಅತಿಬಳಕೆ, ಅನಗತ್ಯ ಬಳಕೆಯ ದುಷ್ಪರಿಣಾಮಗಳ ಬಗ್ಗೆ ವಿಷದ ಡಬ್ಬಿಗಳ ಮೇಲೆ ಕನ್ನಡದಲ್ಲಿ ಮಾಹಿತಿಯನ್ನು ನೀಡಬೇಕು. ಅದು ಕೇವಲ 'ಕಳೆ'ನಾಶಕ ಅಲ್ಲ; ಜೀವನಾಶಕ ಎಂಬುದನ್ನು ಕಂಪನಿಗಳೇನೂ ಹೇಳುವುದಿಲ್ಲ. ಅವು ಬಚ್ಚಿಟ್ಟಿದ್ದನ್ನು 'ರೈತಮಿತ್ರ' ಸರ್ಕಾರ ಬಿಚ್ಚಿಡಬೇಕಲ್ಲವೇ?

ನಾಗೇಶ ಹೆಗಡೆ, ಕೆಂಗೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಲ್ಲಣಿಸದಿರು ಕಂಡ್ಯಾ ತಾಳು ಮನವೇ...

• ವೈ. ಗ. ಜಗದೀಶ್

'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೇ ಧರೆ ಹತ್ತಿ ಉರಿದಡೆ ನಿಲಲುಬಾರದು' ಎಂದು 12ನೇ ಶತಮಾನದಲ್ಲಿ ಬಸವಣ್ಣನವರು ಅರುಹಿದ ನುಡಿಗಳು ದ್ವೇಷ-ಕ್ಲೇಶವೇ ಧುಮುಗುಡುತ್ತಿರುವ ದಿನಗಳಲ್ಲಿ ಮತ್ತೆ ಪ್ರಸ್ತುತವೆನಿಸುತ್ತಿವೆ. ಕನ್ನಡ ನಾಡೆಂಬ ಸಮರಸದ ನೆಲೆವೀಡಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಕಂಡಾಗ ಭಕ್ತ ಕನಕದಾಸರ 'ತಲ್ಲಣಿಸದಿರು ಕಂಡ್ಯಾ ತಾಳು ಮನವೆ/ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎಂಬ ಮಾತು ಭರವಸೆಯ ಸೆರಗಿನಡಿ ಬದುಕುವ ಆಸೆಯನ್ನು ಚಿಮ್ಮಿಸುತ್ತದೆ.

ಮಲೆನಾಡಿನ ಕಾಫಿ ತೋಟಗಳ ಕಾರ್ಮಿಕರ ಸ್ಥಿತಿ ಅಧ್ಯಯನ ಮಾಡಲು ಹೋದ ಸಂಶೋಧಕರು ಕುತೂಹಲಕ್ಕೆ ಬಾಲಕಿಯೊಬ್ಬಳ ಜಾತಿಯನ್ನು ವಿಚಾರಿಸಿದರು. 'ನಮ್ಮದು ಕನ್ನಡ ಜಾತಿ' ಎಂದು ಆ ಹುಡುಗಿ ಪಟಕ್ಕನೆ ಹೇಳಿದಾಗ, ಪ್ರಶ್ನೆ ಕೇಳಿದವರೇ ತಬ್ಬಿಬ್ಬು. ಅದೇನು ಕನ್ನಡ ಜಾತಿ ಎಂದಾಗ, ಆಕೆ 'ಇಲ್ಲಿ ತುಳು, ತಮಿಳು, ತೆಲುಗು, ಮರಾಠಿ ಮಾತನಾಡುವವರಿದ್ದಾರೆ. ನಮ್ಮದು ಕನ್ನಡ ಜಾತಿಯಷ್ಟೇ; ಅದು ಬಿಟ್ಟರೆ ನನ್ನ ಜಾತಿ ಗೊತ್ತಿಲ್ಲ' ಎಂದು ಉತ್ತರಿಸಿದಳಂತೆ. ಜಾತಿ-ಧರ್ಮ ಮೀರಿದ ಕನ್ನಡ ನಾಡಿನ ಪರಂಪರೆಯು 'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಹೇಳಿದ ಆದಿ ಕವಿ ಪಂಪನಿಂದ ಶುರುವಾಗಿ ಕುವೆಂಪುರವರ 'ವಿಶ್ವಮಾನವ ತತ್ವದವರೆಗೆ ವಿಸ್ತಾರವಾಗಿ ಬೇರು ಬಿಟ್ಟು, ಮರವಾಗಿ ಸಾಮರಸ್ಯದ ಹೂಗಳನ್ನು ನಾಡಿನ ಮುಗಿಲಗಲ ಉದುರಿಸುತ್ತಲೇ ಇದೆ. ಹಾಗಾಗಿಯೇ 'ಪ್ರತಿಯೊಂದು ಮಗುವೂ ಹುಟ್ಟುತ್ತಲೇ - ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು' ಎಂದು ಕುವೆಂಪು ಪ್ರತಿಪಾದಿಸಿದ್ದರು.

ಬ್ರಾಹ್ಮಣರ ಅಗ್ರಹಾರ, ಮಠ, ದೇವಸ್ಥಾನಗಳಲ್ಲಿ ಹಿಂದಿನ ಕಾಲದಲ್ಲಿ ಅಡುಗೆಗೆ ಬಳಸುತ್ತಿದ್ದ ತಾಮ್ರ-ಹಿತ್ತಾಳೆ ಪಾತ್ರೆಗಳಿಗೆ 'ಕಲಾಯಿ' ಹಾಕುವವರು 'ಕಲಾಯಿ ಸಾಬರೇ' ಆಗಿದ್ದರು. ವರ್ಷಕ್ಕೊಮ್ಮೆ ಊರ ಮುಂದೆ ಮೊಕ್ಕಾಂ ಹೂಡಿ, ದೊಡ್ಡ ಒಲೆ ಹಚ್ಚಿ ಕಲಾಯಿ ಹಾಕಿದರೆ ಆ ವರ್ಷ ಪಾತ್ರೆ ಬಳಕೆಗೆ ಲಭ್ಯವಾಗುವ ಪದ್ಧತಿ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು ಬರುವವರೆಗೂ ಚಾಲ್ತಿಯಲ್ಲಿತ್ತು. ಸಾಬರು ಕಲಾಯಿ ಹಾಕಿದ್ದಾರೆ ಎಂಬ ಕಾರಣಕ್ಕೆ ಬ್ರಾಂಬ್ರು ಪಾತ್ರೆ ಎಸೆಯುತ್ತಿರಲಿಲ್ಲ. ತಿಂಗಳುಗಟ್ಟಲೇ ಬ್ರಾಂಬ್ರ ಮನೆಯ ಊಟ ಉಂಡೇ ಸುತ್ತಮುತ್ತಲ ಹಳ್ಳಿಗಳ ಗೌಡರು, ಈಡಿಗರು, ಅಗಸರ ಮನೆಯ ಪಾತ್ರೆಗಳಿಗೆ ಕಲಾಯಿ ಹಾಕುತ್ತಿದ್ದರು.

ನಾಡಿನುದ್ದಗಲ ನಡೆಯುವ ಜಾತ್ರೆ, ರಥೋತ್ಸವಗಳಲ್ಲಿ 'ಗರ್ನಲ್ ಸಾಹೇಬ್ರ' ಸದ್ದು ಮತ್ತು ಬೆಳಕು ಇಲ್ಲದೇ ಹಬ್ಬದ ಗಮ್ಮತ್ತೇ ಇರುತ್ತಿರಲಿಲ್ಲ. ಕರಾವಳಿಯಲ್ಲಂತೂ 'ಗರ್ನಲ್ ಸಾಹೇಬ್ರ' ಮನೆತನಗಳು ಇವತ್ತಿಗೂ ಹಿಂದೂ ದೈವಗಳ ಉತ್ಸವ ಹೊರಡಿಸುವ ಮಾರ್ಗಕಾರರಾಗಿವೆ. ಜಾತ್ರೆ, ಉತ್ಸವ, ಭೂತದ ಕೋಲಗಳು ಸಾಮರಸ್ಯ ಬೆಸೆಯುವ ಕೊಂಡಿಯಾಗಿದ್ದವೇ ವಿನಃ ಎಂದಿಗೂ ಕೋಮುಪ್ರಚೋದನೆಯ ತಾಣಗಳಾಗಿಲ್ಲ. ಮತಸಂಘರ್ಷ ನಡೆದ ನಿದರ್ಶನ ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ. ಮೊಹರಂ ಹಬ್ಬದ ಒಂದು ತಿಂಗಳ ಸಡಗರ ಉತ್ತರ ಕರ್ನಾಟಕದ ಸಾವಿರಾರು ಹಳ್ಳಿಗಳಲ್ಲಿ ಮತಭೇಧ ಇಲ್ಲದ ಊರ ಹಬ್ಬವಾಗಿಯೇ ಇಂದಿಗೂ ಉಳಿದಿದೆ. ಇಂತಹ ಸಮರಸದ ಕತೆಗಳು ಊರತುಂಬೆಲ್ಲ ಸಿಗುತ್ತವೆ.

ಉಡುಪಿ-ಮಂಗಳೂರಿನಲ್ಲಿ ಹೆಸರಾಗಿರುವ 'ಶಂಕರ ಪುರ ಮಲ್ಲಿಗೆ'ಯನ್ನು ಹೆಚ್ಚಾಗಿ ಬೆಳೆಯುವವರು ಕ್ರಿಶ್ಚಿಯನ್ನರು. ವ್ಯಾಪಾರ ಮಾಡುವವರು ಮುಸ್ಲಿಮರು. ಅದನ್ನು ಮುಡಿದು ತಮ್ಮ ಬೆಡಗು ತೋರುವವರು ಹಿಂದೂಗಳು. ಹೂವ ಪರಿಮಳ ಧಾರ್ಮಿಕ ಭಿನ್ನಬೇಧವನ್ನು ಮಣಿಸಿ, ಸೌಹಾರ್ದದ ಸೆಲೆಯನ್ನು ಪುಟದೇಳಿಸಿ ನೇತ್ರಾವತಿ, ಶಾಂಭವಿ, ಕುಮಾರಧಾರದುದ್ದಕ್ಕೂ ಹಾಯಿಸುತ್ತಲೇ ಇದೆ.

ಮಕ್ಕಳಿಗೆ ಜ್ವರ ಬಂದಾಗ ವೈದ್ಯರ ಬಳಿಗೆ ಓಡುವ ಬದಲು ದರ್ಗಾದಲ್ಲಿ ನವಿಲು ಗರಿ ಹಿಡಿದು ಕುಳಿತ ಧರ್ಮಗುರುಗಳತ್ತ (ಇಮಾಮ್, ಮೌಜನಾ, ಫಕೀರರು) ತಾಯಂದಿರು ಧಾವಿಸುತ್ತಿದ್ದರು. ನವಿಲುಗರಿ ಕಟ್ಟನ್ನು ಮಗುವಿನ ತಲೆಗೆ ನೇವರಿಸಿ, ತೆಗೆದುಕೊಂಡು ಹೋದ ಸಕ್ಕರೆ ಓದಿಸಿದರೆ (ಫಾತೇಹ) ಜ್ವರ ಹೋಗುತ್ತದೆ ಎಂದು ಜನ ನಂಬಿದ್ದಾರೆ. ದರ್ಗಾದಲ್ಲಿ ಕುಳಿತ ಗುರು ಹಾಗೂ ಮಗುವಿನ ತಾಪ ನೋಡಲಾಗದೇ ಎತ್ತಿಕೊಂಡ ಹೋಗುತ್ತಿದ್ದ ಹೆಣ್ಣುಮಕ್ಕಳಲ್ಲಿ ಇದ್ದುದು ತಾಯ್ತನದ ಹೃದಯದ ಬೆಸುಗೆಯಷ್ಟೇ. ಜಾತಿ-ಧರ್ಮಗಳಾಚೆಗೆ ಕೂಡಿ ಬಾಳುತ್ತಿದ್ದ ಜನರು ಒಂದು ಕುಟುಂಬದಂತೆಯೇ ಇದ್ದಾರೆ; ಇರುತ್ತಾರೆ.

1927ರಲ್ಲಿ ಉತ್ತರ ಪ್ರದೇಶದಲ್ಲಿ ಜನಿಸಿದ ಕವಿ ಸರ್ವೇಶ್ವರ್ ದಯಾಳ್ ಸಕ್ಸೇನಾ ಅವರು, 'ದೇಶವೆಂದರೆ ಕಾಗದದ ಮೇಲೆ ಬರೆದ ನಕ್ಷೆಯಲ್ಲ!' ಎಂಬ ಶೀರ್ಷಿಕೆಯಡಿ ಬರೆದ ಕವನ ಹೀಗಿದೆ.

'ನಿನ್ನ ಮನೆಯ
ಒಂದು ಕೋಣೆಗೆ ಬೆಂಕಿ ಬಿದ್ದಿದ್ದರೆ
ಮತ್ತೊಂದು ಕೋಣೆಯಲ್ಲಿ ನೀನು
ನಿಶ್ಚಿಂತೆಯಿಂದ ಮಲಗಬಲ್ಲೆಯಾ?

ನಿನ್ನ ಮನೆಯ
ಒಂದು ಕೋಣೆಯಲ್ಲಿ ಹೆಣಗಳು
ಕೊಳೆಯುತ್ತಿದ್ದರೆ...
ಮತ್ತೊಂದು ಕೋಣೆಯಲ್ಲಿ ನೀನು
ಪರವಶನಾಗಿ ಪ್ರಾರ್ಥನೆ ಮಾಡಬಲ್ಲೆಯಾ?

ಹೌದೆಂದರೆ ನಿನಗೆ
ಹೇಳಲೇನೂ ಉಳಿದಿಲ್ಲ ನನಗೆ..' ಎಂಬುದು ಈ ದುರಿತ ಕಾಲದ ಮಾತುಗಳೇ ಆಗಿವೆ.



ಶಿರಸಿಯ ಮಾರಿಕಾಂಬಾ ದೇವಿ ಜಾತ್ರೆ ವೇಳೆ ಪೇಟೆಯಲ್ಲಿ ಮುಸ್ಲಿಂ ವ್ಯಾಪಾರಿಯೊಬ್ಬರು ಬಟ್ಟೆ ವ್ಯಾಪಾರಕ್ಕೆ ಕುಳಿತಿದ್ದರು.

ಕಿಗ್ಗಾ ಋಷ್ಯಶೃಂಗೇಶ್ವರ ಜಾತ್ರೆ; ಸಮಷ್ಟಿ ಪ್ರಜ್ಞೆ

• ಬಿ.ಜೆ. ಧನ್ಯಪ್ರಸಾದ್

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಕಿಗ್ಗಾದ ಋಷ್ಯ ಶೃಂಗೇಶ್ವರ ದೇಗುಲದಲ್ಲಿ ಯುಗಾದಿ ಸಂದರ್ಭದಲ್ಲಿ ಜಾತ್ರಾ ಮಹೋತ್ಸವ ಜರುಗುತ್ತದೆ. ಮಳೆ ದೇವರು ಎಂದು ಆರಾಧಿಸುವ ಈ ದೈವಕ್ಕೆ ಎಲ್ಲ ಧರ್ಮ, ಜಾತಿಯವರು ನಡೆದು-ಕೊಳ್ಳುತ್ತಾರೆ.

ಈ ಭಾಗದಲ್ಲಿ ವಸಂತದ (ಹೊಸ ವರ್ಷ) ಮೊದಲ ಜಾತ್ರೆ ಎಂಬ ಹೆಗ್ಗಳಿಕೆ ಇದೆ. ಒಂಬತ್ತು ದಿನ ಜರುಗುತ್ತದೆ. ಏಳನೇ ದಿನದ ರಥೋತ್ಸವ, ಎಂಟನೇ ದಿನದ ಓಕುಳಿ ಉತ್ಸವ ಅದ್ದೂರಿಯಾಗಿ ನಡೆಯುತ್ತವೆ.

ನಾಡಿನ ವಿವಿಧೆಡೆಗಳ ಜನರು ಪಾಲ್ಗೊಳ್ಳುತ್ತಾರೆ. ಹಿಂದೂ, ಮುಸ್ಲಿಂ, ಜೈನರು ಸಹಿತ ವಿವಿಧ ಧರ್ಮದವರು, ಜಾತಿಗಳವರು ಮೂರ್ತಿ ದರ್ಶನ ಮಾಡುತ್ತಾರೆ. ಮಳೆಗಾಗಿಯೂ ಪ್ರಾರ್ಥಿಸುತ್ತಾರೆ, ಮಳೆ ಅತಿಯಾದಾಗ ನಿಲ್ಲಿಸುವಂತೆಯೂ ಬೇಡುತ್ತಾರೆ. ಪ್ರಾರ್ಥನೆ ಫಲಿಸಿರುವ ನಿದರ್ಶನಗಳು ಇವೆ ಎಂದು ಭಕ್ತರು ಹೇಳುತ್ತಾರೆ.

'ಈ ಭಾಗದ ಊರುಗಳ ಮಾಂಸಹಾರಿಗಳ ಮನೆಗಳಲ್ಲಿ ಜಾತ್ರೆಯ ಸಂದರ್ಭ ಮಾಂಸ ಭಕ್ಷ್ಯ ತಯಾರಿಸುತ್ತಾರೆ. ಕೆಲವರು ಸುರಾಪಾನ ಮಾಡಿ ರಥೋತ್ಸವದಲ್ಲಿ ಪಾಲ್ಗೊ-ಳ್ಳುತ್ತಾರೆ. ತೇರು ಎಳೆದು ಭಕ್ತಿ ಸಮರ್ಪಿಸುತ್ತಾರೆ' ಎಂದು ಶಾನುಭೋಗರಾದ ಅರುಣಾಚಲ ತಿಳಿಸಿದರು.

ಜಾತ್ರೆಯಲ್ಲಿ ವಿವಿಧ ಸಮುದಾಯದವರು ಅಂಗಡಿ, ಮಳಿಗೆಗಳನ್ನು ತೆರೆಯುತ್ತಾರೆ. ಯಾರಿಗೂ ಅಡ್ಡಿಪಡಿಸಿಲ್ಲ. ಜನರು ಬೇಕಾದ ಕಡೆಯಿಂದ ತಮಗೆ ಬೇಕಾದ ವಸ್ತುಗಳನ್ನು ಖರೀದಿಸುತ್ತಾರೆ.

ಕಾಪು ಮಾರಿಗುಡಿಯಲ್ಲಿ ಶೇಖ್ ಜಲೀಲ್ ವಾದ್ಯ ಸೇವೆ

• ಬಾಲಚಂದ್ರ ಎಚ್.

ಕಾಪುವಿನ ಮಾರಿಗುಡಿಯಲ್ಲಿ ತಲೆಮಾರುಗಳಿಂ-ದಲೂ ನಾದಸ್ವರ ನುಡಿಸುತ್ತಿರುವುದು ಮುಸ್ಲಿಂ ಕುಟುಂಬ. ಶೇಖ್ ಜಲೀಲ್ ಸಾಹೇಬ್ ವಂಶಸ್ಥರು ಕಾಪುವಿನಲ್ಲಿ ಮಾರಿ ನೆಲೆನಿಂತ ದಿನದಿಂದಲೂ ದೇವರಿಗೆ ವಾದ್ಯ ಸೇವೆ ನೀಡುತ್ತಾ ಬಂದಿದ್ದಾರೆ.

'ಅಪ್ಪ ಬಾಬು ಸಾಹೇಬ್, ತಾತ ಇಮಾಮ್ ಸಾಹೇಬ್, ಮುತ್ತಾತ ಮುಗ್ದಂ ಸಾಹೇಬ್ ಹೀಗೆ ನಮ್ಮ ಪೂರ್ವಜರು ಕಾಪುವಿನ ಮಾರಿಗುಡಿಯಲ್ಲಿ ನಿಷ್ಠೆ ಹಾಗೂ ಪ್ರೀತಿಯಿಂದ ವಾದ್ಯ ನುಡಿಸುವ ಚಾಕರಿ ಮಾಡಿದ್ದಾರೆ. ಪರಂಪರಾಗತವಾಗಿ ಬಂದಿರುವ ದೇವರ ಸೇವೆಯನ್ನು ಅಷ್ಟೇ ಪ್ರೀತಿಯಿಂದ ನಾನು ಮುಂದುವರಿಸುತ್ತಿದ್ದೇನೆ' ಎನ್ನುತ್ತಾರೆ ಜಲೀಲ್ ಸಾಹೇಬ್.

'ತಾತ ಕಾಪು ಇಮಾಮ್ ಸಾಹೇಬ್ 60 ವರ್ಷ ಮಾರಿಗುಡಿಯಲ್ಲಿ ವಾದ್ಯ ನುಡಿಸಿದ್ದಾರೆ. ಅಜ್ಜ ತೀರಿಹೋದ ನಂತರ ತಂದೆ ಬಾಬು ಸಾಹೇಬ್ ನುಡಿಸಿದ್ದಾರೆ. ಕಳೆದ 35 ವರ್ಷಗಳಿಂದ ನಾನು ವಾದ್ಯ ನುಡಿಸುತ್ತಿದ್ದೇನೆ. ಧರ್ಮ ಬೇರೆಯಾದರೂ ದೇವರ ಚಾಕರಿ ಮಾಡುವುದರಲ್ಲಿ ಆತ್ಮತೃಪ್ತಿ ಇದೆ. ಮಾರಿ ಜಾತ್ರೆ ಮಾತ್ರವಲ್ಲ, ಪ್ರತಿ ಮಂಗಳವಾರ ಮೂರು ಮಾರಿಗುಡಿಗಳಲ್ಲಿ ದೇವರ ಮುಂದೆ ವಾದ್ಯ ನುಡಿಸುತ್ತೇನೆ. ಗುರು ಹಿರಿಯರು ಹಾಕಿಕೊಟ್ಟ ಸಂಪ್ರದಾಯ ಮುರಿಯುವ ಮನಸ್ಸಿಲ್ಲ. ನನಗೆ ಗಂಡು ಮಕ್ಕಳಿಲ್ಲ, ಮಗಳು ಇದ್ದಾಳೆ. ಆದರೂ, ಸಹೋದರರ ಮಕ್ಕಳಿಗೆ ದೇವರ ಚಾಕರಿ ಹಸ್ತಾಂತರ ಮಾಡುವ ಮನಸ್ಸಿದೆ' ಎನ್ನುತ್ತಾರೆ ಶೇಖ್ ಜಲೀಲ್ ಸಾಹೇಬ್.

'ಈಚೆಗೆ ಕರಾವಳಿಯಲ್ಲಿ ನಡೆಯುತ್ತಿರುವ ಅಹಿತಕರ ಬೆಳವಣಿಗೆಗಳ ಬಗ್ಗೆ ಬೇಸರವಿದೆ. ಹೆಚ್ಚಿನವರಿಗೆ ಅದು ಬೇಡವಾದ ವಿಚಾರ. ನನಗೂ ಅಷ್ಟೆ, ಕರಾವಳಿಯಲ್ಲಿ ಸೌಹಾರ್ದದ ಬೇರುಗಳು ಗಟ್ಟಿಯಾಗಿರಬೇಕು' ಎಂದು ಮಾತು ಮುಗಿಸಿದರು.

'ನಿರ್ಬಂಧ ಹೇರಿಲ್ಲ'

'ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ಇಲ್ಲ ಎಂಬ ಅರ್ಥದ ಯಾವುದೇ ರೀತಿಯ ಬ್ಯಾನರ್ ಅನ್ನು ದೇವಸ್ಥಾನದ ಆಡಳಿತ ಮಂಡಳಿಯು ಅಳವಡಿಸಿಲ್ಲ. ವಾರ್ಷಿಕ ಜಾತ್ರೋತ್ಸವದಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಿಲ್ಲ. ಯಾವುದೇ ಅಹಿತಕರ ಘಟನೆ ನಡೆಯದಿರಲಿ ಎಂದು ಕೆಲ ಮುಸ್ಲಿಂ ವ್ಯಾಪಾರಿಗಳು ತಾವಾಗಿಯೇ ಅಂಗಡಿಗಳನ್ನು ತೆರವು ಮಾಡಿದ್ದಾರೆ'

ದುಗ್ಗಣ್ಣ ಸಾವಂತ, ಬಪ್ಪನಾಡು ಕ್ಷೇತ್ರದ ಆನುವಂಶಿಕ ಮೊಕ್ತೇಸರ

'ಒಪ್ಪಿದವರಿಗೆ ಪರವಾನಗಿ'

ಯಾವುದೇ ಧರ್ಮದವರು ಜಾತ್ರೆಯಲ್ಲಿ ವ್ಯಾಪಾರ ವಹಿವಾಟು ನಡೆಸುವ ಬಗ್ಗೆ ದೇವಸ್ಥಾನದ ಕಡೆಯಿಂದ ನಿರ್ಬಂಧವಿಲ್ಲ. ಆದರೆ, ಅಹಿತಕರ ಘಟನೆಗಳು ನಡೆದರೆ ಎಲ್ಲರಿಗೂ ರಕ್ಷಣೆ ಕೊಡಲು ಸಾಧ್ಯವಾಗು-ವುದಿಲ್ಲ. ಈ ಕಾರಣದಿಂದ ವ್ಯಾಪಾರಕ್ಕೆ ಬರುವ ಎಲ್ಲರಿಗೂ ಪರಿಸ್ಥಿತಿಯನ್ನು ಮನವರಿಕೆ ಮಾಡಿ ಕೊಡಲಾಗುತ್ತಿದ್ದು, ಅವರು ಒಪ್ಪಿಗೆ ನೀಡಿದರೆ ವ್ಯಾಪಾರಕ್ಕೆ ಪರವಾನಗಿ ನೀಡಲಾಗುವುದು

ಎಂ.ಎಸ್. ಮನೋಹರ್ ಶೆಟ್ಟಿ, ಬಪ್ಪನಾಡು ಕ್ಷೇತ್ರ ಆಡಳಿತ ಟ್ರಸ್ಟಿ

ಬ್ಯಾನರ್ ತೆರವು

ಕೆಲ ದಿನಗಳ ಹಿಂದೆ, 'ಬಪ್ಪನಾಡು ಕ್ಷೇತ್ರದ ವಾರ್ಷಿಕ ಜಾತ್ರೆಯಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶವಿಲ್ಲ' ಎಂಬ ಬ್ಯಾನರ್‌ಗಳನ್ನು ದೇವಸ್ಥಾನ ಹಾಗೂ ಬಸ್ ನಿಲ್ದಾಣದ ಬಳಿ ಅಳವಡಿಸಲಾಗಿತ್ತು. ತುರ್ತು ಸಭೆ ನಡೆಸಿದ ದೇವಸ್ಥಾನದ ಆಡಳಿತ ಮಂಡಳಿ, ಈ ರೀತಿಯ ಬ್ಯಾನರ್‌ಗಳನ್ನು ತೆರವುಗೊಳಿಸಿ-ತ್ತು. ನಂತರ ಕೆಲವರು 'ಸಮಸ್ತ ಹಿಂದೂ ಬಾಂಧವರು' ಎಂಬ ಹೆಸರಿನಲ್ಲಿ ಮತ್ತೆ ಇಂತಹ ಬ್ಯಾನರ್‌ಗಳನ್ನು ಅಳವಡಿಸಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 77

ವಿಷ್ಣುವಿಗೆ ಶಾಪಕೊಟ್ಟ ನಾರದ

ಶಿವನ ಮಾಯೆಯಿಂದ ಮನ್ಮಥನ ಸುಳಿಗೆ ಸಿಲುಕಿದ್ದ ನಾರದ ಶಿವಗಣರಿಬ್ಬರಿಗೆ ಶಾಪವನ್ನಿತ್ತ ನಂತರ ತನ್ನ ಮುಖವನ್ನು ಮತ್ತೊಮ್ಮೆ ನೀರಿನಲ್ಲಿ ನೋಡಿ ಕುಪಿತನಾದ. ಶಿವನ ಇಚ್ಛೆಯಂತೆ ಹೀಗೆಲ್ಲಾ ನಡೆಯಿತು ಎಂಬ ಸತ್ಯ ಅರಿಯದೆ, ವಿಷ್ಣು ತನಗೆ ಮೋಸ ಮಾಡಿದನೆಂದು ಭಾವಿಸಿದ. ಮಿತಿಮೀರಿದ ಕೋಪದಿಂದ ವಿಷ್ಣುಲೋಕಕ್ಕೆ ಹೊರಟ. ನಾರದನ ಮುಖ ಬೆಂಕಿಯಂತೆ ಉರಿಯುತ್ತಿತ್ತು. ಕೋಪಾವಿಷ್ಟನಾಗಿ ಉರಿಗೋಪದಿಂದ ವೈಕುಂಠಕ್ಕೆ ಬಂದ. ಶಿವನ ಇಚ್ಛೆಯಂತೆ ತನಗೆ ಹೀಗಾಗಿದೆ ಎಂಬ ಜ್ಞಾನವಿಲ್ಲದೆ, ಭಂಡಪುಂಡ ಮಾತುಗಳನ್ನು ವಿಷ್ಣುವಿನ ವಿರುದ್ಧ ಆಡಿದ.

'ಎಲೈ ಹರಿಯೇ, ನೀನು ಬಹಳ ಕೆಟ್ಟವನು. ಮೋಸಗಾರ. ಪ್ರಪಂಚವನ್ನೇ ಮರುಳುಗೊಳಿಸಿರುವ ಮಾಯಾವಿ. ಇನ್ನೊಬ್ಬರ ಏಳಿಗೆಯನ್ನು ನೀನು ಸಹಿಸಲಾರೆ. ಮಹಾಕೃತ್ರಿಮಿ. ನಿನ್ನ ಹೃದಯವು ಶುದ್ಧವಾಗಿಲ್ಲ. ಹಿಂದೆ ಸಮುದ್ರಮಂಥನ ಸಂದರ್ಭದಲ್ಲಿ ಮೋಹಿನಿಯ ವೇಷವನ್ನು ಧರಿಸಿ ದಾನವರಿಗೆ ಮೋಸ ಮಾಡಿದೆ. ರಾಕ್ಷಸರಿಗೆ ಕುಡಿಯಲು ವಾರುಣಿ(ಮದ್ಯ)ಯನ್ನು ಕೊಟ್ಟೆಯಲ್ಲದೆ, ಅಮೃತವನ್ನು ಕೊಡಲಿಲ್ಲ. ಶಿವ ಸರಿಯಾದ ಸಮಯಕ್ಕೆ ಬಂದು ಕಾರ್ಕೋಟಕ ವಿಷ ಕುಡಿಯದೆ ಇದ್ದಿದ್ದರೆ, ನಿನ್ನ ಮಾಯೆಯಿಂದ ವಿಶ್ವವೆಲ್ಲಾ ನಾಶವಾಗಿಬಿಡುತ್ತಿತ್ತು. ನೀನು ಮಾಡಿದ ಮೋಸ ಗೊತ್ತಾದರೂ, ನೆಪಮಾತ್ರಕ್ಕೆ ಶಿವ ಸುಮ್ಮನಿದ್ದ. ಮುಂದೆಯೂ ಶಿವ ಸುಮ್ಮನಿರುತ್ತಾನೆಂದುಕೊಳ್ಳಬೇಡ. ನೀನು ತಪ್ಪು ಮಾಡಿದ್ದು ಶಿವನಿಗೆ ಗೊತ್ತಾದರೆ, ನಿನಗೆ ತಕ್ಕ ಶಾಸ್ತಿ ಮಾಡುವುದು ನಿಶ್ಚಿತ. ಹೀಗಿದ್ದರೂ ನೀನು ಉದ್ದಟತನ ಮುಂದುವರೆಸಿದ್ದೀಯಾ. ನಿನ್ನ ವಂಚನೆಯ ರೂಪ ಎಲ್ಲೆಡೆ ತೋರಿಸುತ್ತಿದ್ದೀಯಾ' ಎಂದು ಬೈಗುಳಗಳ ಸುರಿಮಳೆಗರೆದ. ಇಷ್ಟು ಸಾಲದೆಂಬಂತೆ ಮತ್ತಷ್ಟು ಘನಘೋರ ಮಾತುಗಳನ್ನು ವಿಷ್ಣು ವಿರುದ್ಧ ಆಡಿದ.

'ಎಲೈ ವಿಷ್ಣುವೇ, ನಿನಗೆ ದುರ್ನಡತೆಯೇ ಹಿತವಾಗಿಬಿಟ್ಟಿದೆ. ನೀನು ಸಾಧುಸ್ವಭಾವದವನಲ್ಲ. ಗೋಮುಖ ವ್ಯಾಘ್ರನಾದ ನಿನ್ನನ್ನು ಶಿವ ಸ್ವತಂತ್ರನನ್ನಾಗಿ ಮಾಡಿದ್ದು, ನಿನ್ನ ಲಂಗುಲಗಾಮಿಲ್ಲದ ಸ್ವೇಚ್ಛಾಚಾರಕ್ಕೆ ಕಾರಣವಾಗಿದೆ. ಪರಮಾತ್ಮನಾದ ಶಿವನು ನಿನಗೆ ಸರಿಯಾದ ಶಾಸ್ತಿ ಮಾಡದೆ ಬಿಟ್ಟಿದ್ದರಿಂದ ನಿನಗೆ ತೋಚಿದಂತೆ ವರ್ತಿಸುತ್ತಿರುವೆ. ನಿನ್ನ ಈ ಕೆಟ್ಟ ನಡತೆಯನ್ನು ಕಂಡು ಶಿವ ನಿತ್ಯ ಪಶ್ಚಾತ್ತಾಪ ಪಡುತ್ತಿದ್ದಾನೆ. ಆದುದರಿಂದಲೇ ತನ್ನ ಬಾಯಿಂದ ಹೊರಬಿದ್ದ ವೇದಗಳೇ ಪ್ರಮಾಣವೆಂದು ಪ್ರತಿಪಾದಿಸಿದ್ದಾನೆ. ವೇದದಲ್ಲಿ ಗುರುವೇ ಎಲ್ಲರಿಗಿಂತಲೂ ಶ್ರೇಷ್ಠನೆಂದು ಶಿವ ಹೇಳಿದ್ದಾನೆ. ಗುರುಸಮಾನನಾದ ನಾನು, ನಿನ್ನನ್ನೀಗ ಶಿಕ್ಷೆಗೀಡುಮಾಡುವೆ. ಎಂದೆಂದಿಗೂ ಇನ್ನಾರಿಗೂ ನನಗೆ ಮಾಡಿದಂತಹ ಮೋಸದ ಕೆಲಸ ಮಾಡದಂತೆ ಬುದ್ಧಿ ಕಲಿಸುವೆ' ಎಂದು ವಿಷ್ಣು ವಿರುದ್ಧ ಕಿಡಿಕಾರಿದ.

'ನನ್ನಂಥ ಕೋಪಿಷ್ಠನೊಬ್ಬನನ್ನು ಎದುರು ಹಾಕಿಕೊಳ್ಳದೆ, ಇದುವರೆಗೆ ನನ್ನಂಥ ವ್ಯಕ್ತಿಯೊಂದಿಗೆ ವ್ಯವಹರಿಸದೇ ಇದ್ದುದರಿಂದ ನೀನು ನಿರ್ಭಯವಾಗಿದ್ದೆ. ಆದರೆ ಈಗ ನನ್ನ ಕೈಗೆ ಸಿಕ್ಕಿ ಹಾಕಿಕೊಂಡಿದ್ದೀಯಾ, ಈಗಲೇ ನೀ ಮಾಡಿದ ಮೋಸಕ್ಕೆ ತಕ್ಕ ಫಲವನ್ನು ಅನುಭವಿಸುವೆ' ಎಂದು ಶಿವಮಾಯೆಯಿಂದ ಮೋಹಿತನಾಗಿದ್ದ ನಾರದ, ವಿವೇಕವಿಲ್ಲದೆ ಏನೇನೋ ಬಡಬಡಿಸಿಬಿಟ್ಟ. ಹರಿಯ ಬಗ್ಗೆ ಹೀನಾಯವಾಗಿ ಮಾತಾಡಿದ್ದಲ್ಲದೆ, ಕೋಪದಿಂದ ಮುಂದೆ ಆಗಬಹುದಾದ ಪರಿಣಾಮ ಅರಿಯದೆ, ಬ್ರಹ್ಮತೇಜಸ್ಸಿನ ಹೆಮ್ಮೆಯಿಂದ ವಿಷ್ಣುವನ್ನು ಶಪಿಸಿಬಿಟ್ಟ.

'ಒಂದು ಹೆಣ್ಣಿಗಾಗಿ ಎಲ್ಲರನ್ನೂ ಮರುಳುಗೊಳಿಸುವ ನೀನು, ಶ್ರೀಮತಿ ಸ್ವಯಂವರದಲ್ಲಿ ಮೂಗು ತೂರಿಸಿ ನನ್ನನ್ನು ದುಃಖಿತನನ್ನಾಗಿ ಮಾಡಿರುವೆ. ನನಗೆ ಮೋಸ ಮಾಡುವಾಗ, ನೀನು ಯಾವ ಸ್ವರೂಪವನ್ನು ತಳೆದು ಅನುಕರಣೆ ಮಾಡಿದೆಯೋ, ಆ ರೂಪದಿಂದಲೇ ನೀನು ಮನುಷ್ಯನಾಗಿ ಹುಟ್ಟಿ, ಹೆಂಡತಿ ಕಳೆದುಕೊಂಡ ದುಃಖವನ್ನು ಅನುಭವಿಸು. ಹಾಗೆ, ನನ್ನ ಮುಖವನ್ನು ಯಾವ ಪ್ರಾಣಿಯ ಮುಖದಂತೆ ಮಾಡಿದೆಯೋ ಆ ಕಪಿಗಳು ನಿನ್ನ ಬಂಟರಾಗಲಿ, ಅವರ ಸಹಾಯ ಬೇಡುವ ಕರ್ಮ ನಿನಗೆ ಬರಲಿ. ಮತ್ತೊಬ್ಬರನ್ನು ಸಂಕಟಪಡಿಸುವುದೇ ನಿನ್ನ ದುರುದ್ದೇಶವಾಗಿವು-ದರಿಂದ ಸ್ತ್ರೀವಿಯೋಗದಿಂದುಂಟಾದ ದುಃಖವನ್ನು ಅನುಭವಿಸು. ಸಾಮಾನ್ಯ ಮನುಷ್ಯನಂತೆ ಅಜ್ಞಾನದಿಂದ, ತಿಳಿವಳಿಕೆಯಿಲ್ಲದೆ ತೊಳಲುತ್ತಾ ದುಃಖಪಡು' ಎಂದು ನಾರದ ಶಾಪವಿತ್ತ.

ಸೌಹಾರ್ದ ಕಾಯುವ ಮಾರಿ ಜಾತ್ರೆ

• ಗಣಪತಿ ಹೆಗಡೆ

ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಶಿರಸಿಯ ಮಾರಿಕಾಂಬಾ ದೇವಿ ಜಾತ್ರೆ ಈ ಮೊದಲು ಅವೈದಿಕ ರೀತಿಯಲ್ಲಿ ನಡೆಯುತ್ತಿತ್ತು. 'ಕೋಣ ಬಲಿ' ಕೊಡುವುದು ವಿಶೇಷವಾಗಿತ್ತು.

ನಾಲ್ಕುನೂರು ವರ್ಷಗಳಷ್ಟು ಹಳೆಯದಾದ ಮಾರಿಕಾಂಬಾ ದೇವಿಯ ವಿಗ್ರಹ ಮರದಿಂದ ರಚಿತವಾಗಿದೆ. ಅವೈದಿಕ ವಿಧಿವಿಧಾನದ ಮೂಲಕವೇ ಜಾತ್ರೆಯ ಆಚರಣೆಗಳು ನಡೆಯು-ತ್ತಿದ್ದವು. 1933ರಲ್ಲಿ ಪ್ರಾಣಿಬಲಿ ನಿಲ್ಲಿಸಿದ್ದರು. ಬಳಿಕ, ಅವೈದಿಕ ವಿಧಿ ಪೂಜಾವಿಧಾನ ಕ್ರಮೇಣ ಕಡಿಮೆಯಾಗುತ್ತ ಬಂತು. ಪೂಜೆ ನಡೆಸುವ ವಿಶ್ವಕರ್ಮ ಬ್ರಾಹ್ಮಣ ಸಮುದಾಯದವರು ಆಗಮಶಾಸ್ತ್ರ ಪದ್ಧತಿಯನ್ನು ಕಲಿತ ಬಳಿಕ ಅದೇ ವಿಧಾನದಲ್ಲಿ ಪೂಜೆ ನಡೆಯುತ್ತ ಬಂದಿದೆ.

ಈ ವರ್ಷ ಮಾ.15 ರಿಂದ 23ರ ವರೆಗೆ ನಡೆದ ಜಾತ್ರೆಯಲ್ಲಿ 400ಕ್ಕೂ ಹೆಚ್ಚು ಅಂಗಡಿ ಹಾಕಲಾಗಿತ್ತು. ಈ ಪೈಕಿ ಅರ್ಧಕ್ಕೂ ಹೆಚ್ಚು ಅಂಗಡಿಗಳು ಮುಸ್ಲಿಂ ಸಮುದಾಯದ ವರ್ತಕರಿಗೆ ಸೇರಿದ್ದವು. ದೇಶದ ನಾನಾಭಾಗಗಳಿಂದ ಬಂದ ವ್ಯಾಪಾರಿಗಳು ಜಾತ್ರೆಯಲ್ಲಿ ನಿರಾತಂಕವಾಗಿ ವಹಿವಾಟು ನಡೆಸಿದ್ದಾರೆ.

'ದೇವಿಯ ಆಶೀರ್ವಾದದಿಂದ ಉತ್ತಮ ವಹಿವಾಟು ನಡೆಸಿದ್ದೇವೆ. ಕಳೆದ ಜಾತ್ರೆಗಿಂತಲೂ ಎರಡು ಪಟ್ಟು ಹೆಚ್ಚಿನ ವ್ಯಾಪಾರ ಈ ವರ್ಷ ನಡೆದಿದೆ' ಎಂದು ಜಾತ್ರೆಯಲ್ಲಿ ಆಟಿಕೆ ಅಂಗಡಿ ಹಾಕಿದ್ದ ಮಹಾರಾಷ್ಟ್ರದ ವ್ಯಾಪಾರಿ ಇಮ್ರಾನ್ ಶೇಖ್ ಹೇಳಿದರು.

ಮಾರಿಕಾಂಬಾ ದೇವಿ ರಥ ಎಳೆಯಲು ಬೆತ್ತದ ರಾಶಿ ಕಟ್ಟಲಾಗುತ್ತದೆ. ಇದನ್ನು ಕಟ್ಟಲು ಬಳಸುವ ಹಗ್ಗವನ್ನು ಮುಸ್ಲಿಂ ಸಮುದಾಯದವರು ನೀಡುತ್ತಿದ್ದಾರೆ. ಹಗ್ಗ ತಯಾರಿಯಲ್ಲಿ ಪಳಗಿದ ತೊನ್ಸೆ ಕುಟುಂಬ ಹಲವು ವರ್ಷಗಳಿಂದ ಹಗ್ಗ ನೀಡುತ್ತಿತ್ತು. ಈಗ ಬೇರೆ ಕಡೆಯಿಂದಲೂ ಹಗ್ಗ ಪಡೆದುಕೊಳ್ಳಲಾ-ಗುತ್ತಿದೆ. 'ದೇವರ ರಥಕ್ಕೆ ಹಗ್ಗ ನೀಡುವುದು ನಮ್ಮ ಪಾಲಿಗೆ ಹೆಮ್ಮೆಯ ಸಂಗತಿಯೇ ಆಗಿದೆ' ಎನ್ನುತ್ತಾರೆ ಶಿರಸಿಯ ಅಬ್ಬಾಸ್ ತೊನ್ಸೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪುರುಷತನದ ವಿಜಯ

ನರಜೀವನದ ರಣದಿ ವಿಧಿಯ ಬಲವೊಂದು ಕಡೆ |
ಚಿರವಿವೇಕದಿ ಬೆಳೆದ ನಲುಮೆಯೊಂದು ಕಡೆ ||
ಉರುಬುತಿರೆ ಪರುಷಂಗೆ ನಲುಮೆಯುಳಿತವೆ ಗೆಲವು |
ಪುರುಷತನವೇ ವಿಜಯ - ಮಂಕುತಿಮ್ಮ || 592 ||

ಪದ-ಅರ್ಥ: ಬಲವೊಂದು = ಬಲವು + ಒಂ-ದು, ಚಿರವಿವೇಕದಿ = ದೀರ್ಘವಾದ ವಿವೇಕ, ಉರುಬು = ರಭಸ, ತೀವ್ರತೆ, ನಲುಮೆಯುಳಿತವೆ = - ನಲುಮೆಯ + ಉಳಿತವೆ.

ವಾಚ್ಯಾರ್ಥ: ಮನುಷ್ಯನ ಬದುಕಿನ ರಣಾಂಗಣದಲ್ಲಿ ವಿಧಿಯ ಶಕ್ತಿ ಒಂದು ಕಡೆ. ಅವನ ವಿವೇಕದಿಂದ ಬೆಳೆದ ನಲುಮೆ-ಸಂತೋಷಗಳು ಮತ್ತೊಂದು ಕಡೆ ತೀವ್ರವಾಗುತ್ತಿರಲು, ನಲುಮೆಯನ್ನು ಉಳಿಸಿ-ಕೊಳ್ಳುವುದೇ ಗೆಲುವು. ಹಾಗೆ ಸಂತೋಷವನ್ನು ಉಳಿಸಿಕೊಳ್ಳುವ ಪೌರುಷವೇ ವಿಜಯ.

ವಿವರಣೆ: ವಿಧಿ ಮಾಡುವ ಕೆಲಸವನ್ನು ಅದು ಮಾಡಲಿ. ಅದು ನಮ್ಮ ಅಪೇಕ್ಷೆಯಂತೆ ಕೆಲಸ ಮಾಡದಿರುವುದರಿಂದ ಅದರ ಬಗ್ಗೆ ಯಾಕೆ ತಲೆಕೆಡಿಸಿಕೊಳ್ಳಬೇಕು. ಅದು ಬೇಕಾದ್ದನ್ನು ಮಾಡಲಿ. ನಮ್ಮ ಬಳಿ ಇರುವುದು ಪ್ರಯತ್ನ, ಸಾಧನೆ. ಅದನ್ನು ಬಲಪಡಿಸಬೇಕು. ನಮ್ಮ ಮನಸ್ಸಿನಲ್ಲಿಯ ಕಸವನ್ನು ತೆಗೆದೊಗೆಯಬೇಕು. ಅವಶ್ಯವಿಲ್ಲದ ಭಯಗಳನ್ನು ನೀಗಬೇಕು. ಆಗ ನಮಗೆ ದೊರಕುವ ಬಲಿಷ್ಠ ಆಯುಧ ಕ್ಷೇಮಕರವಾದ ವಿವೇಕ. ಅದನ್ನು ಬಳಸಿ ಪೌರುಷ ಪ್ರಯತ್ನದಿಂದ ನಮ್ಮ ಬದುಕಿನಲ್ಲಿ ಸಂತೋಷ, ನಲುಮೆಗಳನ್ನು ತುಂಬಿಕೊಳ್ಳಬೇಕು.

ಈಗ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ದೈವದ ಭೀತಿಯಿಂದ ತತ್ತರಿಸುತ್ತಿದ್ದ ಗ್ರೀಕ್ ಜನರನ್ನು ಧನಾತ್ಮಕವಾಗಿ ಪ್ರೇರೇಪಿಸಿದವನು ವೃದ್ಧ ತತ್ವಜ್ಞಾನಿ ಡಯೋಜೆನಿಸ್. ಅವನು ತನ್ನ ಮನೆಯ ಮುಂದೆ ಎಲ್ಲರಿಗೂ ಕಾಣುವಂತೆ ಒಂದು ಶಾಸನವನ್ನು ಬರೆಯಿಸಿ ಹಾಕಿದ್ದನಂತೆ. ಅದನ್ನು ಡಿ.ವಿ.ಜಿ ಅನುವಾದ ಮಾಡಿದ್ದು ಹೀಗೆ –

ದೈವ ಕಥೆಗಳ ನೆನೆದು ಮನಕೆ ಕಳವಳ ಬೇಡ;
ಸಾವೇನು ನವಕವಚ; ಜೀವಕಳಬೇಡ;
ಪೌರುಷದ ಯತ್ನದಿಂದೊಳಿತ ಸಾಧಿಸಬಹುದು;
ಮೀರಿಬಿಹ ಕೆಡುಕ ಧೈರ್ಯದೆ ಸಹಿಸಲಹುದು.

ಈ ವಿವೇಕವೇ ದೈವದ ನಡೆಯನ್ನು ಧೈರ್ಯವಾಗಿ ಎದುರಿಸಿಯೂ ಬದುಕಿನಲ್ಲಿ ನಲುಮೆ, ಸಂತೋಷಗಳನ್ನು ಉಳಿಸುತ್ತದೆ. ಪೌರುಷತ್ವದ ಬಗ್ಗೆ ಹೇಳುವಾಗ ಕೇವಲ ಅದರಿಂದಲೇ ಪ್ರಪಂಚ ಸ್ವರ್ಗವಾದೀತೆಂದು ಹೇಳಿದರೆ ತಪ್ಪಾಗುತ್ತದೆ. ಆ ಪುರುಷತನದ ಪ್ರಯತ್ನ ದೈವದ ಬೆಂಕಿಯ ನಡೆಯಲ್ಲೂ, ಪ್ರೀತಿಯ, ಶ್ರದ್ಧೆಯ ಮಲ್ಲಿಗೆಯ ಮಾಲೆಯನ್ನು ಜತನದಿಂದ ಕಾಪಿಡುತ್ತದೆ.

1940 ರಲ್ಲಿ 12 ವರ್ಷದ ಮೇಯರ್ ಹರ್ಷ ಪೋಲಂಡ್‌ನಲ್ಲಿದ್ದ. ಅವನು ಯಹೂದ್ಯನಾದ್ದ-ರಿಂದ ಹಿಟ್ಲರ್‌ನ ನಾಝಿ ಸೈನಿಕರು ಅವನನ್ನು ಬಂಧಿಸಿ ಜರ್ಮನಿಯ ಹತ್ಯಾಕಾಂಡಗಳಿಗೆ (Concentration camp) ಕರೆದೊಯ್ದರು. ಆ ನಿರ್ನಾಮ ಶಿಬಿರಗಳಲ್ಲಿ ಹನ್ನೊಂದು ಲಕ್ಷ ಜನರ ಮಾರಣ ಹೋಮ ನಡೆದಿತ್ತು. ಹರ್ಷನ ಕುಟುಂಬದ ಉಳಿದವರು – ಅವನ ತಾಯಿ, ತಂದೆ, ಸಹೋದರಿ ಮತ್ತು ಮೂವರು ಸಹೋದರರನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲಲಾಯಿತು. ಹತ್ಯಾಕಾಂಡದ ಉತ್ತುಂಗದಲ್ಲಿ ಹರ್ಷನನ್ನು ಭಯಂಕರವಾದ ಅಶ್ವಿಟ್ಜ್ ಕ್ಯಾಂಪಿಗೆ ಕಳುಹಿಸಿದರು. ಅಲ್ಲಿ ಅರವತ್ತು ಲಕ್ಷ ಯಹೂದ್ಯರ ಕೊಲೆಯಾಗಿತ್ತು. ಅಲ್ಲಿ ಸಾವಿನ ದೇವತೆಯೆಂದು ಹೆಸರಾಗಿದ್ದ, ಮಹಾ ಕ್ರೂರಿ ವೈದ್ಯ ಮೆಂಗಲೆಯನ್ನು ಕಂಡರು. ಹದಿನೆಂಟು ತಿಂಗಳು ನರಕವನ್ನು ಅನುಭವಿಸಿ ಕೊನೆಗೆ ಯುದ್ಧ ಮುಗಿದು, ಬಿಡುಗಡೆಯಾದಾಗ ಆತನ ತೂಕ ಇಪ್ಪತ್ತೈದು ಕಿಲೋ ಗ್ರಾಂ ಇತ್ತು. ಆದರೆ ಹೊರ ಬಂದ ಮೇಲೆ ಹರ್ಷ, ಶಾಲೆ ಶಾಲೆಗಳಿಗೆ, ಸಮುದಾಯಗಳಿಗೆ ಭೇಟ್ಟಿ ನೀಡಿ ಆತ್ಮೀಯತೆಯ ಬಗ್ಗೆ, ಸ್ನೇಹದ, ನಲುಮೆಯ ಬಗ್ಗೆ ಮಾತನಾಡಿ ಜನರನ್ನು ಪ್ರೇರೇಪಿಸಿದರು. ಇದನ್ನೇ ಕಗ್ಗ ಪುರುಷತನದ ವಿಜಯ ಎನ್ನುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮಾರ್ಚ್ 25, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಮೀನ ಮಾಸದ 11 ನೇ ದಿನ ತಿಥಿ: (ಫಾಲ್ಗುಣ ಕೃಷ್ಣ) ಅಷ್ಟಮಿ ಗಂ. 22-05 ನಕ್ಷತ್ರ: ಮೂಲ ಗಂ. 16-07 ಯೋಗ: ವರಿಯಾನ್ ಗಂ. 25-46, ಕರಣ: ಬಾಲವ ಗಂ. 11-07. ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-35 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 21 ಶಬನ್ ದಿನ ವಿಶೇಷ : ವಾರ್ಸಿತಾಪಾರಂಭ (ಜೈನ್), ಸೀತಲಾಷ್ಟಮಿ, ಅದೃಷ್ಟ ಸಂಖ್ಯೆ: 8, 13

ಮೇಷ: ಯಾವುದೇ ವಿಷಯವನ್ನಾದರೂ ಮುಕ್ತವಾಗಿ ಯೋಚಿಸಿ. ಇದು ನಿರ್ಧಾರ ಗೆದುಕೊಳ್ಳಲು ಬಹಳ ಸಹಾಯಕವಾಗುತ್ತದೆ. ವಿದ್ಯಾರ್ಥಿಗಳು ಅಪೇಕ್ಷೆ ಪಟ್ಟ ಫಲಿತಾಂಶ ಪಡೆಯುವಲ್ಲಿ ಜಯಶಾಲಿಯಾಗುವರು.

ವೃಷಭ: ಈ ದಿನ ನಿಮಗೆ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಕಷ್ಟವಾಗುವುದಿಲ್ಲ. ಪತ್ರಿಕೋದ್ಯಮಿಗಳಿಗೆ ಅವರ ಕ್ರಿಯಾತ್ಮಕ ಬರವಣಿಗೆಯಿಂದ ಏಳಿಗೆ ದೊರಕುವುದು. ರಫ್ತು ವ್ಯಾಪಾರದಲ್ಲಿ ಹೆಚ್ಚಿನ ಲಾಭ.

ಮಿಥುನ: ಇತರರ ಒತ್ತಾಯಕ್ಕೆ ನಿಮಗೆ ಬೇಡದಿರುವ ತೀರ್ಮಾನವನ್ನು ತೆಗೆದು-ಕೊಳ್ಳಬೇಡಿ. ಈ ದಿನ ಬೇರೆ ಯಾರಿಗೂ ನಿಮ್ಮ ಯೋಜನೆಯ ಸುಳಿವು ನೀಡದೆ ಗೌಪ್ಯತೆ ಕಾಪಾಡಿ. ಆರೋಗ್ಯದ ಕಡೆಗೂ ನೀವು ಗಮನ ಹರಿಸಬೇಕು.

ಕರ್ಕಾಟಕ: ಕಾರ್ಯಕ್ಷೇತ್ರದಲ್ಲಿ ಕೆಲಸದ ಒತ್ತಡ ಕಡಿಮೆಯಾಗಿ ಮನೆಯ ವಿಚಾರಕ್ಕೆ ಸಮಯ ನೀಡಲು ಅವಕಾಶ. ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ಅನಿರೀಕ್ಷಿತವಾಗಿ ಹಳೆಯ ಗೆಳೆಯರ ಭೇಟಿ.

ಸಿಂಹ: ವ್ಯಾಪಾರ, ಕೈಗಾರಿಕೆ ಹಾಗು ವಾಣಿಜ್ಯ ಕ್ಷೇತ್ರದಲ್ಲಿನ ಸುಧಾರಣೆಗೆ ಈ ದಿನ ಸಾಕಷ್ಟು ಅವಕಾಶವಿದೆ. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನದಿಂದ ಪೂರ್ಣ ಪ್ರಮಾಣದ ಲಾಭ ಸಿಗುವುದು. ಸರಕು ಸಾಗಾಣಿಕೆದಾರರಿಗೆ ಹೆಚ್ಚಿನ ಕೆಲಸ.

ಕನ್ಯಾ: ಕುಟುಂಬದ ಹಿರಿಯರ ಆರೋಗ್ಯದಲ್ಲಿ ಚೇತರಿಕೆ ಕಂಡು ಮನೆಯ ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುದು. ರಾಜಕೀಯ ರಂಗ ಪ್ರವೇಶಿಸಲು ಆಸಕ್ತಿ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರಲಿದೆ.

ತುಲಾ: ಅನಿರೀಕ್ಷಿತ ಸುದ್ದಿಯೊಂದು ನಿಮ್ಮನ್ನು ಧೈರ್ಯಗೆಡುವಂತೆ ಮಾಡಲಿದೆ. ನೀವು ಕೆಲಸ ಮಾಡುವ ಸ್ಥಳದಲ್ಲಿ ಕೆಲವು ಬದಲಾವಣೆ ಮಾಡುವುದು ಉತ್ತಮ. ನಿಮ್ಮ ಪ್ರಾಮಾಣಿಕತೆಯ ಗುಣ ಇಂದು ನಿಮ್ಮ ನೆರವಿಗೆ ಬರುತ್ತದೆ.

ವೃಶ್ಚಿಕ: ಮನೆಯಲ್ಲಿ ಅಗ್ನಿ ದುರಂತವನ್ನು ತಡೆಯಲು ಮುಂಜಾಗರೂಕತೆ ವಹಿಸಿ. ಗಣಿತಶಾಸ್ತ್ರ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ. ಇತರರಿಗೆ ಮಾದರಿಯಂತಿರುವ ಸ್ಥಾನಮಾನ ಅರಸಿ ಬರಲಿದೆ. ವಿವಾದಕ್ಕೆ ಆಸ್ಪದ ಕೊಡಬೇಡಿ.

ಧನು: ಗುಂಪು ಚಟುವಟಿಕೆಯಲ್ಲಿ ಮುಂದಾಳತ್ವ ನಿಮ್ಮದಾಗಲಿದೆ. ನಿಮ್ಮ ಆಜ್ಞೆಯನ್ನು ಪಾಲಿಸುವ ಜನರೂ ನಿಮಗೆ ಸಿಗುತ್ತಾರೆ. ಹೊಸ ಮನೆ ಅಥವಾ ನಿವೇಶನದ ದಾಖಲೆ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ.

ಮಕರ: ಯೋಜನೆಯನ್ನು ಪೂರ್ಣಗೊಳಿಸುವ ವಿಚಾರವಾಗಿ ಗಡಿಬಿಡಿಯ ವಾತಾವರಣ ಇರಲಿದೆ. ಆದ್ದರಿಂದ ಸ್ವಲ್ಪ ವ್ಯತ್ಯಾಸಗಳೂ ಆಗಬಹುದು. ಗುರುಸ್ತೋತ್ರ ಪಠಿಸುವುದರಿಂದ ಆರೋಗ್ಯ ಉತ್ತಮವಾಗುವುದು.

ಕುಂಭ: ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಕೆಲಸದ ಒತ್ತಡ. ಒಂದು ಕೆಲಸ ಮಾಡುವ ಮೊದಲು ಅದರ ಬಗ್ಗೆ ಸಾಕಷ್ಟು ಯೋಚಿಸಿ ನಂತರ ತೀರ್ಮಾನಿಸಿ. ಶುಭಕಾರ್ಯಗಳ ಸಂಭ್ರಮ . ಹಿರಿಯರ ಮನಸ್ಸಿಗೆ ನೆಮ್ಮದಿ.

ಮೀನ: ಸೋಮಾರಿತನ ನಿಮ್ಮ ಶ್ರೇಯಸ್ಸಿಗೆ ಅಡ್ಡಿ ಬರದಂತೆ ಗಮನಹರಿಸಿ-ಕೊಳ್ಳಿರಿ. ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ, ಮನೆಯಲ್ಲಿಯೂ ನೆಮ್ಮದಿಯ ವಾತಾವರಣ ಇರಲಿದೆ. ದುರ್ಗಾದೇವಿಯ ಸೇವೆಯಿಂದ ಶುಭಫಲ.

ಪದಬಂಧ 4908

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸರಾಗವಾದ ಹಂಚಿಕೆಯಿದು (5)
4.ಅಪಹಾಸ್ಯ ಮಾಡುವವನು (3)
5.ಹರುಷದಿಂದ ವೀಕ್ಷಿಸಿದ ಪಟ್ಟಣ (3)
6.ಒಳ್ಳೆ ಕಾರಣಕ್ಕಾಗಿ ತನ್ನ ಪ್ರಾಣ ಅರ್ಪಿಸಿದವನು (3)
8.ರಾಕ್ಷಸರ ಶಿಲ್ಪಿ (2)
9.ತಂಬಾಕು ಕೊಯ್ಯಲು ಬಳಸಿರುವ ಕಿರುಗತ್ತಿ (2)
11.ಮಂದಿ ಪ್ರವೇಶಿಸಿದ ಗುಡಿ (3)
14.ಕನ್ನಡಿಗ ಪತ್ತೆ ಹಚ್ಚಿರುವ ಅಡ್ರೆಸ್! (3)
15.ಭತ್ತ ಕುಟ್ಟುವ ಸಾಧನ (3)
16.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ

1.ಚೆನ್ನಾಗಿ ಜೋಡಿಸಿದ್ದು (4)
2.ಇದು ಊಟದ ಮನೆ (5)
3.ಕೀರ್ತಿ ಈ ರೀತಿ ಬಂದಿದೆ (3)
4.ಕುರುವಿರುವ ಜಾಗದಲ್ಲಿನ ಚಿಹ್ನೆ ಕಾಣುತ್ತಿದೆಯೇ? (3)
7.ತಾರೀಫು ಮಾಡಿದ ತೇದಿ! (3)
8.ಬಿಡದಿಯಲ್ಲಿ ಕಾಣಿಸಿದ ಪತ್ನಿ (3)
9.ಲಾಂಗೂಲ ಹಿಡಿದು ಬಂದ ಹಿಂಬಾಲಕ! (5)
10.ಈತ ಅತೀ ಬುದ್ಧಿವಂತ (4)
12.ಕುಪ್ಪಸವನ್ನು ಹೀಗೂ ಹೇಳುವರು (3)
13.ವ್ಯವಸಾಯಗಾರನ ದುಃಖ (3)



4907ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕನ್ನಡಕ 3.ಲವಾಜಮೆ 5.ನಸುಕು 6.ತಿಲೋದಕ 8.ನನಸು 10.ಮಮತೆ 12.ಪಾದರಸ 15.ಪವನ 16.ಮಹಾಪೂರ 17.ಕಸರತ್ತು

ಮೇಲಿಂದ ಕೆಳಕ್ಕೆ: 1.ಕಸೂತಿ 2.ಕನಕ 3.ಲಕುನ 4.ಮೆಳೆ 7.ಲೋಕಾಭಿರಾಮ 9.ಸುಮನೋಹರ 11.ತೆಪರ 12.ಪಾನಕ 13.ಸಮಿತ್ತು 14.ಸಮ

ಸುಡೊಕು 5294

1		3	5		6		4	7
				4			8	
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5293 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಬಿರ್‌ಭೂಮ್ ಪ್ರಕರಣ ● ಹಲ್ಲೆ ವಿಚಾರ ಶವಪರೀಕ್ಷೆಯಲ್ಲಿ ಪತ್ತೆ: ಆಸ್ಪತ್ರೆ ಅಧಿಕಾರಿಗಳಿಂದ ಮಾಹಿತಿ

‘ಸಜೀವ ದಹನಕ್ಕೂ ಮುನ್ನ ತೀವ್ರ ಥಳಿತ’

ಕೋಲ್ಕತ್ತ/ರಾಮ್‌ಪುರಹಾಟ್ (ಪಿಟಿಐ): ‘ರಾಮ್‌ಪುರಹಾಟ್‌ನ ಬೋಗ್‌ತುಇ ಗ್ರಾಮದಲ್ಲಿ ಎಂಟು ಜನರನ್ನು ಸಜೀವವಾಗಿ ದಹಿಸುವ ಮುನ್ನ, ಅವರ ಮೇಲೆ ತೀವ್ರ ಹಲ್ಲೆ ನಡೆಸಲಾಗಿತ್ತು ಎಂದು ಶವಪರೀಕ್ಷೆಯಲ್ಲಿ ಪತ್ತೆಯಾಗಿದೆ’ ಎಂದು ರಾಮ್‌ಪುರಹಾಟ್ ಆಸ್ಪತ್ರೆಯ ಅಧಿಕಾರಿಗಳು ಹೇಳಿದ್ದಾರೆ.

ಮಂಗಳವಾರ ರಾಮ್‌ಪುರಹಾಟ್‌ನ ಪಂಚಾಯಿತಿಯ ಟಿಎಂಸಿ ಸದಸ್ಯನ ಹತ್ಯೆಯ ನಂತರ ಬೋಗ್‌ತುಇ ಗ್ರಾಮದ ಹತ್ತಕ್ಕೂ ಹೆಚ್ಚು ಮನೆಗಳಿಗೆ ಬೆಂಕಿ ಹಚ್ಚಲಾಗಿತ್ತು. ಈ ಕೃತ್ಯದಲ್ಲಿ ಇಬ್ಬರು ಮಕ್ಕಳು, ಐವರು ಮಹಿಳೆಯರು ಸೇರಿ ಎಂಟು ಜನರನ್ನು ಸಜೀವವಾಗಿ ಸುಡಲಾಗಿತ್ತು. ಮೃತರ ಶವಪರೀಕ್ಷೆಗಳನ್ನು ಬುಧವಾರ ನಡೆಸಲಾಗಿತ್ತು. ಶವಪರೀಕ್ಷೆಯ ವರದಿಗಳು ‘ಇನ್ನೂ ಲಭ್ಯವಾಗಿಲ್ಲ’.

ಈ ಕೃತ್ಯಕ್ಕೆ ಸಂಬಂಧಿಸಿದಂತೆ ಕಲ್ಕತ್ತ ಹೈಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದೆ. ಕೃತ್ಯ ನಡೆದ ಸ್ಥಳದಲ್ಲಿನ ಮಾದರಿಗಳನ್ನು ತಕ್ಷಣವೇ ಸಂಗ್ರಹಿಸಿ ಎಂದು ದೆಹಲಿಯ ಕೇಂದ್ರೀಯ ವಿಧಿ-ವಿಜ್ಞಾನ ಪ್ರಯೋಗಾಲಯಕ್ಕೆ ಬುಧವಾರ ಸೂಚನೆ ನೀಡಿತ್ತು. ಜತೆಗೆ ಘಟನೆಗೆ ಸಂಬಂಧಿಸಿದಂತೆ ಗುರುವಾರ ಮಧ್ಯಾಹ್ನ 2ರ ಒಳಗೆ ವರದಿ ಸಲ್ಲಿಸಿ ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಆದೇಶಿಸಿತ್ತು.

ಕೃತ್ಯ ನಡೆದ ಸ್ಥಳದಲ್ಲಿ ತಕ್ಷಣವೇ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿ ಮತ್ತು ಸಾಕ್ಷಿಗಳಿಗೆ ಭದ್ರತೆ ಒದಗಿಸಿ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಹೈಕೋರ್ಟ್ ಸೂಚನೆ ನೀಡಿತ್ತು. ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೃತ್ಯ ನಡೆದ ಗ್ರಾಮಕ್ಕೆ ಗುರುವಾರ ಭೇಟಿ ನೀಡಿದ್ದರು. ಈ ವೇಳೆ ಹೆಲಿಪ್ಯಾಡ್ ನಿರ್ಮಿಸಲಾಗಿದ್ದ ಪ್ರದೇಶದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲು ಒದಗಿಸಲಾಗಿತ್ತು.

‘ಪ್ರಕರಣದ ತನಿಖೆಗೆ ರಚಿಸಿರುವ ಎಸ್‌ಐಟಿಯ ಅಧಿಕಾರಿಗಳು ಗುರುವಾರ ಇಲ್ಲಿಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದಾರೆ. ಜತೆಗೆ ಹಿರಿಯ ಪೊಲೀಸ್ ಅಧಿಕಾರಿಗಳು ಬೋಗ್‌ತುಇ ಗ್ರಾಮಕ್ಕೆ ಭೇಟಿ ನೀಡಿ, ಜನರಲ್ಲಿದ್ದ ಆತಂಕವನ್ನು ಹೋಗಲಾಡಿಸಲು ಯತ್ನಿಸಿದ್ದಾರೆ. ಕೃತ್ಯದ ನಂತರ ಗ್ರಾಮವನ್ನು ತೊರೆದಿದ್ದ ಹಲವು ಕುಟುಂಬಗಳು, ಗುರುವಾರ ಪೊಲೀಸರ ಭೇಟಿಯ ನಂತರ ಬೋಗ್‌ತುಇಗೆ ವಾಪಸ್ಸಾಗಿವೆ’ ಎಂದು ಮೂಲಗಳು ಹೇಳಿವೆ.

ರಾಜ್ಯ ಸರ್ಕಾರಕ್ಕೆ ನೋಟಿಸ್: ಈ ಕೃತ್ಯಕ್ಕೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಉತ್ತರ ನೀಡಿ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಪಶ್ಚಿಮ ಬಂಗಾಳ ಸರ್ಕಾರ ಮತ್ತು ರಾಜ್ಯ ಪೊಲೀಸ್ ಇಲಾಖೆಗೆ ಗುರುವಾರ ನೋಟಿಸ್ ನೀಡಿದೆ.

‘₹ 5 ಲಕ್ಷ ಪರಿಹಾರ, ಸರ್ಕಾರಿ ಉದ್ಯೋಗ’

‘ಈ ಕೃತ್ಯದಲ್ಲಿ ಮೃತಪಟ್ಟವರ ಕುಟುಂಬದವರಿಗೆ ₹5 ಲಕ್ಷ ಪರಿಹಾರ ನೀಡುತ್ತೇವೆ. ಮನೆಗಳನ್ನು ಮರುನಿರ್ಮಿಸಲು ₹2 ಲಕ್ಷ ನೆರವು ನೀಡುತ್ತೇವೆ. ಜತೆಗೆ 10 ಮೃತರ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡುತ್ತೇವೆ’ ಎಂದು ಮಮತಾ ಬ್ಯಾನರ್ಜಿ ಘೋಷಿಸಿದ್ದಾರೆ.

ಗುರುವಾರ ಬಿಗಿಭದ್ರತೆಯೊಂದಿಗೆ ಬೋಗ್‌ತುಇ ಗ್ರಾಮಕ್ಕೆ ಭೇಟಿ ನೀಡಿದ ಅವರು, ಮೃತರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದಾರೆ. ‘ಈ ಕೃತ್ಯಕ್ಕೆ ಕಾರಣರಾದವರಿಗೆ ಕಠಿಣ ಶಿಕ್ಷೆ ಕೊಡಿಸುವಲ್ಲಿ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ. ಕೃತ್ಯದಲ್ಲಿ ಗಾಯಗೊಂಡವರಿಗೆ ತಲಾ ₹50,000 ಪರಿಹಾರ ನೀಡುತ್ತೇವೆ’ ಎಂದು ಅವರು ಘೋಷಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡು ರಾಮ್‌ಪುರಹಾಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಮಮತಾ ಭೇಟಿ ಮಾಡಿದ್ದಾರೆ. ಸಾಂತ್ವನ ಹೇಳಿದ್ದಾರೆ.

ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ನೇತೃತ್ವದ ನಿಯೋಗವು ಗುರುವಾರ ಬೋಗ್‌ತುಇ ಗ್ರಾಮಕ್ಕೆ ಭೇಟಿ

ಬೋಗ್‌ತುಇ ಗ್ರಾಮದಲ್ಲಿ ಮೃತರ ಕುಟುಂಬಗಳ ಸದಸ್ಯರೊಂದಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗುರುವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ನೀಡಲು ಯೋಜನೆ ಹಾಕಿಕೊಂಡಿತ್ತು. ನಿಯೋಗವು ಬೋಗ್‌ತುಇ ಗ್ರಾಮದಿಂದ ಇನ್ನೂ 50 ಕಿ.ಮೀ. ದೂರದಲ್ಲಿ ಇರುವಾಗಲೇ, ಅವರನ್ನು ಪೊಲೀಸರು ತಡೆದಿದ್ದಾರೆ. ಕಾಂಗ್ರೆಸ್ ಇದನ್ನು ಖಂಡಿಸಿದೆ. ಆದರೆ ಪೊಲೀಸರು ಈ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

‘ಗುರುವಾರ ಮುಖ್ಯಮಂತ್ರಿ ಭೇಟಿ ಕಾರ್ಯಕ್ರಮವಿತ್ತು. ಹೀಗಾಗಿ ಬೋಗ್‌ತುಇ ಗ್ರಾಮದಲ್ಲಿ ಭಾರಿ ಭದ್ರತೆ ಒದಗಿಸಲಾಗಿತ್ತು. ಅದೇ ಸಮಯದಲ್ಲಿ ಅಧಿರ್ ರಂಜನ್ ಚೌಧರಿ ಅವರು ಸಹ ಭೇಟಿಗೆ ಮುಂದಾಗಿದ್ದರು. ಇದರಿಂದ ಭದ್ರತೆಗೆ ಸಮಸ್ಯೆಯಾಗುತ್ತದೆ ಎಂಬ ಒಂದೇ ಕಾರಣದಿಂದ ಅವರ ಭೇಟಿಗೆ ಅವಕಾಶ ನೀಡಲಿಲ್ಲ’ ಎಂದು ಪೊಲೀಸರು ಹೇಳಿದ್ದಾರೆ.

ಮಮತಾ ಬ್ಯಾನರ್ಜಿ ಅವರ ಭೇಟಿ ನೀಡಿ ವಾಪಸಾದ ನಂತರ, ಬಿಜೆಪಿ ನಾಯಕರ ನಿಯೋಗವು ಬೋಗ್‌ತುಇ ಗ್ರಾಮಕ್ಕೆ ಭೇಟಿ ನೀಡಿತ್ತು. ಬಿಜೆಪಿ ನಾಯಕರು, ಮೃತರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದಾರೆ. ನಂತರ ಅಧಿರ್ ನೇತೃತ್ವದ ನಿಯೋಗದ ಭೇಟಿಗೆ ಅವಕಾಶ ನೀಡಲಾಗಿದೆ.

> **ರಾಜ್ಯಪಾಲ ಜಗದೀಪ್ ಧನಕರ್ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಾರೆ. ಅವರ ಅಧೀನದಲ್ಲಿ, ಸಂಸದೀಯ ವ್ಯವಸ್ಥೆಗೆ ಧಕ್ಕೆಯಾಗಿದೆ**
> **ಸುದೀಪ್ ಬಂದೋಪಾಧ್ಯಾಯ,** ಟಿಎಂಸಿ ಸಂಸದ

> **ಹಿಟ್ಲರ್‌ನ ನಾಜಿ ಶಿಬಿರಗಳಲ್ಲಿ ಜನರನ್ನು ಕೊಂದ ರೀತಿಯಲ್ಲಿ, ಬೋಗ್‌ತುಇಯಲ್ಲಿ ಜನರನ್ನು ಕೊಲ್ಲಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಇರುವುದು ನಿರ್ಮಮತೆ**
> **ಸಂಬಿತ್ ಪಾತ್ರಾ,** ಬಿಜೆಪಿ ವಕ್ತಾರ

> **ತನಿಖೆಯಲ್ಲಿ ರಾಜ್ಯ ಸರ್ಕಾರಕ್ಕೆ ಅಗತ್ಯ ನೆರವು ನೀಡುತ್ತೇವೆ ಎಂದು ಪ್ರಧಾನಿ ಹೇಳಿದ್ದು ಸ್ವಾಗತಾರ್ಹ. ಆದರೆ ಬೇರೆ ರಾಜ್ಯಗಳಲ್ಲಿ ಇಂತಹ ಘಟನೆ ನಡೆದಾಗ ಅವರು ಮೌನವಾಗಿದ್ದದ್ದೇ ಅಚ್ಚರಿ**
> **ಕುನಾಲ್ ಘೋಷ್,** ಟಿಎಂಸಿ ವಕ್ತಾರ

ಟಿಎಂಸಿ ಬ್ಲಾಕ್ ಅಧ್ಯಕ್ಷ ಬಂಧನ

ಈ ಕೃತ್ಯಕ್ಕೆ ಸಂಬಂಧಿಸಿದಂತೆ ರಾಮ್‌ಪುರಹಾಟ್ ಬ್ಲಾಕ್ ಟಿಎಂಸಿ ಘಟಕದ ಅಧ್ಯಕ್ಷ ಅನಾರುಲ್ ಹುಸೈನ್ ಅವರನ್ನು ಪೊಲೀಸರು ಗುರುವಾರ ಸಂಜೆ ಬಂಧಿಸಿದ್ದಾರೆ. ಮಮತಾ ಬ್ಯಾನರ್ಜಿ ಅವರು ಬೋಗ್‌ತುಇ ಗ್ರಾಮಕ್ಕೆ ಭೇಟಿ ನೀಡಿದ ನಂತರ ಪೊಲೀಸರು ಈ ಕ್ರಮ ತೆಗೆದುಕೊಂಡಿದ್ದಾರೆ.

ಮಮತಾ ಅವರು ಇಲ್ಲಿಗೆ ಭೇಟಿ ನೀಡಿದ್ದಾಗ ಸಂತ್ರಸ್ತ ಕುಟುಂಬದ ಸದಸ್ಯರು, ಈ ಕೃತ್ಯಕ್ಕೆ ಅನಾರುಲ್ ಹುಸೈನ್ ಕಾರಣ ಎಂದು ದೂರಿದ್ದರು. ‘ಅನಾರುಲ್ ಇಲ್ಲಿ ದಂಧೆಗಳನ್ನು ನಡೆಸುತ್ತಿದ್ದ. ಪೊಲೀಸರು ಸಹ ಅವನೊಂದಿಗೆ ಇದ್ದರು. ಇಲ್ಲಿ ವೈಮನಸ್ಸು ಉಂಟಾಗಿ ಇತರರನ್ನು ಆತ ಕೊಲ್ಲಿಸಿದ್ದಾನೆ’ ಎಂದು ಸಂತ್ರಸ್ತ ಕುಟುಂಬಗಳ ಸದಸ್ಯರು, ಮಮತಾ ಬ್ಯಾನರ್ಜಿ ಅವರ ಬಳಿ ದೂರಿದ್ದರು. ಸಂಬಂಧಪಟ್ಟವರನ್ನು ಬಂಧಿಸಿ ಮತ್ತು ಅನಾರುಲ್ ಜತೆಗೆ ಕೈಜೋಡಿಸಿದ್ದಾರೆ ಎನ್ನಲಾದ ಪೊಲೀಸರ ವಿರುದ್ಧವೂ ಕ್ರಮ ತೆಗೆದುಕೊಳ್ಳಿ ಎಂದು ಮಮತಾ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ನಂತರದ ಕೆಲವೇ ಗಂಟೆಗಳಲ್ಲಿ ಅನಾರುಲ್‌ನನ್ನು ಬಂಧಿಸಲಾಗಿದೆ. ಅವರನ್ನು ಶೀಘ್ರವೇ ವಿಚಾರಣೆಗೆ ಒಳಪಡಿಸಲಾಗುತ್ತದೆ ಎಂದು ಪೊಲೀಸರು ಹೇಳಿದ್ದಾರೆ. ಜತೆಗೆ ರಾಮ್‌ಪುರಹಾಟ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಮತ್ತು ರಾಮ್‌ಪುರಹಾಟ್ ಉಪ-ವಿಭಾಗೀಯ ಪೊಲೀಸ್ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ನಿಲ್ಲದ ರಾಜಕೀಯ ಜಟಾಪಟಿ

ಬೋಗ್‌ತುಇ ಗ್ರಾಮದಲ್ಲಿ ಎಂಟು ಜನರ ಸಜೀವ ದಹನದ ನಂತರ ಆಡಳಿತಾರೂಢ ಟಿಎಂಸಿ ಮತ್ತು ವಿರೋಧ ಪಕ್ಷಗಳ ನಡುವೆ ಆರಂಭವಾಗಿದ್ದ ಜಟಾಪಟಿಯು ಗುರುವಾರವೂ ಮುಂದುವರಿದಿದೆ. ಮಮತಾ ಬ್ಯಾನರ್ಜಿ ಅವರು ರಾಜೀನಾಮೆ ನೀಡಬೇಕು ಮತ್ತು ಸರ್ಕಾರವನ್ನು ವಜಾ ಮಾಡಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಸರ್ಕಾರದ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವ ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳಿ ಎಂದು ಟಿಎಂಸಿ ಒತ್ತಾಯಿಸಿದೆ.

‘ಪಶ್ಚಿಮ ಬಂಗಾಳದಲ್ಲಿ ಮಾನವೀಯತೆ ಸತ್ತುಹೋಗಿದೆ. ಅಲ್ಲಿಗೆ ಭೇಟಿ ನೀಡಿದ್ದ ಮಮತಾ ಬ್ಯಾನರ್ಜಿ ಅವರು, ಮಮತೆಯನ್ನು ತೋರಲಿಲ್ಲ. ಬದಲಿಗೆ ಕ್ರೌರ್ಯವನ್ನು ತೋರಿದ್ದಾರೆ. ಅವರ ಸರ್ಕಾರವನ್ನು ವಜಾ ಮಾಡಬೇಕು. ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು’ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಆಗ್ರಹಿಸಿದ್ದಾರೆ.

ಟಿಎಂಸಿ ಸಂಸದರ ನಿಯೋಗವು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಗುರುವಾರ ಭೇಟಿ ಮಾಡಿದೆ. ‘ರಾಜ್ಯಪಾಲ ಜಗದೀಪ್ ಧನಕರ್ ಅವರು ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಅವರನ್ನು ವಜಾ ಮಾಡಿ’ ಎಂದು ಒತ್ತಾಯಿಸಿದ್ದಾರೆ.

ಹತ್ಯೆಯ ಸಂಬಂಧ ಲೋಕಸಭೆಯಲ್ಲೂ ಬಿಜೆಪಿ ಮತ್ತು ಟಿಎಂಸಿ ಸಂಸದರು ಜಟಾಪಟಿ ನಡೆಸಿದ್ದಾರೆ.

ಸುದ್ದಿ 2 ನಿಮಿಷ

ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಮರಾಠಿ ಕಡ್ಡಾಯ ಮಸೂದೆಗೆ ಅಸ್ತು

ಮುಂಬೈ (ಪಿಟಿಐ): ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಮರಾಠಿ ಬಳಕೆಯನ್ನು ಕಡ್ಡಾಯಗೊಳಿಸುವ ಮಸೂದೆಯನ್ನು ಮಹಾರಾಷ್ಟ್ರದ ವಿಧಾನಸಭೆ ಹಾಗೂ ಪರಿಷತ್‌ನಲ್ಲಿ ಅವಿರೋಧವಾಗಿ ಗುರುವಾರ ಅಂಗೀಕರಿಸಲಾಯಿತು.

ವಿಧಾನ ಪರಿಷತ್‌ನಲ್ಲಿ ಈ ವಿಷಯ ಕುರಿತು ಮಾತನಾಡಿದ ಸಚಿವ ಸುಭಾಷ್ ದೇಸಾಯಿ, ‘ಮಹಾರಾಷ್ಟ್ರ ಆಡಳಿತ ಭಾಷೆ ಕಾಯ್ದೆ-1964’ರ ಪ್ರಕಾರ ಸ್ಥಳೀಯ ಸಂಸ್ಥೆಗಳ



ಆಡಳಿತದಲ್ಲಿ ಮರಾಠಿ ಭಾಷೆ ಬಳಕೆ ಕಡ್ಡಾಯ ಇರಲಿಲ್ಲ. ಈ ಲೋಪವನ್ನು ಸರಿಪಡಿಸುವ ಪ್ರಯತ್ನದ ಭಾಗವಾಗಿ ಮಸೂದೆಯನ್ನು ಅಂಗೀಕರಿಸಲಾಗಿದೆ’ ಎಂದರು.

‘ವಿದೇಶಗಳ ರಾಯಭಾರಿಗಳ ಜೊತೆ ಸಂವಹನ ಹಾಗೂ ಸರ್ಕಾರದ ನಿರ್ದಿಷ್ಟ ಕಾರ್ಯಗಳಿಗಾಗಿ ಇಂಗ್ಲಿಷ್ ಅಥವಾ ಹಿಂದಿ ಬಳಸಲು ಅನುಮತಿ ನೀಡಲಾಗಿದೆ’ ಎಂದರು.

ಬಿಜೆಪಿ ಶಾಸಕ ಯೋಗೇಶ್ ಸಾಗರ್ ಮಾತನಾಡಿ, ‘ಚುನಾವಣೆಗಳು ಹತ್ತಿರ ಬಂದಾಗ ಮರಾಠಿ ಬಗ್ಗೆ ಏಕೆ ಇಂಥ ಪ್ರೀತಿ ಕಂಡುಬರುತ್ತದೆ’ ಎಂದು ಪ್ರಶ್ನಿಸಿದರು. ಈ ಮಸೂದೆಯನ್ನು ಬೆಂಬಲಿಸುವುದಾಗಿ ಹೇಳಿದ ಅವರು, ಎಲ್ಲ ಕಡತಗಳು ಮರಾಠಿಯಲ್ಲಿಯೇ ಇರಬೇಕು ಎಂದು ಅವರು ಹೇಳಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿಗಳು, ಪ್ರಧಾನ ಕಾರ್ಯದರ್ಶಿಗಳ ಸಭೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲ ರಾಜ್ಯಗಳ ಉಸ್ತುವಾರಿಗಳ ಸಭೆ ಕರೆದಿದ್ದಾರೆ. ಶನಿವಾರ ನಡೆಯಲಿರುವ ಸಭೆಯಲ್ಲಿ ಆಂತರಿಕ ಚುನಾವಣೆ, ಪಕ್ಷ ಸಂಘಟನೆ, ಸದಸ್ಯತ್ವ ನೋಂದಣಿ ಅಭಿಯಾನ, ಪ್ರಸಕ್ತ ರಾಜಕೀಯ ವಿದ್ಯಮಾನ ಹಾಗೂ ಸರ್ಕಾರದ ವಿರುದ್ಧ ನಡೆಸುವ ಪ್ರತಿಭಟನಾ ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಯಲಿದೆ.

ಪಕ್ಷದ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಎಲ್ಲ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯಗಳ ಉಸ್ತುವಾರಿಗಳು ಭಾಗಿಯಾಗಲಿದ್ದಾರೆ. ಸೋನಿಯಾ ಅವರೂ ಸಭೆಯಲ್ಲಿ ಭಾಗಿಯಾಗುವ ಸಾಧ್ಯತೆಯಿದ್ದು, ಸದಸ್ಯತ್ವ ಅಭಿಯಾನದ ಈವರೆಗಿನ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ.

ಪಕ್ಷದ ನಾಯಕತ್ವ ಬದಲಾವಣೆಗೆ ಆಗ್ರಹಿಸಿರುವ 23 ಸದಸ್ಯರ ಗುಂಪಿನ ಕೆಲವು ಮುಖಂಡರ ಜೊತೆ ಸೋನಿಯಾ ಅವರು ಚರ್ಚೆ ನಡೆಸಿದ ಬೆನ್ನಲ್ಲೇ ಈ ಸಭೆ ನಡೆಯುತ್ತಿದೆ. ದೆಹಲಿಯ ಕೇಂದ್ರ ಕಚೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ಸಭೆ ನಿಗದಿಯಾಗಿದೆ.

5 ರಾಜ್ಯಗಳ ಚುನಾವಣೆಯಲ್ಲಿ ಗೆದ್ದ ಮಹಿಳೆಯರು 76 ಮಾತ್ರ

ನವದೆಹಲಿ (ಪಿಟಿಐ): ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ 760 ಮಹಿಳೆಯರ ಪೈಕಿ 76 ಮಹಿಳೆಯರು ಮಾತ್ರ ಚುನಾಯಿತರಾಗಿದ್ದಾರೆ ಎಂದು ರಾಜ್ಯಸಭೆಗೆ ಸರ್ಕಾರ ಮಾಹಿತಿ ನೀಡಿತು.

ರಾಜ್ಯಸಭೆಗೆ ಗುರುವಾರ ಲಿಖಿತ ಉತ್ತರ ನೀಡಿದ ಕಾನೂನು ಸಚಿವ ಕಿರಣ್ ರಿಜಿಜು, ಐದೂ ರಾಜ್ಯಗಳಲ್ಲಿ ಸ್ಪರ್ಧಿಸಿದ್ದ ಹಾಗೂ ಗೆದ್ದ ಮಹಿಳೆಯರ ಸಂಖ್ಯೆಯ ಮಾಹಿತಿ ಒದಗಿಸಿದ್ದಾರೆ. ಮಾಹಿತಿ ಪ್ರಕಾರ, ಒಟ್ಟು 6,944 ಅಭ್ಯರ್ಥಿಗಳ ಪೈಕಿ 760 ಮಹಿಳೆಯರು ಅದೃಷ್ಟ ಪರೀಕ್ಷೆಗೆ ಇಳಿದಿದ್ದರು. ಇದರಲ್ಲಿ ಯಶಸ್ವಿಯಾದವರು 76 ಮಹಿಳೆಯರು ಮಾತ್ರ ಎಂದು ಅವರು ತಿಳಿಸಿದ್ದಾರೆ.

ಉತ್ತರ ಪ್ರದೇಶದ ಮತದಾರರು 47 ಮಹಿಳೆಯರನ್ನು ಶಾಸನಸಭೆಗೆ ಕಳುಹಿಸಿದ್ದಾರೆ. ರಾಜ್ಯದಲ್ಲಿ 561 ಮಹಿಳೆಯರು ಸ್ಪರ್ಧಿಸಿದ್ದರು. ಗೋವಾದಲ್ಲಿ ಸ್ಪರ್ಧಿಸಿದ್ದ ಒಟ್ಟು 301 ಅಭ್ಯರ್ಥಿಗಳ ಪೈಕಿ 26 ಮಹಿಳೆಯರಿದ್ದರು. ಇವರಲ್ಲಿ ಮೂವರು ಮಾತ್ರ ಗೆದ್ದಿದ್ದಾರೆ. ಮಣಿಪುರ ವಿಧಾನಸಭೆಗೆ 265 ಜನ ಸ್ಪರ್ಧೆ ಮಾಡಿದ್ದರು. ಗೆದ್ದವರು ಐವರು ಮಾತ್ರ.

ಈ ಬಾರಿಯ ಚುನಾವಣೆಯಲ್ಲಿ ಮಹಿಳಾ ಮತದಾರರ ಭಾಗವಹಿಸುವಿಕೆ ಗಮನಾರ್ಹವಾಗಿ ಹೆಚ್ಚಳವಾಗಿತ್ತು. ಗೋವಾ, ಉತ್ತರಾಖಂಡ ಹಾಗೂ ಉತ್ತರ ಪ್ರದೇಶದ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಪುರುಷ ಮತದಾರರಿಗಿಂತ ಹೆಚ್ಚಿನ ಸಂಖ್ಯೆಯ ಮಹಿಳಾ ಮತದಾರರು ಮತ ಚಲಾವಣೆ ಮಾಡಿದ್ದರು.

ರಾಜ್ಯಸಭೆ: ಎಎಪಿ ಅಭ್ಯರ್ಥಿಗಳು ಅವಿರೋಧ ಆಯ್ಕೆ

ಚಂಡೀಗಢ (ಪಿಟಿಐ): ಪಂಜಾಬ್‌ನಿಂದ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದ ಆಮ್ ಆದ್ಮಿ ಪಕ್ಷದ (ಎಎಪಿ) ಐವರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್, ಪಕ್ಷದ ಮುಖಂಡ ರಾಘವ್ ಛಡ್ಡಾ, ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯದ ಸಂಸ್ಥಾಪಕ ಅಶೋಕ್ ಮಿತ್ತಲ್, ದೆಹಲಿ ಐಐಟಿ ಸಹ ಪ್ರಾಧ್ಯಾಪಕ ಸಂದೀಪ್ ಪಾಠಕ್ ಹಾಗೂ ಉದ್ಯಮಿ ಸಂಜೀವ್ ಅರೋರಾ ಅವರು ಮಾರ್ಚ್ 31ರ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದರು.

ನಾಮಪತ್ರ ವಾಪಸ್ ಪಡೆಯಲು ಗುರುವಾರ ಕೊನೆಯ ದಿನವಾಗಿತ್ತು. ಬೇರೆ ಪಕ್ಷದ ಯಾವ ಅಭ್ಯರ್ಥಿಯೂ ನಾಮಪತ್ರ ಸಲ್ಲಿಸಿರಲಿಲ್ಲ. ಹೀಗಾಗಿ ಎಎಪಿಯ ಎಲ್ಲ ಐದು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಸುರಿಂದರ್ ಪಾಲ್ ಹೇಳಿದ್ದಾರೆ.

ಶಿರೋಮಣಿ ಅಕಾಲಿದಳದ ಸುಖದೇವ್ ಧಿಂಡ್ಸಾ ಹಾಗೂ ನರೇಶ್ ಗುಜ್ರಾಲ್, ಕಾಂಗ್ರೆಸ್‌ನ ಪ್ರತಾಪ್ ಸಿಂಗ್ ಬಾಜ್ವಾ ಹಾಗೂ ಶಂಶೇರ್ ಸಿಂಹ ದೂಲೊ, ಬಿಜೆಪಿಯ ಶ್ವೇತ್ ಮಲಿಕ್ ಅವರ ರಾಜ್ಯಸಭಾ ಸದಸ್ಯತ್ವದ ಅವಧಿಯು ಏಪ್ರಿಲ್ 9ರಂದು ಕೊನೆಗೊಳ್ಳಲಿದೆ.

ಬಸ್ ಪಲ್ಟಿ– 8 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಬಾಬಾಬುಡನ್ ಗಿರಿಯಲ್ಲಿ ಗುರುವಾರ ಸಂಜೆ ಎಸ್‌ಎಂಎಸ್ ಬಸ್ ಉರುಳಿಬಿದ್ದು ಎಂಟು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಝುರಿನಾ ಬಾನು (54), ಜಹಿರಾ ಬಾನು (50), ಹುಬ್ಬಳ್ಳಿಯ ಶಯಿನಾ(23) , ಬೇಗಂ ಬಿ (74), ಮೀರಜ್‌ನ ಹನೀಫ್ (15) , ಚಿಕ್ಕಮಗಳೂರು ತಾಲ್ಲೂಕಿನ ಅತ್ತಿಗುಂಡಿಯ ಶಾಖಿಬ್ (24), ವಿಜಯಪುರದ ರಶೀದಾ ಬಾನು (55) ಹಾಗೂ ದಾವಣಗೆರೆ ಜಿಲ್ಲೆ ಹರಪ್ಪನಹಳ್ಳಿಯ ಸಾಧಿಕಾ (4) ಗಾಯಗೊಂಡವರು. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

‘ಗಿರಿಯಲ್ಲಿ ಬಸ್ ನಿಂತಿತ್ತು. ಚಾಲಕ ಇಳಿದು ಹೋಗಿದ್ದರು. ಏಳು ಜನ ಬಸ್‌ನೊಳಗಿದ್ದೆವು. ವ್ಯಕ್ತಿಯೊಬ್ಬ ಚಾಲಕನ ಸೀಟಿನಲ್ಲಿ ಕುಳಿತು ಬಸ್ ಸ್ಟಾರ್ಟ್ ಮಾಡಿದರು. ಆಗ ಬಸ್ ಚಲಿಸಿತು, ರಸ್ತೆ ಬದಿಯ ಕಂದಕಕ್ಕೆ ಬಿದ್ದಿತು’ ಎಂದು ಗಾಯಾಳು ಶಯಿನಾ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪಾಕಿಸ್ತಾನ ಪರ ಸಂದೇಶ: ಯುವತಿ ಬಂಧನ

ಬಾಗಲಕೋಟೆ: ಸಾಮಾಜಿಕ ಜಾಲತಾಣದಲ್ಲಿ ಪಾಕಿಸ್ತಾನ ಪರ ಸಂದೇಶ ಹಾಕಿದ ಯುವತಿಯನ್ನು ಮುಧೋಳ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮುಧೋಳ ನಗರದ ನಿವಾಸಿ ಕತುಮಾ ಬಂಧಿತ ಯುವತಿ. ಪಾಕಿಸ್ತಾನ ಸ್ಥಾಪನೆ ಪರ ನಿರ್ಣಯ ಅಂಗೀಕರಿಸಿದ ಸ್ಮರಣೆ ದಿನ ಆಚರಣೆಗೆ (ಮಾರ್ಚ್ 23) ಶುಭಾಶಯ ಕೋರಿ ಕತುಮಾ ತಮ್ಮ ಫೇಸ್‌ಬುಕ್‌ನಲ್ಲಿ ಸಂದೇಶ ಹಾಕಿದ್ದರು.

ಸ್ಥಳೀಯರು ನೀಡಿದ ದೂರು ಆಧರಿಸಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ; ಇಂದು ಪ್ರಮಾಣವಚನ ಸ್ವೀಕಾರ

ಎರಡನೇ ಅವಧಿಗೆ ಯೋಗಿ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲುವಿನತ್ತ ಮುನ್ನಡೆಸಿದ ಯೋಗಿ ಆದಿತ್ಯನಾಥ ಅವರು ಶಾಸಕಾಂಗ ಪಕ್ಷದ ಸಭೆಯ ನಾಯಕರಾಗಿ ಗುರುವಾರ ಅವಿರೋಧವಾಗಿ ಆಯ್ಕೆಯಾದರು. ಉತ್ತರ ಪ್ರದೇಶದಲ್ಲಿ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಅವರು ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಕೇಂದ್ರದ ವೀಕ್ಷಕರಾಗಿ ನೇಮಕರಾಗಿದ್ದ ಗೃಹಸಚಿವ ಅಮಿತ್ ಶಾ ಅವರು ಯೋಗಿ ಅವರ ಆಯ್ಕೆಯನ್ನು ಪ್ರಕಟಿಸಿದರು. ಸಹವೀಕ್ಷಕರಾಗಿದ್ದ ಹಿರಿಯ ಮುಖಂಡ ರಘುಬರ ದಾಸ್ ಅವರು ಉಪಸ್ಥಿತರಿದ್ದರು.

ಶುಕ್ರವಾರ ನಡೆಯಲಿರುವ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಯೋಗಿ ಅವರ ಜೊತೆಗೆ ಬಿಜೆಪಿ ಹಾಗೂ ಮಿತ್ರಪಕ್ಷಗಳ ಎಷ್ಟು ಶಾಸಕರು ಸಚಿವ ಸಂಪುಟ ಸೇರಲಿದ್ದಾರೆ ಎಂಬುದು ಇನ್ನೂ ಸ್ಪಷ್ಟಗೊಂಡಿಲ್ಲ. ಈ ಬಗ್ಗೆ ಕೇಂದ್ರೀಯ ನಾಯಕರ ಜೊತೆ ಮಾತುಕತೆ ನಡೆಯುತ್ತಿದೆ.

ಗೋರಖಪುರ ನಗರ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿರುವ ಯೋಗಿ ಅವರ ಹೆಸರನ್ನು ಪಕ್ಷದ ಹಿರಿಯ ನಾಯಕ ಸುರೇಶ್ ಕುಮಾರ್ ಖನ್ನಾ ಅವರು ಪ್ರಸ್ತಾಪಿಸಿದರು. ಈ ಪ್ರಸ್ತಾವವನ್ನು ಬಿಜೆಪಿ, ಅಪ್ನಾದಳ ಹಾಗೂ ನಿಷಾದ್ ಪಕ್ಷದ ಶಾಸಕರು ಅನುಮೋದಿಸಿದರು.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಬಳಿಕ ಯೋಗಿ ಅವರು ರಾಜಭವನಕ್ಕೆ ತೆರಳಿದರು. 273 ಶಾಸಕರ ಪಟ್ಟಿಯನ್ನು ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರಿಗೆ ಹಸ್ತಾಂತರಿಸಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಯೋಗಿ, ಚುನಾವಣೆಯಲ್ಲಿ ಪಕ್ಷದ ಗೆಲುವಿನ ಶ್ರೇಯವನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಿದರು. ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವ ವಾಗ್ದಾನ ಮಾಡಿದರು.

37 ವರ್ಷಗಳ ಬಳಿಕ, ಎರಡನೇ ಅವಧಿಗೆ ಆಯ್ಕೆಯಾಗುತ್ತಿರುವ ಮೊದಲ ಮುಖ್ಯಮಂತ್ರಿ ಇವರು.


ಮುಖ್ಯಮಂತ್ರಿಯಾಗಿ ಯೋಗಿ ಆದಿತ್ಯನಾಥ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಜ್ಜಾಗಿರುವ ಲಖನೌದ ಇಕಾನಾ ಮೈದಾನ–ಪಿಟಿಐ ಚಿತ್ರ

ಕಾರ್ಯಕ್ರಮಕ್ಕೆ ಬೊಮ್ಮಾಯಿ

ಬೆಂಗಳೂರು: ಮುಖ್ಯಮಂತ್ರಿಯಾಗಿ ಯೋಗಿ ಆದಿತ್ಯನಾಥ ಅವರು ಪ್ರಮಾಣ ಸ್ವೀಕರಿಸುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ. ಬೊಮ್ಮಾಯಿ ಶುಕ್ರವಾರ ಬೆಳಿಗ್ಗೆ ಲಖನೌಗೆ ತೆರಳಲಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಅಂಬಾನಿ, ‘ದಿ ಕಾಶ್ಮೀರ್ ಫೈಲ್ಸ್’ ನಿರ್ದೇಶಕರಿಗೆ ಆಹ್ವಾನ

ಆದಿತ್ಯನಾಥ ಅವರು ಲಖನೌದ ಇಕಾನಾ ಮೈದಾನದಲ್ಲಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರ ನಾಯಕರು ಭಾಗಿಯಾಗಲಿದ್ದಾರೆ. ಬಿಜೆಪಿ ಆಡಳಿತ ಇರುವ ರಾಜ್ಯಗಳ ಮುಖ್ಯಮಂತ್ರಿಗಳನ್ನು ಆಹ್ವಾನಿಸಲಾಗಿದೆ.

ರಿಲಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಹಾಗೂ ಇತರ 60 ಮಂದಿ ಉದ್ಯಮಿಗಳಿಗೆ ಆಹ್ವಾನ ನೀಡಲಾಗಿದೆ. ಯೋಗಗುರು ಬಾಬಾ ರಾಮದೇವ್, ‘ದಿ ಕಾಶ್ಮೀರ್ ಫೈಲ್ಸ್’ ಚಿತ್ರದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ, ನಟ ಅನುಪಮ್ ಖೇರ್ ಭಾಗಿಯಾಗಲಿದ್ದಾರೆ. ಯೋಗಿ ಅವರು ಅಯೋಧ್ಯೆ, ಮಥುರಾ, ವಾರಾಣಸಿಯ 50ಕ್ಕೂ ಹೆಚ್ಚು ಸ್ವಾಮೀಜಿಗಳನ್ನು ವೈಯಕ್ತಿಕವಾಗಿ ಆಹ್ವಾನಿಸಿದ್ದಾರೆ. ಅಖಿಲೇಶ್ ಯಾದವ್, ಜಯಂತ್ ಚೌಧರಿ ಅವರು ಕಾರ್ಯಕ್ರಮಕ್ಕೆ ಹೋಗುವುದಿಲ್ಲ ಎಂದು ತಿಳಿಸಿದ್ದಾರೆ.

ಮೈದಾನವನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದ್ದು, ಮೋದಿ, ಶಾ, ಆದಿತ್ಯನಾಥ ಅವರ ಕಟೌಟ್‌ಗಳನ್ನು ಅಳವಡಿಸಲಾಗಿದೆ. ಮೈದಾನವು 50 ಸಾವಿರ ಜನರ ಸಾಮರ್ಥ್ಯ ಹೊಂದಿದೆ. ಕಾರ್ಯಕ್ರಮಕ್ಕೆ ಬಿಗಿ ಭದ್ರತೆ ಒದಗಿಸಲಾಗಿದೆ. ಸಂಜೆ 4 ಗಂಟೆ ಬಳಿಕ ಸಮಾರಂಭ ನಡೆಯಲಿದೆ.

‘ಶ್ರೀಲಂಕಾ ತಮಿಳರ ಬಗ್ಗೆ ಕೇಂದ್ರದ ಜತೆ ಚರ್ಚೆ’

ಚೆನ್ನೈ(ಪಿಟಿಐ): ಇತ್ತೀಚೆಗೆ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಶ್ರೀಲಂಕಾದಿಂದ ಸಮುದ್ರ ಮಾರ್ಗದ ಮೂಲಕ ರಾಜ್ಯಕ್ಕೆ ಬಂದ ಲಂಕಾದ ಪ್ರಜೆಗಳ ಕುರಿತಾಗಿ ಕೇಂದ್ರ ಸರ್ಕಾರದ ಜತೆ ಸಂಪರ್ಕದಲ್ಲಿರುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ತಿಳಿಸಿದ್ದಾರೆ.

ಈ ಬಗ್ಗೆ ಗುರುವಾರ ಮಾತನಾಡಿದ ಸ್ಟಾಲಿನ್ ಅವರು, ‘ಈ ವಿಚಾರವನ್ನು ಕಾನೂನಾತ್ಮಕವಾಗಿ ನಿಭಾಯಿಸುವ ಬಗ್ಗೆ ಕೇಂದ್ರ ಸರ್ಕಾರದ ಜತೆ ಚರ್ಚಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದು ಹೇಳಿದ್ದಾರೆ. ಲಂಕಾದ ತಮಿಳರ ನೆರವಿಗಾಗಿ ತಮಿಳುನಾಡು ಸರ್ಕಾರ ಪ್ರಯತ್ನಿಸಲಿದೆ ಎಂದಿದ್ದಾರೆ.

ಪ್ರದರ್ಶಕರೊಂದಿಗೆ ಮಾತುಕತೆ: ಶಿವರಾಜ್‌ಕುಮಾರ್ ಸ್ಪಷ್ಟನೆ

‘ಜೇಮ್ಸ್’ ಚಿತ್ರ ಪ್ರದರ್ಶನ ನಿರಾತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೇಮ್ಸ್’ ಸಿನಿಮಾ ಪ್ರದರ್ಶನ ಸಂಬಂಧಿಸಿದ ಸಮಸ್ಯೆಗಳು ಬಗೆಹರಿದಿವೆ. ಅಭಿಮಾನಿಗಳು ಆತಂಕ ಪಡಬೇಕಾಗಿಲ್ಲ’ ಎಂದು ನಟ ಶಿವರಾಜ್‌ಕುಮಾರ್ ಹೇಳಿದರು.

‘ಪರಭಾಷಾ ಚಿತ್ರಗಳ ಕಾರಣದಿಂದ ‘ಜೇಮ್ಸ್’ ಚಿತ್ರವನ್ನು ಚಿತ್ರಮಂದಿರಗಳಿಂದ ತೆಗೆಯಲಾಗುತ್ತಿದೆ ಎಂದು ಹರಿದಾಡಿದ ಸುದ್ದಿ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ‘ಇಡೀ ಚಿತ್ರರಂಗ ಕುಟುಂಬವಿದ್ದಂತೆ, ‘ಜೇಮ್ಸ್’ ಚಿತ್ರದೊಂದಿಗೆ ಭಾವನಾತ್ಮಕ ಸಂಬಂಧವಿದೆ. ಅದನ್ನು ಈಗಾಗಲೇ ನಿರ್ಮಾಪಕರು, ನಿರ್ದೇಶಕರು ಹಾಗೂ ಪ್ರದರ್ಶಕರ ಜೊತೆ ಮಾತುಕತೆ ನಡೆಸಿ ಸರಿಪಡಿಸಲಾಗಿದೆ’ ಎಂದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಡಿ.ಆರ್. ಜೈರಾಜ್ ಮಾತನಾಡಿ, ‘ಚಿತ್ರ ಪ್ರದರ್ಶನ ನಿಲ್ಲಿಸಿದ ಚಿತ್ರಮಂದಿರಗಳಲ್ಲಿ ನಿನ್ನೆ ಸಂಜೆಯಿಂದ ಮತ್ತೆ ಪ್ರದರ್ಶನ ಆರಂಭಿಸಲಾಗಿದೆ. ಎರಡು ಚಿತ್ರಮಂದಿರಗಳು ಇರುವ ಕಡೆಗಳಲ್ಲಿ ಒಂದು ಚಿತ್ರಮಂದಿರದಲ್ಲಿ ‘ಜೇಮ್ಸ್’ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ’ ಎಂದು ಹೇಳಿದರು.

‘ಕೆಲವೆಡೆ ಮಾತ್ರ ಗೊಂದಲ ಸೃಷ್ಟಿಯಾಗಿತ್ತು. ಎಲ್ಲೆಲ್ಲಾ ಪ್ರದರ್ಶನ ನಿಲ್ಲಿಸಲಾಗಿತ್ತೋ ಆಯಾ ಚಿತ್ರಮಂದಿರಗಳ ಪಟ್ಟಿ ತರಿಸಿಕೊಂಡು ಮಾಲೀಕರ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸಿದ್ದೇವೆ’ ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ಜೊತೆ ಮಾತುಕತೆ ನಡೆಸಿದ ಬಳಿಕ ಮಾತನಾಡಿದ ಶಿವರಾಜ್‌ಕುಮಾರ್, ‘ಜೇಮ್ಸ್’ ಪ್ರದರ್ಶನ ನಿರಾತಂಕವಾಗಿದೆ. ನಿಮಗೆ (ಅಭಿಮಾನಿಗಳಿಗೆ) ನಿಮ್ಮ ನೆಚ್ಚಿನ ನಟನ ಸಿನಿಮಾ ಎಂಬ ಕಾರಣಕ್ಕೆ ಹಾಗೂ ನನಗೆ ನನ್ನ ತಮ್ಮನ ಸಿನಿಮಾ ಎಂಬ ಕಾರಣಕ್ಕೆ ಹೆಚ್ಚು ಆಪ್ತವಾಗುತ್ತಿದೆ. ಈ ಚಿತ್ರಕ್ಕೆ ಯಾವುದೇ ರೀತಿಯ ಸಮಸ್ಯೆ ಆಗಲು ನಾವು ಬಿಡುವುದಿಲ್ಲ. ಮುಖ್ಯಮಂತ್ರಿಯವರೂ ಭರವಸೆ ನೀಡಿದ್ದಾರೆ’ ಎಂದರು.

‘ಇನ್ನು ಬಿಡುಗಡೆ ಆಗಲಿರುವ ‘ಆರ್‌ಆರ್‌ಆರ್’ ಅಥವಾ ಈಗ ಪ್ರದರ್ಶನಗೊಳ್ಳುತ್ತಿರುವ ‘ಕಾಶ್ಮೀರ್ ಫೈಲ್ಸ್’ ಚಿತ್ರಗಳಿಂದ ‘ಜೇಮ್ಸ್’ಗೆ ಯಾವುದೇ ತೊಂದರೆ ಆಗಿಲ್ಲ. ‘ಕಾಶ್ಮೀರ್ ಫೈಲ್ಸ್’ ಕೂಡಾ ಉತ್ತಮ ಪ್ರದರ್ಶನ ಕಾಣುತ್ತಿದೆ. ಅದನ್ನು ತೆಗೆಯಲು ಯಾರೂ ಹೇಳಿಲ್ಲ. ಹಾಗೆ ಹೇಳುವುದೂ ಸರಿಯಲ್ಲ. ಒಂದು ಒಳ್ಳೆಯ ಚಿತ್ರದ ಪ್ರದರ್ಶನಕ್ಕೆ ತಡೆ ಒಡ್ಡುವುದು ಸರಿಯಲ್ಲ. ಅಭಿಮಾನಿಗಳೂ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು’ ಎಂದು ಹೇಳಿದರು.

ಇಂದು ಹೇಳಿಕೆ ನೀಡಿದ ನಿರ್ಮಾಪಕ ಕಿಶೋರ್ ಪತ್ತಿಕೊಂಡ, ‘ಎಂಟು, ಒಂಬತ್ತು ಚಿತ್ರ ಮಂದಿರಗಳಲ್ಲಿ ಪ್ರದರ್ಶಕರು ‘ಜೇಮ್ಸ್’ ಸಿನಿಮಾ ತೆಗೆದು ‘ಆರ್‌ಆರ್‌ಆರ್’ ಪ್ರದರ್ಶನಕ್ಕೆ ನಿರ್ಧರಿಸಿದ್ದರು. ಶಿವರಾಜ್‌ಕುಮಾರ್ ಹಾಗೂ ಜೈರಾಜ್ ಮಾತುಕತೆ ನಡೆಸಿ ಆ ಸಮಸ್ಯೆ ಬಗೆಹರಿಸಿದ್ದಾರೆ. ಮೊದಲವಾರ ಹೆಚ್ಚು ಪ್ರೇಕ್ಷಕರು ಆಗಮಿಸುವ ಪ್ರಯುಕ್ತ ಮೆಜೆಸ್ಟಿಕ್‌ನ ಪ್ರಸನ್ನ ಹಾಗೂ ತ್ರಿವೇಣಿ ಚಿತ್ರಮಂದಿರಗಳಲ್ಲಿ ‘ಜೇಮ್ಸ್’ ಪ್ರದರ್ಶಿಸಿದ್ದರು. ಈ ಪೈಕಿ ಈಗ ತ್ರಿವೇಣಿ ಚಿತ್ರಮಂದಿರದಲ್ಲಿ ಮಾತ್ರ ‘ಜೇಮ್ಸ್’ ಮುಂದುವರಿಯಲಿದೆ. ಒಪ್ಪಂದದ ಪ್ರಕಾರ ಪ್ರಸನ್ನ ಚಿತ್ರಮಂದಿರದಲ್ಲಿ ‘ಜೇಮ್ಸ್’ ಪ್ರದರ್ಶನ ಇರುವುದಿಲ್ಲ. ಇಂಥ ಒಪ್ಪಂದ ರಾಜ್ಯದ 80 ಚಿತ್ರಮಂದಿರಗಳ ಜೊತೆ ಆಗಿದೆ. ಉಳಿದಂತೆ ರಾಜ್ಯದ ಸುಮಾರು 270 ಚಿತ್ರಮಂದಿರಗಳಲ್ಲಿ ‘ಜೇಮ್ಸ್’ ಪ್ರದರ್ಶನ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದರು.

‘ಸಿದ್ದರಾಮಯ್ಯ ಅವರಿಗೆ ಹೇಳಿರಲಿಲ್ಲ’

‘ಪ್ರದರ್ಶನ ಸಂಬಂಧಿಸಿ ಸಮಸ್ಯೆ ಇದೆ ಎಂದು ಸಿದ್ದರಾಮಯ್ಯ ಅವರಿಗೆ ನಾನು ಹೇಳಿಯೇ ಇರಲಿಲ್ಲ. ಚಿತ್ರಕ್ಕೆ ಆಹ್ವಾನಿಸಲಷ್ಟೇ ಅವರ ಬಳಿ ಹೋಗಿದ್ದೆ. ಯಾವ ಚಿತ್ರಮಂದಿರದಲ್ಲಿಯೂ ‘ಜೇಮ್ಸ್’ ತೆಗೆದುಹಾಕಿ ‘ಕಾಶ್ಮೀರ್ ಫೈಲ್ಸ್’ ಪ್ರದರ್ಶಿಸಿಲ್ಲ’ ಎಂದು ಕಿಶೋರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ನಿರ್ಮಾಪಕ ಕಿಶೋರ್ ಪತ್ತಿಕೊಂಡ ಅವರು ಮಾರ್ಚ್ 22ರಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದರು. ಆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ‘ಜೇಮ್ಸ್’ ಚಿತ್ರವನ್ನು ಚಿತ್ರಮಂದಿರಗಳಿಂದ ತೆಗೆದು ಕಾಶ್ಮೀರ್ ಫೈಲ್ಸ್ ಪ್ರದರ್ಶಿಸಲಾಗುತ್ತಿದೆ’ ಎಂದಿದ್ದರು.

ಈ ಬೆಳವಣಿಗೆಗಳ ನಡುವೆ ಅಭಿಮಾನಿಗಳು ‘ಆರ್‌ಆರ್‌ಆರ್’ ಚಿತ್ರದ ಪೋಸ್ಟರ್ ಹರಿದು ಆಕ್ರೋಶ ವ್ಯಕ್ತಪಡಿಸಿದ್ದರು.

ಪ್ರೊ. ಜೀವಂಧರ ಕುಮಾರ ಹೋತಪೇಟಿ

ದಕ್ಷಿಣ ಭಾರತದಲ್ಲಿ ಜೈನ ಧರ್ಮ ರಕ್ಷಣೆಯ ಹೊಣೆ ಹೊತ್ತ ಭಟ್ಟಾರಕರು

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ: ಮಧ್ಯ ಕಾಲದಲ್ಲಿ ಕಾಣೆಯಾಗಿದ್ದ ದಿಗಂಬರ ಮುನಿ ಪರಂಪರೆಯನ್ನು ಇಪ್ಪತ್ತನೇ ಶತಮಾನದಲ್ಲಿ ಪುನರುತ್ಥಾನಗೊಳಿಸುವ ಕಾರ್ಯ ಭಟ್ಟಾರಕ ಪೀಠದ ಹೆಗಲಿಗೆ ಬಿತ್ತು. ಆ ನಿಟ್ಟಿನಲ್ಲಿ ದಕ್ಷಿಣ ಭಾರತದ ಜೈನ ಧರ್ಮ ರಕ್ಷಣೆಯ ಹೊಣೆಯಲ್ಲಿ ಶ್ರವಣಬೆಳಗೊಳದ ಭಟ್ಟಾರಕರ ಪಾತ್ರ ಅತ್ಯಂತ ಮಹತ್ವದ್ದು ಎಂದು ಹುಬ್ಬಳ್ಳಿಯ ನಿವೃತ್ತ ಉಪನ್ಯಾಸಕ ಪ್ರೊ. ಜೀವಂಧರ ಕುಮಾರ ಹೋತಪೇಟಿ ಹೇಳಿದರು.

ಗುರುವಾರ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಹೊಂಬುಜ ಜೈನ ಮಠದಿಂದ ‘ಸಿದ್ಧಾಂತ ಕೀರ್ತಿ’ ಪ್ರಶಸ್ತಿ, ₹ 51,000 ನಗದು ಮತ್ತು ಅಂಗವಸ್ತ್ರ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

‘ಜೈನ ಧರ್ಮದ ದಿಗಂಬರ ಮುನಿ ಪರಂಪರೆಯ ತೀರ್ಥಂಕರರ ವಾಣಿಗಳನ್ನು ಪರಿಪಾಲನೆ ಮಾಡುವ ಶ್ರಾವಕರ ರಕ್ಷಣೆ, ನಿರ್ವಾಹಣೆ ಇಲ್ಲದೇ ಸೊರಗಿದ ಜಿನಾಲಯ ಜೀರ್ಣೋದ್ಧಾರ, ಪೂರ್ವ ಪರಂಪರೆಯ ಜೈನ ಗ್ರಂಥಗಳ ಮರು ಮುದ್ರಣಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ’ ಎಂದರು.

‘ಐದು ದಶಕಗಳಿಂದ ಚಾರುಕೀರ್ತಿ ಭಟ್ಟಾರಕರು ಜೈನ ಧರ್ಮ ಗ್ರಂಥಗಳ ರಚನೆಯಲ್ಲಿ ತೊಡಗಿದ ಸಾಹಿತ್ಯಾಸಕ್ತರನ್ನು ಗುರುತಿಸಿ ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿ’ ಎಂದು ಶ್ಲಾಘಿಸಿದರು.

ಮಠದ ಪೀಠಾಧಿಕಾರಿ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿ, ‘ಪೂರ್ವ ಪರಂಪರೆಯಂತೆ ಮಠದಲ್ಲಿ ದೇವ-ಗುರು-ಶಾಸ್ತ್ರಗಳಲ್ಲಿ ವಿಶೇಷ ನಿಷ್ಠೆ, ಜೈನಧರ್ಮ-ಸಂಸ್ಕೃತಿ- ಪರಂಪರೆ- ಚರಿತ್ರೆಗಳ ಅಧ್ಯಯನ- –ಆಧ್ಯಾಪನ ಕಾರ್ಯ ನಿರಂತರವಾಗಿ ಸಾಗಲಿ. ಪ್ರತಿಯೊಬ್ಬರು ಅಹಿಂಸಾ ಧರ್ಮ ಪರಿಪಾಲನೆ ಮಾಡುತ್ತ ಸತ್ ಚಿಂತನೆ ಮೈಗೂಡಿಸಿಕೊಳ್ಳಬೇಕು’ ಎಂದರು.

ರಿಪ್ಪನ್‌ಪೇಟೆಯ ಹೊಂಬುಜ ಮಠದಿಂದ ಹುಬ್ಬಳ್ಳಿಯ ನಿವೃತ್ತ ಉಪನ್ಯಾಸಕ ಪ್ರೊ. ಜೀವಂಧರ ಕುಮಾರ ಹೋತಪೇಟಿ ಅವರಿಗೆ ‘ಸಿದ್ಧಾಂತ ಕೀರ್ತಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

‘ಬೋಧಿವೃಕ್ಷ’ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಸ್ಫೂರ್ತಿಧಾಮ ನಿರ್ವಹಿಸುತ್ತಿರುವ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್ ‘ಬೋಧಿವೃಕ್ಷ’ ಮತ್ತು ‘ಬೋಧಿವರ್ಧನ’ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ.

ಈ ಪ್ರಶಸ್ತಿಗಳು ಕ್ರಮವಾಗಿ ₹ 1 ಲಕ್ಷ, ₹ 25 ಸಾವಿರ ನಗದು ಬಹುಮಾನ ಒಳಗೊಂಡಿವೆ. ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಏ.14ರಂದು ಅಂಬೇಡ್ಕರ್ ಹಬ್ಬ ಹಮ್ಮಿಕೊಳ್ಳಲಾಗಿದ್ದು, ಆ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಅರ್ಜಿಗಳನ್ನು ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–560 091 ಈ ವಿಳಾಸಕ್ಕೆ ಇದೇ 31ರೊಳಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9108830438 ಅಥವಾ 9108830437

ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿಕೆ; ರಷ್ಯಾ ಜತೆಗಿನ ವ್ಯಾಪಾರ, ಹಣ ಪಾವತಿ ಸಮಸ್ಯೆ ಪರಿಹರಿಸಲು ಪರಿಶೀಲನೆ

ಉಕ್ರೇನ್ ಬಿಕ್ಕಟ್ಟು: ಭಾರತದ ನಿಲುವು ಅಚಲ

ನವದೆಹಲಿ (ಪಿಟಿಐ):'ಉಕ್ರೇನ್ ಬಿಕ್ಕಟ್ಟಿನಲ್ಲಿ ಭಾರತ ಅನುಸರಿಸಿರುವ ತಟಸ್ಥ ನಿಲುವು 'ಸ್ಥಿರ ಮತ್ತು ದೃಢ'ವಾಗಿದೆ. ತಕ್ಷಣವೇ ಹಿಂಸಾಚಾರ ನಿಲ್ಲಿಸಿ, ಮಾತುಕತೆಯ ಮೂಲಕ ಬಿಕ್ಕಟ್ಟು ಪರಿಹರಿಸಿಕೊಳ್ಳುವಂತೆ ಎರಡೂ ರಾಷ್ಟ್ರಗಳನ್ನು ಒತ್ತಾಯಿಸುತ್ತಲೇ ಇದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಗುರುವಾರ ಹೇಳಿದರು.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರ ನೀಡಿದ ಅವರು, 'ಜಾಗತಿಕ ವ್ಯವಸ್ಥೆಯು, ಅಂತರರಾಷ್ಟ್ರೀಯ ಕಾನೂನು, ವಿಶ್ವಸಂಸ್ಥೆಯ ಸನ್ನದು ಹಾಗೂ ರಾಷ್ಟ್ರಗಳ ಗಡಿ ಏಕತೆ ಮತ್ತು ಸಾರ್ವಭೌಮತೆಯನ್ನು ಗೌರವಿಸುವ ತಳಹದಿಯ ಮೇಲೆ ನಿಂತಿದೆ. ಇದನ್ನು ಭಾರತ ಸ್ಪಷ್ಟವಾಗಿ ಪ್ರತಿಪಾದಿಸುತ್ತಲೇ ಬಂದಿದೆ. ಜಾಗತಿಕ ನಾಯಕರೊಂದಿಗಿನ ಉನ್ನತಮಟ್ಟದ ಮಾತುಕತೆಯಲ್ಲೂ ಮತ್ತು ವಿಶ್ವ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳಿಗೂ ಇದೇ ಅಂಶಗಳನ್ನು ಒತ್ತಿಹೇಳಿದ್ದೇವೆ' ಎಂದರು.

ಉಕ್ರೇನ್ ಮೇಲಿನ ಆಕ್ರಮಣಕ್ಕಾಗಿ ರಷ್ಯಾವನ್ನು ಟೀಕಿಸದ ಮತ್ತು ರಷ್ಯಾದ ಆಕ್ರಮಣ ಖಂಡಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯದ ಮತದಾನದಿಂದ ದೂರ ಉಳಿದಿರುವ ಭಾರತದ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಕಳವಳದ ಹಿನ್ನೆಲೆಯಲ್ಲಿ ಜೈಶಂಕರ್ ಈ ಹೇಳಿಕೆ ನೀಡಿದರು. ಭಾರತ ತಳೆದಿರುವ ನಿಲುವು ಅಸ್ಥಿರತೆಯಿಂದ ಕೂಡಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಕೂಡ ಇತ್ತೀಚೆಗೆ ಟೀಕಿಸಿದ್ದರು.

'ಉಕ್ರೇನ್‌ನ ಪರಿಸ್ಥಿತಿಯ ಬಗ್ಗೆ ನಾವು ತೀವ್ರ ಕಳವಳ ವ್ಯಕ್ತಪಡಿಸಿದ್ದೇವೆ. ಹಿಂಸಾಚಾರ ತಕ್ಷಣವೇ ನಿಲ್ಲಿಸಲು ಮತ್ತು ಶತ್ರುತ್ವ ಕೊನೆಗೊಳಿಸಲು ಕರೆ ನೀಡಿದ್ದೇವೆ' ಎಂದು ಅವರು ಹೇಳಿದರು.

'ವಿವಿಧ ಅಂತರರಾಷ್ಟ್ರೀಯ ವೇದಿಕೆಗಳು ಮತ್ತು ಸಂಸ್ಥೆಗಳಲ್ಲಿ ಉಕ್ರೇನ್‌ನಲ್ಲಿನ ಪರಿಸ್ಥಿತಿಯ ಕುರಿತು ನಮ್ಮ ನಿಲುವು ಈ ತಾರ್ಕಿಕತೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಜೈಶಂಕರ್ ಹೇಳಿದರು.

'ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆಯಲ್ಲೂ ನಾವು ಉಕ್ರೇನ್‌ನಲ್ಲಿ ತುರ್ತು ಕದನ ವಿರಾಮ ಘೋಷಿಸಬೇಕು. ಯುದ್ಧಪೀಡಿತ ನೆಲದಲ್ಲಿ ಸಿಲುಕಿರುವ ನಾಗರಿಕರ ಸುರಕ್ಷಿತ ಸ್ಥಳಾಂತರಕ್ಕೆ ಕಾರಿಡಾರ್ ತೆರೆಯುವಂತೆ ಒತ್ತಾಯಿಸಿದ್ದೇವೆ. ಈ ಬಿಕ್ಕಟ್ಟಿನ ವೇಳೆ ಉಕ್ರೇನ್ ಮತ್ತು ಅದರ ನೆರೆಯ ರಾಷ್ಟ್ರಗಳಿಗೆ ಭಾರತ ನೀಡಿದ ಮಾನವೀಯ ನೆರವನ್ನು ಎತ್ತಿತೋರಿಸಿದ್ದೇವೆ. ಬಿಕ್ಕಟ್ಟಿನ ಶುರುವಿನಿಂದಲೂ ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಮತ್ತು ರಷ್ಯಾ ಹಾಗೂ ಇತರ ಪ್ರಮುಖ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಿದ್ದಾರೆ' ಎಂದರು.

'ಪುಟಿನ್ ಮತ್ತು ಝೆಲೆನ್‌ಸ್ಕಿ ನಡುವೆ ನೇರ ಮಾತುಕತೆ ನಡೆದರೆ ಶಾಂತಿ ಸ್ಥಾಪಿಸುವ ಪ್ರಯತ್ನಗಳಿಗೆ ಹೆಚ್ಚು ನೆರವಾಗಲಿದೆ ಎಂದು ಮೋದಿ ಸಲಹೆ ನೀಡಿದ್ದಾರೆ. ಉಕ್ರೇನ್ ಮತ್ತು ರಷ್ಯಾದ ಪ್ರತಿನಿಧಿಗಳ ನಡುವಿನ ಮಾತುಕತೆಗಳ ಬಗ್ಗೆ ಪುಟಿನ್ ಅವರೂ ಮೋದಿಯವರಿಗೆ ವಿವರಿಸಿದ್ದಾರೆ. ಮಾತುಕತೆಯನ್ನು ಸ್ವಾಗತಿಸಿರುವ ಪ್ರಧಾನಿ, ಸಂಘರ್ಷ ಶಮನದ ಭರವಸೆ ಹೊಂದಿದ್ದಾರೆ' ಎಂದರು.

ಉಕ್ರೇನ್‌ನ ಮರಿಯುಪೋಲ್‌ನಿಂದ 80 ಕಿ.ಮೀ. ಪಶ್ಚಿಮಕ್ಕಿರುವ ಅಜೋವ್ ಸಮುದ್ರದ ಬರ್ಡಿಯಾನ್ಸ್ಕ್ ಬಂದರಿನಲ್ಲಿ ಗುರುವಾರ ಉಕ್ರೇನ್ ಪಡೆಗಳು ರಷ್ಯಾದ ನೌಕಾ ಸಾರಿಗೆ ಹಡಗೊಂದನ್ನು ಧ್ವಂಸಗೊಳಿಸಿದವು –ಎಎಫ್‌ಪಿ ಚಿತ್ರ

> **ಉಕ್ರೇನ್ ಬಿಕ್ಕಟ್ಟಿಗೆ ರಾಜತಾಂತ್ರಿಕತೆ ಮತ್ತು ಮಾತುಕತೆಯೊಂದೇ ಪರಿಹಾರ, ಇದನ್ನು ಬಿಟ್ಟು ಬೇರೆ ಮಾರ್ಗವಿಲ್ಲ ಎನ್ನುವುದನ್ನೂ ಸಂಬಂಧಿಸಿದ ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಿದ್ದೇವೆ**
> **ಎಸ್. ಜೈಶಂಕರ್,** ವಿದೇಶಾಂಗ ಸಚಿವ

ರಾಸಾಯನಿಕ ಶಸ್ತ್ರಾಸ್ತ್ರ ಬ್ರಸೆಲ್ಸ್ (ಎಎಫ್‌ಪಿ): ಒಂದು ವೇಳೆ ರಷ್ಯಾ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಬಳಕೆ ಮಾಡಿದರೆ ನ್ಯಾಟೊ ಅದಕ್ಕೆ 'ಸೂಕ್ತ'ವಾಗಿ ಪ್ರತಿಕ್ರಿಯಿಸಲಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಎಚ್ಚರಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿದ ನಂತರ ನ್ಯಾಟೊ 'ಹಿಂದೆಂದಿಗಿಂತಲೂ ಹೆಚ್ಚು ಒಗ್ಗಟ್ಟು ಕಾಯ್ದುಕೊಂಡಿದೆ'. ಯುದ್ಧದ ಮೂಲಕ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ವಿಭಜಿಸುವ ಯತ್ನದಲ್ಲಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವಿಫಲರಾಗಿದ್ದಾರೆ ಎಂದು ಹೇಳಿದ್ದಾರೆ.

ನ್ಯಾಟೊ ಈಗ ಇರುವಂತೆ ಎಂದಿಗೂ ಒಗ್ಗಟ್ಟಾಗಿರಲಿಲ್ಲ. ಪುಟಿನ್ ನಿರೀಕ್ಷೆಗಿಂತಲೂ ಹೆಚ್ಚು ವಿರೋಧ ಎದುರಿಸುತ್ತಿದ್ದಾರೆ' ಎಂದು ನ್ಯಾಟೊ ಮುಖಂಡರ ಜೊತೆಗಿನ ಸಭೆಯ ನಂತರ ಅವರು ಹೇಳಿದರು.

ಝೆಲೆನ್‌ಸ್ಕಿ ಮನವಿ: ನ್ಯಾಟೊ ರಾಷ್ಟ್ರಗಳ ಶೃಂಗವನ್ನು ಉದ್ದೇಶಿಸಿ ವಿಡಿಯೊ ಭಾಷಣ ಮಾಡಿದ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರು, ಹೆಚ್ಚಿನ ಸೇನಾ ನೆರವು, ಶಸ್ತ್ರಾಸ್ತ್ರಗಳನ್ನು ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಯಾವುದೇ ಮಿತಿ ಇಲ್ಲದಂತೆ ಉಕ್ರೇನ್‌ಗೆ ಸೇನಾ ನೆರವು ನೀಡಬೇಕು. ರಷ್ಯಾ ತನ್ನ ಎಲ್ಲ ಸೇನಾ ಬಲ ಬಳಸುತ್ತಿದೆ. ನಿಮ್ಮ ಸೇನಾ ಬಲದ ಶೇ 1ರಷ್ಟು ನೆರವನ್ನು ಒದಗಿಸಿ ಎಂದು ನ್ಯಾಟೊ ರಾಷ್ಟ್ರಗಳಿಗೆ ಕೋರಿದ್ದಾರೆ.

ದೇಶ ತೊರೆದ ಪುಟಿನ್ ಸಲಹೆಗಾರ

ಅನಟೊಲಿ ಚುಬಾಯಿ

ಮಾಸ್ಕೊ: ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆ ವಿರೋಧಿಸಿ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಸಲಹೆಗಾರ ಅನಟೊಲಿ ಬೊರಿಶೊವಿಕ್ ಚುಬಾಯಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ದೇಶ ತೊರೆದು ಹೋಗಿದ್ದಾರೆ.

1990ರ ದಶಕದಲ್ಲಿ ಜಾಗತೀಕರಣದ ವೇಳೆ ದೇಶದ ಆರ್ಥಿಕ ಸುಧಾರಕರಲ್ಲಿ ಇವರು ಒಬ್ಬರಾಗಿದ್ದರು.

ಯುದ್ಧ ನಿಲ್ಲಿಸಿ: ವಿಶ್ವಸಂಸ್ಥೆ ಒತ್ತಾಯ

ವಿಶ್ವಸಂಸ್ಥೆ (ಎಎಫ್‌ಪಿ): ಉಕ್ರೇನ್ ಮೇಲಿನ ಯುದ್ಧವನ್ನು ತಕ್ಷಣವೇ ಅಂತ್ಯಗೊಳಿಸಬೇಕು ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ರಷ್ಯಾಗೆ ಆಗ್ರಹ ಪಡಿಸಿದೆ. ಈ ನಿರ್ಣಯ ಅಂಗೀಕರಿಸಿದೆ.

ನ್ಯೂಯಾರ್ಕ್‌ನಲ್ಲಿ ಇರುವ ವಿಶ್ವಸಂಸ್ಥೆ ಕೇಂದ್ರ ಕಚೇರಿಯಲ್ಲಿ ನಡೆದ ಮತದಾನದಲ್ಲಿ ನಿರ್ಣಯದ ಪರ 140 ರಾಷ್ಟ್ರಗಳು ಮತ ಚಲಾಯಿಸಿದವು. 38 ದೇಶಗಳು ಗೈರುಹಾಜರಾಗಿದ್ದವು.

ಮೂಲತಃ ಫ್ರಾನ್ಸ್ ಮತ್ತು ಮೆಕ್ಸಿಕೊ ರೂಪಿಸಿದ್ದ ನಿರ್ಣಯವನ್ನು ಉಕ್ರೇನ್ ಬುಧವಾರ ಸಾಮಾನ್ಯ ಸಭೆಯ ಮುಂದಿಟ್ಟಿತ್ತು. ಇನ್ನೊಂದೆಡೆ ರಷ್ಯಾದ ಹೆಸರು ಉಲ್ಲೇಖಿಸದೇ ದಕ್ಷಿಣ ಆಫ್ರಿಕಾ ಮಂಡಿಸಿದ್ದ ನಿರ್ಣಯದ ಪರವಾಗಿ 50, ವಿರುದ್ಧವಾಗಿ 67 ಮತ ಬಿದ್ದವು. ಸಾಮಾನ್ಯ ಸಭೆಯು ಈ ನಿರ್ಣಯವನ್ನು ಅನುಮೋದಿಸಲಿಲ್ಲ.

ನ್ಯಾಟೊದ ಮೊದಲ ತುರ್ತು ಶೃಂಗಸಭೆ ಆರಂಭ

ಬ್ರುಸೆಲ್ಸ್ (ಎಪಿ): ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ನಿಗ್ರಹಿಸಲು ನ್ಯಾಟೊ ತನ್ನ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು ಮತ್ತು ಯುರೋಪ್‌ನಲ್ಲಿ ಎದುರಾಗಿರುವ ಹೊಸ ಭದ್ರತಾ ವಾಸ್ತವಕ್ಕೆ ಸ್ಪಂದಿಸಬೇಕು ಎಂದು ನ್ಯಾಟೊ ಮಹಾಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಕರೆ ನೀಡುವುದರೊಂದಿಗೆ ತುರ್ತು ಶೃಂಗಸಭೆ ಗುರುವಾರ ಇಲ್ಲಿ ಆರಂಭವಾಗಿದೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ನ್ಯಾಟೊದ ಇತರ ದೇಶಗಳ ನಾಯಕರು ಪಾಲ್ಗೊಂಡಿರುವ ಒಟ್ಟು ಮೂರು ಶೃಂಗಸಭೆಗಳ ಪೈಕಿ ಮೊದಲ ಗೋಪ್ಯ ಸಭೆ ಗುರುವಾರ ನಡೆದಿದ್ದು, ಶುಕ್ರವಾರ ಮತ್ತೆರಡು ಸಭೆಗಳು ನಡೆಯಲಿವೆ. ಕೊನೆಯಲ್ಲಿ ಬೈಡನ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಲಿದ್ದಾರೆ.

'ಅತ್ಯಂತ ಸಂದಿಗ್ಧ ಸಂದರ್ಭದಲ್ಲಿ ನಾವು ಒಟ್ಟಾಗಿದ್ದೇವೆ. ರಷ್ಯಾದ ಅಪ್ರಚೋದಿತ ಆಕ್ರಮಣವನ್ನು ಖಂಡಿಸುವಲ್ಲಿ ಹಾಗೂ ಉಕ್ರೇನ್‌ನ ಸಾರ್ವಭೌಮತೆ ಮತ್ತು ಏಕತೆಗೆ ಬೆಂಬಲ ಸೂಚಿಸುವಲ್ಲಿ ನಾವೆಲ್ಲ ಒಗ್ಗಟ್ಟಿನಿಂದಿದ್ದೇವೆ' ಎಂದು ಅವರು ಸ್ಟೋಲ್ಟೆನ್‌ಬರ್ಗ್ ಹೇಳಿದರು.

ರಷ್ಯಾದ ನಿರ್ಣಯಕ್ಕೆ ವಿಶ್ವಸಂಸ್ಥೆಯಲ್ಲಿ ಸೋಲು

ವಿಶ್ವಸಂಸ್ಥೆ: ಉಕ್ರೇನ್‌ನಲ್ಲಿನ 'ಮಾನವೀಯ ಬಿಕ್ಕಟ್ಟಿಗೆ' ಸಂಬಂಧಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಂಡಿಸಿದ್ದ ನಿರ್ಣಯಕ್ಕೆ ರಷ್ಯಾ ಬೆಂಬಲ ಪಡೆಯಲು ವಿಫಲವಾಗಿದೆ. ನಿರ್ಣಯದ ಪರ ಅಥವಾ ವಿರುದ್ಧ ಮತ ಚಲಾಯಿಸದೇ ಭಾರತ ಮತ್ತೊಮ್ಮೆ ತನ್ನ ತಟಸ್ಥ ನಿಲುವಿನ ಬದ್ಧತೆ ತೋರಿದೆ.

ಯುದ್ಧಪೀಡಿತ ಉಕ್ರೇನ್‌ನಲ್ಲಿ ಮಾನವೀಯತೆಯ ಬಿಕ್ಕಟ್ಟು ಉಂಟಾಗಿಲ್ಲ ಎಂದು ರಷ್ಯಾ ನಿರ್ಣಯ ಮಂಡಿಸಿತು. ಚೀನಾ, ರಷ್ಯಾ ಪರ ಮತ ಚಲಾಯಿಸಿದರೆ, ಭಾರತ ಸೇರಿ 12 ರಾಷ್ಟ್ರಗಳು ತಟಸ್ಥವಾಗಿ ಉಳಿದವು.

ಭದ್ರತಾ ಮಂಡಳಿಯಲ್ಲಿ ಈ ನಿರ್ಣಯ ಅಂಗೀಕರಿಸಲು ರಷ್ಯಾ ಪರ 9 ದೇಶಗಳು ಮತ ಚಲಾಯಿಸಬೇಕಿತ್ತು. ಆದರೆ, ರಷ್ಯಾ ಅಗತ್ಯ ಬೆಂಬಲ ಪಡೆಯುವಲ್ಲಿ ವಿಫಲವಾಗಿದೆ. ರಷ್ಯಾ ಮತ್ತು ಚೀನಾ ಮಾತ್ರ ನಿರ್ಣಯದ ಪರವಾಗಿ ಮತ ಚಲಾಯಿಸಿವೆ. ನಿರ್ಣಯದ ವಿರುದ್ಧ ಯಾವ ರಾಷ್ಟ್ರವೂ ಮತ ಚಲಾಯಿಸಿಲ್ಲ.

ಉಕ್ರೇನ್‌ನಲ್ಲಿ ರಷ್ಯಾಕ್ಕೆ ಇನ್ನೂ ಗುರಿ ಸಾಧಿಸಲು ಆಗಿಲ್ಲ. 'ಉಭಯ ದೇಶಗಳ ನಡುವೆ ಸಂಘರ್ಷ ಶಮನದ ಮಾತುಕತೆ ಕಠಿಣವಾಗಿದೆ' ಎಂದು ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಹೇಳಿದ್ದಾರೆ.

ವ್ಯಾಪಾರ, ಪಾವತಿ ಸಮಸ್ಯೆ ಪರಿಶೀಲನೆ

ಉಕ್ರೇನ್ ಮತ್ತು ರಷ್ಯಾ ಸಂಘರ್ಷ ಉಲ್ಬಣಿಸುತ್ತಿರುವಾಗ, ರಷ್ಯಾದೊಂದಿಗಿನ ವಿವಿಧ ವ್ಯಾಪಾರ, ವ್ಯವಹಾರ ಹಾಗೂ ಹಣ ಪಾವತಿ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ರಾಜ್ಯಸಭೆಗೆ ತಿಳಿಸಿದರು.

ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದ ಪ್ರಮಾಣವೂ ಬಹಳ ಕಡಿಮೆ ಇದೆ. ರಷ್ಯಾ ಜತೆಗಿನ ವ್ಯವಹಾರದಲ್ಲಿ ಹಲವು ಸಮಸ್ಯೆಗಳು ಉದ್ಭವಿಸುತ್ತಿವೆ. ಇದರಲ್ಲಿ ಹಣ ಪಾವತಿಯೂ ಸೇರಿದೆ. ಇವುಗಳಿಗೆ ಯಾವ ರೀತಿ ಪರಿಹಾರ ಕಂಡುಕೊಳ್ಳಬೇಕೆಂದು ಸರ್ಕಾರ ಪರಿಶೀಲಿಸುತ್ತಿದೆ ಎಂದರು.

ಉಕ್ರೇನ್‌ನಲ್ಲಿ ರಷ್ಯಾ ಆಕ್ರಮಣ

ರಷ್ಯಾದ ನಿಯಂತ್ರಣದಲ್ಲಿ ಇದೆ ಎಂದು ಅಂದಾಜಿಸಲಾದ ಪ್ರದೇಶ | ರಷ್ಯಾದ ಸೇನಾ ಕಾರ್ಯಾಚರಣೆ ನಡೆಯುತ್ತಿರುವ ಪ್ರದೇಶ | ರಷ್ಯಾದ ನಿಯಂತ್ರಣದಲ್ಲಿರುವ ಪ್ರದೇಶ | ಉಕ್ರೇನ್ ನಿಯಂತ್ರಣದಲ್ಲಿರುವ ಪ್ರದೇಶ

ಉಕ್ರೇನ್‌ನಲ್ಲಿ ಪುಟಿನ್ ಪಡೆಗಳು ಸೇನಾ ಕಾರ್ಯಾಚರಣೆ ಆರಂಭಿಸಿ 28 ದಿನಕ್ಕೆ ಕಾಲಿಟ್ಟಿರುವ ರಷ್ಯಾ ಸೇನೆ, ಫೆಬ್ರುವರಿ 24ರಿಂದ ಮಾರ್ಚ್ 24ರವರೆಗೆ ಉಕ್ರೇನ್ ಸೇನೆಯ ಪ್ರತಿರೋಧ– ಪ್ರತಿದಾಳಿಯಲ್ಲಿ ಕಳೆದುಕೊಂಡಿರುವ ನಷ್ಟದ ವಿವರ

ಅಂಕಿ–ಅಂಶ

15,800	ಯೋಧರ ಸಾವು
530	ಟ್ಯಾಂಕ್‌ಗಳು
124	ಹೆಲಿಕಾಪ್ಟರ್
4	ದೋಣಿಗಳು
280	ಫಿರಂಗಿಗಳು
1,597	ಯೋಧರು ಸಂಚರಿಸುವ ವಾಹನಗಳು
47	ಯುದ್ಧ ವಿಮಾನ ನಿಗ್ರಹ ಕ್ಷಿಪಣಿ ವ್ಯವಸ್ಥೆ
82	ಎಂಎಲ್‌ಆರ್ (ದೂರದ ಗುರಿ ಭೇದಿಸುವ ಬಂದೂಕು)
16	ವಿಶೇಷ ಯುದ್ಧೋಪಕರಣಗಳು
108	ಯುದ್ಧ ವಿಮಾನಗಳು
72	ಇಂಧನ ಟ್ಯಾಂಕರ್‌ಗಳು
1,033	ಸೇನಾ ವಾಹನಗಳು
50	ಯುಎವಿ (ಮಾನವ ರಹಿತ ಡ್ರೋನ್)
1	ಯುದ್ಧ ನೌಕೆ

(ಉಕ್ರೇನ್ ರಕ್ಷಣಾ ಸಚಿವಾಲಯದ ಅಧಿಕೃತ ಮಾಹಿತಿ)

29ನೇ ದಿನದ ಬೆಳವಣಿಗೆಗಳು

- ರಷ್ಯಾದ ಬ್ಯಾಂಕ್‌ಗಳು, ಪ್ರಮುಖ ಕೈಗಾರಿಕೋದ್ಯಮಗಳ ಮೇಲೆ ಬ್ರಿಟನ್ ಸರ್ಕಾರದಿಂದ ಮತ್ತೊಂದು ಸುತ್ತಿನ ನಿರ್ಬಂಧ ಹೇರಿಕೆ. ಬೆಲಾರೂಸ್‌ನ 6 ಕಂಪನಿಗಳು ಸೇರಿದಂತೆ ರಷ್ಯಾದ 59 ಕಂಪನಿಗಳ ಮೇಲೆ ಬ್ರಿಟನ್ ಸರ್ಕಾರದಿಂದ ನಿರ್ಬಂಧ ಜಾರಿ
- ರಷ್ಯಾದಲ್ಲಿರುವ ಕಾರು ಉತ್ಪಾದನೆ ಘಟಕ ಸ್ಥಗಿತಗೊಳಿಸಲು ನಿಸ್ಸಾನ್-ರಿನಾಲ್ಟ್ ಗ್ರೂಪ್ ಸಂಸ್ಥೆಯ ಅವ್ಟೊವ್ಯಾಜ್ ಕಾರು ಸಂಸ್ಥೆ ನಿರ್ಧಾರದ ಬೆನ್ನಲ್ಲೇ, ಈ ಸಂಸ್ಥೆಗೆ ಅಗತ್ಯವಿರುವ ನೆರವು ನೀಡುವುದಾಗಿ ರಷ್ಯಾ ಗುರುವಾರ ಘೋಷಣೆ.
- ನಿರ್ಬಂಧಕ್ಕೆ ಒಳಗಾದ ರಷ್ಯಾದ ಕೋಟ್ಯಧಿಪತಿ ರೋಮನ್ ಅಬ್ರಮೊವಿಚ್ ಅವರು ರಷ್ಯಾ ಮತ್ತು ಉಕ್ರೇನ್ ನಡುವೆ ಶಾಂತಿ ಮಾತುಕತೆಗಾಗಿ ಪ್ರಮುಖ ಪಾತ್ರ ವಹಿಸಿದ್ದರು. ಆದರೆ ಈಗ ಈ ವಿಚಾರವು ಉಭಯ ದೇಶಗಳ ಕೈಯಲ್ಲಿದೆ: ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್
- ರಷ್ಯಾ ಮತ್ತು ಉಕ್ರೇನ್ ತಲಾ 10 ಮಂದಿ ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಂಡಿವೆ ಎಂದು ಉಕ್ರೇನ್ ಗುರುವಾರ ಪ್ರಕಟಿಸಿದೆ.
- ಉಕ್ರೇನ್ ಮೇಲೆ ರಷ್ಯಾವು ರಾಸಾಯನಿಕ ಶಸ್ತ್ರಾಸ್ತ್ರ ಬಳಕೆ ಮಾಡುವ ಭೀತಿ ಇದೆ ಎಂದು ಉಕ್ರೇನ್ ಅಧ್ಯಕ್ಷ ಆತಂಕ ವ್ಯಕ್ತಪಡಿಸಿದ್ದಾರೆ
- ರಷ್ಯಾದ ಅತಿಕ್ರಮಣ ಆರಂಭವಾದ ನಂತರ ಉಕ್ರೇನ್‌ನಲ್ಲಿ ಶೇ 50ಕ್ಕೂ ಹೆಚ್ಚು ಮಕ್ಕಳು ಅತಂತ್ರರಾಗಿದ್ದಾರೆ. ಎಂದು ವಿಶ್ವಸಂಸ್ಥೆಯ ಮಕ್ಕಳ ಸಂಸ್ಥೆ ಹೇಳಿದೆ. 75 ಲಕ್ಷ ಮಕ್ಕಳಲ್ಲಿ ಸುಮಾರು 43 ಲಕ್ಷ ಮಕ್ಕಳು ಈಗ ಮನೆಯಿಂದ ದೂರ ಹೋಗಿದ್ದಾರೆ

ಕಾಶ್ಮೀರಿ ಪಂಡಿತರಷ್ಟೇ ಮುಸ್ಲಿಮರು, ಸಿಖ್ಖರು ಸಮಾನ ಸಂತ್ರಸ್ತರು: ಯೆಚೂರಿ

'370 ವಿಧಿ ರದ್ದು: 'ಸುಪ್ರೀಂ' ವಿಚಾರಣೆ ಕೈಗೆತ್ತಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ಸಂವಿಧಾನದ 370 ನೇ ವಿಧಿಯನ್ನು ಕೇಂದ್ರ ಸರ್ಕಾರ ರದ್ದು ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಶೀಘ್ರವೇ ಕೈಗೆತ್ತಿಕೊಳ್ಳಬೇಕು' ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಒತ್ತಾಯಿಸಿದರು.

ಶ್ರೀನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅರ್ಜಿಯು ವಿಚಾರಣೆಗೆ ಬರುವವರೆಗೆ ಸದ್ಯದ ಈಗಿನ ಆಡಳಿತವು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಹಾಗೂ ಹೊಸ ಕಾಯ್ದೆಗಳನ್ನು ಜಾರಿಗೆ ತರದಂತೆ ಕೋರ್ಟ್ ಸೂಚಿಸಬೇಕು' ಎಂದು ಆಗ್ರಹಿಸಿದರು.

'ನೆಲದ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಉದ್ದೇಶದಿಂದ 'ದಿ ಕಾಶ್ಮೀರ್ ಫೈಲ್ಸ್' ಚಿತ್ರವನ್ನು ಬಿಡುಗಡೆ ಮಾಡಲಾಗಿದೆ. ಸಿನಿಮಾದಲ್ಲಿ ಆಗಿನ ರಾಜ್ಯಪಾಲರ (ಜಗಮೋಹನ್) ಪಾತ್ರವನ್ನು ಏಕೆ ಹೈಲೈಟ್ ಮಾಡಲಿಲ್ಲ ಎಂದು ಪ್ರಶ್ನಿಸಿದ ಯೆಚೂರಿ, ರಾಜ್ಯಪಾಲರ ಪಾತ್ರವನ್ನು ಸಹ ಹೈಲೈಟ್ ಮಾಡಬೇಕಿತ್ತು. ಸಿನಿಮಾ ತಂಡ ವಾಸ್ತವ ಅರ್ಥಮಾಡಿಕೊಳ್ಳಲು ವಿಫಲವಾಗಿದೆ. ಕಣಿವೆಯಿಂದ ವಲಸೆ ಹೋಗುವ ಸಂದರ್ಭದಲ್ಲಿ ಕಾಶ್ಮೀರಿ ಪಂಡಿತರಷ್ಟೇ ಮುಸ್ಲಿಮರು, ಸಿಖ್ಖರು ಹಾಗೂ ಇತರೆ ಸಮುದಾಯದ ಜನರೂ ಇಲ್ಲಿ ಸಮಾನವಾಗಿ ತೊಂದರೆಗೆ ಒಳಗಾಗಿದ್ದಾರೆ' ಎಂದು ಹೇಳಿದರು.

ಮಾಜಿ ಶಾಸಕ ಮೊಹಮ್ಮದ್ ಯೂಸುಫ್ ತಾರಿಗಾಮಿ ಮಾತನಾಡಿ, 'ದೇಶದಾದ್ಯಂತ ಪರಿಸ್ಥಿತಿ ತೀವ್ರ ಹದಗೆಟ್ಟಿದ್ದು, ಜನರು ತೊಂದರೆಗೆ ಒಳಗಾಗಿದ್ದಾರೆ. ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿರುವ ಪರಿಣಾಮ ದೇಶದ ಪರಿಸ್ಥಿತಿ ವೇಗವಾಗಿ ಹದಗೆಡುತ್ತಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಉತ್ತುಂಗಕ್ಕೆ ಏರಿದ್ದು,ಇಂತಹ ಸ್ಥಿತಿಯಲ್ಲಿ ಯುವ ಸಮೂಹ ಉದ್ಯೋಗ ಹುಡುಕುವುದನ್ನು ನಿಲ್ಲಿಸಿದೆ' ಎಂದರು.

ಸಿಬಿಐ ತನಿಖೆ: 'ಸುಪ್ರಿಂ'ಗೆ ಕಾಶ್ಮೀರಿ ಪಂಡಿತ್ ಸಂಸ್ಥೆ ಮರು ಮನವಿ

ನವದೆಹಲಿ: ಮುಸಲ್ಮಾನರ ಪ್ರಾಬಲ್ಯವಿದ್ದ ಈ ಹಿಂದಿನ ಜಮ್ಮು ಮತ್ತು ಕಾಶ್ಮೀರದಲ್ಲಿ 1989-90ರಲ್ಲಿ ನಡೆದಿದ್ದ ಹತ್ಯಾಕಾಂಡ ಕುರಿತು ಸಿಬಿಐ ಅಥವಾ ಎನ್‌ಐಎ ತನಿಖೆಗೆ ಆಗ್ರಹಪಡಿಸಿ ಕಾಶ್ಮೀರಿ ಪಂಡಿತರ ಸಂಸ್ಥೆಯು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದೆ.

ಪ್ರಕರಣದ ವಿಚಾರಣೆಗೆ ಪ್ರತಿಪಾದಿಸಿ ರೂಟ್ಸ್ ಇನ್ ಕಾಶ್ಮೀರ್ ಸಂಸ್ಥೆಯು ಈಗ ಕ್ಯುರೇಟಿವ್ ಅರ್ಜಿ ಸಲ್ಲಿಸಿದೆ. ಇದೇ ಮನವಿಯನ್ನು ಒಳಗೊಂಡಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ 2017ರಲ್ಲಿ ವಜಾಗೊಳಿಸಿತ್ತು.

ಸುಪ್ರೀಂ ಕೋರ್ಟ್ ಈ ಹಿಂದೆ ಮನವಿಯನ್ನು ವಜಾ ಮಾಡಿದ್ದ ಪ್ರಕರಣಗಳಲ್ಲಿ ಅಂತಿಮ ಯತ್ನವಾಗಿ ಸಲ್ಲಿಸುವ ಮರು ಮನವಿಗೆ ನ್ಯಾಯಾಂಗದ ಪರಿಭಾಷೆಯಲ್ಲಿ ಕ್ಯುರೇಟಿವ್ ಅರ್ಜಿ ಎಂದು ಹೇಳಲಾಗುತ್ತದೆ.

2017ರಲ್ಲಿ ಅರ್ಜಿ ವಜಾ ಮಾಡಿದ್ದ ಕೋರ್ಟ್, 'ಅರ್ಜಿದಾರರು ಉಲ್ಲೇಖಿಸಿರುವ ಘಟನೆಗಳು 1989–90ನೇ ಸಾಲಿನವು. ಈಗಾಗಲೇ 27 ವರ್ಷ ಕಳೆದಿದೆ. ವಿಳಂಬವಾಗಿರುವ ಕಾರಣ ಸಾಕ್ಷ್ಯ ಸಿಗುವುದು ಕಷ್ಟ. ಫಲಶ್ರುತಿ ಸಿಗುವ ಸಾಧ್ಯತೆ ಇಲ್ಲ' ಎಂದಿತ್ತು.

1990ರಲ್ಲಿ ಕಾಶ್ಮೀರಿ ಪಂಡಿತ್‌ರು ಎದುರಿಸಿದ ಸಮಸ್ಯೆಗಳನ್ನು ಆಧರಿಸಿದ್ದು ಎನ್ನಲಾದ ದಿ ಕಾಶ್ಮೀರ್ ಫೈಲ್ಸ್ ಚಲನಚಿತ್ರ ಬಿಡುಗಡೆ ಹಿಂದೆಯೇ ಈ ಬೆಳವಣಿಗೆ ನಡೆದಿದೆ.

ಕ್ಯುರೇಟಿವ್ ಅರ್ಜಿಗೆ ಸಮರ್ಥನೆಯಾಗಿ ಸುಪ್ರೀಂ ಕೋರ್ಟ್ ವಕೀಲರ ಸಂಘದ ಅಧ್ಯಕ್ಷ, ಹಿರಿಯ ವಕೀಲರು ನೀಡಿರುವ ಪ್ರಮಾಣಪತ್ರ ಲಗತ್ತಿಸಲಾಗಿದೆ ಎಂದು ಸಂಘಟನೆಯು ಹೇಳಿಕೆಯಲ್ಲಿ ತಿಳಿಸಿದೆ.

ಸೆಮಿಹೈಸ್ಪೀಡ್ ಕೆ–ರೈಲ್–ಸಿಲ್ವರ್‌ಲೈನ್ ಯೋಜನೆ ವಿರೋಧಿಸಿ ಕೇರಳದ ತಿರುವನಂತಪುರದಲ್ಲಿ ಗುರುವಾರ ನಡೆದ ಪ್ರತಿಭಟನೆಯಲ್ಲಿ ಪರಿಸರ ಹೋರಾಟಗಾರ್ತಿ ಮೇಧಾ ಪಾಟ್ಕರ್ ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಪೊಲೀಸರ ಹಲ್ಲೆ: ಕೇರಳ ಸಂಸದರ ಆರೋಪ

ಕೆ–ರೈಲ್ ಯೋಜನೆ ವಿರೋಧಿಸಿ ನವದೆಹಲಿಯಲ್ಲಿ ಪ್ರತಿಭಟನೆ

ನವದೆಹಲಿ(ಪಿಟಿಐ): ಕೇರಳದಲ್ಲಿನ ಉದ್ದೇಶಿತ ಸೆಮಿ-ಹೈ-ಸ್ಪೀಡ್ ಕೆ-ರೈಲ್-ಸಿಲ್ವರ್‌ಲೈನ್ ಯೋಜನೆ ವಿರೋಧಿಸಿ ನಡೆಸಿದ ಪ್ರತಿಭಟನೆ ವೇಳೆ ದೆಹಲಿ ಪೊಲೀಸರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಕೇರಳದ ಯುಡಿಎಫ್ ಸಂಸದರು ಆರೋಪಿಸಿದ್ದಾರೆ.

ಗುರುವಾರದ ಲೋಕಸಭೆ ಕಲಾಪದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಕಾಂಗ್ರೆಸ್ ಸಂಸದ ಕೆ. ಸುರೇಶ್ ಅವರು, 'ಗುರುವಾರ ಬೆಳಗ್ಗೆ 10.45ರ ವೇಳೆಗೆ ವಿಜಯ್‌ಚೌಕ್‌ನಿಂದ ಮಹಿಳಾ ಸಂಸದರು ಸೇರಿದಂತೆ 12 ಸಂಸದರು ಪ್ರತಿಭಟನೆ ಕೈಗೊಂಡೆವು. ಈ ವೇಳೆ ಯಾವುದೇ ಪ್ರಚೋದನಕಾರಿಯಾಗಿ ನಡೆದುಕೊಳ್ಳದಿದ್ದರೂ, ದೆಹಲಿ ಪೊಲೀಸರು ನಮ್ಮನ್ನು ತಡೆದರು. ಈ ವೇಳೆ ನಾವು ಸಂಸದರು ಎಂದು ಹೇಳಿದರೂ, ಪೊಲೀಸರು ನಮ್ಮ ಮೇಲೆ ಹಲ್ಲೆ ನಡೆಸಿ, ನೂಕಾಡಿದ್ದಾರೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆರ್‌ಎಸ್‌ಪಿ ಸಂಸದ ಎನ್.ಕೆ ಪ್ರೇಮಚಂದ್ರನ್ ಅವರು, ಇದು ದುರದೃಷ್ಟಕರ ಘಟನೆ. ಪ್ರತಿಭಟನೆ ನಡೆಸುತ್ತಿರುವುದು ಸಂಸದರು ಎಂದು ತಿಳಿದಿದ್ದರೂ, ಅವರನ್ನು ಪೊಲೀಸರು ಸಂಸತ್ ಆವರಣಕ್ಕೆ ಬಿಟ್ಟುಕೊಂಡಿಲ್ಲ ಎಂದು ದೂರಿದರು. ಈ ವೇಳೆ ಸ್ಪೀಕರ್ ಓಂ ಬಿರ್ಲಾ ಅವರು, ಈ ವಿಚಾರವನ್ನು ಅಧಿಕಾರಿಗಳ ಜತೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಪಾಕ್ ಪ್ರಧಾನಿ ವಿರುದ್ಧ ಅವಿಶ್ವಾಸ: ಇಂದಿನಿಂದ ಪ್ರಕ್ರಿಯೆ

ಇಸ್ಲಾಮಾಬಾದ್ (ರಾಯಿಟರ್ಸ್): ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವುದಿಲ್ಲ ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಹೇಳಿದ್ದಾರೆ. ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ಪ್ರತಿಪಕ್ಷಗಳ ಆಗ್ರಹವನ್ನು ತಿರಸ್ಕರಿಸಿದ್ದಾರೆ.

ಪ್ರಧಾನಿ ವಿರುದ್ಧದ ಅವಿಶ್ವಾಸ ನಿರ್ಣಯದ ಪ್ರಕ್ರಿಯೆ ಪಾಕಿಸ್ತಾನದ ಸಂಸತ್ತಿನಲ್ಲಿ ಶುಕ್ರವಾರದಿಂದ ಆರಂಭವಾಗಲಿದೆ. ಈ ನಿರ್ಣಯ ಅಂಗೀಕಾರವಾದಲ್ಲಿ, ಅವರು ಪ್ರಧಾನಿ ಸ್ಥಾನದಿಂದ ಪದಚ್ಯುತಗೊಳ್ಳಲಿದ್ದಾರೆ.

ಈ ಬಗ್ಗೆ ಬುಧವಾರ ಮಾತನಾಡಿದ ಅವರು, 'ಹೋರಾಟ ನಡೆಸದೆ ನಾನು ಶರಣಾಗುವುದಿಲ್ಲ. ಅಲ್ಲದೆ ಯಾರದ್ದೋ ಒತ್ತಡಕ್ಕೆ ಮಣಿದು ನಾನು ರಾಜೀನಾಮೆ ಏಕೆ ನೀಡಬೇಕು' ಎಂದು ಪ್ರಶ್ನಿಸಿದರು.

ಇಮ್ರಾನ್ ಅವರು ತಮ್ಮ ಸ್ಥಾನ ಉಳಿಸಿಕೊಳ್ಳಬೇಕಾದರೆ ಸಂಸತ್‌ನಲ್ಲಿ ಕನಿಷ್ಠ 172 ಸ್ಥಾನ ಮತ ಗಳಿಸಬೇಕಾಗುತ್ತದೆ. ವಿರೋಧ ಪಕ್ಷಗಳ ಒಟ್ಟು ಬಲ 163ರಷ್ಟಿದ್ದು, ಇಮ್ರಾನ್ ಪಕ್ಷದ ಬಂಡುಕೋರರು ವಿರೋಧ ಪಕ್ಷಗಳ ಕೈಜೋಡಿಸಿದರೆ ಸರ್ಕಾರ ಪತನವಾಗುವ ಸಾಧ್ಯತೆ ಹೆಚ್ಚಿದೆ.

ಪರಮ್‌ಬೀರ್ ವಿರುದ್ಧದ ಪ್ರಕರಣ ತನಿಖೆ ಸಿಬಿಐಗೆ

ನವದೆಹಲಿ (ಪಿಟಿಐ): ಭ್ರಷ್ಟಾಚಾರ ಮತ್ತು ದುರ್ನಡತೆ ಆರೋಪ ಎದುರಿಸುತ್ತಿರುವ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್‌ಬೀರ್ ಸಿಂಗ್ ವಿರುದ್ಧದ ಪ್ರಕರಣಗಳ ತನಿಖೆಯನ್ನು ಸುಪ್ರೀಂ ಕೋರ್ಟ್ ಗುರುವಾರ ಸಿಬಿಐಗೆ ವರ್ಗಾಯಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಎಂ.ಎಂ.ಸುಂದ್ರೇಶ್ ಅವರಿದ್ದ ನ್ಯಾಯಪೀಠವು, ಈ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಿತು.

ಭಾರತಕ್ಕೆ ಬಂದ ಚೀನಾ ವಿದೇಶಾಂಗ ಸಚಿವ



ವಾಂಗ್ ಯಿ

ನವದೆಹಲಿ (ರಾಯಿಟರ್ಸ್): ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಗುರುವಾರ ರಾಜಧಾನಿಗೆ ಆಗಮಿಸಿದ್ದು, ವಿದೇಶಾಂಗ ಸಚಿವರ ಜೊತೆಗೆ ಚರ್ಚಿಸುವ ಸಂಭವವಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಗಡಿ ಭಾಗದಲ್ಲಿ ಸೇನೆಗಳ ನಡುವಿನ ಸಂಘರ್ಷದಿಂದಾಗಿ ಉಭಯ ದೇಶಗಳ ಬಾಂಧವ್ಯವು ಮುಸುಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ಎರಡು ವರ್ಷದ ತರುವಾಯ ಚೀನಾದ ಉನ್ನತ ಪ್ರತಿನಿಧಿಯೊಬ್ಬರ ಪ್ರಥಮ ಭೇಟಿ ಇದಾಗಿದೆ.

ಸಂಕ್ಷಿಪ್ತ ಸುದ್ದಿ

ಉಮರ್ ಖಾಲಿದ್ ಜಾಮೀನು ತಿರಸ್ಕಾರ

ನವದೆಹಲಿ(ಪಿಟಿಐ): ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಅವರ ಜಾಮೀನು ಅರ್ಜಿಯನ್ನು ದೆಹಲಿ ಕೋರ್ಟ್ ಗುರುವಾರ ತಿರಸ್ಕರಿಸಿದೆ. 2020ರಲ್ಲಿ ದೆಹಲಿಯಲ್ಲಿ ನಡೆದ ಹಿಂಸಾಚಾರದಲ್ಲಿ ಪಿತೂರಿ ನಡೆಸಿದ, ದೇಶದ್ರೋಹದ ಆರೋಪ ಉಮರ್ ಖಾಲಿದ್ ಮೇಲಿದೆ.

ಈ ಕುರಿತ ಅರ್ಜಿಯನ್ನು ಮಾರ್ಚ್ 3ರಂದು ವಿಚಾರಣೆ ನಡೆಸಿದ್ದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅಮಿತಾಭ್ ರಾವತ್ ಅವರು, ಜಾಮೀನು ಕುರಿತ ಆದೇಶವನ್ನು ಕಾಯ್ದಿರಿಸಿದ್ದರು. ಈ ಆದೇಶವನ್ನು ಗುರುವಾರ ಪ್ರಕಟಿಸಲಾಗಿದೆ.

ರಶ್ಮಿ ಶುಕ್ಲಾ ವಿರುದ್ಧ ಮಾನನಷ್ಟ ಮೊಕದ್ದಮೆ

ನಾಗಪುರ (ಪಿಟಿಐ): ತಮ್ಮ ದೂರವಾಣಿ ಕದ್ದಾಲಿಕೆ ಮಾಡಿದ್ದಾರೆ ಎಂದು ಆರೋಪಿಸಿ ಮಹಾರಾಷ್ಟ್ರದ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರು ಐಪಿಎಸ್ ಅಧಿಕಾರಿ ಮತ್ತು ರಾಜ್ಯ ಗುಪ್ತಚರ ಸಂಸ್ಥೆಯ ಮಾಜಿ ಮುಖ್ಯಸ್ಥೆ ರಶ್ಮಿ ಶುಕ್ಲಾ ಹಾಗೂ ಇತರೆ ಅಧಿಕಾರಿಗಳ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ₹500 ಕೋಟಿ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

ಉತ್ತರ ಕೊರಿಯಾದಿಂದ ಮತ್ತೆ ಖಂಡಾಂತರ ಕ್ಷಿಪಣಿ ಪರೀಕ್ಷೆ

ಸೋಲ್ (ಎಪಿ): ಉತ್ತರ ಕೊರಿಯಾವು ಗುರುವಾರ ಶಂಕಿತ ಖಂಡಾಂತರ ಕ್ಷಿಪಣಿಯನ್ನು ಪರೀಕ್ಷಿಸಿದ್ದು, 2017ರಿಂದೀಚೆಗೆ ನಡೆದಿರುವ ಪ್ರಥಮ ಪರೀಕ್ಷೆ ಇದಾಗಿದೆ ಎಂದು ನೆರೆಯ ದೇಶಗಳು ಆತಂಕ ವ್ಯಕ್ತಪಡಿಸಿವೆ.

ಈ ಹಿನ್ನೆಲೆಯಲ್ಲಿ ಉತ್ತರ ಕೊರಿಯಾವನ್ನು ಅಣ್ವಸ್ತ್ರ ದೇಶ ಎಂದು ಒಪ್ಪಿಕೊಳ್ಳಬೇಕು. ಜೊತೆಗೆ ಆ ದೇಶದ ಮೇಲಿನ ಈಗಿನ ಸಡಿಲ ನಿರ್ಬಂಧಗಳನ್ನು ತೆಗೆದು ಹಾಕಿ ಕಠಿಣ ನಿರ್ಬಂಧ ವಿಧಿಸಬೇಕು ಎಂದು ದಕ್ಷಿಣ ಕೊರಿಯಾ ಸಹಿತ ಇತರ ನೆರೆಹೊರೆಯ ರಾಷ್ಟ್ರಗಳು ಅಮೆರಿಕದ ಮೇಲೆ ಒತ್ತಡ ಹೇರತೊಡಗಿವೆ.

ಅಮೆರಿಕ ಮತ್ತು ದಕ್ಷಿಣ ಕೊರಿಯಾ ಸೇನೆಗಳು ಖಂಡಾಂತರ ಕ್ಷಿಪಣಿ ವಿರುದ್ಧದ ಹೋರಾಟಕ್ಕೆ ಸಿದ್ಧತೆ ನಡೆಸುತ್ತಿದೆ ಎಂದು ಎರಡೂ ದೇಶಗಳು ಘೋಷಿಸಿಕೊಂಡ ಬೆನ್ನಲ್ಲೇ ಉತ್ತರ ಕೊರಿಯಾದಿಂದ ಈ ಕ್ಷಿಪಣಿ ಪರೀಕ್ಷೆ ನಡೆದಿದೆ.

ಸ್ಟೆಲ್ಲಾ ಮದುವೆಯಾದ ಅಸಾಂಜೆ

ಲಂಡನ್: ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ತಮ್ಮ ದೀರ್ಘಕಾಲದ ಗೆಳತಿ ಸ್ಟೆಲ್ಲಾ ಮೋರಿಸ್ ಅವರನ್ನು ಬ್ರಿಟಿಷ್ ಜೈಲಿನಲ್ಲಿ ಮದುವೆಯಾದರು.

ಲಂಡನ್ ಪೊಲೀಸರ ಭದ್ರತೆಯಲ್ಲಿ ಬೆಲ್ಮಾರ್ಶ್ ಸೆರೆಮನೆ ಹಾಲ್‌ನಲ್ಲಿ ಅಸ್ಸಾಂಜೆ ಮತ್ತು ಸ್ಟೆಲ್ಲಾ ಪರಸ್ಪರ ಉಂಗುರ ಬದಲಾಯಿಸಿಕೊಂಡು ಬುಧವಾರ ವಿವಾಹವಾದರು.

ಮದುವೆಯ ಬಳಿಕ ಜೈಲಿನಿಂದ ಹೊರ ಬಂದು ಮಾಧ್ಯಮಗಳ ಜೊತೆ ಮಾತನಾಡಿದ ಸ್ಟೆಲ್ಲಾ, 'ನನಗೆ ಸಂತೋಷದ ಜೊತೆಗೆ ದುಃಖವೂ ಆಗುತ್ತಿದೆ. ಈ ಸಮಯದಲ್ಲಿ ಅಸ್ಸಾಂಜೆ ಹೊರಗಡೆ ಇರಬೇಕಿತ್ತು. ಅವರಿಗಾಗಿ ಕಾಯುತ್ತೇನೆ' ಎಂದು ಹೇಳಿದ್ದಾರೆ. 2015ರಿಂದ ಅಸ್ಸಾಂಜೆ ಮತ್ತು ಸ್ಟೆಲ್ಲಾ ಸಹ ಜೀವನ ನಡೆಸುತ್ತಿದ್ದರು.

1,000ಕ್ಕೂ ಹೆಚ್ಚು ಪ್ರಕರಣ ಸಿಬಿಐ ತನಿಖೆಗೆ ಬಾಕಿ

ನವದೆಹಲಿ (ಪಿಟಿಐ): ಕೇಂದ್ರೀಯ ತನಿಖಾ ದಳದಲ್ಲಿ (ಸಿಬಿಐ) 1,000 ಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಉಳಿದಿವೆ. ಅವುಗಳಲ್ಲಿ 66 ಪ್ರಕರಣಗಳು ಐದು ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ತನಿಖೆಯಾಗದೇ ಬಾಕಿ ಉಳಿದಿವೆ ಎಂದು ಸಂಸದೀಯ ಸ್ಥಾಯಿ ಸಮಿತಿ ಗುರುವಾರ ಹೇಳಿದೆ.

ತನಿಖೆ ವಿಳಂಬ ಮಾಡಿದರೆ ಸಿಗುವ ನ್ಯಾಯವು ನ್ಯಾಯವಲ್ಲ ಎಂದು ಹೇಳಿರುವ ಸಮಿತಿ, ಸೂಕ್ತ ತನಿಖೆ ನಡೆಸದೇ ಪ್ರಕರಣಗಳನ್ನು ಅಂತ್ಯಗೊಳಿಸಲು ದಶಕಗಳವರೆಗೆ ಕಾಲಹರಣ ಮಾಡುವುದು ಸರಿಯಲ್ಲ. ಆದ್ದರಿಂದ ತನಿಖೆಯನ್ನು ತ್ವರಿತವಾಗಿ ನಡೆಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

ಬಾಕಿ ಉಳಿದಿರುವ ಪ್ರಕರಣಗಳ ತ್ವರಿತ ವಿಲೇವಾರಿಗೆ ಮಾರ್ಗಸೂಚಿ ಸಿದ್ಧಪಡಿಸುವಂತೆ ಸಿಬಿಐಗೆ ಸಮಿತಿ ಸೂಚಿಸಿದೆ.

ಈ ವರ್ಷದ ಜನವರಿ 31 ರವರೆಗೆ 1,025 ಪ್ರಕರಣಗಳು ತನಿಖೆಗೆ ಬಾಕಿ ಉಳಿದಿವೆ, ಅವುಗಳಲ್ಲಿ 66 ಪ್ರಕರಣಗಳು ಐದು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಬಾಕಿ ಉಳಿದಿವೆ ಎಂದು ಸಿಬಿಐ ಲಿಖಿತವಾಗಿ ತಿಳಿಸಿದೆ ಎಂದು ಸಮಿತಿಯು ಸಂಸತ್ತಿನಲ್ಲಿ ಮಂಡಿಸಿದ ತನ್ನ ವರದಿಯಲ್ಲಿ ತಿಳಿಸಿದೆ.

ತನಿಖಾ ಸಂಸ್ಥೆಗೆ ಅಗತ್ಯ ಸಿಬ್ಬಂದಿ ಒದಗಿಸಬೇಕು. ಇದರಿಂದ ಬಾಕಿ ಪ್ರಕರಣಗಳ ಸಂಖ್ಯೆ ಸಹ ಕಡಿಮೆಯಾಗಲಿದೆ. ಆದ್ದರಿಂದ, ಸಿಬಿಐನ ಕೇಡರ್ ಪುನರ್‌ರಚನೆ ಮಾಡಬೇಕು ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

2015 ರಿಂದ 2021ರ ಅವಧಿಯಲ್ಲಿ 34 ಸಿಬಿಐ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರದ 32 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 20 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ ಎಂದೂ ಸಮಿತಿಯ ವರದಿ ತಿಳಿಸಿದೆ.

'ಕೇಂದ್ರ ಸರ್ಕಾರ'ವಲ್ಲ, ಭಾರತ ಒಕ್ಕೂಟ: ಸಂಸದೀಯ ಸ್ಥಾಯಿ ಸಮಿತಿ

ನವದೆಹಲಿ: ಭಾರತ ಒಕ್ಕೂಟವೋ ಅಥವಾ ಕೇಂದ್ರ ಸರ್ಕಾರವೋ? ವಿರೋಧಪಕ್ಷಗಳ ನಾಯಕರಾದ ರಾಹುಲ್ ಗಾಂಧಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಇಂಥದೊಂದು ಪ್ರಶ್ನೆ ಎತ್ತಿದ್ದರು.

ಈ ಮುಖಂಡರ ಮಾತಿಗೆ ಬೆಂಬಲ ಎಂಬಂತೆ ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಂಸದೀಯ ಸ್ಥಾಯಿ ಸಮಿತಿಯು 'ಭಾರತ ಒಕ್ಕೂಟ' ಎಂಬ ವಾದಕ್ಕೇ ಒತ್ತು ನೀಡಿದೆ.

ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ವಿಷಯ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಗುರುವಾರ ಮಂಡಿಸಿದ ಸಚಿವಾಲಯದ ಅನುದಾನ ಕುರಿತ ವರದಿಯಲ್ಲಿ ಈ ವಾದವನ್ನು ಉಲ್ಲೇಖಿಸಿದೆ.

ಕೇಂದ್ರ ಸರ್ಕಾರ ಬಳಕೆಗೆ ಪರ್ಯಾಯವಾಗಿ ಭಾರತ ಒಕ್ಕೂಟ ಎಂದೇ ಬಳಸಬೇಕು. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಅಧಿಕಾರಿಗಳನ್ನು ಭಾರತ ಒಕ್ಕೂಟದ ಅಧಿಕಾರಿಗಳು ಎಂದೇ ಉಲ್ಲೇಖಿಸಬೇಕು ಎಂದು ಹೇಳಿದೆ.

ಇದಕ್ಕೆ ಪ್ರತಿಯಾಗಿ ಸಚಿವಾಲಯವು ಸಮಿತಿಗೆ 'ಸ್ಪಷ್ಟವಾಗಿ', ಇದು ನಿಮ್ಮ ವ್ಯಾಪ್ತಿಯನ್ನು ಮೀರಿದ್ದಾಗಿದೆ ಎಂದು ಪ್ರತಿಕ್ರಿಯಿಸಿದೆ.

ಈ ಪ್ರತಿಕ್ರಿಯೆಯನ್ನು ಲಘುವಾಗಿ ಪರಿಗಣಿಸದ ಸಮಿತಿಯು ತನ್ನ ಮತ್ತು ಸಚಿವಾಲಯದ ಮನಸಾಕ್ಷಿಗೆ ಅನುಗುಣವಾಗಿ, ಸಮಿತಿಯ ಶಿಫಾರಸುಗಳು 'ಪರಿಮಿತಿಯಲ್ಲಿಯೇ' ಅಂದರೆ ಸಂವಿಧಾನ ಮತ್ತು ಸಮಿತಿಯ ನಿಯಮಗಳ ವ್ಯಾಪ್ತಿಯಲ್ಲಿಯೇ ಇವೆ ಎಂದು ಹೇಳಿದೆ

ಪೋಲೆಂಡ್, ಸಿಂಗಪುರ: ಮಾಸ್ಕ್ ಕಡ್ಡಾಯ ಅಂತ್ಯ

ವಾರ್ಸಾ(ರಾಯಿಟರ್ಸ್/ ಪಿಟಿಐ): ಪೋಲೆಂಡ್‌ನಲ್ಲಿ ಕಡ್ಡಾಯ ಮಾಸ್ಕ್ ಧರಿಸುವಿಕೆ ಮತ್ತು ಕ್ವಾರಂಟೈನ್ ನಿಯಮವನ್ನು ಮಾರ್ಚ್ 28ರಿಂದ ರದ್ದುಗೊಳಿಸಲಾಗುವುದು ಎಂದು ದೇಶದ ಆರೋಗ್ಯ ಸಚಿವ ಆಡಮ್ ನಿಡಿಜಿಲ್‌ಸ್ಕಿ ಗುರುವಾರ ಹೇಳಿದ್ದಾರೆ.

ಆದರೆ, ಆರೋಗ್ಯ ಕೇಂದ್ರಗಳಲ್ಲಿ ಮಾಸ್ಕ್ ಧರಿಸಬೇಕು. ಹೋಂ ಐಸೋಲೇಷನ್ ಮತ್ತು ಸೋಂಕಿತರ ಸಂಪರ್ಕದಲ್ಲಿ ಇದ್ದವರಿಗೆ ಹಾಗೂ ಪ್ರಯಾಣಿಕರಿಗೆ ವಿಧಿಸಲಾಗಿದ್ದ ಕ್ವಾರಂಟನ್ ನಿಯಮವನ್ನು ತೆಗೆದು ಹಾಕಲಾಗುವುದು ಎಂದು ತಿಳಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸಿದಾಗಿನಿಂದ 20 ಲಕ್ಷ ನಿರಾಶ್ರಿತರು ಪೋಲೆಂಡ್‌ಗೆ ವಲಸೆ ಬಂದಿದ್ದಾರೆ. ಇದರಿಂದ ಕೋವಿಡ್ ಪ್ರಕರಣಗಳು ಹೆಚ್ಚಾಗಿಲ್ಲ ಎಂದೂ ತಿಳಿಸಿದ್ದಾರೆ.

ವಿದೇಶ ಪ್ರಯಾಣಕ್ಕೆ ಅವಕಾಶ: ಓಮೈಕ್ರಾನ್ ಸೋಂಕು ನಿಯಂತ್ರಣದಲ್ಲಿ ಇರುವುದರಿಂದ ಏಪ್ರಿಲ್ 1 ರಿಂದ ವಿದೇಶ ಪ್ರಯಾಣಕ್ಕೆ ಅವಕಾಶ ನೀಡಲಾಗುವುದು ಹಾಗೂ ಮಾರ್ಚ್ 29ರಿಂದ ಹೊರಾಂಗಣದಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯವಲ್ಲ ಎಂದು ಸಿಂಗಪುರ ಪ್ರಧಾನಿ ಲೀ ಸೀನ್ ಲೂಂಗ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು 89



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,245
ಇಂದಿನ ಅಂತ್ಯ	17,222
	23
ದಿನದ ಕನಿಷ್ಠ	17,091

ವಿನಿಮಯ ದರ

$	ಡಾಲರ್	76.33
£	ಪೌಂಡ್	100.45
€	ಯುರೊ	83.85
¥	ಯೆನ್ (100ಕ್ಕೆ)	63

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹425

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ಸಂಸ್ಕರಿತ)	₹1365 (1565)
ಸೋಯಾ (ಸಂಸ್ಕರಿತ)	₹1325 (1512)
ಸೂರ್ಯಕಾಂತಿ (ಸಂಸ್ಕರಿತ)	₹1340 (1825)
ಪಾಮೋಲಿನ್	₹1287 (1485)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1600
ಮಧ್ಯಮ	₹800-1200
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹18000-20000
2ನೇ ದರ್ಜೆ
₹10000-16000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹9400-9400
ಪುತ್ತೂರು	₹4000-10500
ತುರುವೇಕೆರೆ	₹16500-16500

‘ಇ–ಮಾರ್ಕೆಟ್‌ಪ್ಲೇಸ್ ಖರೀದಿ ಸಾಧನ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಆನ್‌ಲೈನ್ ಖರೀದಿ ವೇದಿಕೆಯಾಗಿರುವ ‘ಇ–ಮಾರ್ಕೆಟ್‌ಪ್ಲೇಸ್’ ಒಂದೇ ವರ್ಷದಲ್ಲಿ ₹ 1 ಲಕ್ಷ ಕೋಟಿ ಮೊತ್ತದ ಸರಕು ಖರೀದಿ ಸಾಧನೆ ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

ಸರ್ಕಾರದ ವಿವಿಧ ಸಚಿವಾಲಯಗಳು, ಇಲಾಖೆಗಳಿಗೆ ಅಗತ್ಯವಿರುವ ಪರಿಕರಗಳನ್ನು ಆನ್‌ಲೈನ್ ಮೂಲಕ ಖರೀದಿಸಲು ‘ಇ–ಮಾರ್ಕೆಟ್‌ಪ್ಲೇಸ್’ಗೆ 2016ರ ಆಗಸ್ಟ್ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು.

ಈ ಪೋರ್ಟಲ್‌ನಲ್ಲಿ ₹ 1 ಲಕ್ಷ ಕೋಟಿ ಮೊತ್ತದ ಖರೀದಿ ವಹಿವಾಟು ನಡೆದಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ‘ಇದು ಗಣನೀಯ ಏರಿಕೆಯಾಗಿದೆ’ ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ. ಶೇ 57ರಷ್ಟು ಖರೀದಿ ಸಣ್ಣ, ಅತಿ ಸಣ್ಣ ಉದ್ದಿಮೆಗಳಿಂದ ಮಾಡಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಿಎನ್‌ಜಿ, ಪಿಎನ್‌ಜಿ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ದರ ಏರಿಕೆಯ ಬೆನ್ನಿಗೇ ಇದೀಗ ಸಿಎನ್‌ಜಿ ಮತ್ತು ಕೊಳವೆ ಮೂಲಕ ಪೂರೈಕೆಯಾಗುವ ಅಡುಗೆ ಅನಿಲ (ಪಿಎನ್‌ಜಿ) ದರವನ್ನು ತಲಾ ₹ 1ರಷ್ಟು ಹೆಚ್ಚಿಸಲಾಗಿದೆ.

ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್‌ನ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ದೆಹಲಿಯಲ್ಲಿ ಗುರುವಾರ ಪ್ರತಿ ಕೆಜಿ ಸಿಎನ್‌ಜಿ ದರವನ್ನು ₹ 1ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಮಾರಾಟ ದರವು ₹ 59.01ಕ್ಕೆ ಏರಿಕೆ ಆಗಿದೆ. ಪಿಎನ್‌ಜಿ ದರವನ್ನು ಪ್ರತಿ ಕ್ಯುಬಿಕ್ ಮೀಟರ್‌ಗೆ ₹ 1ರಷ್ಟು ಹೆಚ್ಚಿಸಲಾಗಿದ್ದು, ಮಾರಾಟ ದರವು ₹ 36.61ಕ್ಕೆ ಏರಿಕೆ ಆಗಿದೆ. ಈ ಕಂಪನಿಯು ದೆಹಲಿಯಲ್ಲಿ ಸಿಎನ್‌ಜಿ ಮತ್ತು ಕೊಳವೆ ಮೂಲಕ ಅಡುಗೆ ಅನಿಲವನ್ನು ಪೂರೈಕೆ ಮಾಡುತ್ತಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆಗೆ ಅನುಗುಣವಾಗಿ ಇಂದ್ರಪ್ರಸ್ಥ ಕಂಪನಿಯು ಬೆಲೆಯಲ್ಲಿ ಈ ಪರಿಷ್ಕರಣೆ ಮಾಡಿದೆ. ಸಿಎನ್‌ಜಿ ದರವು ಈ ವರ್ಷದಲ್ಲಿ ಈವರೆಗೆ ಕೆಜಿಗೆ ₹ 5.50ರಷ್ಟು ಹೆಚ್ಚಾಗಿದೆ.

ಸ್ಥಳೀಯ ತೆರಿಗೆ ಅನುಗುಣವಾಗಿ ನಗರದಿಂದ ನಗರಕ್ಕೆ ಬೆಲೆಯಲ್ಲಿ ವ್ಯತ್ಯಾಸ ಆಗುತ್ತದೆ. ಗುರುವಾರ ಪೆಟ್ರೋಲ್, ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಇಂಧನ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಪರಿಣಾಮ: ಮೂಡಿಸ್ ವರದಿ

ತೈಲ ಕಂಪನಿಗಳಿಗೆ ವರಮಾನ ನಷ್ಟ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕಂಪನಿಗಳು ಕಚ್ಚಾ ತೈಲ ದರ ಹೆಚ್ಚಳಕ್ಕೆ ಅನುಗುಣವಾಗಿ ಬಹುಕ ದಿನಗಳವರೆಗೆ ಇಂಧನ ದರ ಹೆಚ್ಚಿಸದ ಕಾರಣ ದಿಂದಾಗಿ ಮಾರ್ಚ್‌ನಲ್ಲಿ ಅಂದಾಜು ₹ 19 ಸಾವಿರ ಕೋಟಿ ನಷ್ಟ ಅನುಭವಿಸಿವೆ ಎಂದು ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸಸ್ ಗುರುವಾರ ಹೇಳಿದೆ.

ಇಂಡಿಯನ್ ಆಯಿಲ್ (ಐಒಸಿ) ನಷ್ಟವು ₹ 7,600 ಕೋಟಿಯಿಂದ ₹ 8,360 ಕೋಟಿಯಷ್ಟು ಇರಲಿದೆ. ಭಾರತ್ ಪೆಟ್ರೋಲಿಯಂ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಕಂಪನಿಗಳ ನಷ್ಟವು ತಲಾ ₹ 4,180 ಕೋಟಿಯಿಂದ ₹4,940 ಕೋಟಿಯಷ್ಟು ಆಗುವ ಅಂದಾಜು ಮಾಡಲಾಗಿದೆ ಎಂದು ತಿಳಿಸಿದೆ.

ಕಚ್ಚಾ ತೈಲ ದರವು ನವೆಂಬರ್ ಆರಂಭದಲ್ಲಿ ಬ್ಯಾರಲ್‌ಗೆ 82 ಡಾಲರ್ ಇದ್ದದ್ದು, ಮಾರ್ಚ್ ತಿಂಗಳ ಮೂರು ವಾರಗಳಲ್ಲಿ ಸರಾಸರಿ 111 ಡಾಲರ್‌ವರೆಗೆ ಏರಿಕೆ ಕಂಡಿತ್ತು. ಹೀಗಿದ್ದರೂ 2021ರ ನವೆಂಬರ್ 4ರಿಂದ 2022ರ ಮಾರ್ಚ್ 21ರವರೆಗೆ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿರಲಿಲ್ಲ.

ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಕಂಪನಿಗಳು ಮಾರ್ಚ್ 22 ಮತ್ತು 23ರಂದು ಪೆಟ್ರೋಲ್, ಡೀಸೆಲ್ ದರವನ್ನು ಪ್ರತಿ ಲೀಟರ್‌ಗೆ ತಲಾ 80 ಪೈಸೆ ಹೆಚ್ಚಿಸಿವೆ. ಆದರೆ, ಗುರುವಾರ ಯಾವುದೇ ಬದಲಾವಣೆ ಮಾಡಿಲ್ಲ.

ಸದ್ಯದ ಮಾರುಕಟ್ಟೆ ದರದ ಆಧಾರದ ಮೇಲೆ, ತೈಲ ಮಾರಾಟ ಕಂಪನಿಗಳ ವರಮಾನದಲ್ಲಿ ಈಗ ಪ್ರತಿ ಬ್ಯಾರೆಲ್‌ಗೆ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದಿಂದ ₹ 1,824 ನಷ್ಟ ಆಗುತ್ತಿದೆ ಎಂದು ಅದು ಮಾಹಿತಿ ನೀಡಿದೆ.

ಒಂದೊಮ್ಮೆ ಕಚ್ಚಾ ತೈಲ ದರವು ಬ್ಯಾರಲ್‌ಗೆ 111 ಡಾಲರ್ ಮಟ್ಟದಲ್ಲಿಯೇ ಮುಂದುವರಿದರೆ, ಇದಕ್ಕೆ ಅನುಗುಣವಾಗಿ ಕಂಪನಿಗಳು ಮಾರಾಟ ದರ ಹೆಚ್ಚಿಸದೇ ಇದ್ದರೆ, ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದಿಂದ ಈ ಮೂರು ಕಂಪನಿಗಳು ನಿತ್ಯ ಒಟ್ಟು ₹ 490 ಕೋಟಿಯಿಂದ ₹ 532 ಕೋಟಿವರೆಗೆ ನಷ್ಟ ಅನುಭವಿಸಲಿವೆ ಎಂದು ಹೇಳಿದೆ.

ಹೂಡಿಕೆ ಮೌಲ್ಯ ಕುಸಿತ: ರಷ್ಯಾದ ಮೇಲೆ ಅಮೆರಿಕ ನಿಷೇಧ ಮತ್ತು ಅಂತರರಾಷ್ಟ್ರೀಯ ನಿರ್ಬಂಧಗಳು ಇರುವುದರಿಂದ ಭಾರತದ ಕಂಪನಿಗಳು ರಷ್ಯಾದ ತೈಲ ಮತ್ತು ಅನಿಲ ಕ್ಷೇತ್ರಗಳಲ್ಲಿ ಮಾಡಿರುವ ಹೂಡಿಕೆಯ ಮೌಲ್ಯವು ಕುಸಿಯುವ ಸಾಧ್ಯತೆ ಇದೆ ಎಂದು ಕೂಡ ಮೂಡಿಸ್ ಹೇಳಿದೆ.

ಮುಖ್ಯಾಂಶಗಳು

- ಮಾರ್ಚ್‌ನಲ್ಲಿ ₹ 19 ಸಾವಿರ ಕೋಟಿ ನಷ್ಟ
- ಪೆಟ್ರೋಲ್, ಡೀಸೆಲ್ ದರ ಗುರುವಾರ ಯಥಾಸ್ಥಿತಿ

ಒಎನ್‌ಜಿಸಿ, ಆಯಿಲ್ ಇಂಡಿಯಾ, ಇಂಡಿಯನ್ ಆಯಿಲ್ ಮತ್ತು ಭಾರತ್ ಪೆಟ್ರೋಲಿಯಂ ಕಂಪನಿಗಳು ರಷ್ಯಾದ ತೈಲ ಮತ್ತು ಅನಿಲ ಕಂಪನಿಗಳಲ್ಲಿ ₹ 1.21 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿವೆ.

ನಿರ್ಬಂಧಗಳ ಕಾರಣದಿಂದಾಗಿ ರಷ್ಯಾದ ತೈಲ ಮತ್ತು ಅನಿಲ ಕ್ಷೇತ್ರದ ಉತ್ಪಾದನಾ ಸಾಮರ್ಥ್ಯ ತಗ್ಗಲಿದೆ. ಇದರಿಂದಾಗಿ ಭಾರತದ ಕಂಪನಿಗಳಿಗೆ ನಷ್ಟವಾಗಲಿದೆ ಎಂದು ಮೂಡಿಸ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಸಿಐಐನ ದಕ್ಷಿಣ ವಲಯದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಬೆಂಗಳೂರು: ಭಾರತ್ ಬಯೊಟೆಕ್ ಇಂಟರ್‌ನ್ಯಾಷನಲ್‌ನ ಸಹ ಸ್ಥಾಪಕಿ ಸುಚಿತ್ರಾ ಕೆ. ಎಲ್ಲಾ ಅವರು 2022–23ನೇ ಸಾಲಿಗೆ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ದಕ್ಷಿಣ ವಲಯದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ವೀಲ್ಸ್ ಇಂಡಿಯಾ ಕಂಪನಿಯ ಅಧ್ಯಕ್ಷ ಕಮಲ್ ಬಾಲಿ ಅವರು ಸಿಐಐ ದಕ್ಷಿಣ ವಲಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಎಸ್‌ಇ: ಮಾಜಿ ಜಿಒಒಗೆ ಸಿಗದ ಜಾಮೀನು

ನವದೆಹಲಿ: ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಗ್ರೂಪ್ ಆಪರೇಟಿಂಗ್ ಆಫೀಸರ್ (ಜಿಒಒ) ಆನಂದ ಸುಬ್ರಮಣಿಯನ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿಯ ಕೋರ್ಟ್ ಗುರುವಾರ ತಿರಸ್ಕರಿಸಿದೆ.

ಅರ್ಜಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಸಂಜೀವ್ ಅಗರವಾಲ್ ಅವರು, ‘ಆರೋಪಿಯು ಎನ್‌ಎಸ್‌ಇಯಲ್ಲಿ ಪ್ರಮುಖ ಸ್ಥಾನದಲ್ಲಿದ್ದರು. ಅವರ ವಿರುದ್ಧದ ಆರೋಪಗಳ ಕುರಿತು ತನಿಖೆಯು ನಡೆಯುತ್ತಿದೆ. ಹೀಗಾಗಿ ಜಾಮೀನು ನೀಡಲು ಸಾಧ್ಯವಿಲ್ಲ’ ಎಂದರು.

ಷೇರುಗಳನ್ನು ತ್ವರಿತವಾಗಿ ಖರೀದಿಸಲು ಹಾಗೂ ಮಾರಾಟ ಮಾಡಲು ವರ್ತಕರಿಗೆ ಅವಕಾಶ ಕಲ್ಪಿಸುವ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡ ಪ್ರಕರಣದ ಆರೋಪಿಯಾಗಿರುವ ಆನಂದ ಸುಬ್ರಮಣಿಯನ್, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಜಿಡಿಪಿ: ಶೇ 4.6ಕ್ಕೆ ತಗ್ಗಿಸಿದ ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): 2022ರಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು ಶೇಕಡ 4.6ರಷ್ಟು ಮಾತ್ರ ಇರಲಿದೆ ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ. ಈ ಮೊದಲು ಮಾಡಿದ್ದ ಅಂದಾಜು ಬೆಳವಣಿಗೆ ಪ್ರಮಾಣಕ್ಕಿಂತ ಇದು ಶೇ 2.1ರಷ್ಟು ಕಡಿಮೆ.

ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮಗಳಿಂದಾಗಿ ಬೆಳವಣಿಗೆ ಪ್ರಮಾಣ ತಗ್ಗಲಿದೆ ಎಂದು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮಾವೇಶ ವರದಿ ಹೇಳಿದೆ. ವಿಶ್ವದ ಆರ್ಥಿಕ ಬೆಳವಣಿಗೆ ದರವು ಶೇ 2.6ರಷ್ಟು ಇರಲಿದೆ ಎಂದು ವರದಿ ಅಂದಾಜು ಮಾಡಿದೆ. ರಷ್ಯಾದ ಆರ್ಥಿಕ ವ್ಯವಸ್ಥೆಯು ಈ ವರ್ಷದಲ್ಲಿ ತೀವ್ರ ಹಿಂಜರಿತ ಕಾಣಲಿದೆ. ಯುರೋಪಿನ ಪಶ್ಚಿಮ ಭಾಗದ ಕೆಲವು ದೇಶಗಳಲ್ಲಿ, ದಕ್ಷಿಣ, ಮಧ್ಯ ಹಾಗೂ ಆಗ್ನೇಯ ಏಷ್ಯಾದ ಕೆಲವು ದೇಶಗಳಲ್ಲಿ ಸಹ ಬೆಳವಣಿಗೆ ಪ್ರಮಾಣ ಕುಸಿಯಲಿದೆ ಎಂದು ಹೇಳಿದೆ.

ಸಾಂಸ್ಥಿಕ ಹೂಡಿಕೆದಾರರಿಂದ ₹ 1,290 ಕೋಟಿ ಹೂಡಿಕೆ

ರುಚಿ ಸೋಯಾ ಎಫ್‌ಪಿಒ ಆರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ಪತಂಜಲಿ ಆಯುರ್ವೇದ ಸಮೂಹದ ಒಡೆತನದ ರುಚಿ ಸೋಯಾ ಇಂಡಸ್ಟ್ರೀಸ್‌ನ ಹೆಚ್ಚುವರಿ ಷೇರು ವಿತರಣೆ (ಎಫ್‌ಪಿಒ) ಪ್ರಕ್ರಿಯೆಯು ಗುರುವಾರ ಆರಂಭವಾಗಿದೆ. ಕಂಪನಿಯಲ್ಲಿ ಸಾಂಸ್ಥಿಕ ಹೂಡಿಕೆದಾರರು ₹ 1,290 ಕೋಟಿ ಬಂಡವಾಳ ಹೂಡಿದ್ದಾರೆ.

ಗುರುವಾರ ಇಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ರುಚಿ ಸೋಯಾ ಕಂಪನಿಯ ಕಾರ್ಯನಿರ್ವಾಹಕೇತರ ಅಧ್ಯಕ್ಷ, ಯೋಗಗುರು ಬಾಬಾ ರಾಮದೇವ್, ‘ಉಕ್ರೇನ್–ರಷ್ಯಾ ನಡುವಿನ ಯುದ್ಧದ ಕಾರಣದಿಂದಾಗಿ ಜಾಗತಿಕವಾಗಿ ಷೇರು ಮಾರುಕಟ್ಟೆಗಳು ಕುಸಿತ ಕಂಡಿವೆ. ಆದರೂ, ನಮ್ಮ ಕಂಪನಿಯು ಷೇರು ಮಾರುಕಟ್ಟೆ ಪ್ರವೇಶಿಸುತ್ತಿದೆ. ವಿದೇಶಿ ಮೂಲದ ಆಹಾರೋತ್ಪನ್ನ ಕಂಪನಿಗಳನ್ನೇ ಅವಲಂಬಿಸಿದ್ದರಿಂದ ದೇಶ ದುಷ್ಪರಿಣಾಮ ಎದುರಿಸಿದೆ. ಬೇರೆ ದೇಶಗಳ ನಡುವೆ ಯುದ್ಧ ನಡೆದರೂ ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಉಂಟಾಗಬಾರದು ಎಂಬುದು ಪತಂಜಲಿ ಮತ್ತು ರುಚಿ ಸೋಯಾ ಉದ್ದೇಶ’ ಎಂದು ಹೇಳಿದರು.

ದಿವಾಳಿ ಆಗಿದ್ದ ರುಚಿ ಸೋಯಾ ಕಂಪನಿಯನ್ನು ಪತಂಜಲಿ ಕಂಪನಿಯ ಬಿಡ್ ಮೂಲಕ ಸ್ವಾಧೀನಕ್ಕೆ ತೆಗೆದುಕೊಂಡಿದೆ. ರುಚಿ ಸೋಯಾ ಕಂಪನಿ ಮೇಲಿರುವ ₹ 3,300 ಕೋಟಿ ಸಾಲವನ್ನು ಹಂತಹಂತವಾಗಿ ಮರುಪಾವತಿ ಮಾಡಲಾಗುವುದು ಎಂದು ರಾಮದೇವ್ ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿ ರುಚಿ ಸೋಯಾ ಮತ್ತು ಪತಂಜಲಿ ಆಹಾರ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡ್ ಮಾಡುವ ಉದ್ದೇಶ ಹೊಂದಲಾಗಿದೆ. ಯಾವುದೇ ಉತ್ಪನ್ನದ ಬೆಲೆ ನಿಗದಿಪಡಿಸುವಾಗ ಬೇಡಿಕೆ ಮತ್ತು ಪೂರೈಕೆ ಸಂಸ್ಥೆಯ ವಹಿವಾಟು ಪರಿಗಣಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ರಾಮದೇವ್ ಮಾಹಿತಿ ನೀಡಿದರು.

ಟಿಇಟಿ ಪಾಸಾಗಿರುವ ಶಿಕ್ಷಕರು ತಮ್ಮ ಉದ್ಯೋಗದ ಕಾಯಮಾತಿಗೆ ಒತ್ತಾಯಿಸಿ ಅಸ್ಸಾಂನ ಗುವಾಹಟಿಯ ಶಾಹೀದ್‌ಬಾಡದಲ್ಲಿ ಇರುವ ಶಿಕ್ಷಣ ಇಲಾಖೆಯ ಮುಖ್ಯ ಕಚೇರಿಯ ಎದುರು ಗುರುವಾರ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಉಗ್ರರ ಬಗ್ಗೆ ಸಹಾನುಭೂತಿ ಉಳ್ಳವರ ಆಸ್ತಿ ಜಪ್ತಿ ಆರಂಭ

ಪ್ರಜಾವಾಣಿ ವಾರ್ತೆ

ಶ್ರೀನಗರ: ಉಗ್ರರಿಗೆ ಆಶ್ರಯ ಹಾಗೂ ನೆರವು ನೀಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿರುವ ಜಮ್ಮು ಮತ್ತು ಕಾಶ್ಮೀರ ಪೊಲೀಸರು, ಉಗ್ರರ ಬಗ್ಗೆ ಸಹಾನುಭೂತಿ ಉಳ್ಳವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಆರಂಭಿಸಿದ್ದಾರೆ.

ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ಶ್ರೀನಗರ ಜಿಲ್ಲೆಯಿಂದ ಆರಂಭಿಸಲಾಗಿದ್ದು, ಭದ್ರತಾ ಪಡೆಗಳು ಹಾಗೂ ನಾಗರಿಕರ ಮೇಲಿನ ದಾಳಿಯ ಸಂಚು ರೂಪಿಸಲು ಬಳಸುವ ಮನೆಗಳನ್ನು ಕೂಡ ಜಪ್ತಿ ಮಾಡಲು ಮುಂದಾಗಿದ್ದಾರೆ.

‘ಕಾನೂನುಬಾಹಿರ ಚಟುವಟಿಕೆ ತಡೆ (ಯುಎಪಿಎ) ಕಾಯ್ದೆಯಡಿ ಭಯೋತ್ಪಾದನೆಯ ಉದ್ದೇಶಕ್ಕಾಗಿ ಬಳಸಲಾದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಭಯೋತ್ಪಾದಕರು, ಭಯೋತ್ಪಾದಕ ಸಹಚರರಿಗೆ ಆಶ್ರಯ ನೀಡಬೇಡಿ’ ಎಂದು ಗುರುವಾರ ಶ್ರೀನಗರ ಪೊಲೀಸರು ಟ್ವೀಟ್ ಮಾಡಿದ್ದಾರೆ.

‘ಎನ್‌ಕೌಂಟರ್ ನಡೆದಿರುವ ಮನೆಗಳು, ಉಗ್ರರು ಆಶ್ರಯ ಪಡೆದಿರುವ ಮನೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 2020–21ರಲ್ಲಿ ಶ್ರೀನಗರದ ಹಲವು ಬಡಾವಣೆಗಳಾದ ಪಂಥ ಚೌಕ್, ಸೌರಾ, ಬಟಮಾಲೂ, ನೌಗಾಮ್, ಹವಾಲ್ ಪ್ರದೇಶಗಳಲ್ಲಿ ಹತ್ತಕ್ಕೂ ಹೆಚ್ಚು ಮನೆಗಳನ್ನು ಗುರುತಿಸಲಾಗಿದೆ’ ಎಂದು ಶ್ರೀನಗರ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರಾಕೇಶ್ ಬಲ್ವಾಲ್ ತಿಳಿಸಿದರು.

ಬೆಂಗಳೂರಿನಲ್ಲಿ ‘ಪ್ರಾಟ್ ಅಂಡ್ ವಿಟ್ನಿ’ ಪೂರೈಕೆ ಕೇಂದ್ರ

ಹೈದರಾಬಾದ್: ವಿಮಾನಗಳ ವಿನ್ಯಾಸ, ಉತ್ಪಾದನೆ ಹಾಗೂ ಹೆಲಿಕಾಪ್ಟರ್‌ಗಳ ಎಂಜಿನ್ ಅಭಿವೃದ್ಧಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಕೆನಡಾದ ‘ಪ್ರಾಟ್ ಅಂಡ್ ವಿಟ್ನಿ’ ಸಂಸ್ಥೆಯು ತನ್ನ ನೂತನ ಪೂರೈಕೆ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಿದೆ.

ಸಂಸ್ಥೆಯು ಉದ್ದೇಶಿತ ಕೇಂದ್ರಕ್ಕೆ 160 ಮಂದಿ ವೃತ್ತಿಪರ ವಿಶ್ಲೇಷಕರು ಮತ್ತು ಡಾಟಾ ವಿಜ್ಞಾನಿಗಳ ನೇಮಕ ಪ್ರಕ್ರಿಯೆ ಆರಂಭಿಸಿದೆ. ಏಪ್ರಿಲ್ ವೇಳೆಗೆ ಯಲಹಂಕದಲ್ಲಿರುವ ಕಾಲಿನ್ಸ್ ಏರೋಸ್ಪೇಸ್ ಆವರಣದಲ್ಲಿ ಕೇಂದ್ರ ಕಾರ್ಯಾರಂಭ ಮಾಡಲಿದೆ.

ವಹಿವಾಟು ನಿರ್ವಹಣೆ, ಖರೀದಿ, ಡಿಜಿಟಲ್ ವಿಶ್ಲೇಷಣೆ ವಿಭಾಗಗಳತ್ತ ಬೆಂಗಳೂರು ಕೇಂದ್ರವು ಒತ್ತು ನೀಡಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಿಳಿ ಜೋಳ	
ಸವಣೂರು	
ಕಪ್ಪು	430-450
ನರಗುಂದ	500-550
ರಾಶಿ	600-650
ರಾಶಿ ಉತ್ತಮ	650-700
ಜರಡ	750-800
ಹತ್ತಿ	1100-1150
ಹತ್ತಿ ಸಾಧಾರಣ	600-700
ಹತ್ತಿ ಉತ್ತಮ	900-950
ಹತ್ತಿ ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಹೊಸ	12500-25000
ಹಳೆ	27500-45000
ಕೋಕ	46000-53000
ಕುಮಟ	
ಚಾಲಿ	24099-33488
ಕೋಕ	14099-28101
ಹಳೆಚಾಲಿ	454669-49000
ಹೊಸಚಾಲಿ	36599-40569
ಕುಂದಾಪುರ	
ಹೊಸಚಾಲಿ	43500-44500
ಪುತ್ತೂರು	
ಕೋಕ	11000-26000
ನ್ಯೂ ವೆರೈಟಿ	27500-45000

ಸಿದ್ದಾಪುರ	
ಬಿಳಿಗೋಟು	24011-32099
ಚಾಲಿ	43599-43599
ಹೊಸಚಾಲಿ	34009-40309
ಕೆಂಪುಗೋಟು	28609-30719
ರಾಶಿ	412369-47508
ತಟ್ಟಿಬೆಟ್ಟೆ	38469-44009
ಶಿರಸಿ	
ಬೆಟ್ಟೆ	32521-45899
ಬಿಳಿಗೋಟು	17069-32199
ಚಾಲಿ	34899-40701
ರಾಶಿ	39609-48509
ಯಲ್ಲಾಪುರ	
ಬಿಳಿಗೋಟು	26899-325189
ಚಾಲಿ	36599-40900
ಕೋಕ	18899-29419
ಕೆಂಪುಗೋಟು	31610-35110

ರಾಶಿ	47349-54906
ತಟ್ಟಿಬೆಟ್ಟೆ	38899-46379
ಶಿವಮೊಗ್ಗ	
ಬೆಟ್ಟೆ	47069-48503
ಗೊರಬಲು	13309-33700
ರಾಶಿ	42251-46809
ಸರಕು	50030-72986
ಸಾಗರ	
ಬಿಳಿಗೋಟು	20369-29099
ಚಾಲಿ	27992-38299
ಕೋಕ	18899-29600
ಕೆಂಪುಗೋಟು	20619-36689
ರಾಶಿ	33699-47329
ಸಿಪ್ಪೆಗೋಟು	5100-22100
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	400-770
ದ್ವಿತಳಿ	228-899

ಕಾಫಿ (50 ಕೆ.ಜಿ.ಗೆ ₹ ಗಳಲ್ಲಿ)

ಮಡಿಕೇರಿ	ಹಾಸನ			
	ಮುದ್ದೂನ	ಪಾಲಿಬೆಟ್ಟ	ಅಲ್ದಾನ	ನ್ಯೂಯಾರ್ಕ್
ಎಪಿ	15750	15600	15650	225.30 ಸೆಂಟ್ಸ್
ಎಸಿ	8120	7900	8200	
ಆರ್‌ಪಿ	8750	8700	9000	ಲಂಡನ್
ಆರ್‌ಸಿ	4210	3950	4025	2139 ಡಾಲರ್

ಮುಂಬೈ ಧಾರಣೆ

ಶೇಂಗಾ

24-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1585 (1575)
ಒಂದು ವಾರದ ಡೆಲಿವರಿ	1580 (1570)
ಸೋಯಾ ಕಚ್ಚಾ	1475 (1480)
ಪಾಮ್ ವಾರದ ಡೆಲಿವರಿ	1478 (1483)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1750)

ಚಿನ್ನ – ಬೆಳ್ಳಿ (ಜಿಎಸ್‌ಟಿ ರಹಿತ)

ಅಪರಂಜಿ ಚಿನ್ನ 10ಗ್ರಾಂ
51,800 (51,500)
ಬೆಳ್ಳಿ ಕೆ.ಜಿ 68,500 (67,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುತಿ ಸುಜುಕಿಗೆ ಹಿಸಾಶಿ ತಕೆಯುಚಿ ನೂತನ ಸಿಇಒ

ನವದೆಹಲಿ (ಪಿಟಿಐ): ಹಿಸಾಶಿ ತಕೆಯುಚಿ ಅವರು ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ನೇಮಕ ಆಗಿದ್ದಾರೆ. ಈ ನೇಮಕವು ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಹಿಸಾಶಿ ತಕೆಯುಚಿ

ಈಗ ಈ ಹುದ್ದೆಯಲ್ಲಿ ಇರುವ ಕೆನಿಚಿ ಆಯುಕಾವಾ ಅವರ ಅಧಿಕಾರ ಅವಧಿಯು ಮಾರ್ಚ್ 31ರಂದು ಕೊನೆಗೊಳ್ಳಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ತಕೆಯುಚಿ ಅವರು 1986ರಿಂದ ಸುಜುಕಿ ಮೋಟರ್ ಕಾರ್ಪೊರೇಷನ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ತುಮಕೂರಿನ ಮಹಿಳಾ ಹಾಸ್ಟೆಲ್‌ಗೆ ಅಡುಗೆ ಮಾಡಲು ಗಂಡ ಹೆಂಡತಿ (ದಂಪತಿಯ) ಬೇಕಾಗಿದ್ದಾರೆ. ಸಂಪರ್ಕಿಸಿ: 9900545854.

ಸಮೃದ್ಧಿ ಗ್ರಾಂಡ್ ಹೋಟೆಲ್‌ಗೆ ಜ್ಯೂಸ್ ಮತ್ತು ಚಾಟ್ಸ್ ತಯಾರಿಸುವವರು ಬೇಕಾಗಿದ್ದಾರೆ Kamakshipalya ಬೆಂಗಳೂರು. Contact: 9342552428

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಇರುತ್ತದೆ. ಸಂಪರ್ಕಿಸಿ: 7760014526, 9739544856

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002.

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಷನ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಬಳದೊಂದಿಗೆ ಸಂಪರ್ಕಿಸಿ: 8904379634/ 9513670249

ಪ್ರತಿಷ್ಠಿತ ಲಿಮಿಟೆಡ್ ಕಂಪನಿಯೊಂದಕ್ಕೆ SSLC ಮೇಲ್ಪಟ್ಟ 800 ಯುವಕ ಯುವತಿಯರು ರಾಜ್ಯಾದ್ಯಂತ ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ESI, PF, OT ಇದೆ 13,000 -37,000/- 9353753194, 9663704915

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೊಂದಿಗೆ. 7899778278, 9611715755

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 ರಿಂದ 28000 ಸಂಪರ್ಕಿಸಿ 9980814578, 9980812378

ಕನ್ನಡ ಮತ್ತು ಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ಮನೆಯಲ್ಲೇ ಕುಳಿತು ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಆನ್‌ಲೈನ್ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕೂ ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತು ಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೇ ಕುಳಿತು ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Marketing & Sales

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರು ನಗರಕ್ಕೆ ಸೇಲ್ಸ್ ಮ್ಯಾನ್ ಆಗಿ ಕೆಲಸಮಾಡಲು ಬೇಕಾಗಿದ್ದಾರೆ. ದ್ವಿಚಕ್ರವಾಹನ ಕಡ್ಡಾಯ, ಆಕರ್ಷಕ ಸಂಬಳದೊಂದಿಗೆ ಇತರೆ incentive ಇರುತ್ತದೆ. 9535111997, 9035350360

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080-25300714

ಬೆಂಗಳೂರು ಮನೆ ಕೆಲಸ ಮಾಡುವ ಮಹಿಳೆ ಮನೆಯಲ್ಲಿ ಉಳಿದುಕೊಂಡು, ಮಕ್ಕಳು ಇಲ್ಲದವರು ಊಟವಸತಿ, ಉತ್ತಮ ಸಂಬಳ ಸ್ಥಳ: ಜಕ್ಕೂರು 9901931555

Part-Time Jobs

ವ್ಯಾಪಾರ

Business to Business

Business

★ಮೇಣಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು. 9060476868/ 8792252077, ಶಿವಮೊಗ್ಗ:9008013895

PROPERTY CORNER

ಬಾಗಲಕೋಟೆ ನವನಗರ
ಆಗ್ರೋಟೆಕ್ ಪಾರ್ಕಿನಲ್ಲಿ ಬಾಡಿಗೆಗೆ ಗೋಡನ್ ದೊರೆಯುತ್ತದೆ

ಬಾಗಲಕೋಟೆ ಜಿಲ್ಲೆಯ ನವನಗರದ ಕೆಐಎಡಿಬಿಯ ಆಗ್ರೋಟೆಕ್ ಪಾರ್ಕಿನಲ್ಲಿ (ತೋಟಗಾರಿಕೆ ವಿಶ್ವವಿದ್ಯಾನಿಲಯದ ಎದುರು ಮತ್ತು ರೈಲ್ವೆ ನಿಲ್ದಾಣಕ್ಕೆ ಹತ್ತಿರದಲ್ಲಿದೆ) ನಮ್ಮ ಸುಮಾರು 2025 ಚದರ ಮೀಟರ್ ಅಳತೆಯ ನಿವೇಶನದಲ್ಲಿ ನಿಮ್ಮ ಅವಶ್ಯಕತೆಗೆ ತಕ್ಕಂತೆ ಒಣ/ಶೀತಲ ಗೋಡನ್ ನ್ನು ಬಾಡಿಗೆ ಆಧಾರದ ಮೇಲೆ ನಿರ್ಮಿಸಿಕೊಡಲಾಗುವುದು.
ಸಂಪರ್ಕಿಸಿ: 9443855161, 9448183461

Business Offers

Finance

WANT a suggestion? - TRADING ! we offer best investment ideas & advisory/ secured plan on trading. 8884470597, 8341472566

Franchise

PMS COMPANY is inviting Franchise Partner and Channel Partner for every Pincode in Bangalore And Karnataka for Real Estate Activity. For details Call 9342335589 or visit @ office M.G.Road Bangalore.

★★ಅಂಥ್ಯಾಭಾವಿನಿ★★ ಜ್ಯೋತಿಷ್ಯಾಲಯ ಕೊಳ್ಳೇಗಾಲದ ನಂ.1 ‘ವಶೀಕರಣ ಸ್ಪೆಷಲಿಸ್ಟ್’ ದೇವಿಪ್ರಸಾದ್. (ಉಚಿತ ಭವಿಷ್ಯ ಹಾಗೂ ಪರಿಹಾರ) ನಿಮ್ಮ ಸಮಸ್ಯೆಗಳಿಗೆಂದಿನ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾರಿಗೆ, ಸ್ತ್ರೀ ಪುರುಷ ವಶೀಕರಣ, ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು, ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ. 9591580089.

ಪ್ರವಾಸ

Travel

18.04.2022, 05.05.2022, 11ದಿನಗಳ ಕಾಶಿ 13.04.2022 ರಿಂದ ರಾಮೇಶ್ವರ, ಕನ್ಯಾಕುಮಾರಿ, ಮದುರೈ,ಶ್ರೀರಂಗಂ, ನವಗ್ರಹಗಳು 7/10 ದಿನಗಳು 02.05.2022, 18.05.2022, 15ದಿನಗಳ ಚಾರ್‌ಧಾಮ್‌ಯಾತ್ರೆ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಋಷಿಕೇಶ್, ಹರಿದ್ವಾರ ಅಹಮದಾಬಾದ್ ಮತ್ತು ಇತರ ಪ್ರವಾಸಗಳಿಗೆ ಸಂಪರ್ಕಿಸಿ: ವಿಷ್ಣುಪ್ರಿಯ ಟೂರ್ಸ್ ಅಂಡ್ ಟ್ರಾವೆಲ್ಸ್, ಶ್ರೀರಾಮಪುರ, ಬೆಂಗಳೂರು-70. 9342287551, 8050629305

28.04.2022, 8ದಿನಗಳು ವಾರಣಾಸಿ, ಗಯಾ,ಬುದ್ಧಗಯಾ, ಕಲ್ಕತ್ತಾ,ಭುವನೇಶ್ವರ್, ಪೂರಿಜಗನ್ನಾಥ್ ಮತ್ತು ಚಾರ್‌ಧಾಮ್‌ಯಾತ್ರೆ, ಬದ್ರಿನಾಥ್ 12ದಿನಗಳು ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರ, ಬೆಂಗಳೂರು-03. 9448294477

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 30/04/22 ದಿಲ್ಲಿ, ವೈಷ್ಣೋದೇವಿ, ಕುಲು, ಮನಾಲಿ. 14/05/22 ಚಾರ್‌ಧಾಮ್ ಯಾತ್ರಾ, ಕೇದಾರನಾಥ, ಬದ್ರಿನಾಥ್, ಯಮುನೋತ್ರಿ, ಗಂಗೋತ್ರಿ 9591017782

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಭವಿಷ್ಯ

Astrology

ಕೇರಳ ಹಾಗೂ ಕೊಳ್ಳೇಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಗುಪ್ತ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು,ಚಿತ್ರದುರ್ಗ 9008867041

★ದೈವಜ್ಞ ಶ್ರೀವೇಣುಗೋಪಾಲ★ ರವರಿಂದ ನಿರ್ವಹಿಸಲ್ಪಡುವ ಅಷ್ಟಮಂಗಲ ಪ್ರಶ್ನೆ, ಕುಜದೋಷ ಶನಿದೋಷ, ಸ್ತ್ರೀ ಪುರುಷ ವಶೀಕರಣ, ಮದುವೆ ಹಾಗೂ ವ್ಯಾಪಾರ ಸಮಸ್ಯೆಗಳಿಗೆ ಪರಿಹಾರ ಇಂದೇ ಸಂಪರ್ಕಿಸಿ 9845005009

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು ಎಂದು ನಂಬಲಾಗಿದೆ. ಆದರೆ, ಅವುಗಳಲ್ಲಿ ಪ್ರಕಟವಾದ ವಿಷಯಗಳ ಬಗ್ಗೆ ಓದುಗರು ಸ್ವತಃ ಪರಿಶೀಲಿಸಿ ಮುಂದುವರಿಯುವುದು ಸೂಕ್ತ. ಜಾಹೀರಾತುದಾರರ ಹೇಳಿಕೆಗಳಿಗೆ ಪತ್ರಿಕೆ ಜವಾಬ್ದಾರಿಯಲ್ಲ. ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಹನ್ನೆರಡು ಆವೃತ್ತಿಗಳ ನಂತರ ನಾಯಕತ್ವ ಬಿಟ್ಟುಕೊಟ್ಟ ಮಹೇಂದ್ರಸಿಂಗ್ ಧೋನಿ

ಚೆನ್ನೈ ಸಿಂಹಾಸನಕ್ಕೆ ಜಡೇಜ

ಮುಂಬೈ (ಪಿಟಿಐ): ಮಹೇಂದ್ರಸಿಂಗ್ ಧೋನಿ ಮತ್ತೊಂದು ಬಾರಿ ಅಚ್ಚರಿಯ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಗುರುವಾರ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವವನ್ನು ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಗೆ ಹಸ್ತಾಂತರಿಸಿದ್ದಾರೆ. ಮೊದಲ ಆವೃತ್ತಿಯ ಟೂರ್ನಿ ಆರಂಭವಾದಾಗಿನಿಂದಲೂ ಧೋನಿ ಚೆನ್ನೈ ತಂಡಕ್ಕೆ ನಾಯಕರಾಗಿದ್ದರು. ಮಹಿ ನಾಯಕತ್ವದಲ್ಲಿ ತಂಡವು ನಾಲ್ಕು ಬಾರಿ ಚಾಂಪಿಯನ್ ಆಗಿದೆ. ಹೋದ ವರ್ಷವೂ ಟ್ರೋಫಿ ಗೆದ್ದಿತ್ತು.

'ತಂಡದ ನಾಯಕತ್ವವನ್ನು ರವೀಂದ್ರ ಜಡೇಜಗೆ ಹಸ್ತಾಂತರಿಸಲು ಧೋನಿ ನಿರ್ಧರಿಸಿದ್ದಾರೆ. 2012ರಿಂದ ಜಡೇಜ ಚೆನ್ನೈ ತಂಡದಲ್ಲಿದ್ದಾರೆ. ಧೋನಿ ಈ ವರ್ಷ ಮತ್ತು ಮುಂದೆಯೂ ನಮ್ಮ ತಂಡವನ್ನು ಪ್ರತಿನಿಧಿಸುವರು' ಎಂದು ಚೆನ್ನೈ ಫ್ರ್ಯಾಂಚೈಸಿ ತಿಳಿಸಿದೆ.

ಧೋನಿ ತಮ್ಮ ವೃತ್ತಿಜೀವನದಲ್ಲಿ ನಾಯಕತ್ವ ಬಿಟ್ಟುಕೊಡುವ ಅಥವಾ ವಿದಾಯ ಹೇಳುವುದನ್ನು ದಿಢೀರ್ ಎಂದು ಪ್ರಕಟಿಸಿದ್ದೇ ಹೆಚ್ಚು. 2014ರಲ್ಲಿ ಆಸ್ಟ್ರೇಲಿಯಾದಲ್ಲಿ ಸರಣಿಯಲ್ಲಿ ಆಡುವ ಸಂದರ್ಭದಲ್ಲಿಯೇ ಭಾರತ ಟೆಸ್ಟ್ ತಂಡಕ್ಕೆ ವಿದಾಯ ಹೇಳಿದ್ದರು.

2017ರಲ್ಲಿ ಸೀಮಿತ ಓವರ್‌ಗಳ ತಂಡಗಳ ನಾಯಕತ್ವವನ್ನು ವಿರಾಟ್ ಕೊಹ್ಲಿಗೆ ಹಸ್ತಾಂತರಿಸಿದ್ದರು. 2020ರ ಆಗಸ್ಟ್ 15ರಂದು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.



ಮಹೇಂದ್ರಸಿಂಗ್ ಧೋನಿ

ವಯಸ್ಸು: 41

ನಾಯಕತ್ವದ ಅವಧಿ: 2008–15 ಮತ್ತು 2018–21 (ಸ್ಪಾಟ್ ಫಿಕ್ಸಿಂಗ್ ಪ್ರಕರಣದಲ್ಲಿ ತಂಡವು 2016, 2017ರಲ್ಲಿ ನಿಷೇಧಕ್ಕೊಳಗಾಗಿತ್ತು)

ಐಪಿಎಲ್ ಪ್ರಶಸ್ತಿ ಜಯ: 2010, 2011, 2018, 2021

ರನ್ನರ್ಸ್ ಅಪ್: 2008, 2012, 2013, 2015, 2019

ಚಾಂಪಿಯನ್ಸ್ ಲೀಗ್ ವಿಜಯ: 2010, 2014

ತಂಡದ ಸಾಧನೆ: ಪಂದ್ಯ 195, ಜಯ 117, ಸೋಲು 77, ಫಲಿತಾಂಶವಿಲ್ಲ 1

ಐಪಿಎಲ್ ಸಾಧನೆ

ಮಹೇಂದ್ರಸಿಂಗ್ ಧೋನಿ		ರವೀಂದ್ರ ಜಡೇಜ
220	ಪಂದ್ಯ	200
4746	ರನ್	2386
135.83	ಸ್ಟ್ರೈಕ್‌ರೇಟ್	128.14
84	ಶ್ರೇಷ್ಠ	62
23	ಅರ್ಧಶತಕ	2
325	ಬೌಂಡರಿ	176
219	ಸಿಕ್ಸರ್	85

ರವೀಂದ್ರ ಜಡೇಜ

ಬೌಲಿಂಗ್	
ಓವರ್	501.1
ವಿಕೆಟ್	127
ಶ್ರೇಷ್ಠ	16ಕ್ಕೆ5

ಆಡಿದ ತಂಡಗಳು: ರಾಜಸ್ಥಾನ್ ರಾಯಲ್ಸ್ (2008-09), ಕೊಚ್ಚಿ ಟಸ್ಕರ್ಸ್ ಕೇರಳ (2011), ಚೆನ್ನೈ ಸೂಪರ್ ಕಿಂಗ್ಸ್ (2012 ರಿಂದ ಇಲ್ಲಿಯವರೆಗೆ)

ಧೋನಿ ನಾಯಕತ್ವದಲ್ಲಿ ಚೆನ್ನೈ ಸಾಧನೆ

ಪಂದ್ಯ	190
ಜಯ	116
ಸೋಲು	73
ಫಲಿತಾಂಶವಿಲ್ಲ	1

ನಂತರದ ಐಪಿಎಲ್‌ನಲ್ಲಿ ಮಾತ್ರ ತಮ್ಮ ಆಟ ಮುಂದುವರಿಸಿದ್ದರು.

ಚೆನ್ನೈ ತಂಡದಲ್ಲಿ ಅವರಿಗೆ 'ಆಪ್ತ'ರಾಗಿರುವ ಜಡೇಜ ಅವರನ್ನೇ ತಮ್ಮ ಸ್ಥಾನಕ್ಕೆ ಆಯ್ಕೆ ಮಾಡಿದ್ದು ಅಚ್ಚರಿಯೇನಲ್ಲ. 2014, 2018 ಮತ್ತು ಹೋದ ವರ್ಷ ತಂಡವು ಚಾಂಪಿಯನ್ ಆಗುವಲ್ಲಿ ಜಡೇಜ ಕಾಣಿಕೆಯೂ ಮಹತ್ವದ್ದಾಗಿದೆ.

ಈಚೆಗೆ ಮೆಗಾ ಹರಾಜಿಗಿಂತ ಮುಂಚೆ ಚೆನ್ನೈ ತಂಡವು ನಾಲ್ಕು ಆಟಗಾರರನ್ನು ಉಳಿಸಿಕೊಂಡಿತ್ತು. ಅದರಲ್ಲಿಯೂ ಧೋನಿಯ ನಂತರದ ಹೆಸರು ಜಡೇಜ ಅವರದ್ದಾಗಿತ್ತು. ಮೋಯಿನ್ ಅಲಿ ಮತ್ತು ಯುವ ಬ್ಯಾಟರ್ ಋತುರಾಜ್ ಗಾಯಕವಾಡ್ ಉಳಿದ ಇನ್ನಿಬ್ಬರು.

ಬುಧವಾರ ಪ್ರಕಟವಾದ ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಆಲ್‌ರೌಂಡರ್‌ಗಳ ವಿಭಾಗದಲ್ಲಿ ಜಡೇಜ ಅಗ್ರಸ್ಥಾನ ಪಡೆದಿದ್ದರು.

'ಧೋನಿ ಯಾವಾಗಲೂ ತಂಡದ ಹಿತಕ್ಕಾಗಿಯೇ ನಿರ್ಧಾರ ಕೈಗೊಳ್ಳುತ್ತಾರೆ. ಆದ್ದರಿಂದ ಯಾವ ಚಿಂತೆಯೂ ಇಲ್ಲ' ಎಂದು ತಂಡದ ಸಿಇಒ ಕಾಶಿ ವಿಶ್ವನಾಥ್ ಹೇಳಿದ್ದಾರೆ.

'ಈ ಆವೃತ್ತಿ ಅವರ ಕೊನೆಯದು ಎಂದು ಹೇಳಲಾಗದು. ಏಕೆಂದರೆ ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಬಹಳಷ್ಟು ಸಮರ್ಥರಾಗಿದ್ದಾರೆ. ಅವರು ಫಿಟ್ ಆಗಿರುವವರೆಗೂ ನಮ್ಮ ತಂಡದಲ್ಲಿಯೇ ಆಡಲಿ ಎನ್ನುವ ಆಶಯವಿದೆ' ಎಂದೂ ವಿಶ್ವನಾಥ್ ಹೇಳಿದರು.

'ಪ್ರಸ್ತುತ ಜಡೇಜ ಅವರು ತಮ್ಮ ವೃತ್ತಿಜೀವನದ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಧೋನಿ ಮಾರ್ಗದರ್ಶನದಲ್ಲಿ ಅವರು ಉತ್ತಮವಾಗಿ ನಾಯಕತ್ವ ನಿಭಾಯಿಸುವರು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ 15ನೇ ಆವೃತ್ತಿಯ ಐಪಿಎಲ್‌ನ ಮೊದಲ ಪಂದ್ಯದಲ್ಲಿ ಚೆನ್ನೈ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಆಡಲಿದೆ.

'ವಿರಾಟ್ ತೀರ್ಮಾನ ಸೂಕ್ತ'

ನವದೆಹಲಿ (ಪಿಟಿಐ): ಕ್ರಿಕೆಟ್‌ನ ಎಲ್ಲ ಮಾದರಿಗಳ ತಂಡಗಳ ನಾಯಕತ್ವವನ್ನು ಬಿಟ್ಟುಕೊಟ್ಟ ವಿರಾಟ್ ಕೊಹ್ಲಿಯ ನಿರ್ಧಾರವು ಸೂಕ್ತವಾಗಿದೆ. ಇದು ಕೊಹ್ಲಿಯ ಚಾಣಾಕ್ಷ ತೀರ್ಮಾನವಾಗಿದೆ ಎಂದು ಐಪಿಎಲ್‌ನಲ್ಲಿ ವೀಕ್ಷಕ ವಿವರಣೆ ನೀಡಲಿರುವ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

'ನಾಯಕತ್ವದ ಒತ್ತಡಗಳನ್ನು ದೂರ ಮಾಡಿಕೊಂಡು ಆಡುವುದರಿಂದ ಯಶಸ್ಸು ಲಭಿಸುತ್ತದೆ. ಅಲ್ಲದೇ ತಂಡದಲ್ಲಿರುವ ಬೇರೆಯವರಿಗೂ ನಾಯಕರಾಗುವ ಅವಕಾಶ ಸಿಗುತ್ತದೆ. ಆದರೆ ಟೆಸ್ಟ್ ತಂಡದ ನಾಯಕತ್ವದಲ್ಲಿ ಇನ್ನಷ್ಟು ಕಾಲ ಅವರು ಮುಂದುವರಿಯಬಹುದೆಂಬ ನಿರೀಕ್ಷೆ ಇತ್ತು. ಬಿಟ್ಟುಕೊಟ್ಟಿದ್ದು ಅವರ ವೈಯಕ್ತಿಕ ನಿರ್ಧಾರವಾಗಿತ್ತು' ಎಂದು ಶಾಸ್ತ್ರಿ ಇಎಸ್‌ಪಿಎನ್‌ಕ್ರಿಕ್‌ಇನ್ಫೋ ಡಾಟ್ ಕಾಮ್‌ನಲ್ಲಿ ತಿಳಿಸಿದ್ದಾರೆ.

ವಿರಾಟ್ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕತ್ವವನ್ನೂ ಬಿಟ್ಟಿದ್ದಾರೆ. ಈಚೆಗಷ್ಟೇ ತಂಡಕ್ಕೆ ಫಫ್ ಡುಪ್ಲೆಸಿ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ.

'ರಾಷ್ಟ್ರೀಯ ತಂಡದ ನಾಯಕನಾಗಿ ಕಾರ್ಯನಿರ್ವಹಿಸುವುದು ಸುಲಭವಲ್ಲ. ಮೂರು ಮಾದರಿಗಳಲ್ಲಿಯೂ ಯಶಸ್ವಿಯಾಗಿ ತಂಡವನ್ನು ಮುನ್ನಡೆಸುವುದು ಅಪಾರ ಒತ್ತಡದ ಕೆಲಸ. ನಾಯಕತ್ವದೊಂದಿಗೆ ವೈಯಕ್ತಿಕ ಆಟವನ್ನು ಲಯದಲ್ಲಿಟ್ಟುಕೊಳ್ಳುವುದು ಕೂಡ ಸವಾಲು. ಭಾರತ ತಂಡದ ನಾಯಕರಿಗೆ ಮಾತ್ರ ಇಂತಹ ಒತ್ತಡ ಇದೆ. ಬೇರೆ ದೇಶಗಳಲ್ಲಿ ಈ ರೀತಿ ಕಾಣದು. ಇಲ್ಲಿ ಕ್ರಿಕೆಟ್‌ಗೆ ಜನಮನ್ನಣೆ, ಖ್ಯಾತಿ ಉತ್ತುಂಗದಲ್ಲಿರುವುದು ಅದಕ್ಕೆ ಕಾರಣ' ಎಂದು ಅಭಿಪ್ರಾಯಪಟ್ಟರು.

ಮೋಯಿನ್ ಅಲಿಗೆ ವೀಸಾ ಲಭ್ಯ

ಮೋಯಿನ್ ಅಲಿ

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಲ್‌ರೌಂಡರ್ ಮೋಯಿನ್ ಅಲಿ ಅವರಿಗೆ ವೀಸಾ ಲಭ್ಯವಾಗಿದೆ. ಇದರಿಂದಾಗಿ ಅವರು ಐಪಿಎಲ್‌ನಲ್ಲಿ ಎರಡನೇ ಪಂದ್ಯದಲ್ಲಿ ಆಡುವ ಸಾಧ್ಯತೆ ಇದೆ ಎಂದು ತಂಡದ ಮೂಲಗಳು ತಿಳಿಸಿವೆ. ಇಂಗ್ಲೆಂಡ್‌ನ ಮೋಯಿನ್ ಅಲಿ ಸೋಮವಾರವೇ ಭಾರತಕ್ಕೆ ಬರಬೇಕಿತ್ತು. ಆದರೆ ವೀಸಾ ಲಭಿಸಿರಲಿಲ್ಲ. ಇದರಿಂದಾಗಿ ಅವರು ಶನಿವಾರ ನಡೆಯುವ ಮೊದಲ ಪಂದ್ಯದಲ್ಲಿ ಆಡಲು ಸಾಧ್ಯವಾಗಿಲ್ಲ. ಅವರು ಶುಕ್ರವಾರ ಬೆಳಗಿನ ಜಾವ ಭಾರತಕ್ಕೆ ಬರಲಿದ್ದು, ಮೂರು ದಿನಗಳ ಕಡ್ಡಾಯ ಕ್ವಾರಂಟೈನ್ ಪಾಲಿಸುವರು ಎಂದೂ ಮೂಲಗಳು ತಿಳಿಸಿವೆ.

ಪಿಚ್ ಬದಲಾಗುವ ಸಾಧ್ಯತೆ: ಮಿಚೆಲ್

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯಗಳು ನಡೆಯುವ ಪಿಚ್‌ಗಳು ದಿನಗಳೆದಂತೆ ಮಂದಗತಿಯ ಬೌಲಿಂಗ್‌ಗೆ ನೆರವಾಗುವ ಸಾಧ್ಯತೆ ಇದೆ ಎಂದು ರಾಜಸ್ಥಾನ್ ರಾಯಲ್ಸ್ ತಂಡದ ಆಲ್‌ರೌಂಡರ್ ಡೆರಿಲ್ ಮಿಚೆಲ್ ಹೇಳಿದ್ದಾರೆ.

'ಟೂರ್ನಿಯಲ್ಲಿ ದಿನಗಳೆದಂತೆ ಪಿಚ್‌ಗಳು ನಿಧಾನಗತಿಗೆ ತಿರುಗಲಿವೆ. ಆದ್ದರಿಂದ ಇಂತಹ ಅಂಗಣಗಳಲ್ಲಿ ಆಡಲು ಆಟಗಾರರು ಸಿದ್ಧತೆ ಮಾಡಿಕೊಳ್ಳಬೇಕು. ಆರಂಭದ ಕೆಲವು ಪಂದ್ಯಗಳಲ್ಲಿರುವಂತೆ ಪಿಚ್‌ಗಳು ನಂತರದ ದಿನಗಳಲ್ಲಿ ಇರುವುದಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಹಿಳೆಯರ ವಿಶ್ವಕಪ್: ಪಾಕಿಸ್ತಾನ ವಿರುದ್ಧ ಹೀದರ್ ನೈಟ್ ಬಳಗಕ್ಕೆ ಗೆಲುವು

ಇಂಗ್ಲೆಂಡ್ ತಂಡದಲ್ಲಿ ಚಿಗುರಿದ ಆಸೆ

ಕ್ರೈಸ್ಟ್ ಚರ್ಚ್ (ಪಿಟಿಐ): ಆರಂಭದ ಸೋಲಿನಿಂದ ಚೇತರಿಸಿಕೊಂಡು ಮುನ್ನುಗ್ಗುತ್ತಿರುವ ಇಂಗ್ಲೆಂಡ್ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೆಮಿಫೈನಲ್‌ನತ್ತ ಹೆಜ್ಜೆ ಹಾಕಿದೆ. ಗುರುವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನವನ್ನು 9 ವಿಕೆಟ್‌ಗಳಿಂದ ಮಣಿಸಿದ ತಂಡ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು.

ವೇಗದ ಬೌಲರ್ ಕ್ಯಾಥರಿನ್ ಬ್ರಂಟ್ ಅವರ ಅಮೋಘ ದಾಳಿಗೆ ನಲುಗಿ ಪಾಕಿಸ್ತಾನ ಮಹಿಳೆಯರು ರನ್ ಗಳಿಸಲು ಪರದಾಡಿದರು. ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಕೂಡ ಮೊನಚಾದ ದಾಳಿಯ ಮೂಲಕ ಎದುರಾಳಿ ತಂಡವನ್ನು ಕಾಡಿದರು. ಹೀಗಾಗಿ ಪಾಕಿಸ್ತಾನ ಕೇವಲ 105 ರನ್‌ಗಳಿಗೆ ಪತನ ಕಂಡಿತು.

ಗುರಿ ಬೆನ್ನತ್ತಿದ ಇಂಗ್ಲೆಂಡ್ ಹೀದರ್ ನೈಟ್ ಬಳಗ 20ನೇ ಓವರ್‌ನಲ್ಲೇ ಗೆಲುವಿನ ದಡ ಸೇರಿತು. ಐದನೇ ಓವರ್‌ನಲ್ಲಿ 20 ರನ್‌ಗಳಿಗೆ ತಂಡ ಮೊದಲ ವಿಕೆಟ್ ಕಳೆದುಕೊಂಡಿತ್ತು. ನಂತರ ಡ್ಯಾನಿಯೆಲಿ ವ್ಯಾಟ್ (76; 68 ಎಸೆತ, 82 ನಿಮಿಷ, 11 ಬೌಂಡರಿ) ಮತ್ತು ಹೀದರ್ ನೈಟ್ 87 ರನ್‌ಗಳ ಜೊತೆಯಾಟವಾಡಿ ಸುಲಭ ಜಯ ತಂದುಕೊಟ್ಟರು.

ಆರಂಭದ ಮೂರು ಪಂದ್ಯಗಳನ್ನು ಸೋತಿದ್ದ ಹಾಲಿ ಚಾಂಪಿಯನ್ ಇಂಗ್ಲೆಂಡ್ ನಾಕೌಟ್ ಹಂತ ತಲುಪದೇ ಟೂರ್ನಿಯಿಂದ ಹೊರಬೀಳುವ ಆತಂಕದಲ್ಲಿತ್ತು. ನಂತರ ಎರಡು ಪಂದ್ಯಗಳನ್ನು ಗೆದ್ದುಕೊಂಡು ಭರವಸೆಯಲ್ಲಿತ್ತು. ಆದರೂ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಜಯ ಅನಿವಾರ್ಯವಾಗಿತ್ತು. ಮುಂದಿನ ಪಂದ್ಯದಲ್ಲಿ ಅದು ಬಾಂಗ್ಲಾದೇಶವನ್ನು ಎದುರಿಸಲಿದೆ.

ಹಿಂದಿನ ಐದು ಏಕದಿನ ಪಂದ್ಯಗಳಲ್ಲಿ ಬ್ರಂಟ್ ಕೇವಲ ಒಂದು ವಿಕೆಟ್ ಗಳಿಸಿದ್ದರು. ಆದರೆ ಈ ಪಂದ್ಯದಲ್ಲಿ ನಿರ್ದಿಷ್ಟ ತಂತ್ರಗಳೊಂದಿಗೆ ಕಣಕ್ಕೆ ಇಳಿದಿದ್ದರು. ಎಕ್ಲೆಸ್ಟೋನ್ ಜೊತೆಗೂಡಿ ಅವರು ಪಾಕಿಸ್ತಾನದ ಬ್ಯಾಟರ್‌ಗಳನ್ನು ಕ್ರೀಸ್‌ನಲ್ಲಿ ತಳವೂರದಂತೆ ನೋಡಿಕೊಂಡರು. ಅಗ್ರ ಮತ್ತು ಮಧ್ಯಮ ಕ್ರಮಾಂಕಕ್ಕೆ ಬ್ರಂಟ್ ಪೆಟ್ಟು ನೀಡಿದರೆ ಕೆಳಕ್ರಮಾಂಕವನ್ನು ಬೇಗನೇ ವಾಪಸ್ ಕಳುಹಿಸಿದರು.

ಇನಿಂಗ್ಸ್‌ನ ಮೊದಲ ಎಸೆತದಲ್ಲೇ ನಹಿದಾ ಖಾನ್ ವಿಕೆಟ್ ಕಬಳಿಸಿ ಬ್ರೂಂಟ್ ಸಂಭ್ರಮಿಸಿದರು. ನಹಿದಾ ಅವರ ಬ್ಯಾಟಿನ ಹೊರ ಅಂಚನ್ನು ಮುತ್ತಿಕ್ಕಿದ ಚೆಂಡು ಮೊದಲ ಸ್ಲಿಪ್‌ನಲ್ಲಿದ್ದ ನೈಟ್ ಕೈ ಸೇರಿತ್ತು. ಎರಡು ರನ್ ಗಳಿಸುವ ಪ್ರಯತ್ನದಲ್ಲಿ ನಾಯಕಿ ಬಿಸ್ಮಾ ಮರೂಫ್ ರನೌಟ್ ಆಗಿ ಮರಳಿದರು. ಒಮೈಮಾ ಸೊಹೇಲ್ ಕೂಡ ರನೌಟ್ ಆದಾಗ ತಂಡದ ಮೊತ್ತ ಕೇವಲ 33 ಆಗಿತ್ತು. ನಂತರ ತಂಡ ಸತತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಏಳನೇ ಕ್ರಮಾಂಕದ ವಿಕೆಟ್ ಕೀಪರ್ ಬ್ಯಾಟರ್ ಸಿದ್ರಾ ನವಾಜ್ ಮಾತ್ರ ಸ್ವಲ್ಪ ಪ್ರತಿರೋಧ ತೋರಿದರು.

ಸೋಫಿ ಎಕ್ಲೆಸ್ಟೋನ್ (ಎಡ) ಮತ್ತು ಕ್ಯಾಥರಿನ್ ಬ್ರಂಟ್ –ಎಎಫ್‌ಪಿ ಚಿತ್ರ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್	ರನ್‌ರೇಟ್
ಆಸ್ಟ್ರೇಲಿಯಾ	6	6	0		12	+1.287
ದ.ಆಫ್ರಿಕಾ	6	4	1	1	9	+0.092
ವೆಸ್ಟ್ ಇಂಡೀಸ್	7	3	3	1	7	-0.885
ಇಂಗ್ಲೆಂಡ್	6	3	3		6	+0.778
ಭಾರತ	6	3	3		6	+0.768
ನ್ಯೂಜಿಲೆಂಡ್	6	2	4		4	-0.229
ಬಾಂಗ್ಲಾದೇಶ	5	1	4		2	-0.754
ಪಾಕಿಸ್ತಾನ	6	1	5		2	-1.280

ಸ್ಕೋರ್ ಕಾರ್ಡ್

ಪಾಕಿಸ್ತಾನ 105 (41.3 ಓವರ್)

ನಹಿದಾ ಸಿ ನೈಟ್ ಬಿ ಬ್ರಂಟ್ 0 (1 ಎ), ಸಿದ್ರಾ ಬಿ ಬ್ರೂಂಟ್ 32 (77 ಎ, 4x4), ಬಿಸ್ಮಾ ರನೌಟ್ (ಜೋನ್ಸ್/ಡಂಕ್ಲಿ) 9 (14 ಎ), ಒಮೈಮಾ ರನೌಟ್ (ಬ್ಯೂಮೌಂಟ್) 11 (30 ಎ, 4x1), ನಿದಾ ಎಲ್‌ಬಿಡಬ್ಲ್ಯು ಬಿ ಬ್ರಂಟ್ 4 (22 ಎ), ಅಲಿಯಾ ಸಿ ಶ್ರಬ್‌ಸೋಲ್ ಬಿ ನೈಟ್ 9 (24 ಎ, 4x1), ಸಿದ್ರಾ ಬಿ ಕ್ರಾಸ್ 23 (44 ಎ, 4x1), ಫಾತಿಮಾ ಸಿ ಜೋನ್ಸ್ ಬಿ ಎಕ್ಲೆಸ್ಟೋನ್ 4 (16 ಎ), ಡಯಾನ ಬಿ ಎಕ್ಲೆಸ್ಟೋನ್ 6 (16 ಎ), ಐಮನ್ ಸಿ ಜೋನ್ಸ್ ಬಿ ಎಕ್ಲೆಸ್ಟೋನ್ 0 (2 ಎ), ನಶ್ರಾ ಔಟಾಗದೆ 1 (3 ಎ)

ಇತರೆ (ಲೆಗ್‌ಬೈ 1, ವೈಡ್ 5) 6

ವಿಕೆಟ್ ಪತನ: 1-0 (ನಹಿದಾ ಖಾನ್, 0.1), 2-11 (ಬಿಸ್ಮಾ ಮರೂಫ್, 3.5), 3-33 (ಒಮೈಮಾ ಸೊಹೇಲ್, 13.3), 4-53 (ನಿದಾ ದಾರ್, 22.5), 5-58 (ಸಿದ್ರಾ ಅಮೀನ್, 24.3), 6-79 (ಅಲಿಯಾ ರಿಯಾಜ್, 32.2), 7-95 (ಫಾತಿಮಾ ಸನಾ, 37.3), 8-99 (ಸಿದ್ರಾ ನವಾಜ್, 38.6), 9-102 (ಐಮನ್ ಅನ್ವರ್, 39.4), 10-105 (ಡಯಾನ ಬೇಗ್, 41.3)

ಬೌಲಿಂಗ್: ಕ್ಯಾಥರಿನ್ ಬ್ರಂಟ್ 8–2–17–3, ಅನ್ಯಾ ಶ್ರಬ್‌ಸೋಲ್ 6–0–17–0, ನ್ಯಾಟ್ ಶೀವರ್ 8–2–20–0, ಕೇಟ್ ಕ್ರಾಸ್ 8–2–19–1, ಸೋಫಿ ಎಕ್ಲೆಸ್ಟೋನ್ 8.3–1–18–3, ಹೀದರ್ ನೈಟ್ 3–0–13–1

ಇಂಗ್ಲೆಂಡ್ 1ಕ್ಕೆ 107 (19.2 ಓವರ್)

ಟಾಮಿ ಎಲ್‌ಬಿಡಬ್ಲ್ಯು ಬಿ ಡಯಾನ 2 (12 ಎ), ಡ್ಯಾನಿ ಔಟಾಗದೆ 76 (68 ಎ, 4x11), ಹೀದರ್ ಔಟಾಗದೆ 24 (36 ಎ)

ಇತರೆ (ವೈಡ್ 5) 5

ವಿಕೆಟ್ ಪತನ: 1-20 (ಟಾಮಿ ಬ್ಯೂಮೌಂಟ್, 4.3)

ಬೌಲಿಂಗ್: ಡಯಾನ ಬೇಗ್ 6–0–14–1, ಫಾತಿಮಾ ಸನಾ 2.2–0–21–0, ಐಮನ್ ಅನ್ವರ್ 3–0–21–0, ಅಲಿಯಾ ರಿಯಾಜ್ 1–0–10–0, ನಶ್ರಾ ಸಂಧು 4–0–20–0, ನಿದಾ ದಾರ್ 3–0–21–0

ಫಲಿತಾಂಶ: ಇಂಗ್ಲೆಂಡ್‌ಗೆ 9 ವಿಕೆಟ್‌ಗಳ ಗೆಲುವು



ದಕ್ಷಿಣ ಆಫ್ರಿಕಾ ತಂಡದ ನಾಯಕಿ ಸೂನ್ ಲೂಜ್

ನಾಲ್ಕರ ಘಟ್ಟಕ್ಕೆ ದಕ್ಷಿಣ ಆಫ್ರಿಕಾ

ವೆಲಿಂಗ್ಟನ್ (ಪಿಟಿಐ): ಮಹಿಳಾ ವಿಶ್ವಕಪ್‌ನಲ್ಲಿ ಗುರುವಾರ ನಡೆಯಬೇಕಾಗಿದ್ದ ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ನಡುವಿನ ಪಂದ್ಯ ಮಳೆಯಿಂದಾಗಿ ರದ್ದಾಯಿತು. ಉಭಯ ತಂಡಗಳಿಗೆ ತಲಾ ಒಂದು ಪಾಯಿಂಟ್ ನೀಡಲಾಯಿತು. ಈ ಮೂಲಕ ದಕ್ಷಿಣ ಆಫ್ರಿಕಾ ಸೆಮಿಫೈನಲ್ ಪ್ರವೇಶಿಸಿತು.

ವೆಸ್ಟ್ ಇಂಡೀಸ್ ತಂಡದ ಲೀಗ್ ಹಂತದ ಎಲ್ಲ ಪಂದ್ಯಗಳು ಮುಗಿದಿದ್ದು ಸದ್ಯ ಪಾಯಿಂಟ್ ಪಟ್ಟಿಯ ಮೂರನೇ ಸ್ಥಾನದಲ್ಲಿದೆ. ಅಗ್ರ ನಾಲ್ಕರಲ್ಲಿ ಸ್ಥಾನ ಉಳಿಸಿಕೊಳ್ಳಬೇಕಾದರೆ ಇತರ ಪಂದ್ಯಗಳ ಫಲಿತಾಂಶಕ್ಕಾಗಿ ಕಾಯಬೇಕಾಗಿದೆ. ಭಾನುವಾರ ಕೊನೆಯ ಪಂದ್ಯದಲ್ಲಿ ಇಂಗ್ಲೆಂಡ್ ಮತ್ತು ಬಾಂಗ್ಲಾದೇಶ, ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ. ಇಂಗ್ಲೆಂಡ್ ಮತ್ತು ಭಾರತಕ್ಕೆ ವೆಸ್ಟ್ ಇಂಡೀಸ್ ತಂಡವನ್ನು ಹಿಂದಿಕ್ಕಿ ಸೆಮಿಫೈನಲ್ ಪ್ರವೇಶಿಸುವ ಅವಕಾಶ ಈ ಪಂದ್ಯಗಳಲ್ಲಿದೆ.

ಗುರುವಾರ ಟಾಸ್ ಗೆದ್ದ ವೆಸ್ಟ್ ಇಂಡೀಸ್ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತ್ತು. ದಕ್ಷಿಣ ಆಫ್ರಿಕಾ 10.5 ಓವರ್‌ಗಳಲ್ಲಿ 61ಕ್ಕೆ 4 ವಿಕೆಟ್ ಕಳೆದುಕೊಂಡಿದ್ದಾಗ ಮಳೆ ಸುರಿಯಿತು.

ಡಬ್ಲ್ಯುಟಿಟಿ ಕಂಟೆಂಡರ್: ಸತ್ಯನ್ ಮಣಿಕಾಗೆ ಬೆಳ್ಳಿ, ಶರತ್‌ಗೆ ಕಂಚು

ಮಣಿಕಾ ಬಾತ್ರಾ ಮತ್ತು ಜಿ. ಸತ್ಯನ್

ದೋಹಾ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರರು ಗುರುವಾರ ಡಬ್ಲ್ಯುಟಿಟಿ ಕಂಟೆಂಡರ್ ಟೂರ್ನಿಯಲ್ಲಿ ಎರಡು ಪದಕಗಳನ್ನು ಜಯಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಜಿ. ಸತ್ಯನ್ ಮತ್ತು ಮಣಿಕಾ ಬಾತ್ರಾ ಜೋಡಿಯು ಬೆಳ್ಳಿ ಪದಕ ಗಳಿಸಿತು. ಪುರುಷರ ಸಿಂಗಲ್ಸ್‌ನಲ್ಲಿ ಅಚಂತ ಶರತ್ ಕಮಲ್ ಕಂಚಿನ ಪದಕ ಪಡೆದರು.

ಫೈನಲ್‌ನಲ್ಲಿ ಸತ್ಯನ್ ಮತ್ತು ಮಣಿಕಾ ಜೋಡಿಯು 4-11, 5-11, 3-11ರಿಂದ ಚೈನಿಸ್ ತೈಪೆಯ ಲಿನ್ ಯುನ್ ಜು ಮತ್ತು ಚೆಂಗ್ ಐ ಚಿಂಗ್ ಜೋಡಿಯ ಎದುರು ಸೋತಿತು. ಏಳನೇ ಶ್ರೇಯಾಂಕದ ಸತ್ಯನ್–ಮಣಿಕಾ ಜೋಡಿಯು ಎದುರಾಳಿಗಳ ವೇಗದ ಆಟಕ್ಕೆ ಸರಿಸಾಟಿಯಾಲಿಲ್ಲ.

ಪುರುಷರ ಸಿಂಗಲ್ಸ್‌ನ ಸೆಮಿಫೈನಲ್‌ನಲ್ಲಿ ಶರತ್ ಕಮಲ್ 5-11, 11-8, 6-11, 11-7, 11-5, 10-12, 9-11 ಚೀನಾದ ಯುವಾನ್ ಲಿಸೆನ್ ವಿರುದ್ಧ ಪರಾಭವಗೊಂಡರು. ಕಳೆದ ಎರಡು ವರ್ಷಗಳಲ್ಲಿ ಶರತ್ ಗೆದ್ದ ಮೊದಲ ಪದಕ ಇದಾಗಿದೆ. 2020ರಲ್ಲಿ ಒಮನ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ಅವರು ಚಿನ್ನದ ಪದಕ ಜಯಿಸಿದ್ದರು.

'ಆರನೇ ಗೇಮ್‌ನಲ್ಲಿ ಗೆಲ್ಲುವ ಅವಕಾಶವನ್ನು ಕೈಚೆಲ್ಲಿದೆ. ಆದರೂ ಪದಕ ಗಳಿಸಿದ ಖುಷಿ ಇದೆ. ಮುಂದಿನ ಟೂರ್ನಿಗಳಲ್ಲಿ ಜಯಿಸಲು ಇದು ಪ್ರೇರಣೆಯಾಗಲಿದೆ' ಎಂದು ಶರತ್ ಹೇಳಿದರು.

ಸ್ವಿಸ್ ಓಪನ್: ಸಿಂಧು, ಶ್ರೀಕಾಂತ್ ಕ್ವಾರ್ಟರ್‌ಗೆ

ಬಾಸೆಲ್ (ಪಿಟಿಐ): ಭಾರತದ ಪಿ.ವಿ ಸಿಂಧು ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಟರ್ಕಿಯ ನೆಸ್ಲಿಹಾನ್ ಯಿಗಿಟ್ ಎದುರು 21–19, 21–14ರಲ್ಲಿ ಜಯ ಗಳಿಸಿದರು. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸಿಂಧು ಡೆನ್ಮಾರ್ಕ್‌ನ ಲೆನೆ ಹೊಜ್ಮಾರ್ಕ್ ಎದುರು 21–14, 21–12ರಲ್ಲಿ ಜಯ ಗಳಿಸಿದರು.

ಕಿದಂಬಿ ಶ್ರೀಕಾಂತ್ ಕೂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಎದುರಿನ ಪಂದ್ಯದಲ್ಲಿ ಅವರು 13–21, 25–23, 21–11ರಲ್ಲಿ ಜಯ ಗಳಿಸಿದರು.

ಅಗ್ರ ಶ್ರೇಯಾಂಕಿತ ಆಟಗಾರ ವಿಕ್ಟರ್ ಅಕ್ಸೆಲ್ಸನ್ ಅವರಿಂದ ವಾಕ್ ಓವರ್ ಪಡೆದ ಪರುಪಳ್ಳಿ ಕಶ್ಯಪ್ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇರಿಸಿದರು. ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಎನ್.ಸಿಕ್ಕಿ ರೆಡ್ಡಿ ಸ್ಥಳೀಯ ಜೋಡಿ ಅಲೀನ್ ಮುಲ್ಲರ್ ಮತ್ತು ಜೆಂಜಿರಾ ಸ್ಟೇಡಲ್‌ಮ್ಯಾನ್ ಎದುರು 21-15, 21-16ರಲ್ಲಿ ಗೆದ್ದರು. ಪುರುಷರ ಡಬಲ್ಸ್ ವಿಭಾಗದಲ್ಲಿ ಎಂ.ಆರ್.ಅರ್ಜುನ್ ಮತ್ತು ಧ್ರುವ ಕಪಿಲ 19-21 13-21ರಲ್ಲಿ ಫಜರ್ ಅಲ್ಫಿಯನ್ ಮತ್ತು ಮುಹಮ್ಮದ್ ರಿಯಾನ್‌ಗೆ ಮಣಿದರು.

ಪಿ.ವಿ.ಸಿಂಧು –ಪಿಟಿಐ ಚಿತ್ರ

ಜೂನಿಯರ್ ಹಾಕಿ: ತೇಜಸ್ವಿನಿ ನಾಯಕಿ

ಬೆಂಗಳೂರು: ಗೋಲ್‌ಕೀಪರ್ ತೇಜಸ್ವಿನಿ ಡಿ.ಎನ್, ಕರ್ನಾಟಕ ರಾಜ್ಯ ಜೂನಿಯರ್ ಮಹಿಳೆಯರ ಹಾಕಿ ತಂಡದ ನಾಯಕಿಯಾಗಿ ನೇಮಕವಾಗಿದ್ದಾರೆ. ಶುಕ್ರವಾರದಿಂದ ಏಪ್ರಿಲ್ 3ರ ವರೆಗೆ ಆಂಧ್ರಪ್ರದೇಶದ ಕಾಕಿನಾಡದಲ್ಲಿ ಹಾಕಿ ಇಂಡಿಯಾ ಮಹಿಳೆಯರ ಜೂನಿಯರ್ ರಾಷ್ಟ್ರೀಯ ಟೂರ್ನಿ ನಡೆಯಲಿದೆ. ಕರ್ನಾಟಕ ತಂಡ 'ಎಚ್' ಗುಂಪಿನಲ್ಲಿ ಸ್ಥಾನ ಗಳಿಸಿದ್ದು ಆಂಧ್ರಪ್ರದೇಶ, ಹಾಕಿ ಬೆಂಗಾಲ್ ಮತ್ತು ಹಾಕಿ ಗುಜರಾತ್ ತಂಡಗಳು ಇದೇ ಗುಂಪಿನಲ್ಲಿ ಇವೆ.

ತಂಡ: ತೇಜಸ್ವಿನಿ (ಗೋಲ್‌ಕೀಪರ್, ನಾಯಕಿ), ಜೀವಿತಾ ಬಿ.ಜಿ, ಮಣಿ ಎಚ್, ದಿಲಾನ್ ಕೆ.ಜೆ, ಸಚಿತಾ ಟಿ.ಸಿ (ಗೋಲ್‌ಕೀಪರ್), ಕೀರ್ತನಾ ಬಿ.ಎಂ, ನಿಸರ್ಗ ಎಸ್.ಬಿ, ಕಾವೇರಿ ಲೆಂಕಣ್ಣವರ, ಸಹನಾ ಸಿ.ಎಂ, ಜಾಹ್ನವಿ ಎಚ್.ಎಸ್, ಸಿದ್ದಗಂಗಾ ಎಚ್.ಡಿ, ತಾಜ್ ಬೆಳ್ಳಿಯಪ್ಪ ಕೆ, ದೇಚಮ್ಮ ಗಣಪತಿ, ಸೀಮಾ ಆನಂದ್ ರಾವ್ ಪವಾರ್, ಅಪ್ಸರ ಎಚ್.ಎ, ವುದುಮುಲ ಸೌಮ್ಯಾ, ಖುಷಿ ಎಂ. ಜೈನ್, ದೀಪಿಕಾ ಬಿ; ಕೋಚ್: ಕೋಮಲಾ ಬಿ.ಎಂ; ಮ್ಯಾನೇಜರ್: ಧರ್ಮೇಂದ್ರ ಜಿ.ಆರ್.

ವಿಶ್ವಕಪ್: ಮುಖ್ಯ ಸುತ್ತಿಗೆ ಜಪಾನ್

ಸಿಡ್ನಿ (ಎಎಫ್‌ಪಿ): ಬದಲಿ ಆಟಗಾರ ಕೌರು ಮಿಮೊಟ ಗಳಿಸಿದ ಎರಡು ಗೋಲುಗಳಿಂದ ಜಪಾನ್ ತಂಡ ಆಸ್ಟ್ರೇಲಿಯಾವನ್ನು 2–0ಯಿಂದ ಮಣಿಸಿತು. ಈ ಮೂಲಕ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸಿತು. ಇದು, ಸೌದಿ ಅರೇಬಿಯಾದ ಹಾದಿಯನ್ನೂ ಸುಗಮಗೊಳಿಸಿತು.

ಪಂದ್ಯವು ಡ್ರಾದತ್ತ ಸಾಗಿತ್ತು. ಆದರೆ 89ನೇ ನಿಮಿಷದಲ್ಲಿ ಮಿಂಚಿನ ವೇಗದಲ್ಲಿ ಗೋಲು ಗಳಿಸಿ ಜಪಾನ್‌ಗೆ ಮುನ್ನಡೆ ಗಳಿಸಿಕೊಟ್ಟರು. ಇಂಜುರಿ ಅವಧಿಯಲ್ಲಿ ಅವರಿಂದ ಮತ್ತೊಂದು ಗೋಲು ಮೂಡಿಬಂತು.

ಈ ಜಯದೊಂದಿಗೆ ತಂಡ ಏಷ್ಯಾದ ಅರ್ಹತಾ ಹಂತದ 'ಬಿ' ಗುಂಪಿನಲ್ಲಿ 21 ಪಾಯಿಂಟ್ ಕಲೆ ಹಾಕಿತು. ಸೌದಿ ಅರೇಬಿಯಾ ಬಳಿ 19 ಪಾಯಿಂಟ್‌ಗಳಿವೆ. ಜಪಾನ್ ಆರನೇ ಬಾರಿ ಮುಖ್ಯ ಸುತ್ತು ತಲುಪಿದೆ.

ಬೆಂಗಳೂರು ರೇಸ್

ಸ್ಕ್ರುಪಲ್ಸ್ ಗೆಲ್ಲುವ ನಿರೀಕ್ಷೆ

ಸಾವರಿನ್ ಕ್ರೌನ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸ್ಕ್ರುಪಲ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹೈ ಒಪಿನಿಯನ್ 1, ಸ್ಟೈಲ್ ಅರೌಂಡ್ 12, ಪರ್ಫೆಕ್ಟ್ ಹೆಲೋ 10

2ನೇ ರೇಸ್: ಸದರ್ನ್ ಪವರ್ 2, ಶಾನ್ ಎ ಅಜೀಮ್ 1, ಅನದರ್ ರೈನ್‌ಬೋ 3

3ನೇ ರೇಸ್: ಫಿಲಾಸಫಿ 7, ಪ್ರೇಗ್ 3, ಟಿಗ್ನಾನೆಲ್ಲೊ 4

4ನೇ ರೇಸ್: ಪವರ್‌ಫುಲ್ ಲೇಡಿ 1, ಕಾಪರ್ ಸನ್‌ರೈಸ್ 7, ಮೋರ್ಗನೈಟ್ 5

5ನೇ ರೇಸ್: ಲಾಂಟಾನ 1, ಮ್ಯೂರ್‌ಫೀಲ್ಡ್ 2, ವಿಂಡ್‌ಸ್ಟಾರ್ಮ್ 5

6ನೇ ರೇಸ್: ಸ್ಕ್ರುಪಲ್ಸ್ 4, ವಿಜ್ಡೊ 5, ಟ್ವಿಂಕಲ್ ಫೀಟ್ 9

7ನೇ ರೇಸ್: ಕ್ವೀನ್ ರೆಗ್ನೆಂಟ್ 4, ಅನ್‌ಯೀಲ್ಡಿಂಗ್ 5, ಬೆನೆಡಿಕ್ಷನ್ 2

8ನೇ ರೇಸ್: ಸನ್‌ಶೈನ್ ಪ್ರಿನ್ಸ್ 4, ಎಂಬೊಸಮ್ 2, ಟೈಗರ್ ರಿಟನ್ಸ್ 5

ಉತ್ತಮ ಬೆಟ್: ಕ್ವೀನ್ ರೆಗ್ನೆಂಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಏಷ್ಯನ್ ಕುಸ್ತಿಗೆ ಭಜರಂಗ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ ಪದಕವಿಜೇತ ಕುಸ್ತಿಪಟು ಭಜರಂಗ್ ಪೂನಿಯಾ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲಿರುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿಗೆ ಕುಸ್ತಿಕಣಕ್ಕೆ ಮರಳಿದ ಭಜರಂಗ್ ಗುರುವಾರ ನಡೆದ ಟ್ರಯಲ್ಸ್‌ನಲ್ಲಿ 4–2ರಿಂದ ರೋಹಿತ್ ವಿರುದ್ಧ ಗೆದ್ದು 65 ಕೆ.ಜಿ ವಿಭಾಗದಲ್ಲಿ ಸ್ಥಾನ ಪಡೆದರು.

ಭಜರಂಗ್, ರವಿ ದಹಿಯಾ ಮತ್ತು ದೀಪಕ್ ಪೂನಿಯಾ ಅವರಿಗೆ ಟ್ರಯಲ್ಸ್‌ನಲ್ಲಿ ನೇರ ಫೈನಲ್‌ನಲ್ಲಿ ಆಡಲು ರಾಷ್ಟ್ರೀಯ ಕುಸ್ತಿ ಫೆಡರೇಷನ್ ಅವಕಾಶ ನೀಡಿತು. 57 ಕೆ.ಜಿ ವಿಭಾಗದಲ್ಲಿ ರವಿಗೆ ಅಮನ್ ಅವರಿಂದ ವಾಕ್‌ಓವರ್ ಲಭಿಸಿತು. ಅದರಿಂದಾಗಿ ಅವರೂ ತಂಡಕ್ಕೆ ಆಯ್ಕೆಯಾದರು. 86 ಕೆ.ಜಿ ವಿಭಾಗದಲ್ಲಿ ದೀಪಕ್ ಕೂಡ ಸ್ಥಾನ ಗಳಿಸಿದರು. ಅವರು 6–0ಯಿಂದ ವಿನೋದ್ ಎದುರು ಜಯಿಸಿದರು.

ಛತ್ರಸಾಲಾ ಒಳಾಂಗಣದಲ್ಲಿ ನಡೆದ ಟ್ರಯಲ್ಸ್‌ನ 74 ಕೆ.ಜಿ. ವಿಭಾಗದಲ್ಲಿ ಯಶ್ ತುಷೀರ್ ಕೂಡ ಗೆದ್ದರು. ಮಂಗಲ್ (61ಕೆಜಿ), ನವೀನ್ (70ಕೆಜಿ), ಗೌರವ್ ಬಲಿಯಾನ್ (79ಕೆಜಿ), ಸತ್ಯವ್ರತ್ ಕಡಿಯಾನ್ (97 ಕೆಜಿ) ಫ್ರೀಸ್ಟೈಲ್ ಕುಸ್ತಿಯಲ್ಲಿ ಗೆದ್ದು ತಂಡದಲ್ಲಿ ಸ್ಥಾನ ಗಳಿಸಿದರು.

ಅಶಿಸ್ತು; ನಿಶಾಗೆ ಶಿಕ್ಷೆ: 23 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಿರುವ ನಿಶಾ ದಹಿಯಾ ಮತ್ತು ಕೆಲವು ಮಹಿಳಾ ಕುಸ್ತಿಪಟುಗಳನ್ನು ಅಶಿಸ್ತಿನ ನಡವಳಿಕೆ ತೋರಿದ್ದ ರಾಷ್ಟ್ರೀಯ ಶಿಬಿರದಿಂದ ಹೊರಹಾಕಲಾಯಿತು. ಅವರು ಏಷ್ಯನ್ ಚಾಂಪಿಯನ್‌ಷಿಪ್ ಟ್ರಯಲ್ಸ್‌ನಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಯಿತು.

ಟೆನಿಸ್: ಸೆಮಿಫೈನಲ್‌ನಲ್ಲಿ ಆಹಿಲ್, ಅರ್ಜಾನ್‌ಗೆ ಗೆಲುವು

ಫೈನಲ್‌ಗೆ ಚನ್ನಮಲ್ಲಿಕಾರ್ಜುನ, ಋತಿಕಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟ ಮುಂದುವರಿಸಿದ ಚನ್ನಮಲ್ಲಿಕಾರ್ಜುನ ಯಾಳೆ ಮತ್ತು ಋತಿಕಾ ರವಿ ಅವರು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಫೈನಲ್ ಪ್ರವೇಶಿಸಿದರು.

ಎಸ್‌ಎಟಿ ಏಟಿಎ ಪ್ರಾಯೋಜಿತ 14 ವರ್ಷದೊಳಗಿನವರ ಸಿಎಸ್–7 ಸರಣಿಯ ಟೂರ್ನಿಯ ಸೆಮಿಫೈನಲ್‌ನಲ್ಲಿ ಚನ್ನಮಲ್ಲಿಕಾರ್ಜುನ 6-1, 6-4ರಲ್ಲಿ ಅನಂತಕೃಷ್ಣನ್ ಎದುರು ಜಯ ಗಳಿಸಿದರು. ಋತಿಕಾ 6-4, 6-3ರಲ್ಲಿ ಐದನೇ ಶ್ರೇಯಾಂಕದ ಇಶಾ ಮೋಹಿತೆ ಅವರನ್ನು ಮಣಿಸಿದರು.

ಶ್ರೀನಾಥ್ ಅಕಾಡೆಮಿ ಆಫ್ ಟೆನಿಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಚನ್ನಮಲ್ಲಿಕಾರ್ಜುನ ಐದನೇ ಶ್ರೇಯಾಂಕದ ಆಹಿಲ್ ಅಯಾಜ್ ವಿರುದ್ಧ ಸೆಣಸುವರು. ನಾಲ್ಕನೇ ಶ್ರೇಯಾಂಕದ ಎಂ.ದಿಗಂತ್ ವಿರುದ್ಧ 6-4, 1-6, 6-1ರ ಜಯ ಸಾಧಿಸಿ ಆಹಿಲ್ ಫೈನಲ್ ಪ್ರವೇಶಿಸಿದ್ದಾರೆ.

ಬಾಲಕಿಯರ ವಿಭಾಗದ ಫೈನಲ್ ಪಂದ್ಯದಲ್ಲಿ ಋತಿಕಾ ಎರಡನೇ ಶ್ರೇಯಾಂಕಿತೆ ಅರ್ಜಾನ್ ಖೋರಿಕವಾಲಾ ಎದುರು ಆಡಲಿದ್ದಾರೆ. ಸೆಮಿಫೈನಲ್‌ನಲ್ಲಿ ಅರ್ಜಾನ್ 6-1, 6-1ರಲ್ಲಿ ಮೂರನೇ ಶ್ರೇಯಾಂಕದ ದಿಶಾ ಕುಮಾರ್ ಎದುರು ಗೆದ್ದರು.

ಚನ್ನಮಲ್ಲಿಕಾರ್ಜುನ ಯಾಳೆ

ಋತಿಕಾ ರವಿ

ಮೇ 15ರಂದು ಬೆಂಗಳೂರು ವಿಶ್ವ 10ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಟಿಸಿಎಸ್ ವಿಶ್ವ 10ಕೆ ಓಟಕ್ಕೆ ಉದ್ಯಾನಗರಿ ಮತ್ತೆ ಸಜ್ಜಾಗಲಿದೆ. ಕೋವಿಡ್ ಸಾಂಕ್ರಾಮಿಕದಿಂದಾಗಿ ಎರಡು ವರ್ಷ ಸ್ಥಗಿತಗೊಂಡಿದ್ದ ಓಟ ಮೇ 15ರಂದು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಈ ಬಾರಿ ಸ್ಪರ್ಧೆ ಎರಡು ರೀತಿಯಲ್ಲಿ ನಡೆಯಲಿದೆ. ಒಂದು ಕ್ರೀಡಾಂಗಣದಲ್ಲಿ ನಡೆದರೆ ಮತ್ತೊಂದರಲ್ಲಿ ಸ್ಪರ್ಧಿಗಳು ಆನ್‌ಲೈನ್ ಮೂಲಕ ಪಾಲ್ಗೊಳ್ಳಲಿದ್ದಾರೆ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು.

ಆ್ಯಪ್ ಮೂಲಕ ನೋಂದಾಯಿಸಿಕೊಂಡು ತಾವಿರುವ ಸ್ಥಳದಿಂದಲೇ ಭಾಗವಹಿಸಬಹುದಾಗಿದೆ. ಒಟ್ಟು ₹ 1.60 ಕೋಟಿ ಬಹುಮಾನ ಮೊತ್ತದ ಸ್ಪರ್ಧೆಯಲ್ಲಿ ವಿಶ್ವದ ಎಲೀಟ್ ಅಥ್ಲೀಟ್‌ಗಳು ಮತ್ತು ಹವ್ಯಾಸಿ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ಭಾಗವಹಿಸಲು www.tcsworld10k.procam.in ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಮಾರ್ಚ್ 25ರಿಂದ ನೋಂದಣಿ ಆರಂಭವಾಗುತ್ತದೆ.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣ ಗೌಡ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ, ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಅಧ್ಯಕ್ಷ ಕೆ.ಗೋವಿಂದರಾಜು, ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಕಂಪನಿಯ ಅನಿಲ್, ವಿವೇಕ್ ಸಿಂಗ್ ಮತ್ತಿತರರು ಇದ್ದರು.

ಪತ್ರಿಕಾಗೋಷ್ಠಿಯಲ್ಲಿ ಐಡಿಎಫ್‌ಸಿ ಫಸ್ಟ್‌ಬ್ಯಾಂಕ್‌ನ ಮುಖ್ಯ ಮಾರ್ಕೆಟಿಂಗ್ ಅಧಿಕಾರಿ ಟಿವಿ ನಾರಾಯಣ, ಸಚಿವ ಡಾ. ಅಶ್ವತ್ಥನಾರಾಯಣ, ಟಿಸಿಎಸ್ ಬೆಂಗಳೂರು ಕೇಂದ್ರದ ಮುಖ್ಯಸ್ಥ ಸುನಿಲ್ ದೇಶಪಾಂಡೆ, ಸಚಿವ ಕೆ.ಸಿ. ನಾರಾಯಣಗೌಡ, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್ ಇದ್ದರು.

ಕಿಶನ್ ಶತಕ

ಜೈಪುರ: ಕಿಶನ್ ಎಸ್ ಬೆದರೆ ಅಮೋಘ ಶತಕದ (135; 272ಎ, 4X12) ನೆರವಿನಿಂದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ತಂಡವು ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಡೆಲ್ಲಿಡಿಸ್ಟ್ರಿಕ್ಟ್ಸ್ ಕ್ರಿಕೆಟ್ ಸಂಸ್ಥೆಯು ಮೊದಲ ಇನಿಂಗ್ಸ್‌ನಲ್ಲಿ 99.4 ಓವರ್‌ಗಳಲ್ಲಿ 313 ರನ್ ಗಳಿಸಿತು. ಕರ್ನಾಟಕ ತಂಡವು 136.4 ಓವರ್‌ಗಳಲ್ಲಿ 544 ರನ್ ಗಳಿಸಿತು. ಬುಧವಾರ ನಿಕಿನ್ ಜೋಸ್ ಶತಕ ಗಳಿಸಿದ್ದರು. ಕಿಶನ್ ಕೂಡ ಶತಕ ಬಾರಿಸಿದರು. ಶುಭಾಂಗ್ ಹೆಗ್ಡೆ 96 ರನ್ ಗಳಿಸಿದರು.

ನೆಟ್‌ಬಾಲ್: ಯಶಸ್, ಗಗನಾಗೆ ನಾಯಕತ್ವ

ಬೆಂಗಳೂರು: ಯಶಸ್ ಗೌಡ ಎಂ.ಎನ್ ಮತ್ತು ಗಗನಾ ಕೆ.ಎಸ್ ಅವರು ಜೂನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳನ್ನು ಮುನ್ನಡೆಸಲಿದ್ದಾರೆ.

ಇದೇ 26ರಿಂದ 29ರ ವರೆಗೆ ಹರಿಯಾಣದ ಭಿವಾನಿಯಲ್ಲಿ ಟೂರ್ನಿ ನಡೆಯಲಿದ್ದು ರಾಜ್ಯ ಅಮೆಚೂರ್ ನೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗಿರೀಶ್ ತಂಡಗಳನ್ನು ಗುರುವಾರ ಪ್ರಕಟಿಸಿದ್ದಾರೆ. ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲೂ ಮೈಸೂರಿನ ಗುಡ್ ಶೆಫರ್ಡ್ ಶಾಲೆಯಲ್ಲೂ ತರಬೇತಿ ಮತ್ತು ಆಯ್ಕೆ ಶಿಬಿರ ನಡೆದಿತ್ತು ಎಂದು ಅವರು ತಿಳಿಸಿದ್ದಾರೆ.

ತಂಡಗಳು: ಬಾಲಕರು: ಯಶಸ್ ಗೌಡ ಎಂ.ಎನ್ (ನಾಯಕ), ಸುದೀಪ್ ನಾಯಕ ಜೆ.ಸಿ (ಉಪನಾಯಕ), ಬಿಪಿನ್ ಕೆ, ದಿನೇಶ್ ಡಿ.ವಿ, ದರ್ಶನ್ ಆರ್, ದಿನೇಶ ಎಂ, ಅಭಿ ಎಸ್, ಅಶ್ವತ್ಥ್ ನಾಯಕ ಎಂ, ಮೊಹಮ್ಮದ್ ಅಫಾನ್, ಪ್ರಜ್ವಲ್ ಎಂ.ಎಸ್, ರಮೇಶ ನಾಯಕ ಜೆ.ಸಿ, ಹರ್ಷವರ್ಧನ; ಕೋಚ್: ಶಿವಮೂರ್ತಿ ಜಿ.ಕೆ. **ಬಾಲಕಿಯರು:** ಗಗನಾ ಕೆ.ಸ್ (ನಾಯಕಿ), ಶ್ರುತಿ ಬಿ.ಜಿ (ಉಪನಾಯಕಿ), ಸ್ವಾತಿ ಜಿ, ಸೊನಾಲಿ ಎಲ್, ಮಹೇಶ್ವರಿ ಎಸ್, ಮೋನಿಷಾ ಮಂಜುನಾಥ್, ಅಲಿಯಾ ಅಯೂಬ್ ಸೇಠ್, ಶರಣ್ಯ ಡಿ, ಶರ್ನ್ಯ ಕೆ, ಭೂಮಿಕಾ ಎಚ್, ಸ್ನೇಹ ಕೆ, ಲಾವಣ್ಯ ಜಿ; **ಕೋಚ್:** ಶಿಪಾಲಿ ಎಂ.

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.

ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.

02262676816